ಪರಾಮರ್ಶನ ಗ್ರಂಥ
ಅಕ್ಷರ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

U. Gundakar.

ಜೈತ್ರಯಾತ್ರೆ

U. Gundakar.

ಕಾದಂಬರಿ

ಶ್ರೀನಿವಾಸರಾವ್ ಕೊರಟಿ

ಹಂಸ ಸಾಹಿತ್ಯ

Mr. K. Srinivasa Rao
Sundow Cafe Boarding House

HOSPET

ಹಂಸ ಸಾಹಿತ್ಯಮಾಲೆ ೧೦

ಜೈತ್ರಯಾತ್ರೆ

(ಕಾದಂಬರಿ)

ಶ್ರೀನಿವಾಸರಾವ್ ಕೊರಟಿ

ಡಿ. ವಿ. ಕೆ. ಮೂರ್ತಿ — ಪ್ರಕಾಶಕರು — ಮೈಸೂರು

ಮೊದಲ ಮುದ್ರಣ: ೧೯೫೪

ಪ್ರಕಾಶಕರು:
ಡಿ. ವಿ. ಕೆ. ಮೂರ್ತಿ
ಜಗನ್ಮೋಹನ ಬಂಗಲೆ ಚೌಕ, ಮೈಸೂರು

ಬೆಲೆ: ೨—೮—೦

ಮುದ್ರಣ:
ಹಂಸ ಲಿಮಿಟೆಡ್
ಸುಬ್ಬರಾಯನಕೆರೆ,—ಮೈಸೂರು

ಜೈತ್ರ ಯಾತ್ರೆ

ಜೈತ್ರ ಯಾತ್ರೆ

೧

ಅಂದು ಊಟ ಮಾಡಿ ಹಾಸಿಗೆಯ ಮೇಲೆ ಮಲಗಿದ್ದೆ. ಆ ದಿನದ ಕೆಲಸದಿಂದಾದ ಬೇಸರದ ಫಲವಾಗಿ ಕೂಡಲೇ ನಿದ್ದೆ ಹತ್ತುವಂತಿರಲಿಲ್ಲ. ನಿದ್ದೆ ಬರುವ ತನಕ ಏನನ್ನಾದರೂ ಓದುವ ಲವಲವಿಕೆಯಾಯಿತು. ಕೋಣೆಯಲ್ಲಿದ್ದ ಕಪಾಟನ್ನು ಹುಡುಕಿದೆ, ಯಾವುದಾದರೂ ಓದತಕ್ಕ ಪುಸ್ತಕವಿರಬಹುದೆಂದು. ಅಲ್ಲಿದ್ದ ಪುಸ್ತಕಗಳೆಂದರೆ ಹತ್ತಾರು ಕನ್ನಡ, ಇಂಗ್ಲೀಷ್ ಪುಸ್ತಕಗಳು; ಕೆಲವಾರು ಮಾಸಿಕಗಳು. ಆ ಹೊತ್ತಿನಲ್ಲಿ ಪುಸ್ತಕದ ಗಹನ ಸಾಹಿತ್ಯ ಮನಸ್ಸಿಗೆ ಬೇಕಿರಲಿಲ್ಲ; ಯಾವುದಾದರೂ ಲಘು ಸಾಹಿತ್ಯವಾದರೆ ಸಾಕಿತ್ತು. ಆದುದರಿಂದ ಅಲ್ಲಿದ್ದ ಮಾಸಿಕ ಒಂದನ್ನು ಎತ್ತಿಕೊಂಡು ಹಾಸಿಗೆಯ ಮೇಲೆ ಕೂತು, ಅದರ ಹಾಳೆಗಳನ್ನು ತಿರುಗಿಸಲಾರಂಭಿಸಿದೆ. ಆಗತಾನೇ ಊಟದ ಎಲೆಗಳನ್ನು ಎಸೆದು ಗೋಮಯ ಮಾಡಿ ಕೈ ತೊಳೆದುಕೊಂಡು, ವಿಶಾಲಿ ನಾನು ಮಲಗಿಯಾಯಿತೋ ಇಲ್ಲವೋ ಎಂದು ತಿಳಿಯಲು ರೂಂನ ಕಡೆ ಹಣಿಕಿ ನೋಡಿದಳು. ನಾನು ಯಾವುದೋ ಪುಸ್ತಕವನ್ನು ಓದಲು ಉದ್ಯುಕ್ತನಾಗಿರುವುದನ್ನು ಕಂಡು ನೇರವಾಗಿ ಕೊಠಡಿಯ ಒಳಹೊಕ್ಕು "ಯಾವುದಣ್ಣಾ ಓದುವುದು ?"—ಎಂದು ಕೇಳಿದಳು. ನಾನು ಉತ್ತರ ಕೊಡುವ ಮುನ್ನವೇ ತಾನೇ ಸಂಚಿಕೆಯು ನನ್ನ ಕೈಲಿದ್ದಂತೆಯೇ ಅದರ ಪುಟಗಳನ್ನು ತಿರುವಿ "ಭೇರಿ" ಏನಣ್ಣಾ! ಎಂದಳು ರಾಗವಾಗಿ. ನಾನು ಮಾತನಾಡದೇ ಹೂಂಗುಟ್ಟಿದೆ. ಅವಳು ಅಷ್ಟಕ್ಕೇ ಸುಮ್ಮನಾಗುವಂತೆ ತೋರಲಿಲ್ಲ. ಅವಳು ಹರಟೆಗಾಗಿಯೇ ಕಾಲು ಕೆರೆದು ಬಂದಂತಿತ್ತು. ನಾನು ಹೆಚ್ಚಿಗೆ ಮಾತನಾಡದಿರುವುದನ್ನು ಕಂಡು ತಾನೇ ಮಾತಿಗೆ ಹಚ್ಚಿದಳು "ಏನಣ್ಣಾ ಹೋದ ತಿಂಗಳ ಸಂಚಿಕೆಯನ್ನು ಈಗ ಓದುತ್ತಿದ್ದೀಯಲ್ಲಾ ?"

ನಾನು ಗಲಿಬಿಲಿಯಿಂದ, "ಏನೂ! ಇದು ಹೋದ ತಿಂಗಳ ಸಂಚಿಕೆಯೆ?" ಎಂದೆ. "ನೋಡು ತಾರೀಖು.... ಇದು ಹೋದ ತಿಂಗಳ ಸಂಚಿಕೆಯಲ್ಲದೆ ಮತ್ತೇನು! ಮೇಲುಗಡೆಯೇ ಇರುವ "ನವಂಬರ್" ಎನ್ನುವ ತಿಂಗಳು ಕಾಣಿಸದೇನು!" ವ್ಯಂಗ್ಯವಾಗಿ ಕೇಳಿದಳು. "ಹೌದಲ್ಲೇ.... ಇದು ನವಂಬರದು. ಆಗಲೇ ಡಿಸೆಂಬರದು ಬಂದಾಯಿತೇನು?"

"ತಾರೀಖು ೧೦ ಆಗಿದ್ದರೂ ಇನ್ನೂ ಬರದೆ ಅದಕ್ಕೇನು ರೋಗ! ತಾಳು, ತಂದುಕೊಡುತ್ತೇನೆ" ಎಂದು ಹಾಲಿನಲ್ಲಿ ತನ್ನ ಓದುವ ಪುಸ್ತಕಗಳ ಜತೆಗಿಟ್ಟ ಡಿಸೆಂಬರದ ಸಂಚಿಕೆಯನ್ನು ಕೈಗಿತ್ತಳು. ನಾನು ನವಂಬರದ ಸಂಚಿಕೆಯನ್ನು ಕೆಳಗೆ ಹಾಕಿ, ಡಿಸೆಂಬರದ ಸಂಚಿಕೆಯನ್ನು ತಿರುವಲು ಮೊದಲಿಟ್ಟೆ; ಕಥೆಗಳು ಯಾವು ಯಾವುದು ಇದೆ ಎಂದು ಪರಿವಿಡಿಯನ್ನು ನೋಡಿದೆ. ನಾನು ಪರಿವಿಡಿಯನ್ನು ನೋಡುತ್ತಿದ್ದಾಗ ವಿಶಾಲಿ "ನಮ್ಮ ಅಣ್ಣನ ಮದುವೆಯ ನೆನಪು" ಎಂಬ ತಲೆಬರಹವನ್ನು ತೋರಿಸಿ ಅದನ್ನು ಓದಲು ಹೇಳಿದಳು. ಅದನ್ನು ಬರೆದವರಾರೆಂದು ನೋಡಿದೆ. ಬರೆದವರು: ಶ್ರೀಮತಿ ವಿಶಾಲಾಕ್ಷಿದೇವಿ—ಎಂದಿತ್ತು. "ಯಾರೇ ಇದು ವಿಶಾಲಾಕ್ಷಿದೇವಿ—ವಿಶಾಲಿ? ನೀನು ಬರೆದಿದ್ದೇನು ಈ ಕಥೆ?" ಎಂದೆ, ಅವಳೇ ಬರೆದಿರಬಹುದೆಂಬ ಊಹೆಯಿಂದ. ನನ್ನ ಊಹೆ ನಿಜವಾಯಿತು. ನಗುತ್ತಾ ಹೇಳಿದಳು ವಿಶಾಲಿ "ಹೂಂ"

"ಅರೆ! ನನಗೆ ಹೇಳಲೇ ಇಲ್ಲವಲ್ಲೇ ಈ ಮೊದಲೇ."

"ಎಲ್ಲಿ ಹೇಳುವುದು ತಿಂಗಳ ಮೊದಲ ವಾರದಲ್ಲಿ ನಿನಗೆ ಊಟ ಮಾಡಲೂ ಕೂಡ ಪುರಸತ್ತು ಇಲ್ಲದಿರುವಾಗ."

ಹೌದು. ವಿಶಾಲಿ ಎಂದುದು ಸರಿ. ತಿಂಗಳ ಮೊದಲ ವಾರದಲ್ಲಿ ವಿರಾಮವೆಂದರೆ ನನಗೆ ಕನಸಿನ ಗಂಟು. ಊಟ, ನಿದ್ರೆಗಳಿಗೂ ನನಗೆ ಸಾಕಷ್ಟು ವಿರಾಮ ದೊರೆಯದು. ಅಷ್ಟು ಕೆಲಸ. ದಿನದ ಹನ್ನೆರಡು ಗಂಟೆ ಆಫೀಸಿನಲ್ಲಿ ದುಡಿದರೂ ಇನ್ನೂ ಅಂದಿನ ಕೆಲಸ ರಾಶಿಯಾಗಿಯೇ

ಕುಳಿತಿರುತ್ತಿತ್ತು. ಅಂದಮೇಲೆ ಕಥೆಪುಸ್ತಕಗಳನ್ನು ಓದಲು ನನಗೆಲ್ಲಿಯ ವಿರಾಮ!

ನಾನು ಆ ಲೇಖನವಿದ್ದ ಹಾಳೆಯನ್ನು ತೆಗೆಯುತ್ತಾ "ಏನೇ ವಿಶಾಲಿ, ನನ್ನ ಮದುವೆ ಇನ್ನೂ ಯಾವಾಗ ಅಂತ ನಿಶ್ಚಯ ಕೂಡ ಆಗಿಲ್ಲ. ಹೆಣ್ಣಾರೆಂಬುದು ಕೂಡ ಗೊತ್ತೇ ಇಲ್ಲ. ಆಗಲೇ ನನ್ನ ಮದುವೆಯ ನೆನಪು ಕೂಡ ಬರೆದುಬಿಟ್ಟಿದ್ದೀಯಲ್ಲೇ?" ನಗುತ್ತಲೆಂದೆ.

"ಯಾಕಣ್ಣಾ ಬರೆಯಕೂಡದು? ನಾಳೆ ಆಗಲಿರುವ ಮದುವೆಯನ್ನು ಇಂದೇ ಊಹಿಸಿಕೊಂಡು. ಅದರಲ್ಲಿ ತಪ್ಪೇನು? ಅವತ್ತು ಆ ಕಪ್ಪು ಹುಡುಗಿಯನ್ನ ಕರೆದುಕೊಂಡುಬಂದು ತೋರಿಸಿದರಲ್ಲಾ— ಆ ಮಾವಯ್ಯ—ಅಂದಿನ ಘಟನೆಯನ್ನು ಮನಸ್ಸಿನಲ್ಲಿ ಇರಿಸಿ ಅದರ ಮೇಲೆ ಈ ಕಥೆಯ ಕಟ್ಟಡ ಕಟ್ಟಿರುವೆ. ನೀನೊಂದುವೇಳೆ ಅಮ್ಮನ ಬಲವಂತಕ್ಕೆ ಆ ಹುಡುಗಿಯನ್ನ ಮದುವೆಯಾಗಲು ಒಪ್ಪಿದ್ದರೆ, ನಿನ್ನ ಸ್ನೇಹಿತರು ಮಾಡುತ್ತಿದ್ದ ಗೇಲಿ ತಮಾಷೆಗಳನ್ನು ಊಹಿಸಿಕೊಂಡು ಬರೆದಿದ್ದೇನೆ. ಓದಿ ಹೇಳು........ಚೆನ್ನಾಗಿದೆಯೋ ಇಲ್ಲವೋ? ಅಮ್ಮನಿಗೆ ಆಗಲೇ ಓದಿ ಹೇಳಿದುದಾಯಿತು. ಅವಳು ಮೊದಲು ಕೇಳಿ ಹೊಟ್ಟೆ ಬಿರಿಯುವಂತೆ ನಕ್ಕಳು; ಎಂದು ಅದರ ಪೂರ್ವಾಪರಗಳನ್ನೆಲ್ಲಾ ಹೇಳಿದಳು—ಒಂದು ಕೇಳಿದರೆ ನಾಲ್ಕು ಹೇಳುವ ಹುಚ್ಚು ಹುಡುಗಿ—ವಿಶಾಲಿ!

ಅವಳ ಈ ಎಲ್ಲಾ ಮಾತು ಕಿವಿಯ ಮೇಲೆ ಹಾದಾಗ, ಈಗ್ಗೆ ಸುಮಾರು ಇಪ್ಪತ್ತು ದಿನಗಳ ಹಿಂದೆ ನಡೆದ ಆ ಘಟನೆ ನನ್ನ ಮನಸ್ಸಿನ ಭಾವನಾ ಪಟದ ಮೇಲೆ ಮತ್ತೊಮ್ಮೆ ನಡೆದುಹೋಯಿತು. ಅಂದು ಅವರು—ಅಮ್ಮನ ದೂರ ನಂಟರಂತೆ. ಆಸ್ತಿಪಾಸ್ತಿ ಚೆನ್ನಾಗಿದೆಯಂತೆ, ಒಬ್ಬಳೇ ಮಗಳಂತೆ,—ಬಂದಿದ್ದರು: ತಮ್ಮ ಮಗಳಿಗೆ ನಾನೇನಾದರೂ ಅನುರೂಪನಾದ ವರನಾದೇನೆಂದು: ಬರುವಾಗ ಹೆಣ್ಣನ್ನೂ ಕರೆದು ತಂದಿದ್ದರು. ನನಗೆ ಅವರು ಬರುವ ಯಾವ ವಿಷಯ ಪೂರ್ವಭಾವಿ

ಯಾಗಿ ಖಚಿತವಾಗಿ ತಿಳಿದಿರಲಿಲ್ಲ. ಏನೋ ಅಮ್ಮ, ಅವರು ಬರುವ ಮೂರು ದಿನದ ಹಿಂದೆ ಆ ವಿಷಯ ಕಿವಿಯ ಮೇಲೆ ಹಾಕಿದ್ದರು. ಆ ವಿಷಯವನ್ನು ನಾನು ಅಷ್ಟಾಗಿ ಗಮನಕ್ಕೆ ತಂದುಕೊಂಡಿರಲಿಲ್ಲ.

ನಾನು ಆಫೀಸಿನಿಂದ ಅಂದು ಬಂದವನೇ "ಉಸ್ಸಪ್ಪಾ" ಎಂದು ಬಟ್ಟೆ ಬದಲಾಯಿಸಿ, ಕೈಕಾಲು ತೊಳೆದು "ತಿಂಡಿ ಏನು ಮಾಡಿಟ್ಟಿದ್ದೀ ಅಮ್ಮಾ ಇವತ್ತು ಬಹಳ ಹಸಿವು ಕಣೇ"......ಎಂದು ನೇರ ಅಡಿಗೆಯ ಮನೆಗೆ ನುಗ್ಗಿದೆ. ಹಾಗೆ ನುಗ್ಗುವುದು ನನ್ನ ದಿನದ ಪದ್ಧತಿ. ಅಂದು ಹಾಗೆ ನುಗ್ಗಿ ನೋಡುತ್ತೇನೆ—ನಮ್ಮ ತಾಯಿಯೊಂದಿಗೆ ಮತ್ತೊಬ್ಬ ಅಪರಿಚಿತ ಹೆಂಗಸರೊಬ್ಬರು ಮಾತನಾಡುತ್ತಾ ಕುಳಿತಿದ್ದಾರೆ. ಆ ಅಪರಿಚಿತ ಹೆಂಗಸಿನ ಬಳಿಯಲ್ಲಿ ಸುಮಾರು ೧೫ ವರ್ಷದ ಶ್ಯಾಮಲ ವರ್ಣದ ಕನ್ನೆಯೊಬ್ಬಳು ಕುಳಿತಿದ್ದಳು. ಅವರು ನನ್ನ ಕಣ್ಣಿಗೆ ಬಿದ್ದೊಡನೆಯೇ ನನಗೆ ಕಕ್ಕಾಬಿಕ್ಕಿಯಾಯಿತು. ಒಳಗೆ ಯಾರಿರುವರು, ಯಾರಿಲ್ಲ ಎಂದು ವಿಚಾರ ಮಾಡದೇ ನುಗ್ಗಿದುದು ತಪ್ಪಾಯಿತೆನಿಸಿತು. ಕೂಡಲೇ ಹೊರಡಲು ಅನುವಾದೆ. ನಮ್ಮ ತಾಯಿ ನಾನು ಹೊಸಬರನ್ನು ಕಂಡು ದಿಗ್ಭ್ರಮೆಗೊಂಡು ಹೊರಟುಹೋಗುವುದನ್ನು ಕಂಡು

"ವಾಸೂ, ಯಾಕೆ ಹೋಗುತ್ತೀ ಬಾಪ್ಪ, ಇವರಾರೂ ಹೊಸಬರಲ್ಲ. ನಮಗೆ ದೂರದ ನೆಂಟರಾಗಬೇಕು. ಇವರು ನಿನಗೆ ಹೆಣ್ಣು ಕೊಡಲು ಬಂದಿದ್ದಾರೆ. ಬಾ, ಕೂಡು." ಎಂದು ಕರೆದರು. ತಾಯಿ ಕರೆಯಂತೆ ಅಲ್ಲಿಗೆ ಹೋಗಿ ಕೂಡುವುದು ನನ್ನಿಂದಾಗದ ಕೆಲಸವಾಯಿತು.

"ಪರವಾಗಿಲ್ಲಮ್ಮಾ....ನಾನು ರೂಂನಲ್ಲೇ ಇರುತ್ತೇನೆ," ಎಂದು ರೂಂ ಕಡೆ ನಡೆದುಬಿಟ್ಟೆ. ನಾನು ಹಾಲಿನ ಹೊಸಲು ದಾಟುವುದಕ್ಕೂ, ಹಿರಿಯರೊಬ್ಬರು ಮನೆಯಲ್ಲಿ ಕಾಲಿಡುವುದಕ್ಕೂ ಸರಿಹೋಯಿತು. ಅವರನ್ನು ಕಂಡೊಡನೆಯೇ ಅವರು ಇಂತಹವರೇ ಎಂದು ಕೂಡಲೇ ಹೊಳೆದುಹೋಯಿತು. ಅವರೇ ನನ್ನನ್ನು ಪಾಠಮಾಡಿಸಿದರು. ಅವರಿಗೆ ನನ್ನನ್ನು ಕಂಡೊಡನೆಯೇ ಅದೇಕೋ ಸಂತೋಷವಾಗಿತ್ತು.

ದೇಶಾವಾರದ ನಗೆ ನಗುತ್ತಾ "ಆಯಿತೇನು ಆಫೀಸು! ನೀವು ಬರುವಿರೆಂದು ನಾನು ಆ Bus stop ಬಳಿ ಕಾದಿದ್ದೆ. ನೀವು ಹಾಗೆ ಬರದೆ ಹೀಗೆ ಬಂದುಬಿಟ್ಟಿರಿ" ಎಂದರು. ನಾನು ಅವರನ್ನು ಕಂಡುದು ಇದೇ ಮೊದಲು. ಆದರೂ ಅವರು ನನ್ನ ಪರಿಚಿತರಂತೆ ಮಾತನಾಡಿಸಿದ್ದರು. "ಆಫೀಸೇ.... ಈಗತಾನೇ ಮುಗಿಯಿತು. ನಾನು ದಿನಾಗಲೂ ಬರುವುದೇನೊ ಆ ಹಾದಿಯಲ್ಲೇ. ಆದರೆ ಇಂದು ಗೆಳೆಯನೊಬ್ಬನ ಕೂಡ ಮಾತನಾಡಿಕೊಂಡು ಈ ಹಾದಿಯಲ್ಲೇ ಬಂದುಬಿಟ್ಟೆ." ಎಂದು ಉತ್ತರ ಕೊಟ್ಟೆ.

ಮುಂದೆ ಅವರಿಗೂ, ನನಗೂ ಕಾಫೀ ತಿಂಡಿಯ ಸರಬರಾಜು ನಡೆಯಿತು. ಅದು ನಡೆಯುತ್ತಿದ್ದಾಗ, ಅವರು—ನಮ್ಮ ತಂದೆಯ, ಅವರ ಪರಿಚಯದಿಂದ ಮೊದಲು ಮಾಡಿಕೊಂಡು ನನ್ನ ಮದುವೆಯ ಪ್ರಸ್ತಾಪಕ್ಕೆ ಬಂದರು. ಆ ವಿಷಯವಾಗಿ ಮಾತನಾಡುತ್ತಾ, ನಮ್ಮ ತಾಯಿಗೆ ಈಗ ಬೆಳಸಲಿರುವ ಸಂಬಂಧಕ್ಕೆ ಪೂರ್ಣ ಅನುಮತಿ ಇರುವುದಾಗಿಯೂ, ನಾನು ಕೂಡ ಈ ಸಂಬಂಧ ಬೆಳೆಸುವ ವಿಷಯವನ್ನು ಮನಸ್ಸಿಗೆ ಹಾಕಿಕೊಂಡು ಅವರನ್ನು ಕೃತಾರ್ಥರನ್ನಾಗಿ ಮಾಡಬೇಕೆಂದು ಹೇಳಿ, ತಮ್ಮೆಲ್ಲಾ ವಿಷಯವನ್ನು—ಹಳ್ಳಿಯಲ್ಲಿ ತಮಗಿರುವ ಆಸ್ತಿಪಾಸ್ತಿಯ ವಿವರ, ಅಲ್ಲಿಯ ಜನರು ಅವರಿಗೆ ಕೊಡುವ ಆದರ ಗೌರವ ಎಷ್ಟೆಂಬುದನ್ನು—ವಿವರಿಸಿದರು. ಕಡೆಯದಾಗಿ ತಮ್ಮ ಒಬ್ಬಳೇ ಮಗಳ ವಿವಾಹವನ್ನು ವೈಭವದಿಂದ ಮಾಡುವುದಾಗಿಯೂ, ಅಳಿಯನಿಗೆ ಕೊಡುವುದು ಬಿಡುವುದರಲ್ಲಿ ಯಾವುದನ್ನೂ ಕಡಿಮೆ ಮಾಡುವುದಿಲ್ಲವೆಂದೂ ಹೇಳಿದರು. ಹೆಣ್ಣು ತೋರಿಸಿ ಹೊರಡುವ ಘಳಿಗೆಯಲ್ಲಿ "ಏನು ರಾಯರೇ ನಾನು ಹೇಳಿದುದೆಲ್ಲಾ ಮನಸ್ಸಿಗೆ ತಂದಿರೇನು? ಏನು ನಿಮ್ಮ ಅಭಿಪ್ರಾಯ" ಎಂದು ಕೇಳಿದರು. ನನಗೆ ಆಗ ಏನು ಹೇಳಲೂ ತೋರದೇ "ಮುಂದೆ ಯಾವುದನ್ನೂ ತಿಳಿಸುತ್ತೇನೆ" ಎಂದು ಅವರು ಬೀಸಿದ್ದ ಗಾಳದಿಂದ ತಪ್ಪಿಸಿಕೊಂಡೆ. ಅವರು ಹೊರಡುವಾಗ ನಮ್ಮ ತಾಯಿಗೆ "ಯಾವ ವಿಷಯವನ್ನೂ ತಿಳಿಸಲು ತಡ ಮಾಡಬೇಡಿ

ಶುಭಕಾರ್ಯ, ನಾಳೆ ಮಾಘಮಾಸದಲ್ಲಿ ನಡೆದುಹೋಗಲಿ" ಎಂದು ಹೇಳಿ ಹೋದರು. ಅವರ ಮಾತಿನ ರೀತಿಯನ್ನು ಕಂಡು ನಾನು ಮದುವೆಗೆ ಒಪ್ಪಿರುವೆನೆಂದು ತಿಳಿದಿರಬೇಕೆಂದೆನಿಸಿತು. ಪಾಪ! ಅವರು ತನ್ನೆಲ್ಲಾ ವಿಷಯ ಹೇಳುತ್ತಿದ್ದಾಗ ನಾನು ಮೌನ ಧರಿಸಿ ಕುಳಿತಿದ್ದು ದನ್ನು ಅರ್ಥ ಒಪ್ಪಿಗೆ ಎಂದು ತಿಳಿದು ಮೋಸಹೋಗಿರಬೇಕೆಂದುಕೊಂಡೆ.

ಅವರೆಲ್ಲಾ ಹೊರಟುಹೋದಮೇಲೆ ಅಮ್ಮ—ಕನ್ಯೆಯ ತಂದೆಯ ವರ ಬಾಯಿಯಲ್ಲೇ ಅವರ ಪ್ರತಿಷ್ಠೆಯನ್ನು ಕೇಳಿದವರು—

"ಏನೋ ವಾಸೂ ಒಪ್ಪಿದೆ ಏನು?" ಸ್ವಲ್ಪ ತಡೆದು, "ಅವರ ಆಸ್ತಿ ಪಾಸ್ತಿಗಳನ್ನೂ, ಆ ಜನರ ಗುಣವನ್ನೂ ಕಂಡಮೇಲೆ ಒಪ್ಪದೇ ಏನು ಮಾಡೀಯಾ" ಎಂದು ತಮ್ಮಷ್ಟಕ್ಕೆ ತಾವೇ ಉತ್ತರಿಸಿಕೊಂಡರು. ಕನ್ನೆಯ ತಂದೆಯವರು ಹೇಳಿದ ಆವರೆಲ್ಲಾ ಸಂಗತಿ ಅಮ್ಮನ ಮೇಲೆ ಸಾಕಷ್ಟು ಪ್ರಭಾವ ಬೀರಿದೆ ಎಂದುಕೊಂಡೆ ಅವರ ಮಾತನ್ನು ಕೇಳಿ.

"ಇಲ್ಲವಮ್ಮಾ ಆ ಹುಡುಗಿ ನನ್ನ ಮನಸ್ಸಿಗೆ ಬರಲಿಲ್ಲವಮ್ಮಾ" ಎಂದೆ. ನಾನು ಈ ರೀತಿ ಮಾತನಾಡುವೆನೆಂದು ಅವರು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ. ಈ ಒಂದು ಮಾತು ಅವರೆಲ್ಲಾ ಆಸೆಯ ಗೋಪುರಕ್ಕೆ ಸಿಡಿಲಿನಂತೆ ಬಡಿದಿರಬೇಕು. ಆ ಮಾತು ಕೇಳಿ ಒಂದು ಕ್ಷಣ ಕ್ಷೋಭೆಗೊಂಡವರಂತಾದರು. ಅನಂತರ ಕೇಳಿದರು. "ಯಾಕೆ ವಾಸೂ ಹುಡುಗಿ ನಿನ್ನ ಮನಸ್ಸಿಗೆ ಬರಲಿಲ್ಲ? ಹುಡುಗಿ ಸ್ವಲ್ಪ ಕಪ್ಪೆಂದು ತಾನೇ?"....ತಡೆದು ತಡೆದು ಹೇಳಿದರು.

"ಅಷ್ಟೇ ಆಗಿದ್ದರೆ.......ಅದು ಬೇರೆಯಾಗಿತ್ತು ...ಆದರೆ"

"ಆದರೆ.... ಇನ್ನೇನು ಆಗಿದೆ ಹೇಳು...." ಉದ್ವೇಗದಲ್ಲಿ ನುಡಿದರು.

"ಆ ಹುಡುಗಿಯಲ್ಲಿ ಅವಲಕ್ಷಣಗಳೆನಿಸುವ ಎಲ್ಲ ಲಕ್ಷಣಗಳೂ ಮನೆ ಮಾಡಿಕೊಂಡಿವೆ ಅಮ್ಮಾ. ಏನೇನು ಅಂತೀಯೋ....ಆ ಹಣೆಯಲ್ಲಿ ಕುಳಿತಿರುವ ಆ ಎಡಗಣ್ಣೂ.....ಮೊಳುದ್ದಾ ಜೋಲಾಡುವ ಆ ಕಿವಿ...ಔಡಿನ ಮೇಲೆ ಅಧಿಕಾರ ನಡೆಸುತ್ತಾ ಕುಳಿತಿರುವ ಆ ದಂತ

ಸಮೂಹ ...ನೀನು ಕೋಪಿಸದಿದ್ದರೆ ಹೇಳುತ್ತೇನಮ್ಮಾ, ರಾಮಾಯಣ, ಮಹಾಭಾರತಗಳ ಶೂರ್ಪನಖಿ, ಹಿಡಂಬಿಯರ ನೆನಪಾಯಿತು." ನನ್ನೀ ಮಾತು ಕೇಳಿ ಅಮ್ಮನಿಗೆ ಕೋಪ ಬಂದುಬಿಟ್ಟಿತು. ಕೋಪದ ಆವೇಶದಲ್ಲಿ ಅವರಿಂದ ಏನೂ ಮಾತು ಹೊರಡಲಿಲ್ಲ. ನನ್ನನ್ನು ತಿನ್ನಲೋ, ಎನ್ನುವಂತೆ ದುರುಗುಟ್ಟುತ್ತಾ ನಿಂತರು. ನನಗೆ ಅವರ ದೃಷ್ಟಿಯನ್ನು ಇದಿರಿಸಿ ನೋಡುವ ಸಾಮರ್ಥ್ಯವಾಗಲಿಲ್ಲ. ತಲೆ ತಗ್ಗಿಸಿ ನಿಂತೆ. ಅಮ್ಮ ದುರುಗುಟ್ಟಿಕೊಂಡು ಹಾಗೇ ಎಷ್ಟು ಹೊತ್ತು ನೋಡಿಯಾರು! ಕೆಂಡ ಕಾರುತ್ತಿದ್ದ ಕಣ್ಣಿನಲ್ಲಿ ಕಣ್ಣೀರು ತಂದು ಹೇಳಿದರು. ಅವರ ಕೋಪವೆಲ್ಲಾ ಕಣ್ಣೀರಿನಲ್ಲಿ ಕರಗಿಹೋಗಿತ್ತು.

"ಏನೋಪ್ಪ....ಈಗಿನ ಕಾಲದ ಹುಡುಗರ ರೀತಿ ನೀತಿ ಒಂದೂನೂ ಅರ್ಥವಾಗೋದಿಲ್ಲ. ಎಲ್ಲದರಲ್ಲೂ ಒಂದೊಂದು ಕುಂದು ಕೊರತೆ ಕಾಣುತ್ತಾರೆ.....ಇಲ್ಲದ ವಕ್ರತೆ ನೋಡುತ್ತಾರೆ. ನಿನ್ನಿಷ್ಟ ವಾಸು, ನಾನೇಕೆ ನಿನಗೆ ಮನಸ್ಸಿಲ್ಲದ ಹುಡುಗಿಯನ್ನು ಮದುವೆಯಾಗಲು ಒತ್ತಾಯಪಡಿಸಬೇಕು....ಏನೋ....ಅವರು ನಮ್ಮ ದೂರದ ನೆಂಟರು, ಆಸ್ತಿವಂತರು, ಅವರೊಂದಿಗೆ ಸಂಬಂಧ ಬೆಳಸಿದರೆ ನಮ್ಮ ಆಪತ್ಕಾಲದಲ್ಲಿ ನೆರವಾದಾರು! ಎಂದು ತಿಳಿದಿದ್ದೆ. ನಿನಗೆ ಆ ಸಂಬಂಧ ಬೇಕಿಲ್ಲದ ಮೇಲೆ ನಾನೇಕೆ ಒತ್ತಿ ಹೇಳಲಿ..." ಮಾತು ಮುಗಿಸುತ್ತಾ ಅಡಿಗೆಯ ಮನೆ ಕಡೆ ನಡೆದುಬಿಟ್ಟರು. ನನ್ನಂತಹ ಅವಿಧೇಯ ಪುತ್ರನ ಮುಂದೆ ಮಾತನಾಡಲು ಹೇಸಿ! ನಾನೇನೋ ಅವರನ್ನು ಸಮಾಧಾನಗೊಳಿಸಲು ನಾಲ್ಕು ಮಾತು ಆಡುವವನಿದ್ದೆ. ಕೇಳುವ ಅವರೇ ಇಲ್ಲದ ಮೇಲೆ....?

ಅಮ್ಮನೇನೋ ನನ್ನ ಒಳ್ಳೆಯದಕ್ಕೇ ಈ ಸಂಬಂಧ ಬೆಳೆಸಲು ಆಸೆಯುಳ್ಳವರಾಗಿದ್ದರು. ಅದು ನಿಜ. ಆದರೆ ಆಸ್ತಿಯ ವ್ಯಾಮೋಹಕ್ಕೆ ಬಿದ್ದು ಆ ಕನ್ಯೆಯ ಕೈಹಿಡಿದು ರಾತ್ರಿ ಕಂಡ ಬಾವಿಯಲ್ಲಿ ಹಗಲು ಬೀಳುವುದು ನನ್ನ ಮನಸ್ಸಿಗೆ ಸರಿಬರಲಿಲ್ಲ. ಈ ಒಂದು ಕಾರ್ಯದಲ್ಲಿ ನನಗೆ ಪೂರ್ಣ ಸ್ವಾತಂತ್ರ್ಯ ಬೇಕಿತ್ತು. ಅಮ್ಮ ತಕ್ಕಮಟ್ಟಿಗೆ ಅದನ್ನು ಕೊಟ್ಟೂ ಇದ್ದಳು.

ಈ ಒಂದು ವಿಷಯದಲ್ಲಿ ನನ್ನನ್ನು ಬಲವಂತಪಡಿಸದೆ ಏನು ಹೇಳಿದ್ದರೂ ನಾನು ಶಿರಸಾವಹಿಸಿ ಮಾಡುತ್ತಿದ್ದೆ. ನನಗೆ ಅಮ್ಮನಲ್ಲಿ ಅಷ್ಟು ಗೌರವವಿತ್ತು! ಅಷ್ಟು ಪ್ರೀತಿ ಇತ್ತು! ಆದರೆ ಈ ಒಂದು ಕಾರ್ಯದಲ್ಲಿ ಅವರ ಎಲ್ಲಾ ಪ್ರೀತಿ, ಗೌರವ, ಅಡ್ಡ ಬರುವುದು ನನಗೆ ಬೇಕಿರಲಿಲ್ಲ.

"ಯಾಕಣ್ಣಾ! ಹಾಗೆ ನೋಡುತ್ತಾ ಕುಳಿತೆ?" ವಿಶಾಲಿ ಕೇಳಿದಳು. ನಾನು ಈವರೆಗೆ ಮಾತಿಲ್ಲದೆ ಕುಳಿತುದು ಅವಳನ್ನು ಗಾಬರಿಗೊಳಿಸಿರಬೇಕು! ಅವಳಿಗೇನು ಗೊತ್ತು, ನಾನು ಈವರೆಗೂ ಯಾವುದರ ಬಗ್ಗೆ ತಲ್ಲೀನನಾಗಿದ್ದೆನೆನ್ನುವುದು!

"ಯಾಕೂ ಇಲ್ಲ ವಿಶಾಲಿ. ನಿನ್ನ ಮಾತು ಅಂದು ನಡೆದ ಎಲ್ಲವನ್ನೂ ನೆನಪಿಗೆ ತಂದಿತು, ಅಷ್ಟೇ ...ಹೋಗಲಿ. ತಗೊ "ಭೇರಿ"ನ. ನೀನು ಬರೆದ ಕಥೆಯನ್ನು ನೀನೇ ಓದಿದರೆ ಸ್ವಾರಸ್ಯ" ಎಂದು ಸಂಚಿಕೆ ಅವಳ ಕೈಗೆ ಇತ್ತೆ. ವಿಶಾಲಿ ಕಥೆಯನ್ನು ಓದಿದಳು. ಅವಳು ಓದುತ್ತಿದ್ದಾಗ ನಾನು ಹೊಟ್ಟೆ ಹುಣ್ಣಾಗುವಂತೆ ನಕ್ಕೆ. ಅವಳು ಓದುವುದು ಮುಗಿಸಿದ ಮೇಲೆ, ನನ್ನ ತಂಗಿ ಇಷ್ಟು ಸೊಗಸಾದ ಕಥೆ ಬರೆಯುವಳೇ ಎಂದೆನಿಸಿತು. ಅವಳು ಆಗಾಗ್ಗೆ ಕಥೆಗಳನ್ನು ಬರೆದು ಸಂಚಿಕೆಗಳಿಗೆ ಕಳುಹಿಸುತ್ತಿದ್ದುದೇನೋ ನಿಜ. ಅವುಗಳ ಬಗ್ಗೆ ನನಗೆ ಕುತೂಹಲವಾಗಲೀ, ಆಸಕ್ತಿಯಾಗಲೀ ಇರಲಿಲ್ಲ. ಈ ಕಥೆಯನ್ನು ಕೇಳಿದನಂತರ ಅವಳಇತರ ಕಥೆಗಳನ್ನು ಓದಿಸಿ ಕೇಳುವ ಮನಸ್ಸಾಯಿತು.

"ಹೇಗಣ್ಣಾ ಇದೆ ಕಥೆ."

"ಬಹಳ ಚೆನ್ನಾಗಿ ಬರೆದಿದ್ದಿ; ಬಹಳ ತಮಾಷೆಯಾಗಿ ನಡೆದ ಹಾಗೆಯೇ ಬರೆದಿದ್ದೀಯಲ್ಲೇ ವಿಶಾಲಿ!!

"ಹೌದಣ್ಣಾ ಇದು ನಡೆದ ಕಥೇನೇ; ನನ್ನ ಸ್ಮೃತಿ ಪಟಲದ ಮೇಲೆ ನಡೆದ ಕಥೇನೇ;" ಎಂದು ನಾನು ಹೇಳಿದ ಮಾತನ್ನೇ ಸಮರ್ಥಿಸಿದಳು.

“ಅದಿರಲಿ ವಿಶಾಲಿ. ಇಂತಹ ಕಥೆಗಳನ್ನು ಇನ್ನು ಎಷ್ಟು ಬರೆದಿದ್ದೀಯಾ ?!!

“ಹತ್ತನ್ನೆರಡಣ್ಣಾ....”

“ಯಾಕೆ, ನನಗೆ ಈವರೆಗೆ ಒಂದೂ ತೋರಿಸಿಲ್ಲಾ ?”

ಹುಡುಗಿ ಮೌನವಾದಳು. ನನ್ನಂಥ ಪದವೀಧರ ಅಣ್ಣನ ಮುಂದೆ ಓದಿ ತೋರಿಸಲು ನಾಚಿರಬೇಕೆಂದು ತಿಳಿದು ಆ ಪ್ರಶ್ನೆಯನ್ನು ಮತ್ತೆ ಒತ್ತಿ ಕೇಳಲಿಲ್ಲ.

“ಹೋಗಲಿ. ಇನ್ನುಮೇಲೆ ರಾತ್ರಿ ನಾನು ಮಲಗುವ ಮುನ್ನ ನೀನು ಒಂದೊಂದು ಕಥೆ ಓದುತ್ತೀ ತಾನೆ ?”

ವಿಶಾಲಿ ಹಾಗೇ ಆಗಲೆಂದು ತಲೆಯಲ್ಲಾಡಿಸಿದಳು. ಅವಳ ಕಥೆಯ ಬಗ್ಗೆ ನಾನು ಮೆಚ್ಚಿಗೆ ತೋರಿಸಿದುದಲ್ಲದೆ, ಮುಂದೆ ಅವಳ ಇತರ ಕಥೆಗಳನ್ನು ಕೇಳುವ ಆಸೆ ತೋರಿಸಿದ ವಿಷಯ—ವಿಶಾಲಿಗೆ—ಅವಳ ಕಥೆಗಳ ಬಗ್ಗೆ ಅವಳಿಗೆ ಭರವಸೆಯುಂಟುಮಾಡಿರಬೇಕು! ಅವಳ ಕಥನ ಕಲೆಯ ಬಗ್ಗೆ ಅವಳಿಗೇ ಹೆಮ್ಮೆಯುಂಟುಮಾಡಿರಬೇಕು!

“ಅಣ್ಣಾ ಇನ್ನೊಂದು ಸುದ್ದಿ. ಓದುವೆನು ಕೇಳಣ್ಣಾ”....

ಸಂಚಿಕೆಯ ಹಾಳೆಯನ್ನು ದಿಟ್ಟಿಸುತ್ತಾ ವಿಶಾಲಿ ನುಡಿದಳು.

“ಹೂಂ ಓದಮ್ಮಾ’’

“ಈ ತಿಂಗಳಿನಲ್ಲಿ ಮದರಾಸಿನಲ್ಲಿ ಇಪ್ಪತ್ತೊಂಭತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಇದರ ಅಧ್ಯಕ್ಷ ಸ್ಥಾನವನ್ನು ಕರ್ಣಾಟಕ ಪ್ರಹಸನ ಪ್ರಪಿತಾಮಹರೆನಿಸಿದ ಶ್ರೀಯುತ ಕೈಲಾಸಂ ರವರು ವಹಿಸುತ್ತಾರೆ, ಎಂದಮೇಲೆ ಸಮ್ಮೇಳನವು ಯಶಸ್ವಿಯಾಗಿ ನಡೆಯುತ್ತದೆನ್ನಲು ಯಾವ ಅಭ್ಯಂತರವಿಲ್ಲ. ಈವರೆಗೆ ಎಂದೋ ಈ ಗೌರವ ಶ್ರೀಯುತರಿಗೆ ಸಲ್ಲಬೇಕಿತ್ತು. ಆದರೆ ಕನ್ನಡಿಗರಿಗೆ ಕೈಲಾಸಂರವರನ್ನು ಅಧ್ಯಕ್ಷ ಗದ್ದುಗೆಯಲ್ಲಿ ಕಾಣುವ ಪುಣ್ಯ ಒದಗಿರಲಿಲ್ಲ. ಈಗ ಆ ಸುಸಮಯ ಒದಗಿಬಂದಿದೆ; ಕನ್ನಡಿಗರ ಬಹಳ ದಿನದ

ಹಾರೈಕೆ ಇಂದು ಫಲಿಸಿಬಂದಿದೆ. ದೇವರು ಶ್ರೀಯುತರಿಗೆ ಸಕಲ ಸನ್ಮಂಗಳವನ್ನೂ ಉಂಟುಮಾಡಲಿ "

ವಿಶಾಲಿ ಓದಿ ಮುಗಿಸಿ ಸುಮ್ಮನಾದಳು. "ಓಹೊ, ಎಷ್ಟು ಬೇಗ ಬಂದುಬಿಟ್ಟಿತು ಸಾಹಿತ್ಯ ಸಮ್ಮೇಳನ! ನಾವು ಹೋಗಿದ್ದ 'ರಬಕವಿ' ಸಮ್ಮೇಳನ ಇನ್ನೂ ಮೊನ್ನೆ ಮೊನ್ನೆ ನಡೆದಹಾಗೇ ಇದೆಯಲ್ಲಾ. ಆಗಲೇ ಅದು ನಡೆದು ಒಂದು ವರ್ಷವಾಯಿತೆ?....ಅಬ್ಬ! ಒಂದು ವರ್ಷ ಎಷ್ಟು ಬೇಗ ಕಳೆದುಹೋಯಿತು!'' ನಾನೆಂದೆ.

ವಿಶಾಲಿ ಓದಿದ ಮದರಾಸಿನಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದ ಸುದ್ದಿ ನಾವು ಹೋಗಿದ್ದ ರಬಕವಿಯ ಸಮ್ಮೇಳನದ ನೆನಪು ಕೊಟ್ಟಿತು.

"ಅಣ್ಣಾ"

"ಯಾಕೇ ವಿಶಾಲಿ?"

ವಿಶಾಲಿಯ ಮೋರೆಯನ್ನು ದಿಟ್ಟಿಸಿ ನೋಡಿದೆ. ಅವಳ ಮೋರೆ ಯಾವುದೋ ವಿಷಯವನ್ನು ನನ್ನನ್ನು ಕೇಳಲೇ ಬೇಡವೇ ಎಂದು ಯೋಚಿಸಿದಂತಿತ್ತು.

"ಯಾಕೂ ಇಲ್ಲಣ್ಣಾ....ನಾವೂ....ಈ ಸಲವೂ....ಮದರಾಸಿನ ಸಾಹಿತ್ಯ ಸಮ್ಮೇಳನಕ್ಕೆ ಹೋಗೋಣೇನಣ್ಣಾ?''

ಈ ಮಾತು ಕೇಳಿ ನಾನು ಬೆಚ್ಚಿಬಿದ್ದೆ. "ಏನೂ, ಸಾಹಿತ್ಯ ಸಮ್ಮೇಳನಕ್ಕೆ! ಮದರಾಸಿಗೆ! ಯಾಕೆ ವಿಶಾಲಿ ರಬಕವಿ ಸಾಹಿತ್ಯ ಸಮ್ಮೇಳನದಲ್ಲಾದ ಅನುಭವ ಸಾಲದೇನು!"

ನಮಗೆ ರಬಕವಿ ಸಾಹಿತ್ಯ ಸಮ್ಮೇಳನದಲ್ಲಾದ ಅನುಭವ ವಿಲಕ್ಷಣ ರೀತಿಯದು. ನಾನು ಬೇಡ ಬೇಡವೆಂದರೂ, ಹಟ ಮಾಡಿ ವಿಶಾಲಿ ರಬಕವಿಗೆ ಕರೆದೊಯ್ದಿದ್ದಳು. ರಬಕವಿ ಸಣ್ಣ ಹಳ್ಳಿ. ಸಮ್ಮೇಳನಕ್ಕಾಗಿ ಬರುವವರಿಗಾಗಿ ಸ್ವಾಗತ ಸಮಿತಿಯವರು ಎಷ್ಟು ಎಚ್ಚರಿಕೆ ವಹಿಸಿದ್ದರೂ, ಬರುವವರಿಗಾಗಿ ಏರ್ಪಡಿಸಿದ್ದ ಊಟ, ವಸತಿ ಸೌಕರ್ಯ ಅಷ್ಟಕ್ಕಷ್ಟೇ ಇತ್ತು. ಮುಂಚೆ ಸುದ್ದಿ ಕೊಡದೆ ಸಮ್ಮೇಳನಕ್ಕೆ ಹೋದವರ ಪಾಡಂತೂ ಹೇಳತೀರದು. ನಾವೂ ಸುದ್ದೀ

ಕೊಡದೇಹೋದ ಯಾತ್ರಿಕರ ಗುಂಪಿಗೆ ಸೇರಿದ್ದುದರಿಂದ ಅವರು ಪಟ್ಟ ಅವಸ್ಥೆಯೇ ನಮ್ಮದೂ ಕೂಡ! ಅಲ್ಲಿ ನಮ್ಮ ಊಟ, ಫಲಾಹಾರಗಳನ್ನು ಕೂಡಾ ನಾವೇ ನೋಡಿಕೊಳ್ಳಬೇಕಿತ್ತು. ಇವೆಲ್ಲದರ ಮೇಲೆ ನಡೆದ ಸಮ್ಮೇಳನ ಕೂಡ ಅಷ್ಟಕ್ಕಷ್ಟೇ. ನನಗಂತೂ ದುಡ್ಡು ಖರ್ಚು ಮಾಡಿ ಕೊಂಡು ಯಾಕಪ್ಪಾ ಬಂದೆವು ಈ ಹಾಳು ಕೊಂಪೆಗೆ ಎಂದೆನಿಸಿಬಿಟ್ಟಿತು. ನನಗಾದ ಆ ಎಲ್ಲಾ ಅನುಭವವೇ ನನ್ನನ್ನು ಈ ರೀತಿ ಮಾತನಾಡಿಸಿತು.

"ರಬಕವಿಯಲ್ಲಿ ಹಾಗೆ ಆದರೆ......ಮದರಾಸಿನಲ್ಲೂ ಹಾಗೇ ಆಗುವುದೆಂದು ಹೇಗೆ ಹೇಳುವುದು? ಮದರಾಸು ಎಷ್ಟೆಂದರೂ ಪಟ್ಟಣ. ಊಟ, ವಸತಿಗಳ ಏರ್ಪಾಡು ಎಷ್ಟು ಕಡಿಮೆಯ ದರ್ಜೆಯೆಂದರೂ, ರಬಕವಿಗಿಂತ ನೂರು ಪಾಲು ವಾಸಿಯಾಗಿಯೇ ಇರುತ್ತೆ. ಅದೂ ಅಲ್ಲದೆ ಸಮ್ಮೇಳನ ಕೂಡ ರಬಕವಿ ಸಮ್ಮೇಳನಕ್ಕಿಂತಲೂ ಸ್ವಾರಸ್ಯವಾಗಿರುತ್ತದೆ. ಯಾಕನ್ನುತ್ತೀಯಾ ಕೈಲಾಸಂ ಅಧ್ಯಕ್ಷರು.

"ಗೊತ್ತೊ ತಾನೆ! ಯಾರು ಕೈಲಾಸಂ ಅಂತ. ಗುಂಡೂರಾಯನ ಗುಳಿಗೆಗಳು. ಟೊಳ್ಳುಗಟ್ಟಿ, ಅಮಾವ್ರಗಂಡ, ಹುತ್ತದಲ್ಲಿ ಹುತ್ತ, ಪೋಲೀಕಿಟ್ಟಿ, purpose ಇವುಗಳನ್ನು ಬರೆದವರೇ ಅವರು. ಅವರು ಯಾವ ಸಂಪ್ರದಾಯಕ್ಕೂ ಒಳಗಾಗುವವರಲ್ಲ. ಪಾಪ! ಹೋದ ವರ್ಷ ಇವರನ್ನು ಅಧ್ಯಕ್ಷರನ್ನಾಗಿ ಮಾಡಲು ಪರಿಷತ್ತಿನ ಸಮಿತಿಯವರು ಇನ್ನಿಲ್ಲದ ಪ್ರಯತ್ನ ನಡೆಸಿದರು. ಆ ಮಹಾನುಭಾವ ಅವರಿಗೆ ಕಾಣಿಸು ವುದು ಒಂದೆಡೆ ಇರಲಿ, ಈತನ ವಿಳಾಸವನ್ನು ಕೂಡ ಅವರಿಂದ ಪತ್ತೇ ಹಚ್ಚಲಾಗಲಿಲ್ಲ. ಅವರು ಪಟ್ಟ ಪ್ರಯತ್ನ ನೀರಿನಲ್ಲಿ ಮಾಡಿದ ಹೋಮ ದಂತಾಯಿತು. ಕಡೆಗೆ ಶ್ರೀ ಬಸವನಾಳರನ್ನು ಕರೆದುತಂದು ಅಧ್ಯಕ್ಷ ಪೀಠದ ಮೇಲೆ ಕೂಡಿಸಬೇಕಾಯಿತು.

"ಈ ಸಲ ಒಂದು ಕ್ಷಣ ಒಂದು ಕಡೆ ನಿಲ್ಲದ ಹಕ್ಕಿಯಂತಹ ಆ ಮನುಷ್ಯನನ್ನು ಹೇಗೆ ಬಲೆ ಬೀಸಿ ಹಿಡಿದರೋ! ಹೇಗೆ ಅಧ್ಯಕ್ಷನಾಗಿ ರಲು ಒಪ್ಪಿಸಿದರೋ ಆ ದೇವರಿಗೇ ಗೊತ್ತು! ಅಂತೂ ಈ ಸಲದ ಸಮ್ಮೇಳನ ಚನ್ನಾಗಿರುತ್ತೆ."

"ಇದರ ಮೇಲೆ ಇನ್ನೊಂದು ಆಕರ್ಷಣೆ ಬೇರೆ—ಈ ಸಮ್ಮೇಳನದ ನೆಪದಿಂದಲಾದರೂ ಮದರಾಸು ನೋಡಿದ ಹಾಗೆ ಆಗುತ್ತದೆ. ಇಲ್ಲದಿದ್ದರೆ ನಾವು ಯಾವಾಗಣ್ಣ, ಮದರಾಸು ನೋಡುವುದು!"

ಎಂದು ಒಂದೇ ಸಮನೆ ಬಡಬಡಸಿ ನುಡಿದಳು ವಿಶಾಲಿ. ಅವಳ ಈ ಮಾತಿನ ಭರಾಟೆಯಲ್ಲಿ ನಾನು ಹೇಳಬೇಕೆಂದಿರುವುದು ಮರತೇ ಹೋಯಿತು. ಪುನಃ ಜ್ಞಾಪಿಸಿಕೊಂಡು ಮಾತನಾಡಿದುದಾದರೂ ಎಷ್ಟು ಹೊತ್ತಿನಮೇಲೋ!

"ಹಾಗಾದರೆ ಏನಮ್ಮ ನೀನು ಹೇಳುವುದು" ತಿಳಿದೂ ತಿಳಿಯದವನಂತೆ ಕೇಳಿದೆ. ಈವರೆಗೆ ಅವಳ ಎಲ್ಲಾ ಮಾತು ಕೇಳಿಯೂ ಕೂಡ, ಇದನ್ನು ಕೇಳಿ ರಾಮನಿಗೂ, ಸೀತೆಗೂ ಏನು ಸಂಬಂಧ! ಎಂದು ಕೇಳಿದಂತಾಗಿರಬೇಕು ವಿಶಾಲಿಗೆ.

"ನಾನು ಕೇಳುವುದು ಏನೂ ಇಲ್ಲಾ.......ನಾವೂ ಕೂಡ ಈ ಸಲ ಮದರಾಸಿಗೆ ಸಮ್ಮೇಳನಕ್ಕೆ ಹೋಗೋಣಾಂತ."

ಮತ್ತೆ ಶಾಂತವಾಗಿ ನುಡಿದಳು. ಇದು ಕಿವಿಗೆ ಸ್ಪಷ್ಟವಾಗಿ ಕೇಳಿಸಿದ್ದರೂ ನಾನು ಮಾತನಾಡಲಿಲ್ಲ. ನನ್ನಿಂದ ಏನು ಬರುವುದೆಂದು ಕುತೂಹಲದಿಂದ ನನ್ನ ಮೋರೆಯನ್ನು ಈಕ್ಷಿಸಿ ವಿಶಾಲಿ ಬೇಸತ್ತು

"ಹೇಳಣ್ಣಾ........... ಯಾಕೆ ಹೋಗುವುದು ಇಷ್ಟವಿಲ್ಲವೇ ಅಣ್ಣಾ.......ಹೇಳಿ ಬಿಡು ಯಾವುದಕ್ಕೂ. ಏಕೆ ಮಾತನಾಡದೇ ಸುಮ್ಮನೆ ಕುಳಿತೆ?...........ಹೇಳಣ್ಣಾ. ಈ ತರಹದ ತೊಂದರೆಗಳನ್ನು ಕೊಡುವುದು ಇದೇ ಕಡೆಯ ಸಲ. ಇನ್ನೆಂದೂ ಇನ್ನೆಲ್ಲಿಗೂ ಕರೆದುಕೊಂಡು ಹೋಗೆಂದು ಕೇಳುವುದಿಲ್ಲ...........ಯಾಕೆ ಯೋಚನೆ?........ ತಿಂಗಳ ಸಂಬಳಕ್ಕೆ ಸಂಚಕಾರ ಬಂದಿತೆಂದು ಯೋಚನೆಯೇ?.........ಹೇಳಿ ಬಿಡು ಯಾವುದನ್ನೂ ಖಚಿತವಾಗಿ. ನಾಳೆಯೇ ಕಡೆಯ ದಿನ ಡೆಲಿಗೇಟ್ ಹಣ ಕಳುಹಿಸಲು." ಒಂದೊಂದು ಮಾತನಾಡುವಾಗಲೂ ನನ್ನ ಮೋರೆಯ ಕಡೆ ನೋಡಿ ನೋಡಿ ಮಾತನಾಡಿದ್ದಳು. ವಿಶಾಲಿಯ ಈ ಪ್ರಾರ್ಥನೆ ಎಂತಹವರನ್ನೂ ಮನಕರಗಿಸುವಂತಿತ್ತು. ಅವಳೇನೋ

ಯಾವುದೊಂದನ್ನೂ ತಿಳಿಸಿಬಿಡಲು ಪದೇ ಪದೇ ಹೇಳಿದ್ದಳು. ಆದರೆ ಹೇಳುವುದು ಏನನ್ನ?.......ಮನಸ್ಸು ಅತ್ತಿಂದಿತ್ತ ತೊಯ್ದಾಡ ತೊಡಗಿತು. ಯಾವ ಒಂದು ನಿರ್ಧಾರಕ್ಕೂ ಬರಲಾರದೆ ಒಂದು ಸಲ ಹೋಗೋಣ ಎಂದಿತು, ಮತ್ತೊಂದು ಸಲ ಬೇಡವೆಂದಿತು. ಆದರೂ ಯಾವುದೊಂದು ಧೃಢನಿಶ್ಚಯವನ್ನು ತಾಳಲು ಮನಸ್ಸು ಹಿಂದೆಗೆಯುತ್ತಿತ್ತು. ವಿಶಾಲಿ, ಪಾಪ ಮದುವೆಯಾಗಿ ಬೇರೊಬ್ಬರ ಮನೆಗೆ ಹೋಗುವವಳು. ಹಾಗೆ ಹೋದಮೇಲೆ ಕೇಳುತ್ತಾಳೇನು?....ಏನೋ ಆಸೆ ಹೋಗಬೇಕೆಂದು. ತಾನೂ ನಾಲ್ಕಾರು ಕಥೆಗಳನ್ನು ಬರೆದು ಒಬ್ಬ ಸಾಹಿತಿಯಾಗಿರುವುದರಿಂದ....ಕೇಳುತ್ತಿದ್ದಾಳೆ....... ಪಾಪ ನನ್ನನ್ನು ಕೇಳದೆ ಅವಳು ಇನ್ನಾರನ್ನು ಕೇಳಬೇಕು? ಅಲ್ಲದೆ ಸಮ್ಮೇಳನಕ್ಕೆ ಹೋದರೆ ಮದರಾಸು ನೋಡಿದ ಹಾಗಾಗುತ್ತದೆ. ಅವಳು ಹೇಳಿದ ಹಾಗೆ ಮದರಾಸು ನೋಡಲು ಇಂತಹ ಸಮಯವಲ್ಲದೆ ಬೇರೆ ಯಾವಾಗ ಸಾಧ್ಯವಾಗುತ್ತದೆ? ಇನ್ನು ಖರ್ಚಾಗುವ ಹಣದ ಯೋಚನೆ. ಅಂತಹ ಹಣ ಏನು ಖರ್ಚಾಗುವುದು! ಆದರೆ ನನ್ನ ತಿಂಗಳ ಸಂಬಳದ ಹಣ ಖರ್ಚಾದೀತು! ಅಷ್ಟೇ ತಾನೆ!"

ಹೀಗೆ ಎಷ್ಟು ಹೊತ್ತು ತಾನೆ ತೂಗುಯ್ಯಾಲೆಯಾಡೀತು ಮನಸ್ಸು! ಕಡೆಗೆ ಹೋಗುವ ಕಡೆಗೇ ಒಲಿದು ತೀರ್ಮಾನವಿತ್ತಿತ್ತು.

"ಹಾಗೇ ಆಗಲಮ್ಮ, ಹೋಗೋಣ. ಯಾಕೆ ನಿನ್ನ ಆಸೆಗೆ ಮಣ್ಣೆರಚಿ ನಿನ್ನ ಮನಸ್ಸು ನೋಯಿಸಲಿ. ಯಾವ ತಾರೀಖಿನಿಂದ ಸಮ್ಮೇಳನ ನಡೆಯುವುದು. ಒಂದಿಷ್ಟು ಮುಂಚೆಯೇ ತಿಳಿಸಿಬಿಡು. ರಜಕ್ಕೆ ಬರೆದು ಹಾಕುತ್ತೇನೆ. ನಾಳೆ ಆಫೀಸಿಗೆ ಹೋಗುವ ಮುನ್ನ ಹಣದ ವಿಷಯ ಎಚ್ಚರಿಸು, ಕೊಡುತ್ತೇನೆ. ಡೆಲಿಗೇಟ್ ಫೀಯಾಗಿ ರವಾನಿಸುವೆಯಂತೆ."

ಇಷ್ಟು ಹೊತ್ತಿಗೆ ರಾತ್ರಿ ಹತ್ತರ ಸಮಯವಾಗಿತ್ತು. ಅಮ್ಮ ಅಡಿಗೇ ಮನೆಯಲ್ಲಿ ತನ್ನ ಫಲಾಹಾರವನ್ನು ಮುಗಿಸಿ, ಪಾತ್ರೆಯನ್ನು ತೊಳೆಯಲು ಇಟ್ಟು, ಮಲಗಲು ಹಾಸಿಗೆ ಸಿದ್ಧ ಮಾಡುತ್ತಿದ್ದಳು. ವಿಶಾಲಿಯು

ಇನ್ನೂ ನನ್ನೊಡನೆ ಹರಟುತ್ತಿರುವುದನ್ನು ಕಂಡು ತಾವೇ ರೂಂ ತನಕ ಬಂದು “ಅವನ ನಿದ್ದೆಯನ್ನು ಯಾಕೇ ಹಾಳು ಮಾಡುತ್ತಿದ್ದಿ ವಿಶಾಲಿ? ನಿನ್ನ ಕಾಡು ಹರಟೆಯಿಂದ. ಸಾಲದೇನು ಹೊತ್ತು ಮಲಗಲು. ಗಂಟೆ ಹತ್ತಾದರೂ ಇನ್ನೂ ಹರಟೆ........ಕೆಲಸಕ್ಕೆ ಬಾರದ ಹರಟೆ”

ಎಂದು ಗದರಿಕೊಂಡರು. ನಾನು ಓದುತ್ತಿದ್ದ ಭೇರಿಯನ್ನು ಪಕ್ಕಕ್ಕೆ ಸರಿಸಿಟ್ಟು ಮುಸುಕೆಳೆದು ಮಲಗಿದೆ. ವಿಶಾಲಿ ಅಮ್ಮನ ಗದರಿಕೆಯನ್ನು ಕಿಂಚಿತ್ತೂ ಗಣನೆಗೆ ತಾರದೇ ಅಮ್ಮನನ್ನು ಅಣಕಿಸುತ್ತಾ ಹೊರಟಳು, ತನ್ನ ಬಹಳ ದಿನಗಳ ಆಸೆಯನ್ನು ಈಡೇರಿಸಿಕೊಂಡ ಠೀವಿಯಿಂದ,

೨

ಸಮ್ಮೇಳನ ಇನ್ನೂ ಎಂಟು ದಿನವಿದೆ, ಎನ್ನುವಾಗಲೇ ವಿಶಾಲಿ ಸುದ್ದಿ ಕೊಟ್ಟಿದ್ದರಿಂದ ರಜಾ ಮುಂಜೂರು ಮಾಡಿಸುವ ಕೆಲಸ ಅಷ್ಟು ಕಠಿಣವಾಗಲಿಲ್ಲ. ರಜದ ‘ಧಾವಂತ’ ಕಳೆದು ಸಮ್ಮೇಳನಕ್ಕಾಗಿ ಹೊರಡುವ ದಿನಕ್ಕಾಗಿ ಎದುರು ನೋಡುತ್ತಿರುವಾಗ ಒಂದು ದಿನ ಅದು ಬಂದೇ ಬಂತು. ಹೊರಡುವ ಆ ದಿನ ವಿಶಾಲಿಯ ಸಂತೋಷ ಸಂಭ್ರಮಕ್ಕೆ ಪಾರವೇ ಇಲ್ಲ. ಎಷ್ಟು ಬಾರಿ ವಿಶ್ವಸಂಚಿ (Hold all) ಯನ್ನು ಕಟ್ಟಿಬಿಚ್ಚಿಯಾಳು! ಎಷ್ಟು ಬಾರಿ ಬಟ್ಟೆ ಬರೆಯನ್ನು ಆ ಪೆಟ್ಟಿಗೆಯಿಂದ ಈ ಪೆಟ್ಟಿಗೆ ಈ ಪೆಟ್ಟಿಗೆಯಿಂದ ಆ ಪೆಟ್ಟಿಗೆಗೆ ಬದಲಾಯಿಸಿಯಾಳು! ಅವಳ ಈ ಕಟ್ಟಿಬಿಚ್ಚುವ ಸಂಭ್ರಮವನ್ನು ಕಂಡು ಅಮ್ಮ—“ನಾಲ್ಕು ದಿನ ಮದರಾಸಿಗೆ ಹೋಗಲು ಇಷ್ಟು ಸಿದ್ಧತೆ ಮಾಡಿದರೆ, ಮದುವೆ ಮುಂಜಿಗೆ ಹೋಗುವುದಾದರೆ ಮನೆಯನ್ನೂ ಕೂಡ ಒಯ್ಯುವವಳೇ!” ಎಂದು ಟೀಕಿಸಿದ್ದರು. ನನ್ನ ಬಾಯಿಯೂ ಸುಮ್ಮನಿರಲಿಲ್ಲ. ಅಮ್ಮ ಹೇಳಿದುದಕ್ಕೆಲ್ಲ ತಾಳ ಕುಟ್ಟಿ “ಹೌದೇ ವಿಶಾಲೀ ಯಾಕೆ ಇಷ್ಟು ಸಾಮಾನು ಒಯ್ಯಬೇಕು—ನಾಲ್ಕು ದಿನದ ಮದರಾಸಿಗೆ? ಏನು!

ನಾವು ಯಾತ್ರೆ ಹೊರಡುವವರಂತೆ ಕಟ್ಟಿಟ್ಟದ್ದೀಯಲ್ಲಾ ಸಾಮಾನು, ಬಟ್ಟೆ ಬರೆ!" ಎಂದಿದ್ದೆ. ವಿಶಾಲಿ ನಾನಂದುದಕ್ಕೆ ಪ್ರತಿ ಮಾತೊಂದನ್ನು ಅಷ್ಟೇ ಬಿರುಸಿನಿಂದ ಕೊಟ್ಟಿದ್ದಳು.

"ಹೂಂ........ ನೀನಂದ ಹಾಗೆ ನಾವು ಹೋಗುವುದು ಯಾತ್ರೆ ಯಲ್ಲದೆ ಮತ್ತೇನು! ಕನ್ನಡ ಯಾತ್ರೆಗಾಗಿಯಲ್ಲವೇ ನಾವು ಮದರಾಸಿಗೆ ಹೋಗುವುದು!"

ಸಾಮಾನುಗಳ ಕಡೆ ಕೈತೋರಿ,

"ಈ ಬಟ್ಟೆಬರೆಗಳು ಏನು ಮಹಾ ಹೆಚ್ಚು, ಮದರಾಸಿನಲ್ಲಿ ಈಗ ಪೂರಾ ಚಳಿಯಂತೆ, ಬರುವವರು ಚಳಿಗೆ ತಕ್ಕಂತೆ ಬಟ್ಟೆಬರೆಗಳೊಂದಿಗೆ ಬರಬೇಕೆಂದು ಪೇಪರಿನಲ್ಲಿ ಬಂದ ಸುದ್ದಿ ನೀನು ನೋಡಲಿಲ್ಲವೇನು! ಪೇಪರಿನಲ್ಲಿ ಹೀಗೆಂದು ಬರೆದಿದ್ದಮೇಲೆ, ನಾವು ನಮಗೆ ಬೇಕಾಗುವಷ್ಟು ಬಟ್ಟೆಗಳನ್ನು ಸಂಗಡ ಒಯ್ಯದಿದ್ದರೆ, ಮದರಾಸಿನಲ್ಲಿ ಇವುಗಳ ಅವಶ್ಯಕತೆ ಒದಗಿದಾಗ ನಮಗಾರು ಕೊಡುತ್ತಾರೆ? ಅಲ್ಲಿ ಚಳಿ ಇದ್ದರೆ ಇವು ಉಪಯೋಗಕ್ಕೆ ಬರುತ್ತವೆ; ಇಲ್ಲದಿದ್ದರೆ ಹಿಂದಕ್ಕೆ ತರುವುದಾಗುತ್ತದೆ.... ಏನು ಈಗ?"

ಎಂದು ಅಬ್ಬರಿಸಿದ್ದಳು. ಅಬ್ಬಾ! ವಿಶಾಲಿಯ ಬಾಯಿಗೆ ಎದುರು!

* * * *

ಮನೆಬಿಟ್ಟು ನಿಲ್ದಾಣಕ್ಕೆ ಬಂದಾಗ್ಗೆ ರೈಲಿಗೆ ಇನ್ನೂ ಹೊತ್ತಿತ್ತು. ವಿಶಾಲಿ ಅವರಿಗೆ-ಹೇಳಿ ಬರುತ್ತೇನೆ, ಇವರಿಗೆ ಹೇಳಿ ಬರುತ್ತೇನೆ ಎಂದು ಮನೆ ಬಿಡುವುದೇ ಹೊತ್ತು ಮಾಡಿದ್ದಳು. ನನಗೆ, ಇಂದು ಬಹುಶಃ ರೈಲು ಸಿಕ್ಕಲಾರದು! ಎನ್ನುವ ಸಂಶಯ ಪೂರಾ ಇತ್ತು. ಆದರೆ ಸ್ಟೇಷನ್ನಿಗೆ ಬಂದಾಗ ರೈಲು ಸಿಕ್ಕುವುದಿಲ್ಲವೆಂಬ ಹೆದರಿಕೆ ಮುರಿಯಿತು. ಇನ್ನು ರೈಲು ಹೊರಡಲು ಹದಿನೈದು ನಿಮಿಷಗಳ ಮೇಲೆ ಇತ್ತು. ರೈಲಿನಲ್ಲಿ ಮದರಾಸಿಗೆ ಹೋಗುವವರ ಗಲಭೆ ಪೂರಾ ಇದ್ದುದರಿಂದ ವಿಶಾಲಿಯನ್ನು ಹೆಂಗಸರ ಡಬ್ಬಿಯಲ್ಲಿ ಕೂಡಿಸಿದೆ. ಆ ಡಬ್ಬಿಯಲ್ಲಿ

ಸಮ್ಮೇಳನಕ್ಕೆಂದೇ ಹೊರಟಿದ್ದ ಅನೇಕ ಮಹಿಳೆಯರ ತಂಡ ಒಂದು ಇದ್ದುದರಿಂದ ವಿಶಾಲಿಗೆ ಒಳ್ಳೆಯ ಜೊತೆ ಸಿಕ್ಕ ಹಾಗಾಯಿತು.

ನಾನು ಹೆಚ್ಚು ಜನವಿಲ್ಲದ ಪೆಟ್ಟಿಗೆಯೊಂದರಲ್ಲಿ ನನ್ನ ಸಾಮಾನುಗಳನ್ನು ಹಾಕಿ, ಅನುಕೂಲವಾದ ಸ್ಥಳ ಹಿಡಿದುಕೂತೆ. ನಾನು ಕುಳಿತಿರುವ ಸಾಲಿನ ಎದುರು ಸಾಲಿನಲ್ಲಿಯೇ ನನ್ನ ಹಿರಿಯ ವಿದ್ಯಾಗುರುಗಳೊಬ್ಬರು ಕುಳಿತಿದ್ದರು. ಅವರೂ ಕನ್ನಡ ಸಾಹಿತ್ಯದಲ್ಲಿ ಹೆಸರಾದ ಬರಹಗಾರರೊಬ್ಬರು. ಹತ್ತಾರು ಹಾಸ್ಯ ಪ್ರಧಾನ ಗ್ರಂಥಗಳನ್ನು ಬರೆದಿರುವವರು. ಅವರು ನನ್ನನ್ನು ನೋಡುತ್ತಲೇ ನಸುನಕ್ಕರು. ಆ ನಸುನಗು ಅವರ ಮೋರೆಗೆ ಸಹಜ ಸಿದ್ಧವಾದುದು. ಯಾರೊಬ್ಬ ಗುರುತಿನವರನ್ನು ಸ್ವಾಗತಿಸುವಾಗ, ಯಾವುದೊಂದು ಗೊಂದಲದ ಪ್ರಸಂಗ ಕಣ್ಣಿಗೆ ಬಿದ್ದಾಗ ಆ ನಗೆ ಅವರ ಮೋರೆಯ ಮೇಲೆ ಸದಾ ಕಳಕಳಿಸುತ್ತದೆ. "ಏನಯ್ಯಾ, ನೀನು ಎಲ್ಲಿಗೆ ಹೊರಟಿದ್ದೀ?" ಅವರು ನನ್ನನ್ನು ನೋಡಿ ಮಾತನಾಡಿಸಿದರು. ತಮಗೆ ತೀರಾ ಪರಿಚಿತರಾದವರನ್ನು, ತಮ್ಮ ಶಿಷ್ಯಗಣವನ್ನೂ ಅವರು ಯಾವಾಗಲೂ ಏಕವಚನದಲ್ಲಿಯೇ ಸಂಬೋಧಿಸುವುದು. ಇದನ್ನು ತಿಳಿದು ನನಗೆ ಅವರ ಏಕವಚನ ಪ್ರಯೋಗ ನನ್ನ ಮೇಲೆ ಏನೂ ಪ್ರಭಾವ ಬೀರಲಿಲ್ಲ.

"ಮದರಾಸಿನತನಕ ಸಾರ್" ನಾನೆಂದೆ.

"ಏನು ಬಿಜಿನೆಸ್ (Business) ಮೇಲೋ"

"ಇಲ್ಲಾ ಸಾರ್, ಅಲ್ಲಿ ನಡೆಯುವ ಸಾಹಿತ್ಯಸಮ್ಮೇಳನಕ್ಕಾಗಿ"

"ಓಹೊಹೊ! ಸಾಹಿತ್ಯಸಮ್ಮೇಳನಕ್ಕೋ ಹೊರಟಿರುವುದು. ಹಾಗಾದರೆ ಸರಿಸರಿ. ನಮ್ಮ ಗುಂಪಿನ ಜೊತೆಗೆ ನೀನೂ ಒಬ್ಬನಾಯಿತು. ನಾವೆಲ್ಲಾ ಅಲ್ಲಿಗೇ ಹೊರಟವರು."

ಅವರ ಮಾತು ಸಧ್ಯಕ್ಕೆ ಇಷ್ಟಕ್ಕೇ ನಿಂತಿತು. ಆದರೆ ಮುಂದೆ ರೈಲು ಹೊರಟಾಗ ಮಾತೂ ರೈಲಿನ ವೇಗದಷ್ಟೇ ನೇರವಾಗಿ ಹರಿಯಿತು. "ನಿನ್ನ ಹೆಸರು ವಾಸುದೇವ ಮೂರ್ತಿ ಎಂದಲ್ಲವೇ"

"ಹೌದು ಸಾರ್"

ಅವರು ನನ್ನ ಹೆಸರನ್ನು ಸರಿಯಾಗಿ ಗೊತ್ತು ಹಚ್ಚಿ ಕೇಳಿದುದಕ್ಕೆ ನನಗೆ ಆಶ್ಚರ್ಯವಾಯಿತು. "ಅದು ಹೇಗೆ ಸಾರ್ ನನ್ನ ಹೆಸರನ್ನು ಇನ್ನೂ ಜ್ಞಾಪಕದಲ್ಲಿಟ್ಟುಕೊಂಡಿರುವಿರಿ?"

"ಯಾಕಯ್ಯಾ ನನ್ನ ವಿದ್ಯಾರ್ಥಿಗಳು ನನಗೆ ನೆನಪಿಲ್ಲದಿರುತ್ತದೆಯೇ?"

ಅವರು ಹೀಗೆಂದು ಹೇಳಿದ್ದರೂ ನನ್ನ ಹೆಸರನ್ನು ಅವರು ನೆನಪಿನಲ್ಲಿ ಇಟ್ಟಿರುವ ವಿಷಯ ನನಗೆ ನಿಜವಾಗಿಯೂ ಆಶ್ಚರ್ಯವನ್ನುಂಟು ಮಾಡಿತು. ಅವರು ಹೇಳಿದಂತೆ ನಾನೇನೋ Inter ನಲ್ಲಿ ಇದ್ದಾಗ್ಯೆ ಅವರ ವಿದ್ಯಾರ್ಥಿಯಾಗಿದ್ದೆ. ಆದರೂ ನನ್ನಂತಹ ವಿದ್ಯಾರ್ಥಿಗಳು ಪ್ರತಿ ವರ್ಷ ಎಷ್ಟು ಮಂದಿ ಅವರ ಕಣ್ಣ ಮುಂದೆ ಹಾದುಹೋಗುವರೋ! ಇಂತಹವರಲ್ಲಿ ನನ್ನ ಹೆಸರು ಇವರ ನೆನಪಿನಲ್ಲಿರುವುದೆಂದರೆ ಬಹುಶಃ ಕಾಲೇಜಿನ ವಾರ್ಷಿಕ ಹಬ್ಬ (College day) ದ ಕಾಲದಲ್ಲಿ ಅವರದೊಂದು ನಾಟಕವನ್ನು ಅಭಿನಯಿಸಿದ್ದುದರಿಂದ ಇನ್ನೂ ನೆನಪಿನಲ್ಲಿರಬೇಕು ನನ್ನ ಹೆಸರು ಎಂದುಕೊಂಡೆ. ಆದರೂ ಇಷ್ಟು ವರ್ಷಗಳ ಮೇಲೆಯೂ ನನ್ನನ್ನು ಗುರುತಿಸಿ ಹೆಸರಿನಿಂದ ಕರೆದುದಕ್ಕೆ ಅವರ ಜ್ಞಾಪಕಶಕ್ತಿಯ ಮೇಲ್ಮೆಯ ಬಗ್ಗೆ ಬೆರಗಾದೆ.

"ನೀನು ಯಾವ ವರ್ಷವಯ್ಯ ಕೋರ್ಸು ಮುಗಿಸಿದ್ದು"

"1945 ರಲ್ಲಿ ಸಾರ್"

"ಓಹೋ! ಆಗಲೇ ವರ್ಷವಾಯಿತು! ಏನು ಮಾಡುತ್ತಿದ್ದೀ ಈಗ, ಎಲ್ಲಿದ್ದಿ?"

"ನಾನು ಒಂದು private firm ನಲ್ಲಿ ಕೆಲಸ ಮಾಡುತ್ತಿದ್ದೇನೆ ಸಾರ್. ಸಂಬಳ ಈಗ 75 ರೂ ಕೊಡುತ್ತಿದ್ದಾರೆ. ನಾನು ಇಲ್ಲೇ ಮಲ್ಲೇಶ್ವರದಲ್ಲಿ ಇದ್ದೇನೆ"

ನನ್ನ ವಿಷಯ ಇಷ್ಟು ತಿಳಿದು ತೃಪ್ತರಾಗದೇ ಮತ್ತೆ ಕೆಣಕಿ ಕೇಳಿದರು.

"ನಿನಗೆ...... ಎಷ್ಟು....... ಜನ......."

"ಅಯ್ಯೋ ಸಾರ್! ನನಗೆ ಇನ್ನೂ ಮದುವೆಯೇ ಇಲ್ಲ. ಆಗಲೇ ನೀವು ಮಕ್ಕಳ ಎಣಿಕೆಗೆ ತೊಡಗಿದ್ದೀರಿ"

"ಯಾಕಯ್ಯ ಇನ್ನೂ ಸಾವಕಾಶ. ಓದು ಮುಗಿಸಿ ಕೆಲಸದಲ್ಲಿದ್ದೀಯಾ. ಬೇಗ, ಬೇಗ ಅರ್ಧಾಂಗನೆನ್ನಿಸಿಬಿಡು" ಎಂದು ಟೀಕಿಸಿದರು. ನಾನು ಅವರ ಟೀಕೆಯನ್ನು ಸ್ವಾಗತಿಸಿದರೂ ಏನೊಂದು ಉತ್ತರ ಕೊಡಲಿಲ್ಲ. ಇನ್ನು ಮುಂದೆ ನನ್ನ ಬಗ್ಗೆ ಹೆಚ್ಚೇನು ಕೇಳಲಿಲ್ಲ. ಪ್ರಶ್ನಿಸುವ ಹಕ್ಕನ್ನು ಅವರಿಂದ ನಾನು ಕಸಿದುಕೊಂಡೆ. ನಾನು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಅವರೂ ನಾನು ಉತ್ತರಕೊಟ್ಟಷ್ಟು ಸೌಜನ್ಯದಿಂದಲೇ ಉತ್ತರಿಸಿದರು. ನಾವಿಬ್ಬರೂ ಗುರು ಶಿಷ್ಯ ಸ್ಥಾನ ಕಳೆದು ಗೆಳೆಯರ ಸ್ಥಾನಕ್ಕೆ ಬಂದು ಎಷ್ಟೋ ಕಾಲವಾಗಿತ್ತು.

"ಏನು ಸಾರ್! ನೀವು ಮೈಸೂರು ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ಕೇಳಿದ್ದೆ. ಯಾವಾಗ ಸರ್ ಬಂದುದು ಇಲ್ಲಿಗೆ?"

"ನಾನು ಇಲ್ಲಿಗೆ ಬಂದು ಸ್ವಲ್ಪ ಹೆಚ್ಚು ಕಡಿಮೆ ಎರಡು ವರ್ಷಕ್ಕೆ ಬಂತು. ನಾನು ಆಕಾಶವಾಣಿಯಲ್ಲೇನೊ ಇದ್ದುದು ನಿಜ ಆದರೆ ಅದು ಬಹಳ ಹಿಂದೆ!'

"ನೀವು ಇಲ್ಲಿ ಎಲ್ಲಿ ಮನೆ ಮಾಡಿರುವಿರಿ ಸಾರ್''

"ಇಲ್ಲೇ, ನಿನ್ನ localityನಲ್ಲೇ."

"ಓಹೊ ನೀವೂ ನಮ್ಮವರೇ, ಮಲ್ಲೇಶ್ವರದವರೇ ಆದಿರಿ ಹಾಗಾದರೆ".

"ಹೊಂ. ಹೂಂ. ನಾನೂ ನಿಮ್ಮವನೇ, ನಿಮ್ಮ ಮಲ್ಲೇಶ್ವರದವನೇ" ಎಂದು ಸ್ವಲ್ಪ ವ್ಯಂಗ್ಯವಾಗಿ ನುಡಿದರು.

ಈ ವೇಳೆಗೆ ಸರಿಯಾಗಿ ಅವರ ಪಕ್ಕದಲ್ಲಿ ಕುಳಿತಿದ್ದ ಅವರ ಪಂಡಿತ ಗೆಳೆಯರು -- ಆಚಾರ್ಯರು, ಅಯ್ಯನವರು – ಯಾವುದೋ ಹಾಸ್ಯ ಪ್ರಸಂಗ ಒಂದರ ಕಡೆ ಅವರ ಗಮನವೆಳೆದರು. ಒಬ್ಬ ಸಹ ಪ್ರಯಾಣಿಕ– ಸುಮಾರು ನಲವತ್ತು ವರ್ಷದವನು ಹೆಂಡತಿಯ ಮೇಲೆ ರೇಗುತ್ತಿದ್ದ. ಅವನ ರೇಗಾಟದ ಕಾರಣವಿಷ್ಟೆ- ತಂದೆಯ ಪಕ್ಕದಲ್ಲೇ ಕುಳಿತಿದ್ದ ಹನ್ನೆರಡು, ಹದಿಮೂರುವರ್ಷದ ಮಗ ಗಾಡಿಯಲ್ಲಿ ಹಲಗೆಯ ಮೇಲೆ ಬರೆದಿದ್ದ 'ಧೂಂಗ

ಲುನ್ನಾರು ಜಾಗ್ರತ' ಎನ್ನುವ ಎಚ್ಚರಿಕೆಯ ಮಾತನ್ನು ಅಪ್ಪನಿಗೆ ಕೇಳುವ ಹಾಗೆ ಗಟ್ಟಿಯಾಗಿ ಅಂದುಕೊಂಡನಂತೆ. ಅದನ್ನು ಕೇಳಿ ಅಪ್ಪ ಬೆಚ್ಚಿಬಿದ್ದು, ಒಳ ಜೋಬಲ್ಲಿಯ ಪಾಕೆಟ್ಟು, ಪೆನ್ನು ನೋಡಿಕೊಂಡನಂತೆ. ಸರಿ, ಪಾಕೆಟ್ಟು, ಪೆನ್ನು ಇರಬೇಕಾದ ಸ್ಥಳದಲ್ಲಿ ಇರಲಿಲ್ಲ. ಯಾರೋ 'ದೊಂಗಲು' ತನ್ನ ಪಾಕೆಟ್ಟು ಪೆನ್ನು ಹಾರಿಸಿದ್ದಾರೆ ಎಂದು ಬೊಬ್ಬೆ ಹೊಡೆಯಲು ಮೊದಲಿಟ್ಟ. ಅಲ್ಲಿ ಸುತ್ತ ಮುತ್ತ ಕುಳಿತಿದ್ದವರು ಕೋಟು ಜೋಬುಗಳನ್ನು ಸರಿಯಾಗಿ ಹುಡುಕಲು ಹೇಳಿದರು. ಆತ ಮತ್ತೆ ಹುಡುಕಿದಾಗ ಎಡಕಿಸೆಯಲ್ಲಿ ಕರವಸ್ತ್ರದ ಮರೆಯಲ್ಲಿ ಪಾಕೆಟ್ಟು ಅವಿತುಕೊಂಡಿತ್ತು. ಟಿಕೆಟ್ಟು ತೆಗೆದುಕೊಳ್ಳುವ ಅವಾಂತರದಲ್ಲಿ ಪಾಕೇಟನ್ನು ಒಳಜೋಬಿನಲ್ಲಿ ಅದರ ಸ್ಥಳದಲ್ಲಿ ಇರಿಸುವುದನ್ನು ಮರೆತಿದ್ದ.

ಇನ್ನು ಪೆನ್ನು! ಪಾರ್ಕರ್ ಹೊಸಾ ಹೊಸದು ಮೊನ್ನೆ ತಾನೆ ಐವತ್ತೊಂದುರೂಪಾಯಿ ಕೊಟ್ಟು ಕೊಂಡುಕೊಂಡಿದ್ದ. ಪಾಕೇಟಿನಂತೆ ಪೆನ್ನು ಸಿಕ್ಕಬಹುದೆಂದು ಎಲ್ಲಾ ಕಿಸೆಗಳನ್ನೂ ಒಂದುಬಾರಿ ತಿರುವಿಹಾಕಿದ. ಆದರೆ ಪೆನ್ನು ಎಲ್ಲೂ ಸಿಗಲಿಲ್ಲ. "ಅಯ್ಯಾ ಪೋಯನೇ.... ಕೊತ್ತ ಮೊನ್ನೆ ತೀಸ್ಕೊಂಡುಉಂಟಿನೇ, ಯಾಭೈಒಗಟಿರೂಪಾಯಿಲಕಿ...." ಅಂತ ಗೋಳು ಕಹಳೆ ಊದಲು ತೊಡಗಿದ! ಹೆಂಡತಿ ಗಂಡನನ್ನು ಅದೇ ಗೀರ್ವಾಣ ಭಾಷೆಯಲ್ಲೇ ಸಮಾಧಾನ ಪಡಿಸಲೆತ್ನಿಸಿದಳು. ಗಂಡ, ಹೆಂಡತಿಯಮೇಲೆ ರೇಗಿದ ಬೆಳಿಗ್ಗೆ ಪೆನ್ನನ್ನು ಏಕೆ ಮುಟ್ಟಿದೆ ಎಂದು. ಬೆಳಿಗ್ಗೆ ಅಗಸರವನಿಗೆ ಬಟ್ಟೆ ಹಾಕಲು ಪೆನ್ನು ಪಾಕೇಟನ್ನು ಬೇರೊಂದು ಕೋಟಿಗೆ ಹೆಂಡತಿ ಬದಲಾಯಿಸಿದ್ದಳು. ಆಗಲೇ ಕಳೆದಿರಬೇಕೆಂದು ಗಂಡನ ವಾದ.

"ಇಲ್ಲ ಎಚ್ಚರಿಕೆಯಿಂದ ಮರೆಯದೆ ಈಕೋಟಿನೊಳಗೆ ಇಟ್ಟೆ"ನೆಂದು ಹೆಂಡತಿಯ ಹೇಳಿಕೆ.

ಸರಿ ಹೀಗೆಯೇ, ಮಾತಿಗೆ ಮಾತು ಗಂಡ ಹೆಂಡಿರಲ್ಲಿ. ಕಡೆಗೆ ಬಿಸಿಯಾಗಿಯೇ ಆಗತೊಡಗಿತು. ಗಾಡಿಯಲ್ಲಿ ಇದ್ದವರೆಲ್ಲರೂ ತಮ್ಮನ್ನೇ ದುರುಗಟ್ಟಿ ನೋಡುತ್ತಿದ್ದರಿಂದ ಹೆಂಡತಿ ತಪ್ಪನ್ನು ತನ್ನ ಮೇಲೇ ಹೊತ್ತು

ಕೊಂಡು ಸುಮ್ಮನಾದಳು. ಆದರೂ ಗಂಡ ಬಿಡಲಿಲ್ಲ. ಹೆಂಡತಿಯ ಮೇಲೆ ರೇಗಾಡುತ್ತಲೇ ಇದ್ದ.

ಆದರೆ ಈ ಮಧ್ಯೆ ಮತ್ತೊಂದು ಸಂಗತಿ ನಡೆಯಿತು. ಕುರುಡಿಯೊಬ್ಬಳು ಹಾಡುತ್ತಾ ಭಿಕ್ಷೆ ಬೇಡುತ್ತ ಅವರು ಕುಳಿತೆಡೆಗೆ ಬಂದಳು. 51 ರೂಪಾಯಿ ಪೆನ್ನನ್ನು ಕಳೆದುಕೊಂಡಿದ್ದ ಆತ, ಕುರುಡಿಯನ್ನು ಅತ್ತ ಹೋಗೆಂದು ಗದರಿದ. ಕುರುಡಿ ಇವನ ಬಿರುಸು ದನಿಗೆ ಹೆದರಿ ಮುಂದೆ ಹೋಗಲು ನೆಲವನ್ನು ಜಜ್ಜುತ್ತಾ ನಡೆದಳು. ಆಗ ಏನೋ ಒಂದು ಪದಾರ್ಥ ಆತನ ಕಾಲಿಗೆ ಚಿಮ್ಮಿ ಬಡಿದಂತೆ ಆಯಿತು. ಅವನು ಬಗ್ಗಿ ನೋಡುತ್ತಾನೆ ಅವನ ಕಾಲಿಗೆ ಬಡೆದದ್ದು ಏನೂ ಅಲ್ಲ, ಅವನು ಕಳೆದುಕೊಂಡಿದ್ದ ಪಾರ್ಕರ್ ಪೆನ್ನು.!

ಎಲ್ಲೋ ಬಗ್ಗಿದಾಗ ಕೋಟಿನ ಮೇಲ್ಜೋಬಿನಲ್ಲಿ ಇದ್ದ ಅದನ್ನು ಕೆಳಗೆ ಬೀಳಿಸಿ ಕೊಂಡಿದ್ದ. ಅದು ಈಗ ಕುರುಡಿಯ ದೆಶೆಯಿಂದ ಅವನಿಗೆ ಮತ್ತೆ ಲಭ್ಯವಾಯಿತು. ಪೆನ್ನನ್ನು ಹುಡುಕಿಕೊಟ್ಟ ಕುರುಡಿಗೆ ಅವನು ನಾಲ್ಕಾಣೆ ಇತ್ತ. ಹೆಂಡತಿಯನ್ನು ಆ ಕಾರಣವಾಗಿ ದೂಷಿಸಿದ್ದುದಕ್ಕೆ ಪಶ್ಚಾತ್ತಾಪ ಪಡುವವನಂತೆ ದೀನನಾಗಿ ನೋಡಿದ. ಆದರೆ ಹೆಂಡತಿ ಈಗ ಸಿಂಹಿಣಿಯಾಗಿದ್ದಳು. ಅವಳ ದೃಷ್ಟಿಯನ್ನು ಎದುರಿಸಲಾರದೆ ಗಂಡ ಬೆಕ್ಕಿನ ಮರಿಯಂತೆ ಅಗಿದ್ದ.

ಈ ಘಟನೆಯ ಆದಿ ಅಂತ್ಯವನ್ನು ಬಲ್ಲ ಗಾಡಿಯಲ್ಲಿದ್ದ ಸಹ ಪ್ರಯಾಣಿಕರೆಲ್ಲರೂ "ಖೊಳ್" ಎಂದು ನಕ್ಕರು; ಅವನ ಗಾಬರಿ ಸ್ವಭಾವದ ಬಗ್ಗೆ ತಮ್ಮ ತಮ್ಮಲ್ಲೇ ಮಾತನಾಡಿಕೊಂಡರು. ಭಿಕ್ಷೆಗಾಗಿ ಬಂದಿದ್ದ ಕುರುಡಿಯೂ, ಪ್ರಯಾಣಿಕರ ತಮಾಷೆಯಲ್ಲಿ ಹಾಡುವುದನ್ನೂ, ಬೇಡುವುದನ್ನೂ ನಿಲ್ಲಿಸಿ ಪಾಲುಗೊಂಡಳು. ಗಾಡಿಯಲ್ಲಿ ನಗುಲಹರಿ ನಿಂತಮೇಲೆ ಮತ್ತೆ ತನ್ನ ಬೇಡುವ ಕೆಲಸದಲ್ಲಿ ತೊಡಗಿದಳು.

ಭಿಕ್ಷುಕಿ ನಮ್ಮ ಮುಂದೆ ಬಂದಾಗ ಎಲ್ಲರೂ ಅವಳ ದುಸ್ಥಿತಿಗೆ ಮರುಗಿ ತಮ್ಮ ಕೈಲಾದ ಧರ್ಮ ನೀಡಿದರು. ಯಾವನೋ ಒಬ್ಬ ಕುಹಕಿ ಭಿಕ್ಷುಕಿಯನ್ನು ಟೀಕಿಸಿದ—ತಾನು ಏನು ಧರ್ಮ ಮಾಡದಿದ್ದರೂ—

"ಇವರೆಲ್ಲಾ ಕಳ್ಳ ಕುರುಡಿಯರು; ಬೇಕಂತಲೇ ಕಣ್ಣಿಲ್ಲವೆಂದು ನಟಿಸಿ ಕಾಸು ಸುಲಿದು ಸಮಾಜವನ್ನು ವಂಚಿಸುವವರು. ಇಂಥಹವರಿಗೆ ಧರ್ಮ ಮಾಡಬೇಕಂತೆ ಧರ್ಮ. ಎಲ್ಲಿಯಾದರೂ ಕೂಲಿ ಮಾಡಿ ಸಂಪಾದಿಸಲು ಇವರಿಗೆ ಏನು ರೋಗ......! ನಾನೇನಾದರೂ ಮಿನಿಸ್ಟರ್, ಗಿನಿಸ್ಟರ್ ಆಗಿದ್ದಿದ್ರೆ.......ಇವರನ್ನೆಲ್ಲಾ ಹಿಡಿದು ತರಿಸಿ ಪಾಠ ಕಲಿಸುತ್ತಿದ್ದೆ! ಎಂದೆಂದಿಗೂ ಭಿಕ್ಷೆ ಬೇಡದ ಹಾಗೆ ಮಾಡುತ್ತಿದ್ದೆ" ಮತ್ತೊಂದು ಮೂಲೆಯಲ್ಲಿ ಕುಳಿತಿದ್ದ ಅವನಷ್ಟೇ ವಯಸ್ಸಿನವನೊಬ್ಬ ಅವನ ಟೀಕೆಯನ್ನು ಕೇಳಿ ಪಹಪ.......ಪಹಪ ......ಅದಕ್ಕೇ ನೀನು ಮಿನಿಸ್ಟರ್ ಆಗಿಲ್ಲ.... ಎಂದು ಕೇಳಿಸಿಯೂ ಕೇಳಿಸದಂತೆ ಮಾರ್ಧನಿಸಿದ.

ಆ ಕುಹಕಿಯ ಮಾತನ್ನು ಕೇಳಿ ಆ ಕುರುಡಿ ತುಂಬಾ ನೊಂದುಕೊಂಡಳು. ಅವಳು ನಿಜವಾಗಿಯೂ ಎರಡು ಕಣ್ಣೂ ಇಲ್ಲದ ಕುರುಡಿ. ಬೇಕಾದರೆ ಕಣ್ಣು ತೆಗೆಯಿಸಿ ನೋಡಬಹುದೆಂದೂ ನಾನಂಥ ಕಣ್ಣಿರುವ ಮೋಸಗಾರ ಕುರುಡರ ಗುಂಪಿಗೆ ಸೇರಿಲ್ಲವೆಂದೂ ತೀರಾ ಖಿನ್ನಳಾಗಿ ಹೇಳಿದಳು. ಅವಳ ಆಗಿನ ಸ್ಥಿತಿಯಲ್ಲಿ ಮರುಕದ ಮೂರ್ತಿಯಾಗಿದ್ದಳು. ಅಲ್ಲೇ ಪಂಡಿತ ಗೆಳೆಯರೊಂದಿಗೆ ಕುಳಿತಿದ್ದ—ಡಾಕ್ಟರ್ ಶಾಸ್ತ್ರಿಗಳಿಗೆ ಏನು ಅನಿಸಿತೋ ಏನೋ ಕಿಸಿಯಿಂದ ಒಂದು ರೂಪಾಯಿ ನಾಣ್ಯವನ್ನು ಎತ್ತಿ ಆ ಕುರುಡಿಗೆ ಇತ್ತರು.

ಎಲ್ಲರೂ ಅವರನ್ನು ದುರುಗುಟ್ಟಿಕೊಂಡು ನೋಡಿದರು. ಅವರೇಕೆ ರೂಪಾಯಿ ಇತ್ತರೆಂದ ಕುರುಡಿಯು ಮುಂದಿನ ನಿಲ್ದಾಣದಲ್ಲಿ ಇಳಿದು ಮತ್ತೊಂದು ಗಾಡಿಗೆ ಹೊರಟು ಹೋದಮೇಲೆ ಡಾಕ್ಟರ್ ಶಾಸ್ತ್ರಿಗಳು ಹೇಳಿದರು.

"ನೋಡಿ ನಾನೇನೋ ಈಗ ಒಂದು ರೂಪಾಯಿ ಕೊಟ್ಟೆ. ಈ ಒಂದು ರೂಪಾಯಿ ಕೊಟ್ಟದ್ದೇ ನಿಮಗೆ ಆಶ್ಚರ್ಯವನ್ನುಂಟು ಮಾಡಿದೆ. ಆದರೆ ಕೇಳಿ ಈ ಕಥೇನಾ. ನಮ್ಮ ಕೈಲಾಸಂ ಇಂಥದೇ ಒಂದು ಕಣ್ಣಿಲ್ಲದ ಕುರುಡಿಗೆ 85 ರೂಪಾಯಿ ಕೊಟ್ಟುಬಿಟ್ಟರು.... ಒಮ್ಮೆ...."

"ಎಂದು ?..........ಎಲ್ಲಿ ?

ನಾಲ್ಕಾರು ದನಿಗಳು ಕೂಡಿ ಪ್ರಶ್ನಿಸಿದವು. ಡಾಕ್ಟರ್ ಶಾಸ್ತ್ರಿಗಳು ಹೇಳತೊಡಗಿದರು.

ಈಗ್ಗೆ ಸುಮಾರು ಇಪ್ಪತ್ತೈದುವರ್ಷಗಳ ಹಿಂದಣ ಮಾತು. ನಾನು ಇನ್ನು ಕೆಲವು ಮಂದಿ ತುಮಕೂರಿಗೆ ಕೈಲಾಸಂ ಜತೆಗೆ ಹೋಗಿದ್ದೆವು. ಅಲ್ಲಿನ ಪುರಭವನದಲ್ಲಿ ಅಂದು ಕೈಲಾಸಂರವರ ಏಕಪಾತ್ರಾಭಿನಯ ನಾಟಕವಿತ್ತು. ಅಂದಿನ ಪ್ರದರ್ಶನದಲ್ಲಿ ಕೈಲಾಸಂಗೆ 87 ರೂಪಾಯಿನಷ್ಟು ಕೈಗೆ ಬಂತು— ಖರ್ಚುವೆಚ್ಚವೆಲ್ಲಾ ಕಳೆದು. ಇಷ್ಟು ಹಣವು ತುಮಕೂರಿನಿಂದ ಬೆಂಗಳೂರಿಗೆ ಬರುವತನಕ ಕೈಲಾಸಂ ಕಿಸೆಯಲ್ಲಿಯೇ ಇತ್ತು. ನಮಗೆ ಆಗಲೇ ಅನಿಸಿತ್ತು, ಕೈಲಾಸಂ ಕಿಸೆಯಲ್ಲಿ ಈದುಡ್ಡು ಇಪ್ಪತ್ತನಾಲ್ಕು ಗಿಂತಲೂ ಹೆಚ್ಚು ಕಾಲ ನಿಲ್ಲುವುದಿಲ್ಲವೆಂದು. ನಾವು ಎಂದು ಕೊಂಡಂತೇ ಆಯಿತು, ಬೆಂಗಳೂರಿಗೆ ಬಂದಾಗ ನಾವು ಸ್ಟೇಷನ್ ಬಿಟ್ಟು ಕೋಟೆದಪ್ಪನ ಛತ್ರದ ಸಮೀಪಕ್ಕೆ ಬಂದವೇಳೆಗೆ ಕೈಲಾಸಂರವರ ಕೈ ಕಿಸೆಗೆ ಹೋಗಿತ್ತು. ಅಲ್ಲೊಬ್ಬಳು ನಡುವಯಸ್ಸಿನ ಭಿಕ್ಷುಕಿ, ಎರಡೂ ಕಣ್ಣನ್ನೂ ಹುಟ್ಟುತ್ತಲೇ ಕಳೆದುಕೊಂಡು ಕಣ್ಣಿಲ್ಲದ ಕಪೋತಿಯಂತೆ ಕುಳಿತಿದ್ದಳು. ಅವಳನ್ನು ನೋಡುತ್ತಲೇ ಕೈಲಾಸಂ ತನ್ನ ಕಿಸೆಯಿಂದ ಹಣವನ್ನೆಲ್ಲಾ ತೆಗೆದು ಅವಳಿಗೆ ಕೊಟ್ಟುಬಿಟ್ಟರು. ನಮಗೆಲ್ಲಾ ಆಶ್ಚರ್ಯ, ಇದೇನು ಕೈಲಾಸಂ ಮಾಡುತ್ತಿರುವುದೂ ಎಂದು. ಭಿಕ್ಷುಕಿಗೆ, ಎಂಭತ್ತೇಳು ರೂಪಾಯಿ!.... ಅದೂ ಯಾವ ಹೆಚ್ಚಿನ ತನಿಖೆಯಿಲ್ಲದೆ. "ಏನದು ಕೈಲಾಸಂ ನೀನು ಮಾಡುತ್ತಿರುವುದೂ" ಎಂದು ಕೇಳಿದೆ ನಾನು

ಕೈಲಾಸಂ ನುಡಿದರು "ಏನೂ ಇಲ್ಲ Brother (ಬ್ರದರ್) ಪಾಪ ಕಣ್ಣು ಕಾಣದ ಕುರುಡಿ ಅವಳು, ಏನೋ ನಾಲ್ಕು ಕಾಸು ಕೊಟ್ಟೆ"

ಅವರು ಕೊಟ್ಟಿದ್ದು ಕಾಸು ಅಲ್ಲ, ಎಂಭತ್ತೇಳು ರೂಪಾಯಿ ಎಂದು ನಮಗೆಲ್ಲಾ ಗೊತ್ತಿತ್ತು. ಆದರೂ ಕೈಲಾಸಂ ನಾಲ್ಕೇ ಕಾಸೆಂದು ಹೇಳಿದ್ದರು.

ನಾವು ಆ ಕ್ಷಣ ಏನೂ ಮಾತನಾಡಲಿಲ್ಲ. ಕೈಲಾಸಂ ಮಾಡಿದ ಈ ಕೆಲಸ ಮಾತಿಗೆ ನಿಲುಕದ ವಿಷಯವಾಗಿತ್ತು.

"ಅದಿರಲಿ ಕೈ, ನಿನ್ನ ಬಳಿ ಇರುವುದನ್ನೆಲ್ಲಾ ಕೊಟ್ಟುಬಿಟ್ಟೆಯಲ್ಲಾ. ನಾಳೆ ನಿನಗೆ ಏನಾದರೂ ಬೇಕಾದರೆ, ಒಂದು ಸಿಗರೇಟೋ, ಮತ್ತೊಂದೊ, ನೀನೇನು ಮಾಡುವಿ......."

"ನೋಡು 'ಬ್ರದರ್' ಈಗ ನನಗಿಂತ ಹೆಚ್ಚಾಗಿ ಅವರಿಗೆ ಹಣದ ಕೊರತೆ ಇದೆ.....ನನಗೇನು....ಹೇಗಾದರೂ ಆಗುತ್ತೆ; ಆದರೆ ಅವಳಿಗೆ ಪಾಪ! ಯಾರು ಕೊಡ್ತಾರೆ ಹೇಳು!"

ಕೈಲಾಸಂ ಬಾಯಿನಿಂದ ಬಂದ ಈ ಒಂದು ಮಾತು— ನಮ್ಮ ನೂರು ಪ್ರಶ್ನೆಗಳನ್ನು ಹಾರಿಸಿತು. ಮತ್ತೆ ನಾಲ್ಕು ಹೆಜ್ಜೆ ಹೋದಾಗ ನಾನು ಮತ್ತೆ ಬಾಯಿ ಸಡಿಲಿಸಿದೆ.

"ಹೋಗಲಿ ಕೈ. ನೀನೇನೊ ಅವಳ ಕೈಗೆ ಅಷ್ಟೊಂದು ದುಡ್ಡು ಕೊಟ್ಟು ಬಂದೆಯಲ್ಲಾ, ಅದನ್ನು ಯಾರಾದರೂ ನೋಡಿಕೊಂಡು ನೀನು ಇತ್ತ ಬಂದಮೇಲೆ, ಅವರು ಅತ್ತ ಅವಳ ಕೈನಿಂದ ಅದನ್ನು ಲಪ ಟಾಯಿಸಿದರೆ? ನೀನು ಕೊಟ್ಟು ಏನು ಪ್ರಯೋಜನವಾದ ಹಾಗೆ ಆಯಿತು."

"ಹೌದು....ಬ್ರದರ್....ಬಾ, ನಾನೊಂದು ಕೆಲಸ ಮಾಡ್ತೇನೆ ಅದಕ್ಕೆ" ಎಂದು ಕೈಲಾಸಂ ಛತ್ರದ ಬೇರೆ ಭಾಗಕ್ಕೆ ನಮ್ಮನ್ನು ಕರೆದು ಕೊಂಡು ಹೋದರು. ಅಲ್ಲಿ ಒಬ್ಬ ಮುದುಕ ದಾಸಯ್ಯ—ತನ್ನ ಮುಂದೆ ಎರಡು ಮುದಿ ಹದ್ದುಗಳನ್ನು ಇಟ್ಟುಕೊಂಡು ಕುಳಿತಿದ್ದ. ಅವನು ಕೈಲಾಸಂರವರನ್ನು ಕಂಡೊಡನೆಯೇ, ಎದ್ದು ಕೈಮುಗಿದು, ತನ್ನ ಇಪ್ಪತ್ತ ನಾಲ್ಕು ಹಲ್ಲುಗಳನ್ನೂ ತೋರಿಸುತ್ತ ನಿಂತ. ಕೈಲಾಸಂ ಅವನಿಗೆ ಹೇಳಿ ದರು, "ನೋಡು ಅಣ್ಣಾ, ಆ ನಿನ್ನ ತಂಗಿಗೆ ಕೊಂಚ ಹಣಕೊಟ್ಟು ಬಂದಿ ದ್ದೇನೆ. ಅದನ್ನು ಹುಷಾರಾಗಿ ನೋಡಿಕೋ, ಆ ಮಗೂಗೆ ಅದರಿಂದ ಬಟ್ಟೆಬರೆ ಕೊಂಡುಕೊಡು"

ನಮಗೆ ಆಶ್ಚರ್ಯ, ಇದೇನು ಕೈಲಾಸಂ, ಇವನೊಂದಿಗೆ ಪೂರ್ವ ಪರಿಚಿತರಂತೆ ಮಾತನಾಡುತ್ತಾರೆ ಅಂತ. ನಮ್ಮ ಬೆಪ್ಪು ಮುಖಗಳನ್ನು

ನೋಡಿ ಕೈಲಾಸಂ ನುಡಿದರು. "ನೋಡು ಬ್ರದರ್' ಇವನು ಯಾರೂ ಅಲ್ಲ, ಆ ಕುರುಡಿಯ ಅಣ್ಣ !"

ಕೈಲಾಸಂರವರಿಗೆ ಈ ಭಿಕ್ಷುಕ ಬಳಗದ ಪರಿಚಯ ಉಂಟೆಂದು ನಮಗೆ ಆ ಹೊತ್ತಿನವರೆಗೂ ತಿಳಿದಿರಲಿಲ್ಲ. ನಮಗೆ ಯಾರಿಗೂ ತಿಳಿಯದ ಸಂಗತಿ ಅವರಿಗೆ ಗೊತ್ತಿತ್ತು, ಯಾರಿಗೂ ಬೇಕಿಲ್ಲದ ಸಂಗತಿ ಅವರಿಗೆ ಬೇಕಿತ್ತು. ಅದೇ ನಮ್ಮ ಕೈಲಾಸಂನ ಹಿರಿಯ ಗುಣ. ಕಡುಬಡವರಲ್ಲಿ, ನಿರ್ಗತಿಕರಲ್ಲಿ ಅವರಿಗೆ ಅಪಾರ ಪ್ರೇಮ, ಕರುಣೆ........

ಇದೆಲ್ಲಾ ಏಕೆ ಬಂತೆಂದರೆ ಈ ಕುರುಡಿಯನ್ನು ನೋಡಿ ಆ ಘಟನೆ ನೆನಪಿಗೆ ಬಂತು. ದಾನಶೂರನೆಂದರೆ ನಮ್ಮ ಕೈಲಾಸಂ, ನಮ್ಮದೆಲ್ಲಾ ಏನು ?

ಇಷ್ಟು ಹೇಳಿ ಡಾಕ್ಟರ್ ಶಾಸ್ತ್ರಿಗಳು ಒಂದು ಕ್ಷಣ ಮಾತು ನಿಲ್ಲಿಸಿ ಮತ್ತೆ ಹೇಳತೊಡಗಿದರು. ಅವರ ಮಾತಿಗೆ ಯಾರೂ ತಡೆಯೊಡ್ಡಲಿಲ್ಲ.

"ಅವರದು ತೀರಾ ಮೃದು ಸ್ವಭಾವ. ಹೆಣ್ಣಿಗಿಂತ ಹೆಣ್ಣಿನ ಹೃದಯ ಅವರದು. 'ಹೆಣ್ಣಿಗ ಕೈಲಾಸಂ' ಎಂದರೂ ಒಂದು ವೇಳೆ ಒಪ್ಪುತ್ತಿತ್ತು. ಹೆಣ್ ತನದಲ್ಲಿಯೇ ನಿಜವಾದ ಪೌರುಷ ವಿರುವುದೆಂದು ಅವರ ಭಾವನೆ. ಅವರ ನಾಟಕ Brahmins curse ನಲ್ಲಿ ದ್ರೌಪದಿಯ ಅಸಹಾಯಕ ಸ್ಥಿತಿಯ ಬಗ್ಗೆ ಭೀಮ ಹೆಣ್ಣಿನಂತೆ ಅತ್ತಾಗ ಕರ್ಣನಾಡುವ ಆ ಒಂದು ಮಾತೇ ಸಾಲದೆ! "ಹೆಣ್ಣು ಎಂದೆಯಾ ಭೀಮ! ಯಾರು ಆ ಹೆಣ್ಣು? ತಾಯಿ ತಂಗಿ ಅಥವಾ ಮಡದಿ! ಇತರರ ಸಂಕಟವನ್ನು ಕಂಡು ಸಹಿಸಲಾಗದೆ ಕಣ್ಣೀರು ಕರೆಯುವುದು ಅದೇ ಗಂಡಸಿನ ನಿಜವಾದ ಗಂಡಸುತನದ ಗುರುತು!" ಇದು ಕೇವಲ ಕರ್ಣನ ಮಾತು ಮಾತ್ರವಲ್ಲ, ಕೈಲಾಸಂರವರ ಹೃದಯಾಂತರಾಳದಿಂದ ಬರುವ ವಾಣಿ. ಅವರ ಕರುಣೆಯ ವ್ಯಾಪ್ತಿ, ಮಾನವ ಕೋಟಿಯ ಎಲ್ಲೆಯನ್ನು ಮೀರಿ ಪ್ರಾಣಿ ಸಸ್ಯ ಕೋಟಿಗಳಾಚೆ ಹೋಗಿದೆ. ಒಂದು ಕ್ಷುದ್ರ ಜೀವಿಗೆ ನೋವಾದರೂ, ಅನ್ಯಾಯವಾದರೂ ಅವಾಕ್ಕಾಗಿ ಮರುಗಿ ಕಣ್ಣೀರಿಡುವ ಮನ ಅವರದು !

ಒಮ್ಮೆ ನಾವು ಕೆಲವು ಮಂದಿ, ಒಂದು ಚಲನಚಿತ್ರಕ್ಕಾಗಿ ನೈಸರ್ಗಿಕ ದೃಶ್ಯಗಳನ್ನು ತೆಗೆದುಕೊಳ್ಳಬೇಕೆಂದು ನೀಲಗಿರಿಗೆ ಹೋಗಿದ್ದೆವು. ಒಂದು ದಿನ ಅರುಣೋದಯ ಸಮಯ. ಸುತ್ತೆಲ್ಲಾ ಪ್ರಕೃತಿ ಮಾತೆ ತನ್ನ ಹಚ್ಚ ಹಸುರಿನ ಸೀರೆಯುಟ್ಟು ಉದಯ ಭಾಸ್ಕರನನ್ನು ಎದುರುಗೊಳ್ಳಲು ನಿಂತಿದ್ದಾಳೆ. ಗಿಡಗಂಟಿಗಳು ಉದಯ ಭಾನುವಿಗೆ ಚಾಮರ ಹಾಕಲೆಂಬಂತೆ ತಮ್ಮ ನಿಡಿದಾದ ಟೊಂಗೆಗಳನ್ನು ತೂಗುತ್ತಿವೆ. ಪಕ್ಷಿಸಂಕುಲವು ತನ್ನ ಕಿಲಕಿಲರವದಿಂದ ಅರುಣನಿಗೆ ಸುಪ್ರಭಾತ ಹೇಳುತ್ತಿವೆ. ಹೀಗೆ ಪ್ರಕೃತಿಯ ಎಲ್ಲೆಡೆಯಲ್ಲಿ ಚಿತ್ತಾಕರ್ಷಕವಾಗಿರುವಾಗ ಕೈಲಾಸಂ ನಮ್ಮ ಗುಂಪಿನಿಂದ ತಪ್ಪಿಸಿಕೊಂಡು ಹೋಗಿ ಯಾವುದೋ ಒಂದು ಕಲ್ಲು ಬಂಡೆಯ ಮೇಲೆ ಮುದುಡಿಕೊಂಡು ಕುಳಿತಿದ್ದರು. ಅವರ ಎದುರಿಗೆ ಒಂದು ರೋಜಾ ಗಿಡ. ಅದರಲ್ಲಿ ಒಂದೇ ಒಂದು ಹೂ. ನೀಲಗಿರಿಯ ರೋಜಾ ಹೂವೆಂದರೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಅದು ಎಷ್ಟು ಸೊಗಸಾಗಿರುವುದೆಂದು ನೋಡಿದವರಿಗೆಲ್ಲಾ ಗೊತ್ತು. ಕೈಲಾಸಂರವರ ಮುಂದಿದ್ದ 'ಹೂ' ಪರಿಪೂರ್ಣವಾಗಿ ವಿಕಸಿಸಿತ್ತು. ಮುಟ್ಟಿದರೆ ಎಲ್ಲಿ ದಳಗಳಿಗೆ ನೋವಾಗುವುದೋ ಎನ್ನುವ ಮಟ್ಟಿಗೆ 'ಹೂ' ಅರಳಿತ್ತು. ಕೈಲಾಸಂ ಆ ಹೂವಿನಲ್ಲಿ ಅಡಗಿದ ಆ ಸುಪ್ತ ಸೌಂದರ್ಯವನ್ನು ಎವೆ ಇಕ್ಕದೆ ನೋಡುತ್ತಾ ಕುಳಿತಿದ್ದರು. ಈ ಸೌಂದರ್ಯಾನುಭೂತಿಯಲ್ಲಿ ಅವರು ತಮ್ಮ ಇರುವಿಕೆಯನ್ನೇ ಮರೆತಿದ್ದರು. ಅವರ ಮನಸ್ಸು ಹೂವಿನ ಸೌಂದರ್ಯದಲ್ಲಿ ನೆಟ್ಟು ಹೋಗಿತ್ತು. ಹೀಗೆಯೇ ಆತ ಎಷ್ಟು ಹೊತ್ತಿನಿಂದ ಕುಳಿತಿದ್ದರೊ ಏನೊ! ಹುಡುಗಿಯೊಬ್ಬಳು ಅವರ ಭಾವ ಸಮಾಧಿಗೆ ಭಂಗತರದಿದ್ದರೆ ಮತ್ತೆ ಎಷ್ಟು ಹೊತ್ತು ಹಾಗೆ ಕುಳಿತಿರುತ್ತಿದ್ದರೊ ಏನೊ!

ನಮ್ಮೊಂದಿಗೆ ಇದ್ದ ಏಳೆಂಟು ವರ್ಷದ ಸಣ್ಣ ಹುಡುಗಿಯೊಬ್ಬಳು ಯಾತಕ್ಕೋ ಆ 'ಹೂ' ಗಿಡವಿದ್ದ ಕಡೆಗೆ ಹಾಯುತ್ತಿದ್ದಾಗ ಈ ಅರಳಿದ ರೋಜಾ ಹೂ ಅವಳನ್ನು ಆಕರ್ಷಿಸಿತು. ಅದನ್ನು ನೋಡಿದವಳೇ ಹೋಗಿ ಆ ಹೂವಿನ ತೊಟ್ಟಿಗೇ ಕೈಹಾಕಿದಳು. ಬಾಲೆಯು ಚಪಲದಿಂದ

ಕೈಲಾಸಂರವರಿಗೆ, ಅವರು ಎದುರಿಗೆ ಅಲ್ಲೇ ಕುಳಿತಿದ್ದರೂ ಇದಾವುದೂ ತಿಳಿಯಲಿಲ್ಲ. ಹುಡುಗಿ ಹೂವನ್ನು ಇನ್ನೇನು ಬೇರ್ಪಡಿಸಿದಳೋ ಇಲ್ಲವೊ ಕೈಲಾಸಂ "ಅಯ್ಯೋsss" ಎಂದು ಚೀರಿಕೊಂಡು ಹಾಗೆಯೇ ನೆಲದ ಮೇಲೆ ಹೊರಳಿ ಬಿದ್ದರು. ಹೂವಿನೊಡನೆ ಒಂದಾಗಿ ಬೆರೆತಿದ್ದ ಅವರ ಪ್ರಾಣ ಹೂವಿನ ಪ್ರಾಣದೊಂದಿಗೆ ಹೋದಂತೆ ಅವರಿಗೆ ಭಾಸ ವಾಗಿತ್ತು. ಆದುದರಿಂದಲೇ ಅವರು ಹಾಗೆ ಆರ್ತ ದನಿಯಲ್ಲಿ ಕೂಗಿ ಕೊಂಡುದು.

ಅವರ ದನಿಯನ್ನು ಕೇಳಿ ನಾವುಗಳೆಲ್ಲಾ ಅದೇನೆಂದು ನೋಡಲು ಹೋದೆವು. ಏನಾಯಿತೆಂದು ಕೈಲಾಸಂರವರನ್ನು ಪ್ರಶ್ನಿಸಿದೆವು. ಅವರ ಬಾಯಿಯಿಂದ ಉತ್ತರ ಹೊರಡುತ್ತಿರಲಿಲ್ಲ. ಕಣ್ಣಿನಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ಬರಿ ಕೈ ಸಂಜ್ಞೆಯಿಂದಲೇ ಹುಡುಗಿಯ, ರೋಜಾಗಿಡದ ಕಡೆ ತೋರಿದರು. ಆಗಿನ ಅವರ ಮನಸ್ಸಿನ ಸ್ಥಿತಿಯೇ ಅವರ ಮಾತನ್ನು ಮರೆಸಿದ್ದಿತು. ಅವರ ಸನ್ನೆಯನ್ನು ಅರಿತುಕೊಂಡು ನೋಡುತ್ತೇವೆ! ಏನೂ ಪ್ರಮಾದ ನಡೆದಿಲ್ಲ. ಹುಡುಗಿ ಗಿಡದಿಂದ ಹೂಕಿತ್ತಿದ್ದಾಳೆ. ಅಷ್ಟೇ ಆಗಿರುವ ಪ್ರಮಾದ; ಆದರೆ ಈ ಒಂದು ಘಟನೆ ಚೇತರಿಸಿಕೊಳ್ಳಲಾಗದ ಪೆಟ್ಟು, ಅವರಿಗೆ....... ಎಷ್ಟೋ ನಿಮಿಷ ಗಳ ಕಾಲ ಚೇತರಿಸಿಕೊಂಡ ಮೇಲೆ ತೊದಲುತ್ತ ನುಡಿದರು. "ಅಯ್ಯೋ ಬ್ರದರ್, ಆ ರೋಜಾ ಫ್ಲವರನ್ನ ಅನ್ಯಾಯವಾಗಿ ಕೊಂದರಲ್ಲೋ. ಮನುಷ್ಯ ಎಷ್ಟು Brute? ಇನ್ನೊಂದು ನಾಲ್ಕು ದಿನದಲ್ಲಿ ಅದೇ ಹೂ ಆಯುಸ್ಸು ಮುಗಿದು ಮಡಿಯುತ್ತಿತ್ತು. ಆದರೆ ಅಷ್ಟರೊಳಗೇ ಮನುಷ್ಯ ಅದರ ಬೆಡಗನ್ನೂ ಸಂತೋಷವನ್ನೂ ನೋಡಲಾರದೆ— ಕೊಲೆ ಮಾಡಿದ ನಲ್ಲಾ 'ಎಷ್ಟು Selfish ಅವನು!"

ಡಾಕ್ಟರ್ ಶಾಸ್ತ್ರಿಗಳು ಕೈಲಾಸಂ ಕಥೆ ಹೇಳಿ ಮೌನವಾದರು. ರೈಲು ಗಾಡಿ ಇಷ್ಟು ಹೊತ್ತೂ ಚಲಿಸದೇ ಒಂದೆಡೆಯಲ್ಲಿಯೇ ನಿಂತಂತೆ ತೋರುತ್ತಿತ್ತು. ಈಗ ಸಣ್ಣ ಪುಟ್ಟ ನಿಲ್ದಾಣಗಳನ್ನು ಹಿಂದೆ ಉಳಿಸಿ ಅತಿ ರಭಸದಲ್ಲಿ ಓಡುತ್ತಿತ್ತು. ಕಥೆ ಕೇಳುವ ಸಂಭ್ರಮದಲ್ಲಿ ಕಳೆದುಹೋದ

ನಿಲ್ದಾಣಗಳ ನೆನಪು ನನಗೆ ಆಗಲಿಲ್ಲ. ರೈಲು 'ಕಂಟೋನ್‌ಮೆಂಟ್, ವೈಟ್ ಫೀಲ್ಡು, ಮಾಲೂರುಗಳನ್ನು ಹಿಂದುಳಿಸಿ ಈಗ ಬೋರಿಂಗ್ ಪೇಟೆಯ ಕಡೆಗೆ ಒಂದೇ ಸಮನೆ ಹಳಿಗಳ ಮೇಲೆ ಹರಿದಿತ್ತು.

ರೈಲುಗಾಡಿ ಬೋರಿಂಗ್ ಪೇಟೆಯ ನಿಲ್ದಾಣದಲ್ಲಿ ನಿಂತಾಗ ನಮ್ಮ ಗಾಡಿಗೆ ಅನೇಕ ಹೊಸ ಪ್ರಯಾಣಿಕರು ತುಂಬಿಬಿಟ್ಟರು. ಜಾಗ ವಿಲ್ಲವೆಂದು ನಾವು ಎಷ್ಟು ಹೇಳಿದರೂ ಅವರು ಕೇಳಲಿಲ್ಲ. ಅದರಲ್ಲಿಯೂ ಒಬ್ಬಾತ "ರಾಮಾನುಜರ" ಶಿಷ್ಯ ವರ್ಗಕ್ಕೆ ಸೇರಿದವನು. ಛತ್ರಿ ರೈಲು ಚೊಂಬು ಎಕ್ಕಡ ಕೃಷ್ಣಾಂಜನದ ಗಂಟುಗಳನ್ನು ಹೊತ್ತುಕೊಂಡು ನಮ್ಮ ಮೇಲೆ ಕುಸಿದು ಬಿದ್ದ, ಹೊರಗಿನಿಂದ ಬಂದ ಒತ್ತಡವನ್ನು ತಡೆಯಲಾರದೆ. ಅವರನ್ನು ನೋಡಿದರೆ ಅವರು ಬಹುಶಃ ತಿರುಪತಿ ಯಾತ್ರೆಗೆ ಹೊರಟವರಿರಬೇಕು! ಎಂದು ಯಾರಾದರೂ ಹೇಳಬಹುದಿತ್ತು.

ರೈಲು ಬೋರಿಂಗ್ ಪೇಟೆಯಿಂದ ಕದಲಿತು. ಗಾಡಿಯಲ್ಲಿ ನುಗ್ಗಿ ದವರ ಗದ್ದಲವೂ ಅವರೊಂದಿಗೆ ಅಡಗಿತು. ಆ ರಾಮಾನುಜಾಚಾರ್ಯರ ಶಿಷ್ಯ ಸ್ಥಳ ಒಂದನ್ನು ಆಕ್ರಮಿಸುವ ಗಡಿಬಿಡಿಯಲ್ಲಿ ಒಬ್ಬರನ್ನು ಛತ್ರಿಯಿಂದ ತಿವಿದಿದ್ದ, ಮತ್ತೊಬ್ಬರ ತಲೆಯಮೇಲೆ ಎಕ್ಕಡ ಇಟ್ಟಿದ್ದ, ಮಗದೊಬ್ಬರ ತೊಡೆಯ ಮೇಲೆ ಕೃಷ್ಣಾಜಿನದಗಂಟು, ಇನ್ನೊಬ್ಬರ ಕಾಲಮೇಲೆ ರೈಲು ಚೊಂಬು—ಹೀಗೆ ಅವನ ಸಂಸಾರ .... ಚಲ್ಲಿದ್ದ..... ಅವನ ಶಿಕ್ಷೆಗೆ ಒಳ ಗಾದವರು ಎಲ್ಲರೂ ಕೆರಳಿದ ಹಾವಿನಂತೆ ಬುಸುಗುಟ್ಟುತ್ತಾ ಅವನನ್ನೇ ನೋಡುತ್ತಿದ್ದರು. ಆದರೆ ಆತ ಇದು ಯಾವುದನ್ನೂ ಗಮನಕ್ಕೆ ತಾರದೇ ತನ್ನ ಕೆಲಸದಲ್ಲಿ ಮಗ್ನನಾಗಿದ್ದ. ಅವನ ಶಿಕ್ಷೆಗೆ ಒಳಗಾದವರ ಪೈಕಿ ಡಾಕ್ಟರ್ ಶಾಸ್ತ್ರಿಗಳು ಒಬ್ಬರು. ಅವರಿಗೆ ಕೋಪ ನೆತ್ತಿಗೇರಿತ್ತು, ಆದರೂ ಸಮಾಧಾನ ತಾಳಿಕೊಂಡು ಕೈಲಾಸಂ ಕಥನ ಒಂದನ್ನು ಹೇಳಲು ತೊಡಗಿದರು.

"ಒಂದು ಸಲ– ನಾನು ಕೈಲಾಸಂರವರ 'ಮೂಲೆ'ಯಲ್ಲಿ ಅವ ರೊಂದಿಗೆ ಮಾತನಾಡುತ್ತಾ ರಾತ್ರಿಯೆಲ್ಲಾ ಕಳೆದಿದ್ದೆ. ನಮ್ಮ ಹರಟೆ ಬೆಳಗಿನವರೆಗೆ ನಡೆದಿತ್ತು. ಬೆಳಗಾದಾಗ ನಾವೆಲ್ಲಾ ಕಾಫಿ ಸೇವನೆಗೆಂದು

ಹೋಟೆಲು ಅರಸುತ್ತಾ ಹೊರಟೆವು. ದಾರಿಯಲ್ಲಿ ಆಗತಾನೆ ಕಟ್ಟಿ ಪೂರೈಸಿದ ಒಂದು ಹೊಸಮನೆ. ಕೊಂಚ ದಿನಗಳ ಹಿಂದೆತಾನೆ ಗೃಹಪ್ರವೇಶವಾಗಿರಬೇಕು. ಅದು ನೋಡುವುದಕ್ಕೆ ತಂಬಾ ಚನ್ನಾಗಿತ್ತು. ಆದರೂ ಮನೆಯ ಮುಂಭಾಗದ ಬಾಗಿಲಿನ ಮೇಳೆ ಒಂದು ಚಿತ್ರ ಬರೆಸಿದ್ದರು– ಬಣ್ಣ ಬಣ್ಣಗಳಲ್ಲಿ. ಒಂದು ಕಡೆ ಆಂಜನೇಯ ತನ್ನ ಬಾಲವನ್ನು ಹೆಗಲಮೇಲೆ ಹಾಕಿಕೊಂಡು ನಮ್ರನಾಗಿ ಕೈಮುಗಿಯುತ್ತಾ ನಿಂತಿದ್ದ. ಮತ್ತೊಂದು ಕಡೆ ಗರುಡ ತನ್ನ ಉದ್ದನೆಯ ಮೂಗನ್ನು ಮುಂದೆ ಚಾಚಿಕೊಂಡು ನಮ್ರನಾಗಿ ನಿಂತಿದ್ದ. ಇವರಿಬ್ಬರ ಮಧ್ಯೆ ಬಿಳಿ ಕೆಂಪು ಬಣ್ಣಗಳಲ್ಲಿ ನಾಲ್ಕಾರು ಫರ್ಲಾಂಗ್‌ಗಳ ವರೆಗೆ ಎದ್ದು ಕಾಣುವಂತೆ ಬರೆದಿದ್ದ ಮೂರು ಪಟ್ಟೆ ನಾಮ ಅವನ್ನು ಕಂಡವರೇ ಕೈಲಾಸಂ ನುಡಿದರು.

"ಆ ಚಿತ್ರನ್ನ ನೋಡಿದೆಯಾ ಬ್ರದರ್"

"ಹೂಂ ನೋಡಿದೆ" ನಾನೆಂದೆ.

"ಅದು ಯಾಕೆ ಬರೆದಿದ್ದಾರೆ ಗೊತ್ತಾಯಿತಾ?"

"ಮನೆ ಮಾಲೀಕರು ಅಚಾರವಂತ ಶ್ರಿ ವೈಷ್ಣವರಿರಬೇಕೆಂದು ಕಾಣುತ್ತೆ. ಅದಕ್ಕೆ ಮನೆ ಮುಂದೆ ದೇವರ ಚಿತ್ರವಿರಲಿ ಎಂದು– ಅದನ್ನು ಬರೆದಿದ್ದಾರೆ?"

"ಅಲ್ಲೋ 'ಬ್ರದರ್' ಹಾಗಲ್ಲ. ಅದನ್ನು ಯಾಕೆ ಬರೆದಿದ್ದಾರೆ ಗೊತ್ತಾ. ಅದು ನಿನ್ನಂಥ ನನ್ನಂಥಹವರಿಗೆ Warning ಗೋ 'Don't poke your nose nor wag your tail in this house' ಅಂತ ಕಣೊ ಅದರ Implication ನೂ" ನಾವೆಲ್ಲಾ ಘೊಳ್ ಎಂದು ನಕ್ಕು ಆ ರಾಮಾನುಜ ಶಿಷ್ಯನ ಕಡೆ ನೋಡಿದೆವು.

ಈ ಕಥೆಯನ್ನು ಮೊದಲಿನಿಂದಲೂ ಕೇಳುತ್ತಾ ಕುಳಿತಿದ್ದ ಆತ ನಮ್ಮನ್ನು ದುರುಗುಟ್ಟುತ್ತಾ ತನ್ನ ಗರುಡ ಮೂಗನ್ನು ಮಸೆಯುತ್ತಿದ್ದ. ಅವನ ಹಣೆಯಲ್ಲಿದ್ದ ಆ ನಾಮ ಕೂಡ ನಮ್ಮನ್ನು ಹೆದರಿಸುತ್ತಿತ್ತು. ಅವನ ಮೂಗಿನ ಭಯವನ್ನು ಮರೆಯಲು ನಾವು ಅದೂ ಇದೂ– ಕಾಡು ಹರಟೆಯಲ್ಲಿ ಮಗ್ನರಾದೆವು. ಮುಂದಿನ ನಿಲ್ದಾಣದಲ್ಲಿ ಅವನ ಸೀಟಿನ ಕಡೆ

ನಾವು ನೋಡಿದಾಗ ಅದು ಖಾಲಿಯಾಗಿತ್ತು. ಆತ ತನ್ನ ಮೂಗಿನ ಸಮೇತ ಬೇರೊಂದು ಗಾಡಿಗೆ ಇಳಿದು ಹೋಗಿದ್ದ!

ಇಂತಹದೆಷ್ಟೊ ತಮಾಷೆ ಘಟನೆಗಳು– ಗಾಡಿಯಲ್ಲಿ ನಡೆದುದು; ಇಂತಹದೆಷ್ಟೋ ಸ್ವಾರಸ್ಯ ಸಂಗತಿಗಳು ಮಾತಿನಲ್ಲಿ ಬಂದು ಹೋದುವು. ಆ ಪಂಡಿತ ಗೆಳೆಯರಲ್ಲಿ ಆಗುತ್ತಿದ್ದ ಆ ಸರಸ ಸಂಭಾಷಣೆಯನ್ನು ಆಲಿಸುತ್ತಾ ಕುಳಿತಿರುವುದು ಕೆಲವರಿಗೆ ಹಬ್ಬವಾಗಿತ್ತು.

ರೈಲು ಜಾಲಾರ ಪೇಟೆಗೆ ಬರುವವೇಳೆಗೆ ಊಟದ ಹೊತ್ತಾಗಿತ್ತು. ಅಲ್ಲೇ ಸ್ಟೇಷನ್ನಿನಲ್ಲಿ ಮಾರುತ್ತಿದ್ದ ತಿಂಡಿ ತಿನಸುಗಳಿಂದ ಹೊಟ್ಟೆ ತುಂಬಿಸಿದೆವು. ಅಮ್ಮ ನಾವು ಹೊರಡುವಾಗ ಫಲಹಾರಕ್ಕೆಂದು ಕೊಟ್ಟಿದ್ದ ರವೆ ಉಂಡೆ ವಿನಿಯೋಗ ಕೂಡ ಆಯಿತು. ಅಮ್ಮನ ಕೈಯ ರವೆ ಉಂಡೆಯ ರುಚಿಯನ್ನು ಆ ನನ್ನ ಗುರುಗಳಿಗೂ ತೋರಿಸಿದೆ. ಅದನ್ನು ತಿನ್ನುತ್ತ ಭೇಷ್! ಚೆನ್ನಾಗಿದೆ! ಎಂದು ನನ್ನಿಂದ ಇನ್ನೊಂದಿಷ್ಟು ಕಸಿದರು.

ರೈಲು ಜಾಲಾರ ಪೇಟೆಯನ್ನು ಬಿಟ್ಟು ಹೊರಟಿತು. ಅದರೊಂದಿಗೆ ಹೊಟ್ಟೆಯ ಯೋಚನೆ ಕೂಡ ಕಳೆಯಿತು. ಹೊಟ್ಟೆಯ ಯೋಚನೆ ಕಳೆದ ಮೇಲೆ ಇನ್ನೇನು! ಮತ್ತೆ ಆ ಗೆಳೆಯರಲ್ಲಿ ಮಾತಿಗೆ ಬಿಸಿ ಏರಿತು. ಈ ಸಲ ಹತ್ತಾರು ಗಂಭೀರ ವಿಷಯಗಳು ಮಾತಿನಲ್ಲಿ ಬಂದು ಹೋದವು.

ಈವರೆವಿಗೂ ಆ ಗುಂಪಿನಲ್ಲೇ ಇದ್ದೂ ಇಲ್ಲದಂತೇ ಇದ್ದೆ. ಅಲ್ಲಿಯ ಮಾತುಕಥೆಯನ್ನು ನನ್ನಂತೆಯೇ ಮೌನವಾಗಿ ಕೇಳುತ್ತಾ ಕುಳಿತಿದ್ದ ರಾಮಾಚಾರ್ ಎಂಬುವರು ಒಳ್ಳೆಯ ಗಾಯಕರೆಂದು ಯಾರೋ ಹೇಳಿದರು. ಈ ಮಾತನ್ನು ಕೇಳಿ ಸಂಗೀತ ಪ್ರಿಯರಾದ ಆಚಾರ್ಯರು ಹೆಚ್ಚು ಉತ್ಸುಕರಾದರು. "ಒಂದು ನಾಲ್ಕು ಹಾಡು, ಗೀತೆಗಳನ್ನು ಅಂದು ತೋರಿಸಿ" ಎಂದು ರಾಮಾಚಾರ್ರಿಗೆ ಹೇಳಿದರು. ಅವರ ಮಾತನ್ನು ಇನ್ನಿತರ ಗೆಳೆಯರು ಅನುಮೋದಿಸಿದರು. ರಾಮಾಚಾರ್ ಅಂತಹ ಸಾಹಿತ್ಯದ ಅತಿರಥಮಹಾರಥರು ತನ್ನನ್ನು ಹಾಡು ಹೇಳಲು ಕೇಳಿದುದಕ್ಕೆ ಮೊದಲು ನಾಚಿದರೂ ತನಗೆ ಬಂದ ಒಂದು ನಾಲ್ಕು ಗೀತೆಗಳನ್ನು ಹೇಳಲು ಒಪ್ಪಿದ.

ಅವನು ಹೇಳಿದ ಮೊದಲನೆಯ ಗೀತೆ ಎಂದರೆ "ಕುಂಬಾರ ಗುಂಡಯ್ಯನ ಕುಣಿತ" ಎಂಬ ಹರಿಹರಕವಿಯಿಂದ ರಚಿತವಾಗಿರುವ ಹಳೆಗನ್ನಡ ಪದ್ಯ. ಅದನ್ನು ಆಚಾರ್ ತನ್ನದೇ ಆದ ಹೊಸದಾಟಿಯಲ್ಲಿ ಹಾಡಿದ. ಅವನ ಕಂಠ ಮೊದಲೇ ಮೋಹಕವಾಗಿತ್ತು. ಅವುಗಳ ಜೊತೆಗೆ ತಾಳ ಲಯಗಳನ್ನು ಹಿಡಿದು ಹಾಡಿದ್ದುದು ಆ ಗೀತೆಗೆ ಅಪೂರ್ವ ಕಳೆ ಸೊಬಗು ತಂದಿತ್ತು. ಇದನ್ನು ಕೇಳಿ ಆಚಾರ್ಯರೂ ಅಯ್ಯನವರೂ, ಭಲೆ ಭೇಷ್ ಎಂದು ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು. ರಾಮಾಚಾರ್ ಹಾಡು ನಿಲ್ಲಿಸಿದ ಮೇಲೆಯೂ, ರೈಲು ಡಬ್ಬಿಯ ತುಂಬಾ ಆ ಹಾಡಿನ ರಾಗ ಅಲೆ ಅಲೆಯಾಗಿ ಕೇಳಿ ಬರುತ್ತಿತ್ತು. "ಬಹಳ ಸೊಗಸು" ಎಂದು ಮತ್ತೊಮ್ಮೆ ಆಚಾರ್ಯರು ತಮ್ಮ ಮೆಚ್ಚಿಗೆಯನ್ನು ಸೂಚಿಸುತ್ತಾ ಇನ್ನೊಂದು ಗೀತೆಯನ್ನು ಹಾಡಲು ಕೇಳಿಕೊಂಡರು. ಇತರ ಗೆಳೆಯರೂ ಕೂಡ ಹೇಳಲು ಆಗ್ರಹ ಪಡಿಸಿದರು. ರಾಮಾಚಾರ್ ಶ್ರೀ ಪುಟ್ಟಪ್ಪನವರ "ದೋಣಿ ಸಾಗಲಿ"ಎನ್ನುವ ಗೀತೆಯನ್ನು ಹಾಡಿದರು. ಆ ಹಾಡು ಕೇಳುತ್ತಾ ಕೇಳುತ್ತಾ ಭಾವಜೀವಿಗಳಾದ ಆಚಾರ್ಯರು ರೈಲು ಡಬ್ಬಿಯ ಪ್ರಪಂಚ ಬಿಟ್ಟು ಹಾಡಿನ ದೋಣಿಯಲ್ಲಿ ಸಾಗಿಹೋಗಿದ್ದರು. ಹಾಡು ಮುಗಿದಾಗಲೇ ಅವರಿಗೆ ತಾವೆಲ್ಲಿರುವೆವೆಂದು ಅರಿವಾದುದು.

ಈ ಕವಣೆಗಳನ್ನು ಹೇಳಿದ ಮೇಲೆ ಮೂರಕ್ಕೆ ಮುಕ್ತಾಯ ಎನ್ನುವಂತೆ ರಾಮಾಚಾರ್ಯರು ಯಾರಿಂದಲೂ ಹೇಳಿಸಿಕೊಳ್ಳದಂತೆ ಪುರಂದರ ದಾಸರ ಕೀರ್ತನೆಯೊಂದನ್ನು ಹಾಡಿದರು

ಅವನು ಹಾಡಿ ಮುಗಿಸಿದ ಹತ್ತಾರು ನಿಮಿಷ– ಆಚಾರ್ಯರು ಚಕಾರವೆತ್ತಲಿಲ್ಲ. ಅವರು ಇನ್ನೂ ಹಾಡಿನ ಗುಂಗಿನಲ್ಲೇ ಇದ್ದರು. ಪುರಂದರ ದಾಸರ ಕೀರ್ತನೆಗಳು ಆಚಾರ್ಯರ ಪ್ರೀತಿಯ ಹಾಡುಗಳು. ಅವರು ಪುರಂದರ ದಾಸರನ್ನು ಬಹಳವಾಗಿ ಮೆಚ್ಚಿದರು. ತಮ್ಮ ಮೆಚ್ಚಿಗೆಯ ದಾಸರ ಸ್ತೋತ್ರವನ್ನು ಕೇಳಿ ಅವರಿಗೆ ಉಳಿದ ಎಲ್ಲರಿಗಿಂತಲೂ ಹೆಚ್ಚಿಗೆ ಆನಂದವಾಯಿತು. ಆಚಾರ್ಯರು ಒಮ್ಮೆಲೇ ನುಡಿದರು. "ಪುರಂದರ ದಾಸರು

ಎಂತಹ ಕೀರ್ತನೆಗಳನ್ನು ರಚಿಸಿದ್ದಾರೆ. ಇವು ನಮ್ಮ ಸಾಹಿತ್ಯದಲ್ಲಿನ ಅಪೂರ್ವ ರತ್ನಗಳು."

ಅಯ್ಯನವರಿಗೆ ಆಚಾರ್ಯರು ನುಡಿದ ಮಾತು ಅದೇಕೋ ಸರಿಬರಲಿಲ್ಲ. ಅವರು ಸ್ವಭಾವತಃ ವಿಮರ್ಶಕರು. ಆಚಾರ್ಯರ ನುಡಿಯನ್ನು ಕೇಳಿ ಅವರ ವಿಮರ್ಶಕ ಮನೋಭಾವ ತಲೆ ಹಾಕಿತು.

"ಅದು ನಿಜ. ಅವು ಅಪೂರ್ವ ರತ್ನಗಳೇ ಸರಿ. ಆದರೂ ಅವರು ರಚಿಸಿರುವ ಎಲ್ಲಾ ಕೀರ್ತನೆಗಳು– ಸಾಹಿತ್ಯ ದೃಷ್ಟಿಯಲ್ಲಿ ನೋಡಿದರೆ– ತೂಗಿದರೆ– ಎಲ್ಲೋ ಈಗ ಹೇಳಿದಂಥ ಹತ್ತಾರು ಕೀರ್ತನೆಗಳೇ– ನಿಜವಾಗಿಯೂ ಅಪೂರ್ವ ರತ್ನಗಳೆನಿಸುವುದು."

ಆಚಾರ್ಯರಿಗೆ ಅಯ್ಯನವರು ಹೇಳಿದ ರೀತಿ ರುಚಿಸಲಿಲ್ಲ. ತಮ್ಮ ಪ್ರೀತಿಯ ದಾಸರ ಕೃತಿಗಳ ಬಗ್ಗೆ ಅವರಿತ್ತ ತೀರ್ಪು ಅವರೊಪ್ಪದಾದರು. ತಮ್ಮ ಪ್ರೀತಿಯ ದಾಸರ ಕೃತಿಗಳ ಯೋಗ್ಯತೆಯನ್ನು ಕಾಯ್ದಿಡಲು ಹೇಳಿದರು.

"ಯಾಕೆ ಅವರ ಇತರ ಕೃತಿಗಳು ಯಾವುದರಲ್ಲಿ ಕಡಿಮೆ ಎನಿಸಿದೆ, ಸಾಹಿತ್ಯದಲ್ಲಿ ಶ್ರೇಷ್ಠ ಕೃತಿಗಳಾಗದಿರಲು?" ಉದ್ವೇಗ ಪೂರಿತವಾಗಿತ್ತು ಅವರ ದನಿ.

"ಅವರ ಇತರ ಕೃತಿಗಳೆಲ್ಲ ಶ್ರೇಷ್ಠ ಕೃತಿಗಳ ಗುಂಪಿಗೆ ಸೇರಲು ಸ್ವಲ್ಪ ಕಡಿಮೆ ಅಷ್ಟೆ" ಸಮಾಧಾನದಿಂದಲೇ ಉತ್ತರ ಕೊಟ್ಟರು.

"ಹಾಗೆಂದರೆ"

"ಸಾಹಿತ್ಯದಲ್ಲಿ ಶ್ರೇಷ್ಠ ಕೃತಿ ಎನಿಸಿ ಬರೆಯುವ ಕೃತಿಗಳಲ್ಲಿ ಇರಬೇಕಾದ ಅನೇಕ ಸತ್ವ ಗುಣಗಳು ಅವುಗಳಲ್ಲಿ ಇಲ್ಲ ಅಷ್ಟೇ"

ಆಚಾರ್ಯರು ಬಡ ಪೆಟ್ಟಿಗೇ ಬಿಡುವಂತಿರಲಿಲ್ಲ. ಅಯ್ಯನವರು ತಮ್ಮ ದೃಷ್ಟಿಯನ್ನು ಸಮರ್ಥಿಸಿಕೊಳ್ಳಲು ಏನು ಹೇಳಬೇಕೋ ಅಷ್ಟನ್ನೂ ಒಂದೇ ಒಗಟೆಸಂತೆ ಹೇಳಿದ್ದರು. ಅಯ್ಯನವರಿಂದ ನೇರ ಸೋಲನ್ನು ಒಪ್ಪಿಸುವುದು ತಮ್ಮಿಂದ ಆಗದ ಕೆಲಸವೆಂದು ಮನಗಂಡು ಆಚಾರ್ಯರು ಮತ್ತೊಂದು ವರಸೆ ತೆಗೆದರು.

"ಹಾಗಾದರೆ ನಿಮ್ಮ ಅಭಿಪ್ರಾಯದ ಅಳತೆ ಗೋಲಿನಿಂದ ಅಳೆಯ ಹೋದರೆ ಯಾವ ಸಾಹಿತ್ಯದಲ್ಲಿ ತಾನೇ ಸಿಗುತ್ತದೆ. ಅದರಲ್ಲೂ ದಾಸ ಸಾಹಿತ್ಯದಲ್ಲಿ. ಒಬ್ಬ ವ್ಯಕ್ತಿಯು ರಚಿಸಿದ ಎಲ್ಲಾ ಕೃತಿಗಳೂ ಶ್ರೇಷ್ಠ ಕೃತಿಗಳಾಗಿಯೇ ಮೆರೆದಿರುವುದು?"

ಈ ಪ್ರಶ್ನೆಗೆ ಅಯ್ಯನವರು ಸೋಲನ್ನು ಒಪ್ಪುವರೆಂದು ಆಚಾರ್ಯರು ಊಹಿಸಿದ್ದರು. ಆದರೆ ಅದು ಕೇವಲ ಅವರ ಊಹೆ ಮಾತ್ರ!

"ಯಾಕಿಲ್ಲ ತಮಿಳು ದಾಸ ಸಾಹಿತ್ಯ ಒಂದೇ ಸಾಲದೇ ಉದಾಹರಣೆಗೆ– ಆ ಸಾಹಿತ್ಯದಲ್ಲಿನ ಆಳ್ವಾರುಗಳು ರಚಿಸಿರುವ ಪ್ರಬಂಧಗಳನ್ನು ನೋಡಿ! ಆ ಪ್ರಬಂಧಗಳಲ್ಲಿ ಯಾವುದನ್ನು ಅನ್ನುತ್ತೀರಿ, ಇದು ಇನ್ನೊಂದು ಪ್ರಬಂಧಕ್ಕಿಂತಲೂ ಕಡಿಮೆಯ ಯೋಗ್ಯತೆಯದೆಂದು– ಆ ಎಲ್ಲಾ ಪ್ರಬಂಧಗಳೂ ಒಂದೇ ಯೋಗ್ಯತೆಯವೇ.... ಇನ್ನು ಸಾಹಿತ್ಯ ದೃಷ್ಟಿಯಲ್ಲಿ ಕೂಡ ಆ ಎಲ್ಲಾ ಪ್ರಬಂಧಗಳೂ ಅಮರ ಕೃತಿಗಳೇ. ಆದರೆ ನಮ್ಮ ದಾಸ ಸಾಹಿತ್ಯದಲ್ಲಿ ...."

"ಇದು ನಾನೊಪ್ಪಲಾರೆ. ನಿಮ್ಮ ದೃಷ್ಟಿಯಲ್ಲಿ ನಿಮ್ಮ ಆ ತಮಿಳು ದಾಸ ಸಾಹಿತ್ಯ ಶ್ರೇಷ್ಠ ಕೃತಿಗಳಿರಬಹುದು. ಆದರೂ ನನ್ನ ದೃಷ್ಟಿಯಲ್ಲಿ ಅವುಗಳು ಹಾಗಿಲ್ಲದಿರಬಹುದು. ಇದೇ ರೀತಿ ನಮ್ಮ ದಾಸ ಸಾಹಿತ್ಯದಲ್ಲಿ ಕೂಡ. ನನಗೆ ಶ್ರೇಷ್ಠ ಕೃತಿಗಳೆನಿಸಿದುದು ನಿಮಗೆ ಹಾಗಿಲ್ಲದಿರಬಹುದು. ಇದು ಕೇವಲ ವೈಯುಕ್ತ ದೃಷ್ಟಿಗಳು ತಾನೆ!"

ಇವನ್ನೆಲ್ಲಾ ಕೇಳುತ್ತಾ ಕುಳಿತಿದ್ದ ಆ ನನ್ನ ಹಿರಿಯ ಗುರುಗಳು ನುಡಿದರು,

—ಅಯ್ಯಾ,—ಆಚಾರ್ಯರ ಕಡೆ ನೋಡಿ, "ಯಾಕ್ರೀ ನಿಮ್ಮ ನಿಮ್ಮಲ್ಲಿ ಈ ವಿಷಯವಾಗಿ ಜಗಳವಾಡಬೇಕು—ಅದೂ ನಮ್ಮೆಲ್ಲರೆದುರು! ನಾಳೆ ನೀವಿಬ್ಬರೂ ನಿಮ್ಮ ನಿಮ್ಮ ದೃಷ್ಟಿ—ವಾದಗಳನ್ನು ಸಮರ್ಥನೆಗೊಳಿಸುವ ದೀರ್ಘ ಲೇಖನಗಳನ್ನು ಬರೆದು ಪ್ರಬುದ್ಧ

ಕರ್ಣಾಟಕಕ್ಕೂ; ಪರಿಷತ್ ಪತ್ರಿಕೆಗೂ ಕಳುಹಿಸಿರಿ. ಯಾವುದೊಂದನ್ನೂ ಓದುಗರು ನಿರ್ಧರಿಸಲಿ."

ನನ್ನ ಹಿರಿಯ ಗುರುಗಳೆಂದುದು ಅವರಿಬ್ಬರಿಗೂ ರುಚಿಸಿತು. "ಹೌದು ಒಳ್ಳೆಯ ದಾರಿ ಸೂಚಿಸಿದಿರಿ ನೀವು" ಎಂದು ಬೆನ್ನು ಚಪ್ಪರಿಸಿದರು.

ಇಂತಹ ಸರಸಗೋಷ್ಠಿ ದಾರಿಯುದ್ದಕ್ಕೂ ಆದಿತ್ತೋ! ಇಂತಹ ಸರಸಗೋಷ್ಠಿ ಇನ್ನೊಂದು ನಡೆಯುತ್ತಿರುವಾಗಲೇ ರೈಲುಗಾಡಿ ಮದರಾಸಿನ 'ಸೆಂಟ್ರಲ್' ರೈಲ್ವೆ ನಿಲ್ದಾಣಕ್ಕೆ ಬಂದಿತ್ತು. ಇಷ್ಟು ದೂರ ಒಂದೇ ಉಸುರಿನಲ್ಲಿ ಓಡಿದುದರಿಂದ ಆದ ಆಯಾಸ ಪರಿಹರಿಸಿಕೊಳ್ಳಲೆಂಬಂತೆ ಒಮ್ಮೆಲೇ ಅದು ನಿಂತು ಬಿಟ್ಟಿತು. ರೈಲು ನಿಲ್ದಾಣದಲ್ಲಿ ನಿಲ್ಲುತ್ತಿದ್ದಂತೆಯೇ ಕೇಳಬಂತು ಜೈ ಕನ್ನಡಮಾತೆ! ಜೈ ಕರ್ಣಾಟಕಾಂಬೆ! ಎಂಬೀ ಜಯಕಾರದ ನುಡಿಗಳು. ನಿಲ್ದಾಣದ ಪ್ಲಾಟ್ ಫಾರಂನಲ್ಲಿ ಸಮ್ಮೇಳನದ ಸ್ವಯಂಸೇವಕರ ತಂಡವೇ ನೆರದಿತ್ತು. ಅವರು ರೈಲಿನಲ್ಲಿ ಬರುವವರನ್ನು ಸ್ವಾಗತಿಸಲು ಬಂದಿದ್ದರು. ಅವರ ಜಯಕಾರದ ನುಡಿಗಳನ್ನು ಕೇಳಿ ಹೃದಯ ಉಬ್ಬಿಹೋಯಿತು. ಪರ ಪ್ರಾಂತದಲ್ಲಿನ ಈ ಕನ್ನಡಿಗರ ಜಯಕಾರ ಕೇಳಿ ಮೈ ನವಿರೆದ್ದಿತು. ಒಂದು ಕ್ಷಣ ನನ್ನನ್ನು ನಾನೇ ಮರೆಯುವ ಹಾಗೆ ಆಯಿತು.

ರೈಲು ನಿಂತ ಮೇಲೆ ನನ್ನ ಹಾಸಿಗೆ ಸಾಮಾನುಗಳನ್ನು ಕೆಳಗೆ ಇಳಿಸಿದೆ. ಹೆಂಗಸರ ಡಬ್ಬಿಯಿಂದ ವಿಶಾಲಿ ಬಂದು ನನ್ನೊಡನೆ ಸೇರಿದಳು. ಹಾಸಿಗೇ ಸಾಮಾನುಗಳನ್ನು ಒಂದೆಡೆ ಇಡುವ ಗಡಿಬಿಡಿಯಲ್ಲಿ ನಾನಿರುವಾಗ ಸ್ವಯಂ ಸೇವಕರು ರೈಲಿನ ಎರಡನೇ ತರಗತಿಯ ಡಬ್ಬಿಯಿಂದ ಇಳಿಯುತ್ತಿದ್ದ ಯಾರನ್ನೋ ಸ್ವಾಗತಿಸುತ್ತಿರುವಂತೆ ತೋರಿತು. ಅವರು ಯಾರನ್ನು ಅಷ್ಟು ವಿಜೃಂಭಣೆಯಿಂದ ಸ್ವಾಗತಿಸುತ್ತಿರುವರೆಂದು ಆ ಗುಂಪಿನ ಬಳಿ ಹೋಗಿ ನೋಡಿದೆ. ರೈಲು ಡಬ್ಬಿಯಿಂದ ಇಳಿಯುತ್ತಿದ್ದ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಅವರು ಸ್ವಾಗತಿಸುತ್ತಿದ್ದರು. ಆ

ಸಾಮಾನ್ಯ ವ್ಯಕ್ತಿಗೆ ಅವರು ಕೊಡುವ ಮನ್ನಣೆಯನ್ನು ಕಂಡು ವಿಶಾಲಿಯನ್ನು ಕೇಳಿದ್ದೆ, ಅವರು ಯಾರೆಂದು "ಯಾರಿರಬಹುದು ಊಹಿಸಿ ಹೇಳು, ನೋಡೋಣ." ಅವರು ಯಾರೆಂದು ಊಹಿಸುವುದು ನನ್ನಿಂದಾಗಲಿಲ್ಲ. "ಅವರಾರಿರಬಹುದೆಂದು ನನಗೆ ಹೊಳೆಯಲೊಲ್ಲದು ವಿಶಾಲಿ" ಎಂದು ನನ್ನ ಸೋಲನ್ನು ಒಪ್ಪಿಕೊಂಡೆ.

"ಅವರೇ ಕೈಲಾಸಂ ಎಂಬುವವರು. ಅವರೇನೇ ನಾಳೆ ಸಮ್ಮೇಳನದ ಅಧ್ಯಕ್ಷರು! ಅವರೂ ಕೂಡ ನಮ್ಮ ಗಾಡಿಗೇನೇ ಬಂದಿದ್ದಾರೆ!"

ಅವರೇ ಕೈಲಾಸಂ ಎಂದು ವಿಶಾಲಿಯ ಬಾಯಿಯಿಂದ ಕೇಳಿ ನನಗೆ ಬಹಳ ಆಶ್ಚರ್ಯವಾಯಿತು.

"ಅವರೇನಾ ಕೈಲಾಸಂ!" ಎಂದು ನನ್ನ ಬಾಯಿಂದ ಆಶ್ಚರ್ಯೋದ್ಗಾರ ಹೊರಟಿತ್ತು. ವಿಶಾಲಿಯು ಹೇಳಿದ ಆ ಮಾತನ್ನು ಒಂದು ಕ್ಷಣ ನನ್ನ ಮನಸ್ಸು ನಂಬದಾಯಿತು. ಕಾರಣ ನಾನು ಮನಸ್ಸಿನಲ್ಲಿ ಭಾವಿಸಿದ್ದ ಕೈಲಾಸಂರವರಿಗೂ ಈಗ ಕಾಣುತ್ತಿರುವ ಕೈಲಾಸಂರವರಿಗೂ ಅಷ್ಟು ರೂಪವೈಷಮ್ಯವಿತ್ತು, ಅಷ್ಟು ಅಂತರವಿತ್ತು. ನಾನು ಕೈಲಾಸಂರವರನ್ನು ನನ್ನ ಮನಸ್ಸಿನಲ್ಲಿ ಬೇರೊಂದು ರೀತಿಯಲ್ಲಿ ಚಿತ್ರಿಸಿದ್ದೆ. ಅವರನ್ನು ಒಳ್ಳೆಯ ಬೆಲೆ ಬಾಳುವ ಸೂಟು, ಪೇಟಗಳಲ್ಲಿ ಅಲಂಕರಿಸಿದ್ದೆ. ಎಷ್ಟೆಂದರೂ ಇಂಗ್ಲೆಂಡಿನಿಂದ ಮರಳಿದವರಲ್ಲವೇ? ವಯಸ್ಸು ಐವತ್ತರ ಒಳಗೆ ಹಚ್ಚಿದ್ದೆ. ಯುವಜನರ ಸಂಗಾತಿಯೆಂದು. ಆದರೆ ನಾವು ಕಾಣುತ್ತಿದ್ದ ಕೈಲಾಸಂ ಎಲ್ಲಿ? ಈಗ ಕಾಣುತ್ತಿರುವ ಕೈಲಾಸಂರವರೆಲ್ಲಿ? ಅದೆಷ್ಟು ಅಜಗಜಾಂತರ ಈ ಎರಡು ವ್ಯಕ್ತಿಗಳಿಗೆ!

ನಾನು ಈಗ ಕಾಣುತ್ತಿರುವ ವ್ಯಕ್ತಿ ಕೈಲಾಸಂ ನನ್ನ ಮನಸ್ಸಿನಲ್ಲಿನ ಕೈಲಾಸಂರವರಂತೆ ಸೂಟು ಪೇಟದ ವ್ಯಕ್ತಿಯಲ್ಲ. ಕೇವಲ ಸಾಮಾನ್ಯ ತರದ ಉಡುಪಿನವರು. ಅವರ ಉಡುಗೆ ಎಲ್ಲಾ ಒಂದು ಕೊಳೆಯಾಗಿದ್ದ ಉಟ್ಟ ಲುಂಗಿ, ಧರಿಸಿದ್ದ ಒಂದು ಮಾಸಲು ಬಣ್ಣದ ಬನೀನು, ಬನೀನಿನ

ಒಳಗಡೆ ಕಾಣ ಬರುತ್ತಿದ್ದ ಕರಿಯ ಒಳ ಬನೀನು—ಇಷ್ಟೇ ಅವರೆಲ್ಲಾ ಉಡುಪು.

“ಇನ್ನು ವಯಸ್ಸೋ! ರೂಪೋ! ಎತ್ತರದ ಮುದಿ ಮುಖ, ಗುಳಿಬಿದ್ದ ಗಲ್ಲ, ಆದರೂ ಯೌವನದ ಮುಖವನ್ನು ಮೀರಿಸಿ ಕಾಣುವ ಆ ಕಾಂತಿ, ಸ್ವಲ್ಪ ಉದ್ದವಾದ ವಕ್ರಬಾಯಿ, ಮುಖದ ವಿವಿಧ ಭಾವಗಳನ್ನು ನಿರ್ದಿಷ್ಟವಾಗಿ ತೋರಗೊಡುವ ಆ ಗೆರೆಗಳು, ಅರೆನೆರತ ಹುಬ್ಬು, ಹುಬ್ಬಿಗೆ ತಕ್ಕ ಅಗಲವಾದ ಆ ಕಣ್ಣುಗಳು, ಮುಖಕ್ಕೆ ವಿಪರೀತ ಅಗಲವೆಂದು ತೋರುವ ಆ ಮೂಗೂ, ಅದಕ್ಕಿಂತಲೂ ಹೆಚ್ಚು ನರೆತ ತಲೆಗೂದಲು, ಗುಂಗುರು ಗುಂಗುರಾಗಿ ಅಸ್ತವ್ಯಸ್ತವಾಗಿ ಕೆದರಿದ್ದ ಕ್ರಾಪು.

“ಈತನೇನೇ ಕೈಲಾಸಂ! ಊಹೂಂ, ಈತನೇ ಕೈಲಾಸಂ ಅದೇಕಾದೀತು ?...........

“ಆದರೆ ಇದು ನಗ್ನ ಸತ್ಯ. ನನ್ನ ಕಣ್ಣುಗಳು ಕಾಣುತ್ತಿದ್ದ ಆ ವ್ಯಕ್ತಿಯೇ ನಿಜಕ್ಕೂ ಕೈಲಾಸಂ, ಆತನೇ ವಿಶಾಲಿ ಹೇಳಿದ್ದ ಗುಂಡೂರಾಯ. ಕರ್ಣಾಟಕದ ಪ್ರಹಸನ ಪಿತಾಮಹ—ನಾಳಿನ ಸಮ್ಮೇಳನಾಧ್ಯಕ್ಷ...........

ಹೀಗೆಂದು ಮನಸ್ಸು ಒಪ್ಪಲೇಬೇಕಾಯಿತು. ಬಂದಿದ್ದ ಸ್ವಾಗತ ಸಮಿತಿಯವರು ಅಧ್ಯಕ್ಷರನ್ನು ಶ್ರೇಷ್ಠ ರೀತಿಯಲ್ಲಿ ಸ್ವಾಗತಿಸಿ-ಅವರಿಗಾಗಿ ಏರ್ಪಡಿಸಿದ್ದ ವಸತಿಗೃಹಕ್ಕೆ ಕಾರಿನಲ್ಲಿ ಕರೆದೊಯ್ದರು. ಇನ್ನು ಉಳಿದುದು—ನಮ್ಮ ಸಾಮಾನುಗಳನ್ನು ಸಾಗಿಸಿಕೊಂಡು ನಮ್ಮ ವಸತಿ ಗೃಹಕ್ಕೆ ತೆರಳುವುದು.

ಈಗಾಗಲೇ ಸ್ವಯಂ ಸೇವಕರು ಸಮ್ಮೇಳನಕ್ಕಾಗಿ ಬಂದವರೆಲ್ಲರ ಸಾಮಾನುಗಳನ್ನೂ ಒಂದೆಡೆ ರಾಸಿಹಾಕಿ ಅವನ್ನು ಹೊರಗೆ ತರುವ ಏರ್ಪಾಡು ಮಾಡುತ್ತಿದ್ದರು. ಹೆಂಗಸರನ್ನೇಕೆ ಗಂಡಸರಂತೆ ಪ್ಲಾಟ್ ಫಾರಂನಲ್ಲಿ ಉಳಿಸಿರಬೇಕು? ಎಂದು ಸ್ವಯಂಸೇವಕರ ಮುಂದಾಳು

ಮೊದಲೇ ಅವರನ್ನು ಬಾಡಿಗೆಯ ಕಾರೊಂದರಲ್ಲಿ ಕರೆದುಕೊಂಡು ಹೋಗಿಬಿಟ್ಟಿದ್ದರು. ನಾವು ಗಂಡಸರು ನಮ್ಮ ಸಾಮಾನುಗಳನ್ನು ಸಾಗಿಸಿ ಕೊಂಡು ಬರಲು ಹಿಂದೆ ನಿಂತೆವು.

ಈ ರೈಲಿನಲ್ಲಿ ಬಂದ ಕನ್ನಡ ಯಾತ್ರಿಕರು ಸ್ವಯಂಸೇವಕರು ಬರ ಬಹುದೆಂದು ಊಹಿಸಿದ್ದುದಕ್ಕಿಂತಲೂ ಅನೇಕ ಪಾಲು ಹೆಚ್ಚಾಗಿ ಬಂದು ದರಿಂದ ಅವರಿಗಾಗಿ ಮಾಡಿದ್ದ ಪ್ರಯಾಣ ಸೌಕರ್ಯ ಏನೇನೂ ಸಾಲ ದಾಯಿತು. ಅವರು ಏರ್ಪಡಿಸಿದ್ದ ಜಟಕಗಳು ಬಂದವರ ಸಾಮಾನು ಗಳನ್ನು ಒಯ್ಯಲು ಸಾಲದಾಯಿತೆಂದಮೇಲೆ ಇನ್ನು ಜನರನ್ನು ಹೇಗೆ ತಾನೇ ಸಾಗಿಸೀತು! ಅಂತೂ ಬಂದ ಸಾಮಾನಿಗೆ ಅನುಗುಣವಾಗಿ ಮತ್ತೆ ನಾಲ್ಕು ಜಟಕ ಬಾಡಿಗೆಗೆ ಗೊತ್ತು ಮಾಡಿ ಅಲ್ಲಿದ್ದ ಸಾಮಾನೆಲ್ಲ ವನ್ನೂ ವಸತಿಗೃಹಕ್ಕೆ ಸಾಗಿಸಿದರು. ಇನ್ನು ನಿಲ್ದಾಣದಲ್ಲಿ ಉಳಿದವ ರೆಂದರೆ ನಾವು—ಗಂಡಸರು. ಇಷ್ಟು ಮಂದಿಯನ್ನು ಜಟಕ ಕಾರಿನಲ್ಲಿ ಕರೆದೊಯ್ಯುವುದು ದುಬಾರಿ ಎಂದು ನಮ್ಮೆಲ್ಲರನ್ನೂ ಟ್ರಾಂನಲ್ಲಿ ಕರೆದುಕೊಂಡುಹೋದರು. ಆಗಲೇ ಹತ್ತರ ಸಮಯವಾಗಿದ್ದುದರಿಂದ ಪುರುಷವಾಕಂಗೆ ನೇರ ಹೋಗುವ ಟ್ರಾಂ ಸರ್ವೀಸು ಇರಲಿಲ್ಲ. ಸಿಗ ಬಹುದಾಗಿದ್ದ ಟ್ರಾಂ ಎಲ್ಲಿಯತನಕ ಒಯ್ಯುವುದೋ ಅಲ್ಲಿಯವರೆಗೂ ಟ್ರಾಂನಲ್ಲೇ ಒಯ್ಯುವುದೆಂದೂ ಮುಂದೆ ಕಾಲು ನಡಿಗೆಯಲ್ಲಿ ಹೋಗುವು ದೆಂದೂ ಸ್ವಯಂಸೇವಕರ ಮುಂದಾಳು ಮೊದಲೇ ನಿರ್ಧರಿಸಿದ್ದ.

ನಾನು ಮಾಡಿದ ಟ್ರಾಂ ಪ್ರಯಾಣ ಅದೇ ಮೊದಲನೆಯ ಸಲ. ಈವರೆಗೂ ಟ್ರಾಂನಲ್ಲಿ ಪ್ರಯಾಣ ಮಾಡುವ ಸನ್ನಿವೇಶ ಒದಗಿ ಬಂದಿರಲಿಲ್ಲ. ಟ್ರಾಂನ ಬಂಡಿ ಹಳಿಗಳ ಮೇಲೆ ಉರುಳಿ ಹೋದಂತಿಲ್ಲ; ಅದು ಬೇರೊಂದು ಲೋಕದಲ್ಲಿ ಸಂಚರಿಸುತ್ತಿದೆ ಎಂದೆನಿಸಿತು. ಎಲ್ಲವೂ ಹೊಸದು; ಹೊಸ ಊರು. ಹೊಸ ನೋಟ, ನಾವು ಉಸಿರಾಡುವ ಗಾಳಿ ಕೂಡ ಹೊಸದು. ಈ ಹೊಸತನಗಳ ಬೆಡಗಿಗೆ ನಾನು ಬಲಿ ಬಿದ್ದು ತೆರೆದ ಬಾಯನ್ನು ಮುಚ್ಚದೆ ನಡೆದಿದ್ದೆ.

ಅಂತೂ ಇಂತೂ ಸ್ವಯಂಸೇವಕರು ನಮ್ಮನ್ನು ಸಮ್ಮೇಳನ ನಡೆಯು ಲಿದ್ದ 'ಪ್ರಪುಷವಾಕಂ'ಗೆ ತಂದುಬಿಟ್ಟರು. ಸಮ್ಮೇಳನವನ್ನು ಅಲ್ಲಿಯೇ ಇದ್ದ ಸರ್. ಎಂ. ಸಿ. ಸಿ. ಮುತ್ತಯ್ಯಚೆಟ್ಟಿ ಹೈಸ್ಕೂಲಿನಲ್ಲೇ ನಡೆಸುವ ಏರ್ಪಾಡು ಮಾಡಿದ್ದರು. ಬಂದವರು ಇಳಿದುಕೊಳ್ಳಲು ಸ್ಕೂಲಿನ ಕಟ್ಟಡ ವಿಶಾಲವಿದ್ದುದರಿಂದ ಅದನ್ನೇ ಆರಿಸಿದ್ದರು. ಆ ಸ್ಕೂಲು ಕಟ್ಟಡದ ಕಾಂಪೌಂಡು ಬಾಗಿಲ ಬಳಿ ದೊಡ್ಡದೊಂದು ಪೆಂಡಾಲ್ ಹಾಕಿ ಅದನ್ನು ಅಲಂಕರಿಸಿದ್ದರು. ವಸತಿಗೃಹಕ್ಕೆ ಬಂದಾದ ಮೇಲೆ ನನ್ನ ಮೊದಲನೆಯ ಕೆಲಸವೆಂದರೆ ಹಾಸಿಗೆ ಪೆಟ್ಟಿಗೆಗಳನ್ನು ಎಲ್ಲಿ ಹಾಕಿದ್ದಾರೆ ಎಂದು ಹುಡುಕುವುದು. ಅನಂತರ ಸ್ಕೂಲಿನ ಕಟ್ಟಡದಲ್ಲಿ ಅನುಕೂಲವಾದ ಕೊಠಡಿಯೊಂದನ್ನು ಆರಿಸಿ ನಮ್ಮ ಪತಾಕೆಯನ್ನು ಹಾರಿಸುವುದು.

ಸಾಮಾನುಗಳನ್ನು ಒಂದು ಕತ್ತಲೆಯ ಕೋಣೆಯಲ್ಲಿ ಅಸ್ತವ್ಯಸ್ತ ವಾಗಿ ಹರಡಿದ್ದರು. ಆ ಕೋಣೆಯಲ್ಲಿ ನಮ್ಮ ಸಾಮಾನುಗಳು ಇವುಗಳೇ ಎಂದು ಗುರುತಿಸಲೂ ಆಗದಷ್ಟು ಬೆಳಕು ಇತ್ತು. ಸ್ಕೂಲಿನ ಕಟ್ಟಡ ಇನ್ನೂ ಹೊಸದಾದುದರಿಂದ ಎಲೆಕ್ಟ್ರಿಕ್ ದೀಪ ಬಂದಿಲ್ಲವೆಂದು ಅನಂತರ ತಿಳಿಯಿತು. ಅಲ್ಲಿದ್ದ ಬೆಳಕಿನಲ್ಲಿ ಮೊದಲೇ ಬಂದಿದ್ದ ವಿಶಾಲಿ ನಮ್ಮ ಸಾಮಾನುಗಳನ್ನು ಆರಿಸಿ ಒಂದೆಡೆ ಇಟ್ಟಿದ್ದಳು. ಅಲ್ಲದೆ ಸಣ್ಣದೊಂದು ಕೊಟಡಿಯನ್ನು ಕೂಡ ಆರಿಸಿದ್ದಳು. ಆದುದರಿಂದ ಕೊಟಡಿಯನ್ನು ಆರಿಸಿ ಸಾಮಾನಿರಿಸುವ ಕೆಲಸ ಅಷ್ಟು ತೊಂದರೆಯಾಗಲಿಲ್ಲ.

ರೂಂನಲ್ಲಿ ನಮ್ಮ ಪತಾಕೆ ಹಾರಿಸಿ ಈ ವರೆಗೂ ಪಟ್ಟ ಶ್ರಮದಿಂದ ಆದ ಬೆವರೊರಸಿಕೊಂಡಾಗ ಗಂಟೆ ಹತ್ತರ ಸಮಯವಾಗಿತ್ತು. ದಿನವೆಲ್ಲಾ ಹೊಟ್ಟೆಗೆ ಸರಿಯಾದ ಆಹಾರ ಬಿದ್ದಿರಲಿಲ್ಲ. ಬಿದ್ದ ಅದೂ ಇದೂ ತಿಂಡಿ ತಿನಸುಗಳು ರೈಲಿನ ವೇಗದಲ್ಲಿ ಎಲ್ಲಿ ಮಾಯವಾಗಿತ್ತೋ! ಈಗ ಹೊಟ್ಟೆ ಪೂರಾ ಖಾಲಿಯಾಗಿತ್ತು. ಊಟದ ಕರೆಗಾಗಿ ಬಾಯಿ ಬಾಯಿಬಿಡು ತ್ತಿತ್ತು. ವಸತಿಗೃಹದಲ್ಲಿ ನಾವು ಮಾಡಬೇಕಿದ್ದ ಕೆಲಸಗಳೆಲ್ಲಾ ಮುಗಿದ ಮೇಲೆ ಇನ್ನೇನು! ಹೊಟ್ಟೆಕರೆಯನ್ನಾಲಿಸಿ ಹೊರಟೆವು ಭೋಜನಾಲ

ಯಕ್ಕೆ. ಭೋಜನಾಲಯವನ್ನು ನಾವಿಳಿದಿದ್ದ ವಸತಿಗೃಹದ ಸಮೀಪದಲ್ಲೇ ಏರ್ಪಡಿಸಿದ್ದರು. ಹತ್ತು ಹೆಜ್ಜೆ ಹಾಕಿದರೆ ಸಿಗುವಂತಿತ್ತು. ಅಲ್ಲಿಗೆ ಬಂದಾಗ ನಮ್ಮಂತಹ ಹಸಿದ ತೋಳಗಳ ಒಂದು ಗುಂಪೇ ನೆರೆದಿತ್ತು. ನಾವೂ ಹೋಗಿ ಗುಂಪಿನಲ್ಲಿ ಒಬ್ಬರಾಗಿ, ಊಟದ ಟಿಕೀಟುಗಳನ್ನು ಪಡೆದು ಎಲೆಯ ಮುಂದೆ ಕೂಡುವ ಹೊತ್ತಿಗೆ.......ಬೇರೊಂದು ಜನ್ಮವನ್ನೇ ಪಡೆದಿದ್ದೆವು.

ಅಂದಿನ ಊಟದ ರುಚಿ ನಾನೆಂದೂ ಮರೆಯುವಂತಿಲ್ಲ. ಹಸಿದ ಹೊಟ್ಟೆಗೆ ಅವರು ಬಡಿಸಿದುದೆಲ್ಲಾ ಪಂಚಭಕ್ಷ್ಯ ಪರಮಾನ್ನವಾಗಿತ್ತು. ಊಟಮಾಡಿ ಕೈತೊಳೆದುಕೊಂಡು ವಸತಿಗೃಹಕ್ಕೆ ಮರಳುವಾಗ........ ಅಂತಹ ಊಟ ಹಾಕಿದ (ನಾವು ಕಾಸು ಕೊಟ್ಟು ಊಟ ಮಾಡಿದ್ದುದು ನಿಜ. ಆದರೆ ಆ ಹೊತ್ತಿನಲ್ಲಿ ನಮಗೆ ಕಾಸು ಮುಖ್ಯವಿರಲಿಲ್ಲ. ಆ ಸರಿಹೊತ್ತಿನಲ್ಲಿ ಯಾವ ಹೋಟಲಿಗೆ ನುಗ್ಗಿದರೂ ನಾಲ್ಕು ಅಗಳು ಅನ್ನ ಕಾಣುವುದು ದುಸ್ಸಾಧ್ಯವಾಗಿತ್ತು.) ಶ್ರೀ ಸೀತಾರಾಮಾಚಾರ್ಯರನ್ನು ಮನಸಾರ ವಂದಿಸಿದೆ.

ದಾರಿಯಲ್ಲಿ ನಡೆಯುತ್ತಲಿದ್ದಾಗ ವಿಶಾಲಿ ಕೇಳಿದಳು: "ಹೇಗಿತ್ತಣ್ಣಾ ಊಟ?" ಎಂಬ ಪ್ರಶ್ನೆಗೆ ನಾನು ಒಂದೇ ಪದವನ್ನು ಉಪಯೋಗಿಸಿದ್ದೆ;—"ಸೊಗಸು" ಎಂದು. ಆದರೆ........ಊಟದ ವಿಷಯವಾದ ನನ್ನ ಅಭಿಪ್ರಾಯ ಮುಂದೆ ಬದಲಿಸಬೇಕಾಗುವುದೆಂದು ತಿಳಿದಿದ್ದರೆ ನಾನು ಬಹುಶಃ ಹಾಗನ್ನುತ್ತಿರಲಿಲ್ಲವೆಂದು ತೋರುತ್ತದೆ.

ನಾವು ವಸತಿಗೃಹಕ್ಕೆ ಬಂದು ಹಾಸಿಗೆ ಹಿಡಿದೆವು. ಹಾಸಿಗೆಯ ಮೇಲೆ ಮಲಗಿ ಇನ್ನೂ ನಾಲ್ಕು ನಿಮಿಷ ಕೂಡ ಆಗಿರಲಿಲ್ಲ. ನಮ್ಮ ಕೊಠಡಿಯ ಬಾಗಿಲ ಬಳಿ "ಮಿಸ್ ವಿಶಾಲಾಕ್ಷಮ್ಮ" ಎನ್ನುವ ಕೋಮಲ ದನಿಯೊಂದು ಕೇಳಿಬಂತು. ವಿಶಾಲಿಯನ್ನು "ಅದಾರು ಇಷ್ಟು ಹೊತ್ತಿನಲ್ಲಿ ಕೂಗುವುದು! ಅದೂ ಈ ಮದರಾಸಿನಲ್ಲಿ! ಎಂದುಕೊಂಡು ಯಾರೆ, ಅದು ವಿಶಾಲಿ! ಅವರು ಕರೆಯುವುದು ನಿನ್ನನ್ನೇನು!" ಎಂದೆ.

"ಇರಬೇಕು" ಎನ್ನುತ್ತಾ ವಿಶಾಲಿ ಹಾಸಿಗೆಯಿಂದ ಎದ್ದು ಬಾಗಿಲ ಕಡೆ ಬಂದಳು. ಬಾಗಿಲ ಬಳಿ ಸುಮಾರು ವಿಶಾಲಿಯಷ್ಟೇ ವಯಸ್ಸಿನ ಸ್ತ್ರೀ ಸ್ವಯಂಸೇವಕಿಯೊಬ್ಬಳು ನಿಂತಿದ್ದಳು. ಆಕೆಯನ್ನು ಕಂಡೊಡನೆಯೇ ಅಂದುಕೊಂಡೆ—"ವಿಶಾಲಿಯ ಪರಿಚಯ ಆಕೆಗೆಲ್ಲಿಯದು" ಎಂದು. ವಿಶಾಲಿ ಬಾಗಿಲ ತನಕ ಬಂದು,

"ಓಹೊ ನೀವಾ....ತಾಳಿ ಬರುತ್ತೇನೆ" ಎಂದು ನನ್ನ ಕಡೆಗೆ ತಿರುಗಿ, "ಅಣ್ಣಾ ನಾನು ಇಲ್ಲೇ ತಾರಸಿಯಲ್ಲೇ ಇವರೊಂದಿಗೆ ಮಾತನಾಡುತ್ತಿರುತ್ತೇನೆ.......ನೀನು ನನಗಾಗಿ ಕಾಯಬೇಕಿಲ್ಲ. ಮಲಗಿಬಿಡು" ಎಂದು ಹೇಳಿ ಆಕೆಯೊಡನೆ ತಾರಸಿಗೆ ನಡೆದುಬಿಟ್ಟಳು.

ಅವಳು ಹೊರಟು ಹೋದಮೇಲೆ ಅಂದುಕೊಂಡೆ "ಅಬ್ಬಾ! ಅದೆಷ್ಟು ಬೇಗ ಆ ಸ್ವಯಂ ಸೇವಕಿಯೊಂದಿಗೆ ಗೆಳೆತನ ಬೆಳಸಿಬಿಟ್ಟಿದ್ದಾಳೆ ವಿಶಾಲಿ ! ಎಲ್ಲಿ ಹೋಗಲಿ ಹೆಂಗಸರು ಹೀಗೆ!" ಎನ್ನುತ್ತ ನಿದ್ರಿಸಲು ಹೊದ್ದಿಗೆಯನ್ನು ಎಳೆದು ಮಲಗಿದೆ. ಊಹೂಂ........ನಿದ್ರೆ........ ಚೆನ್ನಾಗಿ ಬಂದೀತೆ?........ಅದೂ ಸೊಳ್ಳೆಗಳ ಅವಾಂತರದಲ್ಲಿ. ಸೊಳ್ಳೆಗಳ ಅವಾಂತರಕ್ಕೆ ಪೂರಾ ಮುಸುಕೆಳೆದು ಮಲಗಿದರೆ ಉಸಿರು ಸಿಕ್ಕಿಕೊಂಡಂತಾಗುತಿತ್ತು. ಅಲ್ಲದೆ ಅಲ್ಲಿನ ಶೆಕೆಗೆ ಮೈಯೆಲ್ಲಾ ಬೆವರಿನ ಕೋಡಿ ಹರಿಯುತಿತ್ತು. ಗಾಳಿ ಕೂಡ ಬೀಸುತ್ತಿರಲಿಲ್ಲ. ವಿಶಾಲಿಯ ಮಾತು ಕೇಳಿ ಇಲ್ಲಿ ವಿಪರೀತ ಚಳಿಯೆಂದು ರಗ್ಗು ತಂದಾಗಿತ್ತು, ಇಲ್ಲಿ ನೋಡಿದರೆ ಶೆಕೆ! ಹಗಲು ರಾತ್ರಿ ಎನ್ನದೆ ಶಕೆ. ಇಲ್ಲಿ ಚಳಿಯಂತ ಯಾರು ಹೇಳಿದ್ದರೋ ವಿಶಾಲಿಗೆ! ಈ ಶೆಕೆಯಲ್ಲಿ ಈ ರಗ್ಗು ಹೊದೆದು ಮಲಗುವುದೇ?

ಸೊಳ್ಳೆಗಳ ಅವಾಂತರ! ಅತ್ತ ಈ ಹಾಳು ಶಕೆ! ಕಡೆಗೆ ಹೊದ್ದಿದ್ದ ರಗ್ಗನ್ನು ದೂರಾ,ಎಸೆದು ಉಡುವ ಪಂಚೆಯೊಂದನ್ನು ಹೊದ್ದು ಮಲಗಿದೆ. ಆಗ....ಸೊಳ್ಳೆಗಳಿಂದಲೂ, ಶಕೆಯಿಂದಲೂ ಸ್ವಲ್ಪ ಬಿಡುಗಡೆಯಾಯಿತು! ಆಗತಾನೇ ಮಾನವನೆತ್ತರ ಇದ್ದ ಕಿಟಕಿಗಳಿಂದ ತಂಗಾಳಿ ಬೀಸಲಾರಂಭಿ

ಸಿತು. ಅದು ನನ್ನ ಮೇಲೆ ಹಾದುಹೋಗುವಾಗ ಜೀವಕ್ಕೆ ಎಷ್ಟೋ 'ಹಾಯಿ' ಎನಿಸಿತು. ಮುಂದೆ ತಂಗಾಳಿ ಬೀಸುತ್ತಲೇ ಇತ್ತು. ಆ ತಂಗಾಳಿಯ ತಂಪಾದ ಸಾನ್ನಿಧ್ಯದಲ್ಲಿ ಯಾವಾಗ ನಿದ್ರೆ ಹತ್ತಿತೋ ತಿಳಿಯದು. ನನಗೆ ಎಚ್ಚರವಾದಾಗ ಬೆಳಗಿನ ಜಾವವಾಗಿತ್ತು. ವಿಶಾಲಿ ಇನ್ನೂ ಗಾಢವಾದ ನಿದ್ದೆಯಲ್ಲೇ ಇದ್ದಳು, ಇನ್ನೂ ಅವಳು ಅವಳ ಕನಸಿನ ಲೋಕದಲ್ಲಿ ವಿಹರಿಸುತ್ತಿದ್ದಳು.

೩

ನನಗೆ ನಿದ್ರೆಯ ಜೊಂಪು ಪೂರಾ ಕಳೆದಿತ್ತು. ಆದರೂ ಎದ್ದು ಮಾಡುವುದೇನೆಂದು ಹಾಸಿಗೆಯ ಮೇಲೆ ಹಾಗೆಯೇ ಹೊರಳಾಡುತ್ತಿದ್ದೆ. ಬೆಳಗಿನ ತಂಗಾಳಿ ಇನ್ನೂ ಬೀಸುತ್ತಲೇ ಇತ್ತು. ಕಟ್ಟಡದ ಬಳಿಯಲ್ಲೇ ಇದ್ದ ಹೂಗಿಡಗಳ ಮೇಲೆ ಗಾಳಿ ಹಾದು ಬರುವಾಗ ತನ್ನೊಡನೆ ತಂಪಿನ ಜೊತೆಗೆ ಕಂಪನ್ನೂ ತರುತ್ತಿತ್ತು. ದೂರದಲ್ಲಿ ಸಮುದ್ರ ಘೋರ್ಗರೆಯುವ ಸದ್ದು ಸ್ವಲ್ಪಸ್ವಲ್ಪವಾಗಿ ಕೇಳಿಬರುತ್ತಿತ್ತು. ಆ ಸಮುದ್ರರಾಜನಿಗೆ ಎಂದೂ ನಿದ್ದೆ ಇಲ್ಲ! ಸದಾ ಎಚ್ಚರ! ಸದಾ ಕೆಲಸ! ಸದಾ ಘೋರ್ಗರೆತ! ನಾವು ಮಾನವರು ನಾಲ್ಕು ದಿನ ಕೆಲಸ ಮಾಡಿದರೆ ಹತ್ತು ದಿನ ವಿರಾಮ ಬಯಸುವೆವು! ಆದರೆ ಆ ಸಮುದ್ರರಾಜ! ಊಹೂಂ, ಆತನಿಗೆಲ್ಲಿಯ ವಿರಾಮ? ಅದು ಆತನ ದೊಡ್ಡ ಗುಣ! ವಿರಾಮ ಕೆಡುಕಿಗೆ ಮೂಲ ಎನ್ನುವ ಸೂತ್ರ ಚನ್ನಾಗಿ ತಿಳಿದಿರಬೇಕು! ಇಲ್ಲದಿದ್ದರೆ......

ಹೀಗೆಯೇ ಏನು ಏನೊ ಹುಚ್ಚು ಹುಚ್ಚು ಯೋಚನೆಗಳು. ಮನಸ್ಸು ಹರಿದತ್ತ ಬಿಟ್ಟೆ. ಏಕೆ ನಿರ್ಬಂಧಿಸಲಿ? ಹಾಗೆ ನಿರ್ಬಂಧಿಸಿದರೂ ಈ ಹೊತ್ತಿನಲ್ಲಿ ಅದು ಯಾವ ನಿರ್ಬಂಧಕ್ಕೂ ಒಳಗಾಗುವಂತಿರಲಿಲ್ಲ. ಕಡಿವಾಣ ತಪ್ಪಿದ ಕುದುರೆಯಂತೆ ಅತ್ತಿಂದಿತ್ತ ಓಡಾಡುತ್ತಿತ್ತು.

ಒಂದುಬಾರಿ ತಂಗಿಯ ಕಡೆ ಮನಸ್ಸು ಹರಿಯಿತು. ಹಾಗೆಯೇ ಅವಳ ಕಡೆ ದೃಷ್ಟಿ ಹೊರಳಿಸಿ ನೋಡಿದೆ. ಅವಳು ನಿದ್ರೆಯ ಅಮಲಿನಲ್ಲಿ ಇಹಲೋಕದ ಪರಿವೇ ಇಲ್ಲದೆ ಬಿದ್ದಿದ್ದಾಳೆ. ಅವಳು ಅದಾವ ಕನಸಿನ ಲೋಕದಲ್ಲಿ ಸುಳಿಯುತ್ತಿರುವಳೋ? ಅದಾವ ಸುಖಸಂತೋಷವನ್ನು ಸವಿಯುತ್ತಿರುವಳೋ? ನಿದ್ರೆಯಲ್ಲಿ ಕೂಡ ಅವಳ ಮುಖದಲ್ಲಿ ಮಂದಹಾಸ ಎದ್ದು ಕಾಣುತ್ತಿದೆ. ಅದೇನು ಮುಖ ಅವಳದು! ಅದೇ ಅಮ್ಮನ ಸುಂದರ ಮುಖ! ಅದೇ ಮಾಟವಾದ ಮೂಗು! ಅದೇ ಕಣ್ಣುಗಳು!.... ಅವಳೆಲ್ಲಾ ಭಾವಭಂಗಿ ಎಲ್ಲಾ ಅಮ್ಮನವೇ! ಎಷ್ಟೆಂದರೂ ಅಮ್ಮನ ಪಡಿಯಚ್ಚಲ್ಲವೇ ಆ ರೂಪು. ಅಮ್ಮನ ಮಗಳಲ್ಲವೇ ವಿಶಾಲಿ!

ಅವಳನ್ನೇ ದಿಟ್ಟಿಸುವಾಗ್ಗೆ ಅವಳ ಬಗ್ಗೆ ಹತ್ತಾರು ಯೋಚನೆಗಳು ಬಂದುಹೋದುವು. ಹೂಂ. ವಿಶಾಲಿ ಬೆಳೆದು ನಿಂತಿದ್ದಾಳೆ! ಇನ್ನು ಮದುವೆ ಮಾಡಬೇಕು. ಮೊನ್ನೆ ಅಮ್ಮ ಆ ಹುಡುಗನ ಸಂಗತಿಯನ್ನು ನನಗೆ ಹೇಳಿದ್ದಳು. ಅವನಿಗೆ ಕಾಲೇಜಿನಲ್ಲಿ ಉಪಾಧ್ಯಾಯನ ಕೆಲಸ. ಹುಡುಗನಿಗೆ ಯಾರೂ ದಿಕ್ಕಿಲ್ಲ. ಚಿಕ್ಕಂದಿನಲ್ಲೇ ತಂದೆತಾಯಿಗಳನ್ನು ನೀಗಿಕೊಂಡನಂತೆ! ಭಿಕ್ಷಾನ್ನ ವಾರಾನ್ನಗಳಿಂದ ಹೊಟ್ಟೆಹೊರೆದು ಓದಿ, ಡಿಗ್ರಿ ಪಡೆದು ಈಗ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾನೆ. ಈಗ ಬರುವ ಸಂಬಳದಲ್ಲಿ ಅವನಿಗೆ ಉಡಲು, ತಿನ್ನಲು ಅಡ್ಡಿ ಇಲ್ಲ. ಅವನಿಗೇಕೆ ಕೊಡಕೂಡದೆಂದು ಅಮ್ಮ. ಹೂಂ ಹೌದು, ಕೊಡಬಹುದು. ವಿಶಾಲಿಯನ್ನು ಅವನಿಗೆ ಕೊಡಬಹುದು. ಅವನು ವಿಶಾಲಿಗೆ ಅನುರೂಪನಾದ ವರ. ವಿಶಾಲಿಯಂತಹ ಸಾಹಿತಿಗೆ ಯೋಗ್ಯನಾದ ವರ, ಸುಸಂಸ್ಕೃತಳಾದ ವಿಶಾಲಿಗೆ ಸುಸಂಸ್ಕೃತನಾದ ವರ. ಅವನೊಡನೆ ಮದುವೆಯಾದರೆ ವಿಶಾಲಿಯ ಬಾಳು ಸುಗಮವಾಗಬಹುದು. ಆದರೆ........ಆದರೆ........ ಅವನು ಒಪ್ಪುವ ಬಗೆ? ಕೇಳುವುದೇನೋ ಕೇಳುವುದು. ಹಿಂದೆ ಕಾಲೇಜಿನಲ್ಲಿ ಓದುತ್ತಿರುವಾಗ ನಮ್ಮ ಮನೆಗೆ ವಾರಾನ್ನಕ್ಕೆ ಬರುತ್ತಿದ್ದನಂತೆ! ಮೊನ್ನೆ ಅವನು ಅಮ್ಮನಿಗೆ ಅಕಸ್ಮಾತ್ತಾಗಿ ಸಿಕ್ಕಿದಾಗ ಅಮ್ಮನನ್ನು ಗುರುತು ಹಚ್ಚಿ ಮಾತನಾಡಿಸಿದನಂತೆ. ಅಮ್ಮ ಅವನೊಂದಿಗೆ ಸೂಕ್ಷ್ಮ

ವಾಗಿ ವಿಶಾಲಿಯು ಪ್ರಸ್ತಾಪ ಮಾಡಿದಳಂತೆ. ನಾನು ಹೋಗಿ ಈ ವಿಷಯ ಅವನೊಡನೆ ಪ್ರಸ್ತಾಪ ಮಾಡಿದರೆ ಅವನು ಒಪ್ಪಬಹುದು. ಹಿಂದೆ ನಮ್ಮ ಮನೆಯಲ್ಲಿ ಉಂಡ ಉಪ್ಪನ್ನಾದರೂ ನೆನೆದು........ಕೇಳಬೇಕು. ನೋಡಿ ಕೇಳಬೇಕು— ಅವನೇನಾದರೂ ಒಪ್ಪಿದರೆ ವಿಶಾಲಿಯೇ ಪುಣ್ಯವಂತೆ.... ನಿಜವಾಗಿಯೂ ಅವಳೇ ಪುಣ್ಯವಂತೆ........ಅವನನ್ನು ಈ ಸಮಯದಲ್ಲಿ ಕೇಳಬೇಕೆಂದಿದ್ದೆ. ಆದರೆ ಇಲ್ಲಿಗೆ ಬೇರೆ ಬಂದುದಾಯಿತಲ್ಲಾ. ಸಮ್ಮೇಳನ ಮುಗಿಸಿಕೊಂಡು ಹೋಗಿ ಇನ್ನು ಕೇಳಬೇಕು!........ಹೂಂ ಊರಿಗೆ ಹೋದಮೇಲೆ ಇದನ್ನು ಮಾಡುವುದೇ ಮೊದಲ ಕೆಲಸ!

ಈಗ ಎಲ್ಲದಕ್ಕೂ ನಾನೇ ತಾನೆ ಯಜಮಾನ! ಅಪ್ಪ ಇದ್ದಿದ್ದರೆ.... ಅಪ್ಪ ಇದ್ದಿದ್ದರೆ........ಅದೆಷ್ಟು ಚನ್ನಾಗಿರುತ್ತಿತ್ತು. ಇದಾವ ತೊಂದರೆಯನ್ನೂ ನನಗೆ ಹೊರಲು ಬಿಡುತ್ತಿರಲಿಲ್ಲ. ಎಲ್ಲವನ್ನೂ ತಾವೇ ನಿರ್ವಹಿಸುತ್ತಿದ್ದರು. ಹತ್ತು ಕಡೆ ಹೋಗಿ ವಿಚಾರಿಸಿ ವಿಶಾಲಿಗೆ ಅನುರೂಪನಾದ ವರನನ್ನು ಪತ್ತೆ ಹಚ್ಚಿ ತರುತ್ತಿದ್ದರು. ಆದರೆ ಅಪ್ಪ ಮಾಡಬೇಕಿದ್ದ ಆ ಕೆಲಸವನ್ನು ನಾನು ಮಾಡಬೇಕಾಗಿದೆ. ಈಗ........ಅಪ್ಪ ಬದುಕಿದ್ದರೆ ಅದೆಷ್ಟು ನೆಮ್ಮದಿಯಿಂದ ಇರುತ್ತಿತ್ತು, ನಮ್ಮ ಸಂಸಾರ! ಅವರಿದ್ದಾಗ ನಮಗೆ ಕಷ್ಟವೇನೆಂಬುದು ಗೊತ್ತಿತ್ತೆ?. ....ಅದೆಲ್ಲಾ ಸ್ವಲ್ಪ ಕಾಲದ ಬಾಳು. ಮುಂದೆ ಅಪ್ಪ ತೀರಿಕೊಂಡ ಮೇಲೆ ನಾವು ಪಟ್ಟ ಕಷ್ಟವೆಷ್ಟು. ಸಂಕಟವೆಷ್ಟು? ಅಮ್ಮನಾಗುವಹೊತ್ತಿಗೆ ಅವನ್ನೆಲ್ಲಾ ಎದುರಿಸಿದಳು ....ಎಲ್ಲವನ್ನೂ ಜಯಿಸಿದಳು. ಇನ್ನೊಬ್ಬರಾಗಿದ್ದಿದ್ದರೆ!

ಎಷ್ಟು ಪುಣ್ಯ ಪ್ರಭಾವದಿಂದಲೋ ಇಂತಹ ಅಮ್ಮನನ್ನು ಪಡೆದಿರುವುದು! ಅಪ್ಪ ತೀರಿಕೊಂಡ ಮೇಲೆ ಅಮ್ಮ ನನಗೋಸ್ಕರ ತೆಗೆದುಕೊಂಡ ತೊಂದರೆ ಎಷ್ಟು........

ಅಂದು ......ಅಂದು ಅಪ್ಪನ ಮರಣವಾರ್ತೆಯನ್ನು ಕೇಳಿ ಪರೀಕ್ಷೆ ಹತ್ತು ದಿನವಿದೆ ಎನ್ನುವುದನ್ನೂ ಮರೆತು ಊರಿಗೆ ಬಂದಿದ್ದೆ. ಅಪ್ಪನಿಲ್ಲದ ಮೇಲೆ ಇನ್ನೆಲ್ಲಿಯ ಓದು ಎಂದು ಮನೆಯಲ್ಲಿಯೇ ಉಳಿಯುವೆನೆಂದು

ಹೇಳಿದಾಗ ಅಮ್ಮ ಅದೆಂತಹ ಮಾತನಾಡಿದಳು. "ಮಗೂ ಅವರೇನೋ ಇದ್ದಕ್ಕಿದ್ದಂತೆಯೇ ಹೋಗಿ ನಮ್ಮನ್ನು ನಡುನೀರಿನಲ್ಲಿ ಕೈಬಿಟ್ಟರು. ಆದರೂ ನೀನೇಕೆ ಮನೆಯಲ್ಲಿ ಕುಳಿತಿರಬೇಕು. ಹೇಗಿದ್ದರೂ ಒಂದು ವರ್ಷ ಈಗಾಗಲೇ ಕಳೆದಿದ್ದಾಗಿದೆ. ಇನ್ನುಳಿದಿರುವುದು ಒಂದು ವರ್ಷತಾನೆ?........ಮುಗಿಸಿಬಿಡು. ಅದನ್ನು ಮುಗಿಸಿಬಿಡು ಹೇಗೂ ಈ ಕಷ್ಟದಲ್ಲೇ ಅದೂ ಒಂದು ಕಷ್ಟ ಎಂದುಕೊಂಡು ಇಲ್ಲಿ ನಾನೆಲ್ಲಾ ನೋಡಿ ಕೊಳ್ಳುತ್ತೇನೆ. ನಮ್ಮ ಚಿಂತೆ ಸದ್ಯಕ್ಕೆ ನೀನು ಹಚ್ಚಿಕೊಳ್ಳಬೇಡ. ಹೊರಡು. ನಾಳೆ ಪರೀಕ್ಷೆಗೆ ಕೂಡು, ನಿನ್ನ ಓದುಮುಗಿಸು, ದೇವರಿದ್ದಾನೆ ಇಲ್ಲಿ ಕಾಪಾಡಲು"

"ಸಾಕು ಓದು. ಇಲ್ಲೇ ಯಾವುದಾದರೂ ಕೆಲಸ ಹಿಡಿದು ಉಳಿ" ಎಂದು ಹೇಳಿದ್ದರೆ........ನನ್ನ ಬಾಳಿನ ರೀತಿಯೇ ಬೇರೆಯಾಗುತ್ತಿತ್ತು. ಆದರೆ ಅಂದು ಅಮ್ಮ ಹಾಗೆ ಹೇಳಿದಳೇನು? ಅಮ್ಮನ ಬಾಯಿಯಲ್ಲಿ ಬಂದೀತೇನು?"

ಆ ಒಂದು ವರ್ಷ ಅಮ್ಮ ಪಟ್ಟ ಕಷ್ಟಗಳು ನೂರೆಂಟು. ತಂದೆಯ ವರು ಮಾಡಿದ್ದ ಸಾಲದ ಫಲವಾಗಿ ಇದ್ದೊಂದು ಆಸ್ತಿ-ಮನೆ-ಮಾರಿಯಾ ಯಿತು. ನಾವು ಈವರೆಗೆ ಇದ್ದ ಆ ಸ್ವಂತದ ಮನೆಯನ್ನು ಪರರಿಗೆ ಮಾರಿ ಕೊಟ್ಟು, ಸಣ್ಣ ಬಾಡಿಗೆಯ ಮನೆಯನ್ನು ಹಿಡಿದುದಾಯಿತು. ಆಗ ಇದ್ದ ಸಂಪಾದನೆಯೆಂದರೆ-ತಂದೆಯವರು ವಿಶಾಲಿಯ ಮದುವೆಗೆಂದು ಹಾಕಿದ್ದ ಒಂದು ಸಾವಿರ ರೂ ಇನ್ಷೂರ್ ಹಣ, ಗೆಳೆಯರೊಬ್ಬರಲ್ಲಿ ಕೈ ಬದಲು ಕೊಟ್ಟಿದ್ದ ಸುಮಾರು ಐನೂರು ರೂ. ಇಷ್ಟೇ—ತಂದೆಯವರು ಕಡೆಯಲ್ಲಿ ಬಿಟ್ಟಿದ್ದ ಆಸ್ತಿ—ಇನ್ಷೂರ್ ಹಣವನ್ನು ವಿಶಾಲಿಯ ಮದುವೆಗೆಂದು ತೆಗೆದಿಟ್ಟು ಉಳಿದ ಐನೂರು ರೂನಲ್ಲೇ ಅಮ್ಮ ಅಲ್ಲಿನ ಜೀವನ ಸಾಗಿಸ ಬೇಕಾಗಿತ್ತು. ವಿಶಾಲಿಯ, ನನ್ನ ಓದು ನಡೆಯಬೇಕಾಗಿತ್ತು. ಹೀಗಿರು ವಾಗ ಅಮ್ಮ ಬಹಳ ಮಿತವ್ಯಯದಿಂದ ಜೀವನ ಮಾಡಿರಬೇಕಾಯಿತು, ಆ ಒಂದು ವರ್ಷ ಅಪ್ಪ ಇದ್ದಾಗ ನಮ್ಮ ಮನೆಯಲ್ಲಿ ವಾರಾನ್ನಕ್ಕೆ

ಬರುತ್ತಿದ್ದ ಬಡ ಹುಡುಗರಿಗೆ ಲೆಕ್ಕವಿರಲಿಲ್ಲ. ಅಮ್ಮ ಅನೇಕ ವಿಧವಾಗಿ ಅವರಿಗೆ ಸಹಾಯ ಮಾಡುತ್ತಿದ್ದಳು. ಹೀಗೆ ಹತ್ತು ಮಂದಿಗೆ ಧಾರಾಳವಾಗಿ ಅನ್ನ ಹಾಕಿ ಪಳಗಿದ ಕೈಗೆ ಈ ಮಿತವ್ಯಯ ಜೀವನ ಒಂದು ಸಂಕೋಲೆ! ಯಾವುದು ಮಾಡಿದರೂ ಅದಕ್ಕೆ ತಗುಲುತ್ತಿದ್ದ ವೆಚ್ಚ ಕಣ್ಣು ಮುಂದೆ ಬರುತ್ತಿತ್ತು. ಇಂತಹದರಲ್ಲಿ ಹೇಗೆ ಆ ಒಂದು ವರ್ಷ ಕಳೆದಳೋ....ಆ ತಾಯಿಗೆ ಮಾತ್ರ ಗೊತ್ತು!

ಅಂತೂ ನನ್ನ ಪಾಸಿನಿಂದ ಆ ಒಂದು ಕಷ್ಟದ ನಿಷ್ಠುರದ ಜೀವನದಿಂದ ಒಂದಿಷ್ಟು ಬಿಡುಗಡೆ ದೊರೆಯಿತು. ನಾನು ಓದು ಮುಗಿಸಿ ಕೆಲಸಕ್ಕಾಗಿ ಅಲೆದಾಡಿದೆ. ಎಷ್ಟೋ ಪ್ರಯತ್ನಿಸಿದ ಮೇಲೆ ಕಡೆಗೆ ನನಗೊಂದು ಕೆಲಸ ಸಿಕ್ಕಿತು. ನನಗೆ ಕೆಲಸ ಸಿಕ್ಕಿದುದರಿಂದ ಅಮ್ಮನಿಗೆ ತುಂಬಾ ಸಂತೋಷವಾಯಿತು. ಕೆಲಸ ನನಗೆ ಸಿಕ್ಕಿದುದು ಅಮ್ಮನಿಗೇ ಸಿಕ್ಕಷ್ಟು ಸಂತೋಷ! ಅಂದು ಮೊದಲ ತಿಂಗಳ ಸಂಬಳ ಐವತ್ತು ರೂಪಾಯಿಗಳನ್ನು ಅಮ್ಮನ ಕೈಗೆ ಹಾಕಿದ ದಿನ ಅಮ್ಮನಿಗೆ ಹಿರಿಹಿರಿ ಹಿಗ್ಗು! ಸಂಬಳದಲ್ಲಿ ಹತ್ತು ರೂಪಾಯಿ ತೆಗೆದು ತಾನು ಹರಕೆ ಹೊತ್ತ ತಿಮ್ಮಪ್ಪನಿಗೆ ಮುಡುಪು ಸಲ್ಲಿಸಿದಳು. ತಾನೊಂದು ಸೀರೆ—ವಿಶಾಲಿಗೊಂದು ಸೀರೆ ಕೊಂಡು ತಂದು, ಆ ವಠಾರದಲ್ಲಿರುವವರಿಗೆಲ್ಲಾ ಅತಿ ಸಂಭ್ರಮದಿಂದ ತೋರಿಸಿ ಹೇಳಿಕೊಂಡು ಬಂದರು, "ಇದು ನನ್ನ ಮಗ ತಂದುಕೊಟ್ಟ ಸೀರೆ" ಎಂದು. ಮುಂದೆ ತಿಂಗಳ ತಿಂಗಳ ಸಂಬಳ ತಾಯಿಯ ಕೈಗೆ ಕೊಡುತ್ತಿದ್ದಾಗ ಅವರು ಅನೇಕ ಬಾರಿ ಕಣ್ಣಿನಲ್ಲಿ ನೀರು ತಂದು ಹೇಳುತ್ತಿದ್ದರು. ಮಗ ಸಂಪಾದಿಸುವುದನ್ನು ಕಾಣುವುದಕ್ಕೆ ಅಪ್ಪನಿಲ್ಲವಲ್ಲಾ ಎಂದು ಹಲವು ಬಾರಿ ಹಲುಬಿದರು.

..............ಅಪ್ಪ, ಹೌದು, ಅಪ್ಪ ಅಂತಹ 'ಅಮ್ಮ'ನಿಗೆ ತಕ್ಕ 'ಅಪ್ಪ' ನನ್ನನ್ನು ಕಂಡರೆ ಅವರಿಗೆ ತುಂಬಾ ಪ್ರೀತಿ! ನನ್ನೊಬ್ಬನನ್ನೇ? ಏಕೆ? ಮನೆಯವರೆಲ್ಲರನ್ನು ಕಂಡರೂ ಅವರಿಗೆ ಪ್ರೀತಿ. ಒಂದು ದಿನವಾದರೂ ಒಂದು ಕೋಪದ ಮಾತನ್ನಾಡಿದವರಲ್ಲ ಅವರು. ಒಂದು

ದಿನವಾದರೂ ಒಬ್ಬರ ಮೇಲೆ ಕೈಯೆತ್ತಿದವರಲ್ಲ! ಅಪ್ಪನ ಗುಣ ಅಂತಹ ಚಿನ್ನದ ಗುಣ!

ನಾನು ಸ್ಕೂಲಿಗೆ ಸೇರಿದಾಗ ನನ್ನ ವಿದ್ಯಾಭ್ಯಾಸದಲ್ಲಿ ಅವರು ತೀವ್ರ ಆಸಕ್ತಿ ವಹಿಸಿದ್ದರು. ತಾವು ಆಫೀಸಿಗೆ ಹೋಗುವಾಗ ತಮ್ಮೊಡನೆ ನನ್ನನ್ನು ಕರೆದುಕೊಂಡು ಬಂದು, ಸ್ಕೂಲಿಗೆ ಬಿಟ್ಟು, ಮರಳಿ ತಾವು ಆಫೀಸಿನಿಂದ ಬರುವಾಗ ನನ್ನನ್ನು ತಮ್ಮೊಡನೆ ಮನೆಗೆ ಸುರಕ್ಷಿತವಾಗಿ ಕರೆದೊಯ್ಯುತ್ತಿದ್ದರು. ಇದೊಂದೇ ಸಾಕು ನನ್ನ ಮೇಲೆ ಎಷ್ಟು ಪ್ರೀತಿ ಎಂಬುದನ್ನು ತೋರಿಸಲು.

ಒಂದು ಸಲ ಹುಡುಗತನದಿಂದ "ಸ್ಕ್ಯಾಟು ಬಟ್ಟೆ" ತಂದುಕೊಡುವವರೆಗೆ ಸ್ಕೂಲಿಗೆ ಹೋಗುವುದಿಲ್ಲವೆಂದು ಹುಚ್ಚು ಹಟ ಮಾಡಿದೆ. ಅವರೆಷ್ಟು ಬಾರಿ ಸಮಾಧಾನಪಡಿಸಿದರೂ ನಾನು ಕೇಳಲಿಲ್ಲ. ತಂದೆಯವರ ಮಾತನ್ನು ಗಣನೆಗೆ ತಾರದೆ ಇನ್ನೂ ನನ್ನ ಮೊಂಡು ಹಟವನ್ನು ಬಿಡದಿದ್ದಾಗ ಅಮ್ಮ ನನಗೆ ಒಂದು ಪೆಟ್ಟು ಹಾಕಿದರು. ಅಪ್ಪ ಅಮ್ಮನ ಮೇಲೆ ಅಷ್ಟಕ್ಕೆ ಕೋಪಗೊಂಡರು. ಏನೂ ಅರಿಯದ ಕಂದನನ್ನು ಹೊಡೆಯಲು ಹೇಗೆ ಮನಸ್ಸಾಯಿತೆಂದು ಹೀಯಾಳಿಸಿದರು. ಅತ್ತು ಅತ್ತು ಕಣ್ಣನ್ನು ಕೆಂಪಗೆ ಮಾಡಿಕೊಂಡೆ.

ಅಂದು ಅಮ್ಮನ ಹೊಡೆತದಿಂದ ಮೈಬೆಚ್ಚಗಾಯಿತು. ಅಷ್ಟಕ್ಕೆ ನಾನು ಹಾಸಿಗೆ ಹಿಡಿದೆ. ಆಗ ಅಪ್ಪ ಬಹಳ ಕಳವಳಗೊಂಡರು. ಮುಂದೆ ಅದೇ ವಿಷಯ ಶೀತ ಜ್ವರವಾಗಿ ಮಾರ್ಪಟ್ಟಿತು! ಅಪ್ಪ ಅಮ್ಮ ಇಬ್ಬರೂ ತುಂಬಾ ಬೇಗುದಿಗೊಂಡರು. ಅಮ್ಮ ನನ್ನ ಎರಡು ಕೈಗಳನ್ನೂ ತನ್ನೆದೆಗೆ ಒತ್ತಿಟ್ಟುಕೊಂಡು ಹಲವು ಬಾರಿ ನನ್ನ ಕ್ಷಮೆ ,ಕೇಳಿಕೊಂಡರು." ಹೊಡೆದುದು ತಪ್ಪಾಯಿತೆಂದು. ಅಲ್ಲದೆ ತಮ್ಮ ಕೆನ್ನೆಗೆ ತಾವೇ ಹೊಡೆದುಕೊಂಡರು ಪ್ರಾಯಶ್ಚಿತ್ತರೂಪವಾಗಿ.

ಜ್ವರ ದಿನದಿನಕ್ಕೆ ಹೆಚ್ಚು ಹೆಚ್ಚಾಯಿತು. ಆಗ ನನ್ನನ್ನು ತುಂಬಾ ಜಾಗರೂಕತೆಯಿಂದ ನೋಡಿಕೊಂಡರು. ಘಳಿಗೆ ಘಳಿಗೆಗೂ ಡಾಕ್ಟರನ್ನು

ಕರೆತಂದು ತೋರಿಸಿದ್ದೇ ತೋರಿಸಿದ್ದು. ಹಣೆಗೆ ತಣ್ಣೀರು ಬಟ್ಟೆಗಳನ್ನು ಮಂಜುಗಡ್ಡೆಗಳನ್ನು ಇಟ್ಟಿದ್ದೇ ಇಟ್ಟಿದ್ದು! ಒಂದು ದಿನ ಜ್ವರದ ಹೆಚ್ಚಳದಿಂದ ಜ್ಞಾನತಪ್ಪಿತು. ಆಗ ಅಮ್ಮ ಊಟ ಬಿಟ್ಟು ನನ್ನ ಹಾಸಿಗೆಯ ಬಳಿಯೇ ಉಳಿದರು; ಅಪ್ಪ ಡಾಕ್ಟರ ಅಂಗಡಿಯಿಂದ ಮನೆಗೆ, ಮನೆಯಿಂದ ಡಾಕ್ಟರ ಅಂಗಡಿಗೆ ಅಲೆದರು. ಕಡೆಗೆ ಜ್ವರದ ತಾಪ ಕಡಿಮೆ ಮಾಡಲು ಇಂಜಕ್ಷನ್ ಕೊಡಲು ಡಾಕ್ಟರು ನಿರ್ಧರಿಸಿದರು. ಆಗ ಅಪ್ಪ ಅಜ್ಜಿಯರು ಪಟ್ಟಪಾಡು, ನೋವು ಮಾತಿಗೆ ನಿಲುಕದುದು. ಡಾಕ್ಟರು ತಮ್ಮ ಕಾರ್ಯದಲ್ಲಿ ಉದ್ಯುಕ್ತರಾಗಿದ್ದಾಗ ಅವರ ಬಾಯಿಂದ ಏನು ಬಂದೀತೆಂದು ಕೇಳಲು ಉದ್ವೇಗದಿಂದ ಕಾದಿದ್ದರು; ಆಗ ಪಟ್ಟ ಸಂಕಟದ ವಿಷಯವನ್ನು ಅಮ್ಮನೇ ಹೇಳಬೇಕು!

ಅಂತೂ ಅಂದು ಮೃತ್ಯುವಿನ ದವಡೆಯಿಂದ ನನ್ನನ್ನು ಡಾಕ್ಟರು ಬಿಡಿಸಿದರು.

ಆಗ ನನಗೆ ತುಂಬಾ ಆರೈಕೆ ಅವಶ್ಯಕವಿತ್ತು. ಅಪ್ಪ ಆಫೀಸನ್ನು ಮರೆತರು. ನನ್ನ ಹಾಸಿಗೆಯನ್ನು ಬಿಟ್ಟು ಕದಲಲಿಲ್ಲ. ಆಗ ಅವರು ಎಷ್ಟೋ ಹಣ್ಣುಗಳ ರಸವನ್ನು ನಾನು ಒಲ್ಲೆನೆಂದರೂ ಬಲವಂತಮಾಡಿ ಕುಡಿಸುತ್ತಿದ್ದರು; ಈ ಎಲ್ಲಾ ಚಿತ್ರ ಇನ್ನೂ ಮಾಸಲು ಮಾಸಲಾಗಿ ನೆನಪಿನಲ್ಲಿದೆ. ಅಂದು ನನಗಾಗಿ ಪರಿತಪಿಸುತ್ತಿದ್ದ ಆ ಅಪ್ಪ........ಇಂದು ಎಲ್ಲಿ? ತಂದೆ ತಾಯಿಯರ ಪ್ರೀತಿಯ ಆರೈಕೆಯಿಂದ ನಾನೇನೋ ಗುಣ ಹೊಂದಿದೆ. ಆಗ ಅವರ ಹಿಗ್ಗಿಗೆ ಪಾರವೇ ಇಲ್ಲ. ಪೂರ್ತಿಯಾಗಿ ಜ್ವರ ವಾಸಿಯಾದಮೇಲೆ ನನ್ನನ್ನು ತುಂಬಾ ಅಕ್ಕರೆಯಿಂದ ನೋಡಿಕೊಂಡರು.

ನಾನು ಕಾಯಿಲೆಯಿಂದ ಗುಣ ಹೊಂದಿದ ಮೇಲೆ ಮೊದಲಿನಂತೆ ಸ್ಕೂಲಿಗೆ ಹೋಗಲು ಮೊದಲು ಮಾಡಿದೆ. ನಾನು ಹಿಂದೆ ಅಪೇಕ್ಷಿಸಿದ್ದ ಖಾಕಿಯ ಉಡುಪನ್ನು ಮೊದಲು ತಂದಿತ್ತರು. ಮೊದಲ ದಿನ ಆ ಉಡುಪಿನಲ್ಲಿ ನಾನು ಮೆರೆದಾಗ ಅವರು ತುಂಬಾ ಹಾಸ್ಯ ಮಾಡಿ, ನಕ್ಕು ನಗಿಸಿದರು. ಅದೇ ಉಡುಪಿನಲ್ಲೇ ಒಂದು ದಿನ ತಮ್ಮ ಆಫೀಸಿಗೆ ಕರೆದು

ಕೊಂಡು ಹೋಗಿ "ಸತ್ತು ಹುಟ್ಟಿದ ಕೂಸು" ಎಂದು ತಮ್ಮೆಲ್ಲ ಗೆಳೆಯರಿಗೆ ತೋರಿಸಿದರು. ಅಂದು ಅವರು ನನಗಿತ್ತ ಹಣ್ಣು ಹಂಪಲು ನಾನು ಹೊರುವಷ್ಟು !

ಅಂದು ಮನೆಗೆ ಬಂದಾಗ ಅಮ್ಮನ ಮುಂದೆ ಅವರಿತ್ತ ಹಣ್ಣು ರಾಶಿ ಹಾಕಿದೆ. ಅಮ್ಮ ಅದಾವುದನ್ನೂ ಗಮನಿಸದೆ, ನನ್ನ ಉಡುಪನ್ನು ನೋಡಿ 'ಈ ಹಾಳು ಬಟ್ಟೆಗಾಗಿ ನಿನ್ನ ಕೊಲೆ ನಡೆಸಿದ್ದವಲ್ಲೋ ಕಂದಾ' ಎಂದು ಅತ್ತು ಮುದ್ದಾಡಿದರು.

ಅದೆಲ್ಲಾ ಇನ್ನೂ ಜ್ಞಾಪಕದಲ್ಲಿ ಅಚ್ಚಳಿಯದೆ ನಿಂತಿದೆ. ಆದರೆ ಆ ಸವಿಸಂಗತಿಗಳೊಂದಿಗೆ ಒಂದಾಗಿ ಬೆರೆತಿದ್ದ ಆ ಅಪ್ಪ ಇಂದೆಲ್ಲಿ?.

ನಾನು ಮಿಡ್ಲ್ ಸ್ಕೂಲು, ಹೈಸ್ಕೂಲುಗಳ ಮೆಟ್ಟಲುಗಳನ್ನೇರಿ ಕಾಲೇಜ ಹಾದಿ ಹಿಡಿದೆ. ಆಗಿನ ನನ್ನ ವಿದ್ಯಾಪ್ರಗತಿಯನ್ನು ಕಂಡು ಅಪ್ಪನಿಗೆ ತುಂಬಾ ಹಿಗ್ಗು. ಅವರು ನನ್ನ ಸುತ್ತ ಎಷ್ಟೋ ಸವಿಗನಸುಗಳನ್ನು ಕಂಡಿದ್ದರು !

ಆದರೆ ನನ್ನ ಎಲ್ಲಾ ಅಭ್ಯುದಯವನ್ನು ಹಗಲಿರಳು ಕನಸು ಕಾಣುತ್ತಾ ತಮ್ಮ ಎಲ್ಲಾ ಹಿರಿಯಾಸೆ ಬೆಳೆದು ಫಲವಾಗುವುದನ್ನು ಕಾಣಲು ದಿನಗಳ ಎಣಿಕೆಯಲ್ಲಿದ್ದ ಆ ತಂದೆ—ನನ್ನ ಪ್ರೀತಿಯ ನಲ್ಮೆಯ ತಂದೆ—ಮುಂದೊಂದು ದಿನ ಕಣ್ಮರೆಯಾದರು. ಆಗ ನಾನು ಪಟ್ಟ ದುಃಖವೆಷ್ಟು ಸಂಕಟವೆಷ್ಟು !

ತಂದೆಯು ಹೃದಯಸ್ತಂಭನದಿಂದ ಮಡಿದರೆಂದು ಸುದ್ದಿ ಬಂದಾಗ ಪರೀಕ್ಷೆ ಕೇವಲ ಹತ್ತು ದಿನವಿದೆ ಎನ್ನುವುದನ್ನು ಮರೆತು ಮೈಸೂರಿನಿಂದ ಬಂದಿದ್ದೆ. ಆದರೂ ಕಡೆಯುಸಿರಿನಲ್ಲಿ ತಂದೆಯ ಬಳಿ ಇರಲು ಪುಣ್ಯವಿರಲಿಲ್ಲ ಈ ಪಾಪಿ ಜನ್ಮಕ್ಕೆ. ತಂದೆ ತೀರಿಕೊಂಡ ದುಃಖದ ಭರದಲ್ಲಿ ನನಗೆ ಜೀವನವೇ ಅಸಹ್ಯವೆನಿಸಿತು. ತಂದೆಯನ್ನು ಕಳೆದುಕೊಂಡು ಹೇಗೆ ಬದುಕುವುದು ! ಹೇಗೆ ದಿನಕಳೆಯುವುದು; ಎಂದು ದುಃಖದಲ್ಲಿ ಮೂಲೆ ಹಿಡಿದು ಕುಳಿತೆ. ಆಗ ತಾಯಿ ಈ ದಿಕ್ಕುಗೆಟ್ಟ

ಬಾಳಿಗೊಂದು ಹಾದಿ ತೋರಿಸಿದಳು. ಬದುಕಿನಲ್ಲಿ ಭ್ರಮೆ ಹುಟ್ಟಿಸಿದಳು. ಅಮ್ಮನ ವಿಷಯವಾಗಿ ನೆನೆದಾಗ ಒಳಗಿನ ಪ್ರೀತಿ ಜಾಗೃತವಾಯಿತು. ಆಗ ಅಮ್ಮನ ಮಹಾತ್ಮೆ ನನಗೆ ಗೋಚರವಾಯಿತು. ಅಮ್ಮ ಪ್ರೇಮ ಮಯಿಯಾಗಿ ಕಂಡಳು ಪವಿತ್ರತೆಯ ಸಂಕೇತವಾಗಿ ತೋರಿದಳು. ಈ ಇನ್ನೂರು ಮೈಲಿಗಳ ದೂರದಿಂದಲೇ ಅಮ್ಮನಿಗೆ ವಂದಿಸಿದೆ. ಈವರೆಗೆ ನನ್ನ ಬಾಳಿನ ಘಟನೆಗಳನ್ನು ಒಮ್ಮೆ ಸಿಂಹಾವಲೋಕನಮಾಡಿ ಮುಗಿಸಿದ ಮನಸ್ಸು ಹಗುರವಾಯಿತು. ಬಾಳಿಗೆ ಒಂದು ಅರ್ಥವಿದೆ ಎಂದುಕೊಂಡೆ.

೪

ಈ ವೇಳೆಗೆ ಪೂರಾ ಬೆಳಕು ಹರಿದಿತ್ತು. ವಿಶಾಲಿ ನಿದ್ರೆ ಮುಗಿಸಿ ಹಾಸಿಗೆಯಿಂದ ಎದ್ದು ಕುಳಿತಳು.

"ರಾತ್ರಿ ನಿದ್ದೆ ಹತ್ತಿತೇನಣ್ಣಾ" ವಿಶಾಲಿ ಕೇಳಿದಳು ಹೊಸಿಗೆ ಸುತ್ತುತ್ತಾ.

"ನಿನಗೆ"

"ನನಗೆ ಪೂರಾ ನಿದ್ದೆ"

"ನನಗೂ ಕೂಡ. ಆದರೂ ಈ ಹಾಳು ಸೆಳ್ಳೆಗಳು ನನ್ನರ್ಧ ನಿದ್ರೆಯನ್ನು ತಿಂದುಬಿಡ್ತು"

ನಾನೂ, ವಿಶಾಲೀ ಮುಖ ತೊಳೆಯಲು ಹಾಸಿಗೆ ಬಿಟ್ಟಿದ್ದೆವು. ಸ್ವಾಗತ ಸಮಿತಿಯವರು ಸಮ್ಮೇಳನದ ಅತಿಥಿಗಳಿಗೆಂದೇ ಅದೇ ಕಟ್ಟಡದಲ್ಲಿ ಮುಖಮಾರ್ಜನೆಗೆ, ಸ್ನಾನಕ್ಕೆ ಅನುಕೂಲಪಡಿಸಿದ್ದರು. ಅವರು ಮಾಡಿದ್ದ ಈ ಎಲ್ಲಾ ಏರ್ಪಾಡೂ ಯಾವ ಬೀಗರ ಮನೆಗಿಂತಲೂ ಕಡಿಮೆ ಇರಲಿಲ್ಲ. ನಾವು ಎಷ್ಟೆಂದರೂ ಅತಿಥಿಗಳು, ಅವರ ಬೀಗರ ಸಮಾನರಲ್ಲವೇ ?

ಫಲಾಹಾರಗೃಹದಲ್ಲಿ ಒಂದಿಷ್ಟು ತಿಂಡಿ ಹೊಟ್ಟೆಗೆ ಅಡಕಿ, ಒಂದಿಷ್ಟು ಕಾಫಿ ಬಸಿದು ಬಂದೆವು. ನಾವು ಇನ್ನೂ ವಸತಿಗೃಹ ಸಮೀಪಿಸಿ ಬರುತ್ತಿದ್ದಂತೆ ಬ್ಯಾಂಡು ಬಜಂತ್ರಿಯ ಧ್ವನಿ ಕೇಳಿಬಂತು. "ಅದಾವುದೋ ಸಿನಿಮಾದವರ ಗಲಭೆ" ಎಂದು ವಿಶಾಲಿಯು ಅಂದಳು. ಆದರೂ ಅದೇನೆಂದು ನೋಡುವ ಮನಸ್ಸಾಯಿತು. ನಾವು ವಸತಿಗೃಹದ ಹಾದಿ ಬಿಟ್ಟು ಪಕ್ಕದ ರಸ್ತೆಗೆ ನಡೆದಾಗ ನಾವು ಕಂಡ ದೃಶ್ಯ: ಅದೇನೂ ಸಿನಿಮಾಪ್ರಚಾರದ ಮೇಳವಾದ್ಯವಾಗಿರಲಿಲ್ಲ. ಯಾರೊಬ್ಬ ಗೃಹಸ್ಥನ ಮದುವೆ, ಮುಂಜಿಯ ಮೆರವಣಿಗೆಯ ಕೋಲಾಹಲವಾಗಿರಲಿಲ್ಲ. ಸ್ವಾಗತಸಮಿತಿಯವರು ಅಧ್ಯಕ್ಷರನ್ನು ಮೆರವಣಿಗೆಯಲ್ಲಿ ಸಮ್ಮೇಳನದ ಸಭಾಂಗಣಕ್ಕೆ ಕರೆತರುತ್ತಿದ್ದ ಸಂಭ್ರಮ ಅದು. ಅದನ್ನು ಕಂಡು 'ಭಲಾ, ಭೇಷ್' ಎಂದುಕೊಂಡೆ ಸಮಿತಿಯವರ ಉತ್ಸಾಹಕ್ಕೆ.

ಮೆರವಣಿಗೆ ನಾವಿಳಿದಿದ್ದ ವಸತಿಗೃಹದ ಕಡೆ ಹೊರಟಿತ್ತು. ಸಮ್ಮೇಳನದ ಅಧ್ಯಕ್ಷರೇ ಮೆರವಣಿಗೆಯ ಕೇಂದ್ರವ್ಯಕ್ತಿಯಾಗಿ ನಡೆದಿದ್ದರು. ಅವರ ಹಿಂದೆ ಸ್ವಾಗತ ಸಮಿತಿಯ ಮುಖಂಡರು, ಮತ್ತು ಹಿರಿಯ ಸಾಹಿತಿಗಳು. ಅವರ ಮುಂದೆ ಸಾಲುಗಟ್ಟಿ ನಿಂತ ಸ್ವಯಂಸೇವಕರು. ಬ್ಯಾಂಡು ಬಜಂತ್ರಿ ವಾದ್ಯಗಾರರು ಮುಂದೆ ವಾದ್ಯ ನುಡಿಸುತ್ತಾ ಮೆರವಣಿಗೆಯು ಬರುವ ದಿಕ್ಕನ್ನು ತೋರಗೊಡುತ್ತಾ ನಡೆದಿದ್ದರು. ಅಧ್ಯಕ್ಷರಿಗೆ ಅವರು ಹೊರಲಾರದಷ್ಟು ಹೂಮಾಲೆ ಕೊರಳ ಸುತ್ತಾ ಜೋತುಬಿದ್ದಿತ್ತು. ಅದರ ಭಾರದಿಂದಲೋ ಎಂಬಂತೆ ಮೆಲ್ಲನೆ ಹೆಜ್ಜೆ ಹಾಕುತ್ತಿದ್ದರು. ಯಾರೋ ಮುತ್ತೈದೆಯರು ಅವರ ಹಣೆಯಲ್ಲಿ ಕುಂಕುಮದ ಬಟ್ಟು ಇಟ್ಟಿದ್ದರು. ಈ ಸಮ್ಮೇಳನ ಕೂಡಾ ಒಂದು ಮಂಗಳಕಾರ್ಯವಲ್ಲವೇ?

ಆದರೂ ಇಂತಹ ಮಂಗಳಕಾರ್ಯವನ್ನು ಅಮಂಗಳ ಕೆಲಸವೆಂದೇ ತಿಳಿದಿದ್ದ ಜನರಿಗೆ ಕೊರತೆ ಇರಲಿಲ್ಲ. ಮೆರವಣಿಗೆ ಅಧ್ಯಕ್ಷರನ್ನು ಇಳಿಸಿದ್ದ ಬಿಡಾರದಿಂದ ಹೊರಟಾಗ ಕೆಲವು ತೀವ್ರ ತಮಿಳು ಭಕ್ತರು ಕಪ್ಪು ಬಾವುಟ ಪ್ರದರ್ಶನ ಮಾಡಿ ತಮ್ಮ ನುಡಿ ಭಕ್ತಿಯನ್ನು ತೋರಗೊಟ್ಟ

ರಂತೆ! ಆದರೆ ಪೋಲೀಸರ 'ಕೆಂಪು' ಕುಲಾವಿಯು ದರ್ಶನವಾದಾಗ ಅವರ ನುಡಿಭಕ್ತಿ ಎಲ್ಲಿ ಹಾರಿತೊ! ಅಂತೂ ಅವರು ಬರುವುದನ್ನು ದೂರದಿಂದ ಕಾಣುತ್ತಲೇ ಅವರು ಪರಾರಿಯಾದರಂತೆ.

ಮೆರವಣಿಗೆ ವಸತಿಗೃಹದ ಎದುರುಭಾಗದ ಮೈದಾನದಲ್ಲಿ ನಿಂತಿತು. ಅಲ್ಲೇ ಸಮ್ಮೇಳನದ ಮೊಟ್ಟಮೊದಲನೆಯ ಕಾರ್ಯಕ್ರಮ—ನಾಂದಿ ನಡೆಯಬೇಕಾಗಿದ್ದುದು—ಅಲ್ಲೇ ಕಟ್ಟಿದ್ದ ಕನ್ನಡಧ್ವಜದ ಆರೋಹಣೆ ಅಧ್ಯಕ್ಷರಿಂದ ನಡೆಯಬೇಕಿತ್ತು. ಅಧ್ಯಕ್ಷರು ಧ್ವಜಾರೋಹಣೆ ಮಾಡುವ ಮುನ್ನ ಅಲ್ಲಿ ಧ್ವಜದ ಸುತ್ತಾ ಸುತ್ತಗಟ್ಟಿ ನಿಂತಿದ್ದ ಸ್ವಯಂಸೇವಕರು ನಾಲ್ಕು ದೇಶಪ್ರೇಮದ ನುಡಿಭಕ್ತಿಯ ಗೀತೆಗಳನ್ನು ಹಾಡಿದರು. ಅವರ ಹಾಡು ಮುಗಿದಮೇಲೆ ಅಧ್ಯಕ್ಷರು ಧ್ವಜಾರೋಹಣೆ ಮಾಡಲು ಧ್ವಜ ಸ್ತಂಬದ ಬಳಿ ಬಂದು ಧ್ವಜಕ್ಕೆ ಕಟ್ಟಿದ್ದ ಹಗ್ಗವೆಳೆದರು. ಎಷ್ಟು ಎಳೆದರೂ ಆ ಧ್ವಜ ಪಟ ಹಾರಲಿಲ್ಲ. ಅಲ್ಲಿ ನೆರೆದಿದ್ದವರಿಗೆಲ್ಲರಿಗೂ ಗಾಬರಿಯಾಯಿತು. ಪಟವನ್ನು ಕಟ್ಟುವವರು ಸರಿಯಾಗಿ ಕಟ್ಟಿರಲಿಲ್ಲ. ಗುಂಪಿನಲ್ಲಿದ್ದವರೊಬ್ಬರು ಅಧ್ಯಕ್ಷರಿಗೆ ಸ್ವಲ್ಪ ಬಲಪ್ರಯೋಗ ಮಾಡಿ ಎಳೆಯಲು ಹೇಳಿದರು. ಅಧ್ಯಕ್ಷರು ಅಂತೆಯೇ ಮಾಡಿದರು. ನೋಡುತ್ತಿರುವವರ ದೌರ್ಭಾಗ್ಯವೋ ಎನ್ನುವಂತೆ ಧ್ವಜಕ್ಕೆ ಕಟ್ಟಿದ್ದ ಹಗ್ಗ ಮಧ್ಯಭಾಗದಲ್ಲಿ ಕಿತ್ತುಹೋಯಿತು. ಮೊತ್ತಮೊದಲನೆಯ ಕಾರ್ಯದಲ್ಲಿ ಅಮಂಗಳವೇ? ಅಶುಭವೇ? ಎಂದು ಉದ್ಗಾರ ಎಲ್ಲರ ಬಾಯಲ್ಲಿ ಹೊರಟಿತು. ಕೆಲವರು ಪಟ ಕಟ್ಟಿದ್ದ ಸ್ವಯಂಸೇವಕರನ್ನು ದೂರಿದರು. ಇನ್ನು ಕೆಲವರು ಅಧ್ಯಕ್ಷರನ್ನು ದೂರಿದರು, ಅವರು ವಿಪರೀತ ಬಲಪ್ರಯೋಗ ಮಾಡಿದರೆಂದು. ಅಂತೂ ಇಂತೂ ಹಗ್ಗ ಹರಿದುಹೋಯಿತೇ ವಿನಹ ಪಟವೇನೊ ಹಾರಲಿಲ್ಲ. ಹಿರಿಯರೊಬ್ಬರ ಸೂಚನೆಯ ಮೇಲೆ ಒಬ್ಬ ಸ್ವಯಂಸೇವಕ ಗಿಡಮಂಗನಂತೆ ಧ್ವಜಸ್ತಂಭವೇರಿ ಕಡೆಗೆ ಧ್ವಜಪಟ ಹಾರಿಸಿದ. ಅಂತೂ ಇಂತೂ ಮೊದಲಿನ ಕಾರ್ಯಕ್ರಮ—ಧ್ವಜಾರೋಹಣೆ—ನೆರವೇರಿತು. ಮುಂದೆ ಅಧ್ಯಕ್ಷರನ್ನು ಸಮ್ಮೇಳನ ನಡೆಯಬೇಕಾಗಿದ್ದ ಸಭಾಂಗಣಕ್ಕೆ ಬಿಜಯಮಾಡಿಸಿದರು.

ಗುಂಪಿನಲ್ಲಿ ಹೆಂಗಸರ ಮಧ್ಯೆ ಸೇರಿಕೊಂಡಿದ್ದ ವಿಶಾಲಿ ಒದರುತ್ತಾ ನಾನಿದ್ದೆಡೆಗೆ ಬಂದಳು. ಅಲ್ಲಿದ್ದ ಜನವೆಲ್ಲಾ ಅಧ್ಯಕ್ಷರನ್ನು ಹಿಂಬಾಲಿಸಿದುದರಿಂದ ಗದ್ದಲ ಕಡಿಮೆಯಾಗಿತ್ತು. "ಎಂತಹ ಮಂಗಳಕಾರ್ಯಕ್ಕೆ ಅದೆಂತಹ ಅಮಂಗಳ ಮೊದಲು. ಅಲ್ಲಾ.......ಧ್ವಜ ಕಟ್ಟುವವರು ಮೊದಲೇ ಹತ್ತಾರು ಬಾರಿ ಆರೋಹಿಸಿ ನೋಡಿ ಧ್ವಜ ಸರಿಯಾಗಿ ಕೆಲಸ ಮಾಡುವುದನ್ನು ಖಚಿತಪಡಿಸಿಕೊಂಡು ಕಟ್ಟಬಾರದಿತ್ತೆ? ಅದು ಬಿಟ್ಟು ಅದರ ಪ್ರಯೋಗವೂ ಈಗಲೇ, ಅದರ ಕಡೆಯ ಪ್ರದರ್ಶನ ಕೂಡಾ ಈಗಲೇ ಅಂತ ಕಾಣುತ್ತೆ. ಅವರು ಧ್ವಜ ಕಟ್ಟಿ ಹಾಳಾದರು!" ಎಂದು ಧ್ವಜ ಕಟ್ಟಿದ್ದ ಸ್ವಯಂಸೇವಕರ ಮೇಲೆ ರೇಗಿಬಿದ್ದಳು ವಿಶಾಲಿ.

"ಯಾಕೆ ವಿಶಾಲಿ! ಅಷ್ಟು ಕೋಪ, ಅಷ್ಟು ರೇಗಾಟ." ನಾನೆಂದೆ.

"ಇನ್ನೇನಣ್ಣಾ, ಅಷ್ಟು ಪ್ರಜ್ಞೆ ಇರಬೇಡವೇ ಕಟ್ಟುವವರಿಗೆ. ನಾಳೆ ನಾಲ್ಕು ಮಂದಿ ಸೇರಿದಾಗ ಈರೀತಿ ಸಂಭವಿಸಿದರೆ ಅವರಲ್ಲೇಳುವ ಭಾವನೆಗಳೇನು? ಅವರ ಮನೋಘಾತವೇನು? ಎಂದು ಸ್ವಲ್ಪವಾದರೂ ಯೋಚಿಸಬೇಡವೇ?"

"ಹೌದು ಯೋಚಿಸಬಹುದಿತ್ತು."

"ಆದರೆ ಈ ಕೆಲಸ ಯೋಚಿಸಿ ಮಾಡಿದುದೇನು?"

ವಿಶಾಲಿಗೆ ಸ್ವಲ್ಪ ದೂರದಲ್ಲಿಯೇ ನಿನ್ನೆ ರಾತ್ರಿ ವಿಶಾಲಿಯನ್ನು ಹುಡುಕಿಕೊಂಡು ಬಂದಿದ್ದ ಆ ಸ್ವಯಂಸೇವಕಿ ಈವರೆಗೂ ನಮ್ಮಲ್ಲಾಗುತ್ತಿದ್ದ ಸಂಭಾಷಣೆಯನ್ನು ಕೇಳುತ್ತಾ ನಿಂತಿದ್ದಳು. ನಮ್ಮನಮ್ಮಲ್ಲಾಗುತ್ತಿದ್ದ ಈ ಸಂಭಾಷಣೆಯಲ್ಲಿ ಹೊರಗಿನವಳಾದ ತಾನು ಹೇಗೆ ತಲೆ ಹಾಕುವುದು ಎಂದುಕೊಂಡು ನಮ್ಮೆಲ್ಲಾ ಮಾತು ಕೇಳಿಕೊಂಡು ಸುಮ್ಮನಿದ್ದಿರಬೇಕು. ಆದರೆ ತನ್ನ ಮುಂದೆಯೇ ತನ್ನವರನ್ನು ಬಯ್ಯುತ್ತಿದ್ದರೆ ಎಷ್ಟು ಹೊತ್ತುತಾನೆ ಹಾಗೆಯೇ ಕೇಳುತ್ತ ನಿಂತಾಳು? ಹೇಗಿದ್ದರೂ ವಿಶಾಲಿಯ ಒಂದು ದಿನದ ಗುರುತುಪರಿಚಯವಿತ್ತು. ಆ ಪರಿಚಯವನ್ನು ಸಾಧನೆ ಮಾಡಿಕೊಂಡು ತನ್ನವರಮೇಲೆ ರೇಗುತ್ತಿದ್ದ ವಿಶಾಲಿಯನ್ನು ಸಮಾಧಾನ ಪಡಿಸಲು ಹತ್ತಿರ ಬಂದು ನಮ್ಮ ಮಾತುಕಥೆಯಲ್ಲಿ ತಲೆಹಾಕಿದಳು.

"ಯಾಕೆ ವಿಶಾಲಾಕ್ಷಿ, ಹೀಗೆ ಅನುಂಗಳ ನಡೆಯಲಿ ಅಂತ ಬೇಕೆಂತಲೇ ಯಾರು ಮಾಡುತ್ತಾರೆ? ಏನೋ ಕೈತಪ್ಪಿ ಈ ಕೆಲಸ ನಡೆದು ಹೋಯಿತು."

ಅವಳ ಮಾತಿನಲ್ಲಿ ಆಗಿದ್ದ ಬದಲಾವಣೆ ಈವರೆಗೆ ನಾನು ಗಮನಿಸದೆ ಇರಲಿಲ್ಲ. ಮಿಸ್. ವಿಶಾಲಾಕ್ಷಮ್ಮ ಎನ್ನುವುದು—ಬರೀ ವಿಶಾಲಾಕ್ಷಿ ಎಂದಾಗಿತ್ತು. ಇಷ್ಟುಬೇಗ ಏಕವಚನ ಬಳಸುವ ಮಟ್ಟಿಗೆ ಗೆಳತಿಯರಾಗಿಬಿಟ್ಟಿದ್ದಾರೆ ಎಂದು ನನಗೆ ಆಶ್ಚರ್ಯವಾಗದಿರಲಿಲ್ಲ.

"ಹೌದು, ಕೈಬಿಡುತ್ತಾ ಬಂದರೆ ಎಲ್ಲಾ ಕೈತಪ್ಪಿನ ಕೆಲಸವೇ?"

ಹೊಸದಾಗಿ ಪರಿಚಯವಾದ ಗೆಳೆಯರಿಗೆ ಇಷ್ಟು ಬೇಗನೆ ತನ್ನ ಮಾತಿನ ಖಾರ ವಿಶಾಲಿ ತೋರಿಸಿದುದು ನನಗೆ ಸರಿಬರಲಿಲ್ಲ. ಅವಳನ್ನು ಸಮಾಧಾನಪಡಿಸಲೆಂಬಂತೆ,

"ಯಾಕೆ ವಿಶಾಲಿ, ಆ ಸ್ವಯಂಸೇವಕರನ್ನು ಶಪಿಸುವೆ. ಎಂತೆಂತಹ ಕೆಲಸಗಳೋ ಕೈತಪ್ಪಿನಿಂದ ನಡೆದುಹೋಗುತ್ತವೆ. ಅಂದಮೇಲೆ ಇದೂ ಒಂದು ಕೈತಪ್ಪಿನಿಂದ ನಡೆದ ಕೆಲಸವೆಂದುಕೊಂಡು ಸಮಾಧಾನ ತಾಳಬಾರದೆ?" ಎಂದೆ.

"ಏನು ಸಮಾಧಾನ ತಾಳುವುದೇ........ಸದ್ಯ ನಾನು ಸಮಾಧಾನ ತಾಳದೇ ರೇಗಿದರೆಷ್ಟು! ಬಿಟ್ಟರೆಷ್ಟು! ನಾನು ರೇಗಿದರೂ ಕೇಳೋರು ಯಾರು? ಅಲ್ಲಾ........ಸುಮ್ಮನೆ ಮಾತಿಗೆ ಹೇಳಿದೆ ಅಷ್ಟೇ"........ ನಗುತ್ತಾ ಹೇಳಿದಳು.

"ಹೌದು, ನಿಮ್ಮ ಅಣ್ಣನವರು ಹೇಳಿದ ಹಾಗೆ ಇದು ಒಂದು ಆಕಸ್ಮಿಕವಾಗಿ ಕೈತಪ್ಪಿ ನಡೆದಿರೋ ಕೆಲಸ." ಇನ್ನೂ ಆ ಹೊಸ ಗೆಳತಿ ವಿಶಾಲಿಯನ್ನು ಸಮಾಧಾನಗೊಳಿಸಲು ಪ್ರಯತ್ನಿಸುತ್ತಿದ್ದಳು, ಅವಳ ಈ ಬಗೆಯನ್ನು ಕಂಡು.

"ಹೋಗಲೀ ಬಿಡಮ್ಮಾ—ಬೆಳಗಾಗುತ್ತಲೇ ಏಕೆ ಇಲ್ಲದ ಜಗಳ." ಎಂದಳು ವಿಶಾಲಿ.

"ಅಯ್ಯೋ.... ...ಇವೆಲ್ಲವನ್ನೂ ಕಲಹವೆಂದು ತಿಳಿದರೆ........ಇನ್ನು ಕಲಹವೆಂದು ಯಾವುದನ್ನು ಕರೆಯುವುದು?"

ತಾರಿಣಿ ವಿಶಾಲಿಯ ಹೊಸ ಗೆಳತಿ. ನಗುತ್ತಾ ನನ್ನ ಕಡೆ ನೋಡಿ ಹೇಳಿದಳು. ನಾನು ಅವಳು ಹೇಳಿದುದು ಸರಿ, ಒಪ್ಪಿದೆ ಎನ್ನುವಂತೆ ಮಾತಾಡದೆ ಹುಸಿನಕ್ಕೆ. ನಗುವಾಗ ನನ್ನ ದೃಷ್ಟಿ ಆಕೆಯ ಕಡೆ ಹರಿಯದೆ ಇರಲಿಲ್ಲ. ತಾರಿಣಿ ಮಾತನಾಡುವಾಗ ನನ್ನ ಕಡೆ ನೋಡಿದ್ದೂ, ನಾನು ನಗುವಾಗ ತಾರಿಣಿಯ ಕಡೆ ನೋಡಿದುದೂ ವಿಶಾಲಿಯ ಗಮನಕ್ಕೆ ಬಂದಿರಬೇಕು. ಇಲ್ಲದಿದ್ದರೆ ವಿಶಾಲಿ ಹಾಗೆ ಮಾತನಾಡುತ್ತಿರಲಿಲ್ಲ! ಯಾವುದನ್ನೋ ಜ್ಞಾಪಕಕ್ಕೆ ತಂದುಕೊಂಡವಳಂತೆ ವಿಶಾಲಿ,

"ಅಂದಹಾಗೆ—ಅಣ್ಣಾ—ನಿನಗೆ ನನ್ನ ಹೊಸ ಗೆಳತಿಯ ಪರಿಚಯ ಬೇಡವೇನು?" ಎಂದು ಕೊಂಕಿಸಿ ನುಡಿದಳು.

"ಬೇಡ ಅಂದವರುಂಟೇ? ಪರಿಚಯ ಮಾಡಿಕೊಡುವ ನೀನೇ ಸುಮ್ಮನಿದ್ದಮೇಲೆ........" ತುದಿನಾಲಿಗೆ ಕಚ್ಚುತ್ತಲೆಂದೆ.

"ಹಾಗೋ. ಸರಿ ಸರಿ. ತಾರಿಣಿ—ನಿನಗೆ ನಾನಾಗಲೇ ಹೇಳಿದ್ದಾಗಿದೆ, ನಾನು ನಮ್ಮ ಅಣ್ಣನೊಂದಿಗೆ ಸಮ್ಮೇಳನಕ್ಕೆ ಬಂದಿರುವೆನೆಂದು. ಆವೇಳೆಗಾಗಲೇ ನೀನು ಕೂಡ ಊಹಿಸಿರಬೇಕು—ಈತನೇ ನಮ್ಮ ಅಣ್ಣನೆಂದು. ಅಂದಮೇಲೆ ಹೊಸದಾಗಿ ಹೇಳಬೇಕೇ ಇವನೇ ನಮ್ಮ ಅಣ್ಣನೆಂದು?

ಇವನಿಗೆ ಇನ್ನೂ ಮದುವೆಯಾಗಿಲ್ಲ. ಆಗೋ ಅಂದರೆ ಬಂದೆಲ್ಲಾ ಹೆಣ್ಣುಗಳಲ್ಲಿ ಒಂದೊಂದು ಕುಂದು ತೋರಿಸುತ್ತಿದ್ದಾನೆ. ಮೊನ್ನೆ ಒಬ್ಬರು ಒಂದು ಹುಡುಗಿಯನ್ನು ತೋರಿಸಲಿಕ್ಕೆ ಕರೆದುತಂದಿದ್ದರು. ಅದನ್ನು ನೋಡಿ ಆ ಹುಡುಗಿಗೆ ಕಣ್ಣು ಹಣೆಯಲ್ಲಿದೆ, ಕಿವಿ ನಾಲ್ಕಿಂಚಿದೆ ಹಲ್ಲು ಉದ್ದ. ಇದೆಲ್ಲಾ ಆದಮೇಲೆ ಬಣ್ಣ ರೋಡಿಗೆ ಹಾಕುವ ಟಾರ್ ಎಂದು ಏನೇನೋ ಬಾಯಿಗೆ ಬಂದುದೆಲ್ಲಾ ಅಂದುಬಿಟ್ಟ. ಇವನಿಗೆ ತೋರಿಸಲು ಬಂದ ಹೆಣ್ಣುಗಳಿಗೆಲ್ಲಾ ಹೀಗೆಯೇ ಒಂದೊಂದು ವಿಶೇಷಣ

ಹಚ್ಚುತ್ತಿದ್ದಾನೆ! ಹೀಗೆ ಮಾಡುವವನು ಎಂದು ಮದುವೆಯಾಗುತ್ತಾನೋ! ಯಾವ ಹುಡುಗಿಯನ್ನು ಒಪ್ಪುತ್ತಾನೋ!—ಅದು ದೇವರಿಗೇ ಗೊತ್ತು!

“ಇನ್ನು ಇವನ ಉದ್ಯೋಗ. ಡಿಗ್ರಿ ಕೊರಳಿಗೆ ಕಟ್ಟಿಕೊಂಡಿರುವನೆಂದು ಯಾವುದೋ ಒಂದು Private firm ನಲ್ಲಿ ತಿಂಗಳಿಗೆ ಎಪ್ಪತ್ತೈದು ರೂಪಾಯಿ ಕೊಡುತ್ತಾರೆ. ಅವರು ಕೊಡುವುದು ಶುದ್ಧ ದಂಡ. ಅಲ್ಲಿ ಇವನು ಏನು ಕೆಲಸ ಮಾಡುತ್ತಾನೋ ದೇವರಿಗೇ ಗೊತ್ತು! ಯಾವಾಗ ನೋಡಿದರೂ ಒಂದಲ್ಲಾ ಒಂದು ಆಫೀಸ್ ಫೈಲು (File) ಗಳನ್ನು ಮನೆಗೆ ಹೊತ್ತು ತರುತ್ತಿರುತ್ತಾನೆ. ಆಫೀಸಿನಲ್ಲಿ ಕೂಡುವುದು ಸಾಲದೇ ಮನೆಯಲ್ಲಿ ಕೂಡ ಅದರ ಮುಂದೆ ಕೂತು, ತನಗೆ ಗೊತ್ತಿರುವ ಎಲ್ಲಾ ಸಂಖ್ಯೆಗಳ ಮೇಲೆ ಕಸರತ್ ನಡೆಸುತ್ತಿರುತ್ತಾನೆ. ಮೂರು ಹೊತ್ತೂ ಇವನು ಬರೆಯುವುದು, ಓದುವುದು ಅವುಗಳನ್ನೇ.........ಕಲೆ, ಸಾಹಿತ್ಯ ಎಂದರೆ ಏನು ಎನ್ನುತ್ತಾನೆ! ಮನೆಯಲ್ಲಿ ಕಪಾಟಿನ ತುಂಬಾ ಪುಸ್ತಕಗಳಿದ್ದರೂ ಅಲ್ಲಿರುವುದು ಯಾವ ಯಾವ ಪುಸ್ತಕಗಳೆಂದು ಕೂಡ ತಿಳಿದಿಲ್ಲ—ಇಂತಹ ಇವನು ಇಲ್ಲಿಗೆ ಸಮ್ಮೇಳನಕ್ಕೆ ಬಂದುದಾದರೂ ಹೇಗೆ ಕೇಳುತ್ತೀಯ?........ ನಾನೇ ಎಳೆದುಕೊಂಡು ಬಂದೆ ಮೂಗುದಾರ ಕಟ್ಟಿ; ಮದರಾಸು ನೋಡುವ ನೆಪಮಾಡಿ........ಇಷ್ಟೇಂತ ಕಾಣುತ್ತೆ ಇವನ ಬಗ್ಗೆ ನಿನಗೆ ಪರಿಚಯಮಾಡಿ ಕೊಡಬೇಕಿರುವುದು ....”

“ಹೂಂ........ಇಷ್ಟೇ ಪರಿಚಯ ಸಾಕೇ ನಿಮಗೆ........ಇನ್ನೂ ಬೇಕಾದರೆ ಒಂದು ಚಕಾರವೆತ್ತಿ ನಿಮಗೆ ಊಟಕ್ಕೆ ಬಿಡದೆ ಎಲ್ಲಾ ಒದರಿ ಬಿಟ್ಟಾಳು!”

ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದ ತಾರಿಣಿಗೆ ನಾನು ಹೇಳಿದೆ— ನಗುತ್ತಾ,

“ಯಾಕೆ ನಾನು ಹೇಳಿದುದು ಸಾಲದಾಯಿತೇನು!........ಈಗ

ಇಷ್ಟೇ ಸಾಕು! ಮುಂದೆ.......ರಾಯರು ಅಪ್ಪಣೆ ಕೊಡಿಸಿದಂತೆ ಎಲ್ಲಾ ಹೇಳೋಣವಂತೆ!"

ವಿಶಾಲಿ ಮತ್ತೊಂದು ಶರಸಂಧಾನ ಮಾಡಿದಳು.

"ಇನ್ನು ನಿಮ್ಮ ಪರಿಚಯು ಈ ರಾಯರಿಗೆ ಸ್ವಲ್ಪ ಮಾಡಿಕೊಡ ಲೇನು!" ತಾರಿಣಿಯು ಕಡೆ ಕೊಂಕಿಸಿ ನುಡಿದಳು. ವಿಶಾಲಿ ಮಾಡಿ ಕೊಟ್ಟ ಪರಿಚಯುದ ರೀತಿ ತಾರಿಣಿಗೆ ತೀರಾ ಹೊಸದು. ಆಕೆ ವಿಶಾಲಿ ಯಿಂದ ಮಾತೆಲ್ಲವನ್ನೂ ಕೇಳುತ್ತಾ ದಂಗು ಬಡಿದು ನಿಂತಿದ್ದಳು. ಆದರೂ ವಿಶಾಲಿಯೊಡನೆ ಈ ಮೊದಲೇ ನಾಲ್ಕಾರು ಘಂಟೆ ಕಳೆದಿದ್ದುದರಿಂದ ಅವಳ ಸ್ವಭಾವದ ಪರಿಚಯು ಸ್ವಲ್ಪ ಮಟ್ಟಿಗೆ ಆಗಿದ್ದಿತು. ತನ್ನ ಗೆಳತಿ ಹೇಳಿದುದು ಕುಚೇಷ್ಟೆಗಾಗಿ ಎಂದು ಅವಳಿಗೆ ಗೊತ್ತಾಗಿತ್ತು. ಆದರೂ ಏನೂ ತಿಳಿಯದವಳಂತೆ ಒಮ್ಮೊಮ್ಮೆ ನನ್ನ ಕಡೆ ದೃಷ್ಟಿ ಬೀರುತ್ತಿದ್ದಳು. ಬಹುಶಃ ಅವಳಿಲ್ಲಾ ಪ್ರವಚನದಿಂದ ನನ್ನ ಮೇಲೆ ಆಗುವ ಮಾರ್ಪಾ ಡನ್ನು ಕಾಣಲೆಂದೋ ಏನೋ!

"ಹೂ........ಸಾಗಲಿ....ಒಪ್ಪಿಗೆಯುಂಟು ನನ್ನ ಕಡತ ಬಿಚ್ಚಲು." ಪರಿಸ್ಥಿತಿಗೆ ತಕ್ಕಂತೆ ತಾರಿಣಿ ಎಂದಳು.

ಈಗ ವಿಶಾಲಿಯು ಗಂಭೀರವಾಣಿಯಿಂದ ಹೇಳಿದ್ದಳು. "ಈಕೆಯ ನಾಮಧೇಯ—ಶ್ರೀಮತಿ ತಾರಿಣಿದೇವಿಯೋ— ತಾರಿಣಿ ಬಾಯಿಯೋ– ಆ ಸಂಗತಿ ನನಗೆ ತಿಳಿಯದು. ಆದರೂ ನಾನು ಕರೆಯುವುದೇನೊ ತಾರಿಣಿ ಎಂದು. ಇಲ್ಲಿಯೇ VI Form ನಲ್ಲಿ ಓದುತ್ತಿದ್ದಾಳೆ. ಇವಳು ಕನ್ನಡತಿ—ಮನೆ ಮಾತು ಕನ್ನಡ. ಹಿಂದೆ ಮೈಸೂರು ಸೀಮೆ ಬಿಟ್ಟು ಬಂದು ಇಲ್ಲಿ ನೆಲಸಿದವರು. ನನ್ನ ಹಾಗೆಯೇ ಕಥೆ ಪುಸ್ತಕಗಳನ್ನು ಕಂಡರೆ ಹುಚ್ಚು. ಹಾಗೆಯೇ ನಾಲ್ಕಾರು ಕಥೆ ಕವನಗಳನ್ನು ಬರೆಯುವ ಚಟ ಬೇರೆ ಇದೆ. ಇನ್ನೇನಿದೆ ಹೆಚ್ಚಿಗೆ ಹೇಳಲು" ಎಂದು ತಾರಿಣಿಯು ಕಡೆ ನೋಡಿ ನುಡಿದಳು.

"ಒಂದುಂಟು" ಥಟಕ್ಕನೆ ತಾರಿಣಿ ನುಡಿದಳು.

"ಅದೇನು?"

"ಅಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಕುಳಿತಾಯಿತು. ನಾವು ಹೋಗಲು ಹೊತ್ತಾಯಿತೆಂಬುದನ್ನು ಗಮನಕ್ಕೆ ತರುವುದು!"

ಮೂವರೂ ನಕ್ಕೆವು.

"ಹೂಂ, ವಿಶಾಲಿಯೊಂದಿಗೆ ಮಾತಿಗೆ ನಿಂತರೆ ಕೊನೆ ಮೊದಲೇ ಇಲ್ಲ. ಇಲ್ಲೇ ಮಾತಿನಲ್ಲಿ ಮಗ್ನರಾಗಿ ಸಮ್ಮೇಳನ ತಪ್ಪಿಸಿಕೊಂಡೇವು!" ನಾನೆಂದೆ.

ಮೂವರೂ ಸಮ್ಮೇಳನದ ಸಭಾಂಗಣದ ಕಡೆ ಕಾಲು ಹಾಕಿದೆವು.

ನಾವು ಹೋಗುವ ಹೊತ್ತಿಗೆ ಸಮ್ಮೇಳನದ ಕಾರ್ಯಕ್ರಮ ಇನ್ನೂ ಶುರುವಾಗಿರಲಿಲ್ಲ. ನಾವು ಹೋದ ಹತ್ತಾರು ನಿಮಿಷಗಳ ಮೇಲೇ ಮೊದಲಾದುದು ಅಂದಿನ ಮೊದಲ ಕಾರ್ಯಕ್ರಮ.—ಅಧ್ಯಕ್ಷರಿಗೆ ಸ್ವಾಗತ ಬಯಸುವುದು. ಈ ಕಾರ್ಯಭಾರವನ್ನು ಸ್ವಯಂ ಸೇವಕಿಯೊಬ್ಬಳಿಗೆ ನಿರ್ವಹಿಸಿದ್ದರು. ಆಕೆಯಾದ ಮೇಲೆ ಮತ್ತೊಬ್ಬ ಸ್ವಯಂ ಸೇವಕಿಯು ಕನ್ನಡಮ್ಮನ ನಾಲ್ಕು ಗೀತೆ ಹಾಡಲು ಮೈಕಿನ ಮುಂದೆ ಬಂದು ನಿಂತಳು. ನೋಡುತ್ತೇನೆ! ಮೈಕಿನ ಮುಂದೆ ಗೀತೆಗಳನ್ನು ಹಾಡಲು ಬಂದವಳು ಯಾರೂ ಆಗಿರದೆ—ತಾರಿಣಿಯಾಗಿದ್ದಳು. ಇಷ್ಟು ಹೊತ್ತೂ ನಮ್ಮೊಡನೆ ಹರಟುತ್ತ ನಿಂತಿದ್ದ ತಾರಿಣಿಯಾಗಿದ್ದಳು. ಒಳ್ಳೇ ಘಾಟಿ ಹುಡುಗಿ! ಎಷ್ಟಾದರೂ! ನಮಗೆ ಈ ಮೊದಲೇ ಹೇಳಬೇಡವೇ ಇಂದು ತನ್ನದೊಂದು ಕಾರ್ಯಕ್ರಮವುಂಟೆಂದು" ಎಂದುಕೊಂಡೆ ಮನಸ್ಸಿನಲ್ಲಿ. ತಾರಿಣಿಯು ಮೊದಲು 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಗೀತೆಯನ್ನು ಹೇಳಿದಳು. ಈ ವೇಳೆಗೆ ಸಭೆ ಸೂಜಿ ಬಿದ್ದರೂ ಕೇಳಿಸದಷ್ಟು ನಿಶ್ಯಬ್ದವಾಗಿತ್ತು.

ತಾರಿಣಿ ಹೆಚ್ಚಿನ ಹಾವಭಾವವಿಲ್ಲದೆ ಗಂಭೀರವಾಗಿ "ಪುಟ್ಟಪ್ಪನವರ, ಬೇಂದ್ರೆಯವರ ನಾಲ್ಕು ದೇಶಪ್ರೇಮದ, ನುಡಿ ಭಕ್ತಿಯ ಗೀತೆಗಳನ್ನು ಹಾಡಿದಳು. ಮೊದಲೇ ಅವಳದು ಲಲಿತವಾದ ಕೋಕಿಲ ಕಂಠ;

ಇದರೊಂದಿಗೆ ಗೀತೆಯ ಸುಮಧುರ ಪದಸಂಚಾಲನ ಬೇರೆ! ಇವೆರಡೂ ಹದವಾಗಿ ಬೆರೆತು ಆ ಗೀತೆಗಳು ಯಾವುದೋ ಗಂಧರ್ವ ಲೋಕದಿಂದ ಕೇಳಿಬರುವ ಕಿನ್ನರಗೀತೆಗಳಾಗಿತ್ತು. ನನ್ನ ಮಟ್ಟಿಗೆ ಹೇಳುವುದಾದರೆ ಸಾಕ್ಷಾತ್ ಸರಸ್ವತಿಯೇ ಅಂದು ತಾರಿಣಿಯಲ್ಲಿ ವೈದೋರಿ ಸಭೆಗೆ ಬಂದಂತಿತ್ತು. ಅವಳ ಉಡಿಗೆತೊಡಿಗೆ ಕೂಡ ಚಿತ್ರದ ಸರಸ್ವತಿಯನ್ನೇ ನೆನಪು ತರುತ್ತಿತ್ತು. ಅವಳುಟ್ಟಿದ್ದ ಆ ಹಸುರು ಪತ್ತಲ ಚಿತ್ರದ ಸರಸ್ವತಿಯುದೇ........ಅವಳ ಕಂಠದಿಂದ ತಾನೇ ತಾನಾಗಿ ಕೇಳಿಬರುತ್ತಿದ್ದ ಆ ಗೀತೆ ಸರಸ್ವತಿಯ ವೀಣೆಯ ತಂತಿಯಿಂದ ಹೊರಹೊಮ್ಮುತ್ತಿದ್ದ ದಿವ್ಯ ಗಾನದಂತಿತ್ತು. ಹೆಚ್ಚೇನು ಹೇಳುವುದು! ನನ್ನ ಮಟ್ಟಿಗೆ ಆ ಗೀತೆ ಯಾವುದೋ ಗಂಧರ್ವಲೋಕದಲ್ಲಿನ ಅಪ್ಸರೆಯ ಸಾನ್ನಿಧ್ಯಕ್ಕೆ ಕೊಂಡೊಯ್ದಿತ್ತು. ಅವಳಿಂದ ಹೊರಸೂಸುತ್ತಿದ್ದ ಆ ಗಾನ ಧಾರೆಯಲ್ಲಿ ತಲ್ಲೀನನಾಗಿ ಮೈಮೇಲಿನ ಪರಿವೆ ಕಳೆದುಕೊಂಡಿದ್ದೆ.

ಹಾಡುವುದು ಮುಗಿದಾಗ, ತಾರಿಣಿಯು ರಂಗದಿಂದ ಕಣ್ಮರೆಯಾದಾಗ ಆ ಗಂಧರ್ವ ಲೋಕದಿಂದ ಒಮ್ಮೆಲೇ ಭೂಮಿಗೆ ಬಿದ್ದಂತಾಯಿತು. ಈಗ ರಂಗದಲ್ಲಿ ತಾರಿಣಿಗೆ ಬದಲಾಗಿ ಶ್ರೀಮಾನ್ ರಾಜಗೋಪಾಲಾಚಾರ್ಯರು ಕಣ್ಣಿಗೆ ಬಿದ್ದರು. ಅವರು ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಲು ಮೈಕಿನ ಮುಂದೆ ಬಂದಿದ್ದರು. ಸಭಾಂಗಣವೆಲ್ಲಾ ಕರತಾಡನದ ನಾದದಿಂದ ತುಂಬಿಹೋಗಿತ್ತು. ಆಚಾರ್ಯರು ಮಾತನಾಡಲು ಮೊದಲು ಮಾಡಿದರು. ಸಭೆ ಶಾಂತವಾಯಿತು. ಎಲ್ಲರ ದೃಷ್ಟಿ ಆಚಾರ್ಯರ ಕಡೆ ಹರಿದಿತ್ತು. ಕಿವಿ ಅವರ ಬಾಯಿಂದ ಏನು ಬರುವುದೆಂದು ಕೇಳಲು ನಿಮಿರಿ ನಿಂತವು. ರಾಜಾಜಿ ಯಾವ ಭಾಷೆಯಲ್ಲಿ ಮಾತನಾಡುತ್ತಾರೆ ಎಂದು ತಿಳಿಯಲು ಮನ ಉತ್ಸುಕವಾಯಿತು. ಆಚಾರ್ಯರು ಬಾಯಿಬಿಟ್ಟರು. “Doctor Rama Rao........” ಎಂದು ಭಾಷಣಕ್ಕೆ ಮೊದಲಿಟ್ಟರು. ಎಲ್ಲರೂ ಆಚಾರ್ಯರು ಇಂಗ್ಲಿಷಿನಲ್ಲಿ ಮಾತನಾಡುವರೆಂದು ಭಾವಿಸಿ ನಿರಾಶರಾದರು. “ಮತ್ತು ಶ್ರೀಯುತ

ಕೈಲಾಸಂಬವರೇ ಎಂದು ಕನ್ನಡದಲ್ಲಿ ಮುಂದುವರಿಸಿದಾಗ ಸಭಿಕರಿಗಾದ ಆಶ್ಚರ್ಯ ಸಂತೋಷ ಅಷ್ಟಿಷ್ಟಲ್ಲ. ರಾಜಾಜಿಗೆ ಕನ್ನಡ ಬರುತ್ತದೇನು! ಎಂದು ಮೂಗಿನ ಮೇಲೆ ಬೆರಳಿಟ್ಟು ಕುಳಿತರು ಜನ. ಆದರೆ ಆಚಾರ್ಯರಿಗೆ ಸ್ವಲ್ಪ ಮಟ್ಟಿಗೆ ಕನ್ನಡ ಬರುತ್ತಿತ್ತು. ಕನ್ನಡ ಸಾಹಿತ್ಯಸಮ್ಮೇಳನದಂತಹ ಸನ್ನಿವೇಶದಲ್ಲಿ ತಮಗೆ ಬರುವ ಅಲ್ಪ ಕನ್ನಡದಲ್ಲೇ ಮಾತನಾಡಲು ನಿರ್ಧರಿಸಿದ್ದರು. ತಮಗೆ ಕನ್ನಡ ಬರುವುದೇನು! ಎಂದು ಆಶ್ಚರ್ಯ ದಿಂದ ಕುಳಿತ ಜನವನ್ನು ಗೇಲಿ ಮಾಡಲು 'ನನಕೂ ಕನ್ನಡದಂ ವರದಿ' ಎಂದರು.

ರಾಜಾಜಿ ಉದ್ಘಾಟನ ಮಹೋತ್ಸವವನ್ನು ಕನ್ನಡದಲ್ಲಿ ಮಾಡಿದು ದಕ್ಕೆ ಸಭಿಕರು ಕರತಾಡನದ ಮೂಲಕ ತಮ್ಮ ಸಂತೋಷವನ್ನು ವ್ಯಕ್ತ ಪಡಿಸಿದರು. ಆಚಾರ್ಯರು ಕನ್ನಡಿಗನೂ ನಾಚುವಷ್ಟು ಸೊಗಸಾಗಿ ತಿಳಿ ಕನ್ನಡದಲ್ಲಿ ಮಾತನಾಡಿದ್ದರು. ಅವರು ಇಷ್ಟುಮಟ್ಟಿಗೆ ಭಾಷಣ ಮಾಡು ವರೆಂದು ಯಾರೂ ಊಹಿಸಿರಲಿಲ್ಲ. ಅವರಿಗೆ ಕೂಡ ತಾವು ಇಷ್ಟು ಚೆನ್ನಾಗಿ ಮಾತನಾಡಬಲ್ಲೆನೆಂದು ತಿಳಿದಿರಲಿಲ್ಲ. ಈಗ ಕನ್ನಡಿಗರ ಮುಂದೆ ಕನ್ನಡ ಭಾಷೆಯಲ್ಲೇ ಮಾತನಾಡಿ ಅವರ ಮೆಚ್ಚಿಗೆಯನ್ನು ಪುರಸ್ಕಾರವನ್ನೂ ಪಡೆದಿದ್ದರು. ಇದರಿಂದ ಅವರಿಗೆ ನಿಜವಾಗಿಯೂ ಸಂತೋಷವಾಯಿತು.

ಅವರು ತಮ್ಮ ಭಾಷಣವನ್ನು ಮುಗಿಸಿದ ಮೇಲೆ ಸ್ವಾಗತ ಸಮಿತಿಯ ಪರವಾಗಿ ಅದರ ಅಧ್ಯಕ್ಷರು ಶ್ರೀಯುತ ರಾಮರಾಯರು ಮಾತನಾಡಿದ್ದರು. ಅವರು ಮದರಾಸಿನಲ್ಲಿ ಹಿರಿಯ ಕನ್ನಡಿಗರು. ಅಲ್ಲಿನ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರು. ಅವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಸಮ್ಮೇಳನದ ಎಲ್ಲಾ ಕಾರ್ಯಭಾರವನ್ನು ಉತ್ತಮ ರೀತಿಯಲ್ಲಿ ಏರ್ಪಡಿಸಿದ್ದರು. ಆದರೂ ಅವರ ಈ ಎಲ್ಲಾ ಉತ್ಸಾಹ ದುಃಖಾಂತದಲ್ಲಿ ಕೊನೆಗೊಂಡಿತು. ಅವರಿಗೆ ಕನ್ನಡ ನುಡಿಯಮೇಲೆ ಅಪಾರ ಪ್ರೇಮ ವಿದ್ದರೂ ಆ ನುಡಿ ಅವರಿಗೆ ಸರಿಯಾಗಿ ಒಲಿದಿರಲಿಲ್ಲ. ಅವರು ಮಾತ

ನಾಡಲೆಂದು ಉತ್ಸಾಹದಿಂದಲೇನೋ ಮೈಕಿನ ಬಳಿ ಬಂದು ನಿಂತಿದ್ದರು. ಆದರೆ ನಾಲ್ಕು ಮಾತುಗಳನ್ನಾಡುವುದರೊಳಗೇ ಅವರಿಗೆ ಸಾಕುಸಾಕಾಗಿ ಹೋಯಿತು. ಹಾಗಾದುದು ಸಭಾಕಂಪನದಿಂದ ಅಲ್ಲ. ನ್ಯಾಯ ವಿಧಾಯಕ ಸಭೆಯ ಅಧ್ಯಕ್ಷರಿಗೆ ಸಭಾಕಂಪವೆಂದರೇನು? ಆದರೆ ಅವರಿಗಿದ್ದ ನುಡಿಜ್ಞಾನದಿಂದ ಹೀಗಾಗಿತ್ತು. ಭಾಷಣ ತಮ್ಮಿಂದ ಸಾಗದೆ ಹೋದುದನ್ನು ಕಂಡು ಕಣ್ಣಿಗೆ ಸುಲೋಚನ ಸಿಕ್ಕಿಸಿ ಅಚ್ಚಾದ ಭಾಷಣವನ್ನು ಓದತೊಡಗಿದರು. ಈ ಕಾರ್ಯದಲ್ಲಿಯೂ ಪಾಪ ಅವರು ವಿಫಲರಾಗಬೇಕೆ? ಅವರು ಭಾಷಣ ಮಾಡುವ ಮೊದಲೇ ಸಭಿಕರಿಗೆ ಅವರು ಮಾಡುವ ಭಾಷಣದ ಅಚ್ಚಿನ ಪ್ರತಿಯನ್ನು ಹಂಚಿದ್ದರು. ಅವರು ಅಚ್ಚಾದ ಭಾಷಣವನ್ನು ಓದತೊಡಗಿದ್ದಾಗ ಸಭಿಕರು ತಮ್ಮ ಪ್ರತಿಗಳಲ್ಲಿ ಅದನ್ನು ಅನುಸರಿಸುತ್ತಿದ್ದರು. ಯಾವಾಗ ಅವರು ಅಚ್ಚಿನ ಭಾಷಣವನ್ನು ತಪ್ಪು ತಪ್ಪಾಗಿ ಓದ ತೊಡಗಿದರೊ ಅವರ ಭಾಷಣವನ್ನೆ ಅನುಸರಿಸುತ್ತಿದ್ದ ಸಭಿಕರಿಗೆ ಕೂಡಲೇ ತಿಳಿದುಹೋಗಿ ಇಲ್ಲದ ಕುಚೋದ್ಯಕ್ಕೆ ಕಾರಣ ವಾಯಿತು. ಅವರ ಪರಿಸ್ಥಿತಿಯನ್ನು ಕಂಡ ಕನ್ನಡ ಬಲ್ಲವರೊಬ್ಬರು ಅವರ ನೆರವಿಗೆ ನಿಂತು ಅವರ ಭಾಷಣವನ್ನು ತಾನೇ ಓದಿ ಮುಗಿಸದೆ ಇದ್ದರೆ ಮತ್ತಾವ ದುರ್ಘಟನೆ ನಡೆಯುತ್ತಿತ್ತೊ!

ಅವರ ನಂತರ ಶ್ರೀ ಮಾಸ್ತಿಯವರು ನಾಲ್ಕು ಮಾತನಾಡಿ ಅಧ್ಯಕ್ಷರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟು ಭಾಷಣಮಾಡಲು ಅಧ್ಯಕ್ಷ ರನ್ನು ಕೇಳಿಕೊಂಡರು. ಶ್ರೀಯುತ ಕೈಲಾಸಂರವರು ತಮ್ಮ ಅಧ್ಯಕ್ಷ ಭಾಷಣ ಮೊದಲು ಮಾಡಿದರು. ಅವರು ನಾವು ರಬಕವಿ ಸಾಹಿತ್ಯ ಸಮ್ಮೇಳನದಲ್ಲಿ ಕಂಡಂತೆ ಅಚ್ಚಾದ ಭಾಷಣವನ್ನು ಮೊದಲಿಂದಲೂ ಕಡೆಯತನಕ ಓದಲಿಲ್ಲ. ಓದುವುದು ಏನು! ಅದರ ಸಹಾಯ ಒಂದಿಷ್ಟೂ ಅಪೇಕ್ಷಿಸಲಿಲ್ಲ. ಹಾಗೆಯೇ ಆಶುಭಾಷಣ ಮಾಡಿದರು.

ನಾನು ಕೈಲಾಸಂರವರ ಭಾಷಣವನ್ನು ಕೇಳಿದುದು ಅದೇ ಮೊದಲ ಬಾರಿ. ಅವರು ತಮ್ಮ ಗ್ರಂಥಗಳಲ್ಲಿ ಉಪಯೋಗಿಸಿದ ಭಾಷೆಯನ್ನು

ತಮ್ಮ ಭಾಷಣದಲ್ಲಿ ಉಪಯೋಗಿಸಿದರು. ಅದೇ ದಿನಬಳಕೆಯ ಭಾಷೆ. ಗ್ರಂಥಸ್ಥ ಭಾಷೆಗೆ ಬಹಳ ದೂರವಿದ್ದು ಸಾಂಪ್ರದಾಯಿಕ ಸಾಹಿತಿಗಳಿಂದ ನಿಷಿದ್ಧವೆಂದು ಪರಿಗಣಿಸಿದ್ದ ಆ ಭಾಷೆಯಲ್ಲಿಯೇ ಅಧ್ಯಕ್ಷ ಭಾಷಣವನ್ನು ಮಾಡಿದುದು ಒಂದು ಸಾಹಸದ ಮಾತೇ ಸರಿ.

ಅವರ ಭಾಷಣದಲ್ಲಿ ಆ ದಿನ ಬಳಕೆಯ ಭಾಷೆಯೊಡನೆ—ಅವರ ಗ್ರಂಥಗಳಲ್ಲಿ ಅಲ್ಲಿಂದಿಲ್ಲಿಗೂ ಕಾಣುವ ಬೇರೆ ಬೇರೆ ಭಾಷೆಗಳ ಲಾಸ್ಯ, ಮನೆಬಳಕೆ ಮಾತಿನ ಹಾಸ್ಯ ಕೂಡಿಯೇ ಹರಿದಿತ್ತು. ಅವರು ಅಚ್ಚಾದ ಭಾಷಣದ ಪ್ರತಿಯಲ್ಲಿ ಇಲ್ಲದ ಅದೆಷ್ಟೋ ಹೊಸ ಸಂಗತಿಗಳನ್ನು ಹೇಳಿದರು. ತಮ್ಮ ಬಾಲ್ಯದ ಅನೇಕ ಘಟನೆಗಳನ್ನು ತಿಳಿಸಿದರು. ಸಮಯೋಚಿತವಾದ ಹತ್ತಾರು ಕುಚೋದ್ಯದ ನುಡಿಗಳನ್ನು ಕೂಡ ಆಡಿದ್ದರು. ಒಮ್ಮೆ ಮುಂದೆ ಇದ್ದ ಮೈಕು ಕೆಲಸ ಮಾಡದೇ ನಿಂತು ಹೋದಾಗ ಅದನ್ನು ಈ ಮೈಕಾಸುರನೆಂದು ಕರೆದು ಟೀಕಿಸಿದ್ದರು! ಇಂತಹದೆಷ್ಟೋ ಸಮಯೋಚಿತ ಹಾಸ್ಯ ಅವರ ಆ ಆಶುಭಾಷಣದಲ್ಲಿ ಬಂದುಹೋದುದು!

ಇಷ್ಟು ಹೊತ್ತೂ ನಾಲ್ಕಾರು ಜನರ ಭಾಷಣಗಳನ್ನು ಕೇಳಿ ಕೇಳಿ ಮನಸ್ಸಿಗೆ ಒಂದು ತರಹದ ಬೇಸರಾಗಿತ್ತು. ಒಂದೆಡೆಯಲ್ಲೇ ಕುಳಿತು ಇತರರು ಸೇವಿಸಿ ಬಿಟ್ಟ ಗಾಳಿಯನ್ನು ಮೂರು ಗಂಟೆಗಳಕಾಲ ಸೇವಿಸಿದುದರಿಂದ ಒಂದು ತರಹ ಉಸಿರು ಕಟ್ಟಿದಹಾಗೆ ಆಗಿತ್ತು. ಎಂದಿಗೆ ಸಮ್ಮೇಳನ ಮುಗಿದೀತು! ಎಂದಿಗೆ ಈ ಭಾಷಣಗಳ ಕೊರತ ನಿಂತೀತು! ಎಂದು ಮನಸ್ಸು ಕಾತರಗೊಂಡಿತ್ತು. ಅಧ್ಯಕ್ಷರ ಭಾಷಣ ಹೆಚ್ಚು ದೀರ್ಘವಾಗಿರದೆ ಕೇವಲ ಒಂದೇ ಗಂಟೆಯಲ್ಲಿ ಮುಕ್ತಾಯವಾದುದರಿಂದ ಜೀವಕ್ಕೆ ಎಷ್ಟೋ ಹಾಯಾಗಿಸಿತು! ಭಾಷಣ ಎಷ್ಟು ಹಾಸ್ಯಮಯವಾಗಿದ್ದರೂ ಭಾಷಣಗಳೇ ತಾನೆ! ಹತ್ತಾರು ವಾಕ್ಯಗಳ ಜಲ್ಲಾಟ ತಾನೇ. ಸಮ್ಮೇಳನ ಮುಗಿದ ಕೂಡಲೇ ನೇರ ಹೊರಗಾಳಿಗೆ ಮುಖ ತಿರುವಿ ವಸತಿ ಗೃಹದ ಕಡೆ ಹೊರಟೆ—ಸಮ್ಮೇಳನದಲ್ಲೇ ಇದ್ದ ತಂಗಿ ವಿಶಾಲಿಗಾಗಿ ಕಾಯದೆ. ಅಷ್ಟು ಇಂಪಾಗಿ ಹಾಡಿದ ತಾರಿಣಿಗೆ ಮೆಚ್ಚಿಕೆಯನ್ನು ಕೂಡ ತೋರಿಸಲು ಮನಸ್ಸಿನ ಸ್ವಾಸ್ಥ್ಯತೆ ಉಳಿಯದೆ.

ರೂಮಿಗೆ ಬಂದವನೇ ಹಾಸಿಗೆ ಹರಡಿ ಕೂತು ಕೂತು ಜೋಮು ಹಿಡಿದಿದ್ದ ಕಾಲುಗಳನ್ನು ನೀಡಿ ಮಲಗಿದೆ.

ವಿಶಾಲಿ ಹತ್ತಾರು ನಿಮಿಷಗಳನ್ನು ಬಿಟ್ಟು ರೂಮಿಗೆ ಬಂದಳು. ಅವಳು ಬಂದವಳೇ "ಯಾವಾಗ ಬಂದಿಯಣ್ಣಾ ಇಲ್ಲಿಗೆ? ನಾನು ನಿನಗಾಗಿ ಅಲ್ಲಿ ಹುಡುಕಿದೆ; ಆದರೆ ನೀನು ಸಿಗಲಿಲ್ಲ. ಆಗಲೇ ಇಲ್ಲಿಗೆ ಬಂದು ಬಿಟ್ಟಿರುವೆ" ಎಂದಳು.

ನಾನು ಮಾತನಾಡದೆ ಅವಳ ಕಡೆಗೆ ನೋಡಿ ನಸುನಕ್ಕೆ.

ವಿಶಾಲಿ ಜಮಖಾನೆಯೊಂದರ ಮೇಲೆ ಕುಳಿತುಕೊಳ್ಳುತ್ತಾ "ಹೇಗಣ್ಣಾ ಇತ್ತು ಕೈಲಾಸಂರವರ ಭಾಷಣ!" ಎಂದು ಕೇಳಿದಳು. ನನಗೆ ಅದಾವ ಮಾತೂ ಬೇಕಿರಲಿಲ್ಲ. ಆದರೆ ವಿಶಾಲಿ ಬಿಟ್ಟರೆ ತಾನೆ!

"ಚೆನ್ನಾಗಿತ್ತು ವಿಶಾಲಿ—ಅವರ ಭಾಷಣ. ಅವರು ತಮಾಷೆಯಾಗಿ ನಕ್ಕು ನಗಿಸುತ್ತಾ ಭಾಷಣ ಮಾಡಿದರು. ಅವರ ಭಾಷಣ ಕೇಳಿದಾರಭ್ಯ ಅವರು ಮಾಡಿದುದು ಅಧ್ಯಕ್ಷ ಭಾಷಣ ಎಂದು ಖಂಡಿತ ನನ್ನ ತಲೆಗೆ ಹೋಗಲೊಲ್ಲದು. ಅಧ್ಯಕ್ಷ ಭಾಷಣಗಳ ಗಂಭೀರ ಇವರ ಭಾಷಣದಲ್ಲಿ ಸೊನ್ನೆ. ನಾವು ಹೋದ ವರ್ಷ ಹೋಗಿದ್ದೆವಲ್ಲಾ 'ರಬಕವಿ' ಸಾಹಿತ್ಯಸಮ್ಮೇಳನದಲ್ಲಿ ಅದೆಷ್ಟು ಗಂಭೀರ ವಾಣಿಯಲ್ಲಿ ಓದಿದರೇ. ಅವರ ಆ ಅಚ್ಚಿನ ಅಧ್ಯಕ್ಷ ಭಾಷಣಾನ. ಓದಿ ಮುಗಿಸಲು ಎರಡೂವರೆ ಘಂಟೆ ತೆಗೆದುಕೊಂಡರಲ್ಲಾ! ಆದರೆ ಈತ ಅಧ್ಯಕ್ಷ ಭಾಷಣದ ಅಚ್ಚಿನ ಪ್ರತಿಯನ್ನು ಒಮ್ಮೆಯೂ ಇಣಿಕಿ ಕೂಡ ನೋಡದೆ ಕೇವಲ ಮುಕ್ಕಾಲು ಗಂಟೆಯಲ್ಲಿ ಭಾಷಣಾನ ಮುಗಿಸಿಬಿಟ್ಟರು!" ನಾನು ಈ ಮಾತು ಹೇಳುತ್ತಿರುವಾಗ್ಗೆ ತಾರಿಣಿಯು ಬಾಗಿಲಲ್ಲಿ ಕಾಣಿಸಿಕೊಂಡಳು. ನಾನು ಹಾಸಿಗೆಯ ಮೇಲೆ ಕಾಲು ಚಾಚಿ ಮಲಗಿದ್ದುದರಿಂದ ನೇರ ರೂಮಿನ ಒಳಗೆ ನುಗ್ಗಲಿಲ್ಲ. ಎಷ್ಟಾದರೂ ಹೆಂಗಸಲ್ಲವೆ ಅವಳು! ತಾರಿಣಿಯು ಬಾಗಿಲ ಬಳಿಯಲ್ಲೇ ಇರುವುದನ್ನು ಕಂಡು ವಿಶಾಲಿ ಅವಳನ್ನು ಒಳಗೆ ಬರಲು ಕೇಳಿಕೊಂಡಳು. ನಾನು ಹಾಸಿಗೆಯನ್ನು ಬಿಟ್ಟೆದ್ದು ಕುಳಿತು ತಾರಿಣಿಯು ಸಂಕೋಚವಿಲ್ಲದೆ ಪ್ರವೇಶಿಸಲು ಅನುವು ಮಾಡಿಕೊಟ್ಟೆ.

ತಾರಿಣಿ ಬಂದು ವಿಶಾಲಿಯ ಬಳಿಯಲ್ಲಿ ಕುಳಿತಳು. ಹಾಸಿದ್ದ ಜಮಖಾನೆಯ ಮೇಲೆ ಅವಳು ಕೂತು ಕ್ಷಣ ಆದ ಮೇಲೆ ವಿಶಾಲಿ ತಾರಿಣಿಯನ್ನು ಪ್ರಶ್ನಿಸಿದಳು. "ಹೇಗಿತ್ತು ತಾರಿಣಿ ಕೈಲಾಸಂರವರ ಭಾಷಣ ?"

ಸಂಕೋಚ ಲಜ್ಜೆ ಇಲ್ಲದೆ ಮಾತನಾಡಿದಳು ತಾರಿಣಿ. ಆಕೆ ಎಷ್ಟಾದರೂ ಸ್ತ್ರೀಸ್ವಯಂಸೇವಕಿ ತಾನೇ!

"ನಾನು ಅವರನ್ನು ಕಂಡುದೂ, ಕೇಳಿದುದೂ ಇದೇ ಮೊದಲು ಆದರೂ ಅವರ ಭಾಷಣಾನ ಕೇಳಿದ ಮೇಲೆ ಈ ಒಂದು ಭಾಷಣದಿಂದಲೇ ಆತನ ವಿಷಯವಾಗಿ ಎಷ್ಟೋ ಅಭಿಮಾನ ಉಂಟಾಗಿದೆ. ಆತನ ಗ್ರಂಥ ಗಳಲ್ಲಿ ಹಲವಾರು ವ್ಯಕ್ತಿಗಳ ಮೂಲಕ ಹೇಳಿಸಿದ್ದ ಭಾಷಣಗಳನ್ನು ಕೇಳಿ ಸಂತೋಷಗೊಂಡಿದ್ದ ನನಗೆ ಇಂದು ಆ ವ್ಯಕ್ತಿಯ ಬಾಯಿ ಯಿಂದಲೇ ಭಾಷಣ ಕೇಳುವ ಸುಯೋಗ ಒದಗಿ ಬಂದುದಕ್ಕಾಗಿ ನನಗೆಷ್ಟೋ ಹರ್ಷವಾಗುತ್ತಿದೆ. ಆತ ನಿಜವಾಗಿಯೂ ರತ್ನ ವಿಶಾಲಿ! ಕನ್ನಡ ಸಾಹಿತ್ಯಕ್ಕೇ ಒಂದು ಸಜೀವ ರತ್ನ!"

"ನೋಡು ತಾರಿಣಿ, ಆ ವ್ಯಕ್ತಿಯನ್ನು ಅಧ್ಯಕ್ಷಸ್ಥಾನದಲ್ಲಿ ಕೂಡಿಸಿ; ಹೀಗೆ ಭಾಷಣ ಮಾಡಿಸಬೇಕೆಂದು ಈ ಪರಿಷತ್ತಿನವರು ಕಳೆದ ವರ್ಷ ಬೇಕಾದಷ್ಟು ಪ್ರಯತ್ನ ನಡೆಸಿದರು. ಆದರೆ ವಿಫಲರಾದರು. ಇಂದು ಅವರೆಲ್ಲರ ಸತತ ಯತ್ನ ಸಫಲವಾಯಿತು. ಎಲ್ಲಾ ಒಂದು ನಾಲ್ಕು ನಿಮಿಷ ಮಾತನಾಡಲು ಕೂಡ ಒಪ್ಪದ ಮನುಷ್ಯ ಇಂದು ಮುಕ್ಕಾಲು ತಾಸಿನವರೆಗೆ ಭಾಷಣ ಮಾಡಿದ ವಿಷಯ ನನಗೆ ತುಂಬಾ ಆಶ್ಚರ್ಯ ವನ್ನು ಉಂಟುಮಾಡಿದೆ ತಾರಿಣಿ. ಅದು ಹೇಗೆ ಅಷ್ಟು ಹೊತ್ತು ಒಂದೆಡೆ ಕೂತಿದ್ದನೊ ಅದು ನಾ ಬೇರೆ ಕಾಣೆ!"

"ಅದೇಕೆ ವಿಶಾಲಿ ಅವರು ಆಗಾಗ್ಗೆ ಆಸನದಿಂದ ಎದ್ದು ಹೋಗು ತ್ತಿದ್ದುದು ?"

"ಅದೊ! ಅವರದೊಂದು ಕೆಟ್ಟ ಚಟದ ಫಲವಾಗಿ. ಅವರು

ವಿಪರೀತ ಸಿಗರೇಟುದೇವಿಯ ಭಕ್ತರು. ಒಂದು ಗಳಿಗೆ ಕೂಡ ಅವರ ಬಾಯಲ್ಲಿ ಹೊಗೆಬತ್ತಿ ಬಿಟ್ಟಿರದವರು. ಅದಿಲ್ಲದೆ ಒಂದು ನಿಮಿಷಕೂಡ ಅವರಿಗೆ ಕಾಲ ಬಾರದು! ಯಾವ ಒಂದು ಕೆಲಸ ಮಾಡಬೇಕೆಂದರೂ ಅದು ಇದ್ದೇ ಇರಬೇಕು. ಅದೇ ಅವರ ಸ್ಫೂರ್ತಿದಾಯಕ ಗೆಳೆಯನಂತೆ. ಇಂತಹ ಧೂಮಪಾನದೇವತೆಯ ಭಕ್ತ ಸಭೆಯಲ್ಲಿ ಸಿಗರೇಟು ಸೇದದೇ ಹೇಗೆ ಕುಳಿತಾನು ಹೇಳು. ಆದರೆ ಸಭೆಯಲ್ಲಿ ಹಾಗೆ ಸೇದುವುದು ಅನೀತಿಯೆಂದು ಆತನಿಗೆ ಗೊತ್ತು. ಹಾಗೆ ಸೇದಿ ಸಭಿಕರ ಮನೋಘಾತ ಮಾಡಲು ಆತನಿಗೆ ಬೇಕಿರಲಿಲ್ಲ; ಸಭಾ ಗೌರವ ಮುರಿಯುವುದು ಆತ ನಿಗೆ ಸೇರಲಿಲ್ಲ. ಆದುದರಿಂದಲೇ ಸಿಗರೇಟು ಸೇದಬೇಕೆಂದೆನಿಸಿದಾಗ ಲೆಲ್ಲಾ ತೆರೆಯ ಹಿಂದೆ ಹೋಗಿ ಸೇದಿ ಬರುತ್ತಿದ್ದರು. ಅದಕ್ಕಾಗಿಯೇ ಅವರು ಪದೇಪದೇ ಆಸನ ಬಿಟ್ಟೆದ್ದು ಹೋಗುತ್ತಿದ್ದುದು!

"ಒಳ್ಳೆಯ ವಿಚಿತ್ರವ್ಯಕ್ತಿ ಕಣೇ ವಿಶಾಲಿ."

"ವಿಚಿತ್ರ ವ್ಯಕ್ತಿ! ಹೂಂ........ಎಲ್ಲದರಲ್ಲೂ ವಿಚಿತ್ರ. ನಡೆ, ನೀತಿ, ಉಡುಗೆ, ತೊಡುಗೆ, ಎಲ್ಲದರಲ್ಲಿಯೂ ವಿಚಿತ್ರವ್ಯಕ್ತಿ. ಎಲ್ಲದರಲ್ಲಿಯೂ ತನ್ನದೇ ಆದ ಒಂದು ಹೊಸತನ. ಯಾವ ಸಂಪ್ರದಾಯಕ್ಕೂ ಕಟ್ಟು ಬೀಳುವವರಲ್ಲ. ನೋಡು ತಾರಿಣಿ! ಸಾಹಿತ್ಯಸಮ್ಮೇಳನಗಳಲ್ಲಿ ಅಧ್ಯಕ್ಷ ಗದ್ದುಗೆಯಿಂದ ಉದ್ದುದ್ದನೆಯ, ಅಚ್ಚಿನಲ್ಲಿ ನೂರಾರು ಪುಟ ಓಡುವ ಭಾಷಣಗಳನ್ನು ಮೊದಲಿನಿಂದಲೂ ಕಡೆತನಕ 'ಎತ್ತು ಉಚ್ಚೆ' ಹೊಯ್ಯುವ ಹಾಗೆ ಓದಿ ಮುಗಿಸುವುದು ಮೊದಲಿನಿಂದಲೂ ನಡೆದುಕೊಂಡು ಬಂದ ಒಂದು ಸಂಪ್ರದಾಯ! ಅದರೆ ಈ ಮಹಾಪುರುಷ ಮಾಡಿದುದೇನು! ತದ್ವಿರುದ್ಧ. ಈ ಒಂದು ಸಂಪ್ರದಾಯದ ಸೋಗು ಕಿತ್ತು ಎಸೆದುಬಿಟ್ಟ. ಇಲ್ಲಿಯೂ ತನ್ನದೇ ಆದ ಒಂದು ಹೊಸತನ ನೆಟ್ಟ. ಈತನ ಅಚ್ಚಾದ ಭಾಷಣ ಇದುವರೆಗೆ ಸಾಹಿತ್ಯಸಮ್ಮೇಳನದಲ್ಲಿ ಮಾಡಿದ ಎಲ್ಲಾ ಭಾಷಣ ಗಳಿಗಿಂತ ಚಿಕ್ಕದೆಂದರೆ ಅತಿ ಚಿಕ್ಕದು. ಈ ಚಿಕ್ಕ ಭಾಷಣವನ್ನು ಕೂಡ ಇನ್ನೂ ಪುಟ್ಟದು ಮಾಡಿದ ಈತ, ಬಾಯಿಭಾಷಣದಲ್ಲಿ........"

ಒಂದು ಕ್ಷಣ ಸುಮ್ಮನಿದ್ದು ಮತ್ತೆ ಸ್ಫೂರ್ತಿ ಹೊಂದಿ ಮಾತು ಮುಂದುವರಿಸಿದಳು ವಿಶಾಲಿ. ನಾನು ಚಾಮುಂಡೀಬೆಟ್ಟದ ಮೇಲಿನ ಬಸವನ ಹಾಗೆ ಕೇಳುತ್ತ ಕುಳಿತೆ.

"…… ನನಗೆ ಕಂಡ ಇನ್ನೊಂದು ವಿಚಿತ್ರವೆಂದರೆ ಅವರ ಗ್ರಂಥಗಳಲ್ಲಿ ಬಂದುಹೋಗುವ ಪಾತು, ಸಾತು, ಕಿಟ್ಟಿಗಳು ಇಲ್ಲಿಯೂ ಅವರ ಭಾಷಣದಲ್ಲಿ ಬಂದುಹೋದರು. ಕೈಲಾಸಂರವರ ಮಾನಸಪುತ್ರರಾದ ಆ ಸಾತು, ಪಾತು, ಕಿಟ್ಟಿಯರಿಗೆ ಅವರ ಅಚ್ಚಿನ ಭಾಷಣದಲ್ಲಿ ಸ್ಥಾನವಿರಲಿಲ್ಲ. ಆದರೆ ಆತನ ಆಶು ಭಾಷಣದಲ್ಲಿ ಅಚ್ಚಿನ ಭಾಷಣದಲ್ಲಿ ದೊರೆಯದಿದ್ದ ಆ ಸ್ಥಾನಗಳನ್ನು ಗಳಿಸಿಕೊಂಡರು. ಅಲ್ಲಾ ಈ ಪಾತು ಕಿಟ್ಟಿಗಳ ವಿಷಯ ನಿಜವಾಗಿಯೂ ಆಶ್ಚರ್ಯವಾದುದು. ಏನು ಈ ಕೈಲಾಸಂಗೆ ಅವರನ್ನು ಬಿಟ್ಟು ಬೇರೆ ಜಗತ್ತೇ ಇಲ್ಲವೋ ಏನೋ……..ಯಾವಾಗಲೂ ಅವರ ಕೃತಿಗಳಲ್ಲಿನ ಪಾತ್ರಗಳೇ ಸದಾ ಕಣ್ಣಮುಂದೆ ಹಾದುಹೋಗುತ್ತಿರಬೇಕೆಂದು ಕಾಣುತ್ತದೆ ಈತನಿಗೆ……..

"……..ಎಂತಹ ವಿಚಿತ್ರ. ಅಲ್ಲಾ ತಾರಿಣಿ……..ಈತನು ಬಾಯಲ್ಲಿ ಮಾಡಿದ ಭಾಷಣವೇ ಒಂದು, ಅಚ್ಚಾದ ಭಾಷಣವೇ ಒಂದು. ಈತನ ಬಾಯಲ್ಲಿ ಬಂದ ವಿಷಯಗಳಿಗಾಗಿ ಯಾರೊಬ್ಬರೂ ಅಚ್ಚಾದ ಪ್ರತಿ ಅರಸಹೋಗಿ ಬೆಪ್ಪರಾಗುವವರೇ! ಅದೆಷ್ಟು ಅಂತರ, ವ್ಯತ್ಯಾಸ ಕಾಣಬರುತ್ತದೆ ಈ ಎರಡು ಭಾಷಣಗಳಿಗೆ."

ಮಾತು ಮುಗಿಸಿ ವಿಶಾಲಿ ಸುಮ್ಮನೆ ಕುಳಿತಳು. "ಹೌದು ವಿಶಾಲಿ! ನನಗೂ ಕೂಡ ಅವರ ಭಾಷಣ ಕೇಳಿ ಹಾಗೆ ಎನಿಸದಿರಲಿಲ್ಲ…. ಇದರ ಜತೆಗೆ ಇನ್ನು ಒಂದು ಸಂಶಯ ಬೇರೆ ತಲೆಯಲ್ಲಿ ಕಾಡುತ್ತಿದೆ. ನೀನೇನೂ ತಿಳಿಯಬೇಡ……..ನಿಜವಾಗಿಯೂ ಅಚ್ಚಾದ ಭಾಷಣಾನ ಈ ವಿಚಿತ್ರವ್ಯಕ್ತಿಯೇ ಬರೆದುದೆ? ಎಂತ ನನಗೆ ಅದನ್ನು ನೋಡಿದಾಗಿನಿಂದಲೂ ಅನಿಸುತ್ತದೆ. ನಿನಗೆ ಹೇಗೆ ಅನಿಸುತ್ತದೆ ವಿಶಾಲಿ."

"ಅದೋ…….ಹೂಂ. ನನಗೂ ಅವರ ಆ ಭಾಷಣದ ಪ್ರತಿನುಡಿದಾಗ ಈ ಸಂಶಯವಾಗದೇ ಇರಲಿಲ್ಲ. ಅವರ ಯಾವ ಪುಸ್ತಕಗಳಲ್ಲಿ

ಒಂದು ನಾಲ್ಕು ಸಾಲು ಗ್ರಂಥಸ್ಥ ಭಾಷೆಯನ್ನು ಬರೆಯದಿರುವ ಈತ........ ಈ ಎಂಟು-ಹತ್ತು ಪುಟಗಳಷ್ಟು ಬರಹವನ್ನು ಅದು ಹೇಗೆ ಬರೆದಾ! ಎಂದು ಅನಿಸದೆ ಇರಲಿಲ್ಲ. ಆದರೆ ಈ ವಿಷಯವಾಗಿ ಕೈಲಾಸಂರವರನ್ನು ಚೆನ್ನಾಗಿ ಬಲ್ಲ ಒಬ್ಬಾಕೆ ಹೇಳಿದಮೇಲೆ ನನ್ನ ಸಂಶಯ ಪರಿಹಾರವಾಯಿತು. ಆಕೆ ಹೇಳಿದಳು—ಕೈಲಾಸಂರವರು ಇತ್ತ ಸೂಚನೆ, ಸಂಗತಿಗಳನ್ನು ಬಳಸಿಕೊಂಡು ಅವರಿಗಾಗಿ ಅವರ ಅಂತರಂಗದ ಗೆಳೆಯರೊಬ್ಬರು ಬರೆದುಕೊಟ್ಟರಂತೆ! ಇದು ಅವರ ಕಥೆ: ಇದನ್ನು ಕೇಳಿ ನಿಜ ಇದ್ದೀತು ಎಂದುಕೊಂಡೆ."

ತಾರಿಣಿಯು ಕೂಡ ಅದನ್ನು ಕೇಳಿ,

"ಇದ್ದೀತು, ನಿಜವಿದ್ದೀತು!" ಎಂದು ತನ್ನಲ್ಲಿ ತಾನೇ ಅಂದುಕೊಂಡಳು. ತನ್ನಲ್ಲೇ ತಾನು ಅಂದುಕೊಂಡ ಈ ಮಾತು ನನ್ನ ಕಿವಿಗೆ ಬೀಳದೆ ಇರಲಿಲ್ಲ. ಯಾರೊಬ್ಬರೂ ಮಾತನಾಡದೇ ಕುಳಿತರು. ವಿಶಾಲಿ ಇನ್ನೂ ಆ ವಿಚಿತ್ರ ವ್ಯಕ್ತಿಯ ವಿಚಿತ್ರ ನಡವಳಿಕೆಯ ವಿಷಯವಾಗಿ ಚಿಂತಿಸುತ್ತಿದ್ದಿರಬೇಕೆಂದೆನಿಸಿತು. ಆದರೆ ತಾರಿಣಿ, ವಿಶಾಲಿ ಚಿಂತಿಸುತ್ತಾ ಕುಳಿತಿರುವುದು ಯಾವ ವಿಷಯವಾಗಿ ಎಂದು ಯೋಚಿಸುತ್ತಾ ಕುಳಿತಂತೆ ತೋರಿತು. ಇನ್ನು ನನಗೋ........ಈವರೆಗೆ ಮಾತಿಲ್ಲದೆ ಕುಳಿತು ಸಾಕಾಗಿತ್ತು. ಈವರೆಗೆ ಅವರಾಡುತ್ತಿದ್ದ ಮಾತುಗಳನ್ನು ಕೇಳುತ್ತಾ ಕುಳಿತಿದ್ದೆ. ಅವರ ಸಂಭಾಷಣೆಯಲ್ಲಿ ನನಗೆಲ್ಲಿಯ ಪ್ರವೇಶ. ಅವರ ಸಂಭಾಷಣೆಯಲ್ಲಿ ಭಾಗವಹಿಸಲು ನನಗಾವ ಅರ್ಹತೆ ಉಂಟು. ಕೈಲಾಸಂರವರ ವಿಷಯ ಏನಾದರೂ ತಿಳಿದಿದ್ದರೆ ಅವರ ಮಾತುಕತೆಗಳಲ್ಲಿ ನಾನೂ ಪ್ರವೇಶಿಸಿ ಹರಟಬಹುದಾಗಿತ್ತು. ಆದರೆ ಅವರ ಬಗ್ಗೆ ನಾನು ತಿಳಿದೆಲ್ಲಾ ವಿಷಯವೆಂದರೆ ಹಿಂದೆ ಎಂದೋ ಓದಿದ್ದ ಅವರ ಕೆಲವು ನಾಟಕಗಳು, ರೈಲಿನಲ್ಲಿ ಕೇಳಿದ್ದು, ಈಗ ಇವರಿಬ್ಬರ ಬಾಯಿನಿಂದ ತಿಳಿದುಬಂದ ಸಂಗತಿಗಳಷ್ಟೇ. ಆದುದರಿಂದ ನಾನು ಮಾತಾಡದೇ ಕುಳಿತಿದ್ದೆ. ಹೀಗೆ ಕುಳಿತು ಬಾಯಿ ಕಟ್ಟಿ ಸಾಕಾಯಿತು. ಏನಾದರೂ ಹೇಳೋಣ—ಮಾತನಾಡೋಣವೆನಿ

ಸಿತು. ಆದರೆ ಹೇಳುವುದೇನನ್ನು? ಹೇಳುವುದಿದ್ದರೆ ಏನಾದರೂ ಹೊಸ ಸಂಗತಿ ಇರಬೇಕು. ಇಲ್ಲದೆ ಯಾವುದಾದರೊಂದು ಹಳಸಿದ ಸುದ್ದಿ ಎತ್ತಿದರೆ, ನನಗೆ ಗೊತ್ತಿದೆ ಈ ಮೊದಲೆ ಎಂದು ಬಾಯಿಬಡಿಯದಿರುವಳೇ ವಿಶಾಲಿ.

ಯಾವುದನ್ನಾದರೂ ಮಾತನಾಡಲೇಬೇಕೆನಿಸಿತು. ಈ ಬಾಯಿ ಚಪಲವನ್ನು ಯಾವ ಸಂಗತಿಯನ್ನು ಹೇಳಿ ತೀರಿಸಲಿ? ಹೌದು ಮರೆತಿದ್ದೆ. ಮಾತಿಗಾಗಿ ವಿಷಯ ಒಂದು ನನಗಾಗಿ ಕಾದು ಕುಳಿತಿದ್ದರೂ ನಾನು ಸುಧಾಮನಾಗಿದ್ದೆ. ಅದೂ........ಅದೇ ತಾರಿಣಿಯ ಸಂಗತಿ. ಅವಳು ಬೆಳಗ್ಗೆ ಹಾಡಿದ ಆ ಗೀತೆಗಳ ಸಂಗತಿ. ಆಕೆಗೆ ನನ್ನ ಮೆಚ್ಚಿಕೆಯನ್ನು ತೋರಿಸಬೇಕೆಂದಿದ್ದೆ. ಆದರೆ ಭಾಷಣಗಳಿಂದಾದ ಕರೆಕರೆಯಲ್ಲಿ ಆ ಕಾರ್ಯ ಮಾಡಲು ಮನಸ್ಸಿರಲಿಲ್ಲ. ಅದೇ ಕಾರ್ಯ ಈಗ ಮಾಡಬಹುದಲ್ಲಾ. ಹೂಂ....ಮಾಡಬಹುದು........

"ಇಂದು ನೀವು ಸ್ವಾಗತಗೀತೆಗಳನ್ನು ಬಹಳ ಚೆನ್ನಾಗಿ ಹಾಡಿದಿರಿ" ಎಂದು ಬಾಯಿಬಿಟ್ಟೆ. ಕವಿದಿದ್ದ ಮೌನ ಒಡೆದು ಯಾವುದೋ ವಿಷಯಗಳಲ್ಲಿ ಮೈಮರೆತಿದ್ದ ಇಬ್ಬರೂ ಹಾಂ........ಎಂದುಕೊಂಡು ಎಚ್ಚತ್ತರು.

"ಏನೂ ಇಲ್ಲ. ಇಂದು ನೀವು ಬಹಳ ಚೆನ್ನಾಗಿ ಹಾಡಿದಿರಿ ಗೀತೆಗಳನ್ನು" ಎಂದೆ ತಾರಿಣಿಯ ಕಡೆ ನೋಡುತ್ತಾ. ತಾರಿಣಿ ನನ್ನ ಮಾತು ಕೇಳಿ ನಾಚಿದಳು. ಎಲ್ಲಿಯೋ ಬಚ್ಚಿಟ್ಟುಕೊಂಡಿದ್ದ ಲಜ್ಜೆಯು ಈಗ ತಾರಿಣಿಯಲ್ಲಿ ಮನೆಮಾಡಿಕೊಂಡಿತು. ಎಷ್ಟಾದರೂ ತಾರಿಣಿ ಹೆಣ್ಣು! ಸಹಜವಾಗಿಯೇ ನಾಚುತ್ತಾ ನುಡಿದಳು—

"ನಾನು ಹಾಡಿದುದು ನಿಮ್ಮ ಮನಸ್ಸಿಗೆ ಬಂದಿತೇ?"

"ತುಂಬಾ ಬಂತು. ಅದನ್ನು ಕೇಳುತ್ತಾ ನನ್ನನ್ನು ನಾನೇ ಮರೆತುಬಿಟ್ಟೆ." ನನ್ನ ಮಾತು ಆಕೆಯನ್ನು ಇನ್ನೂ ಅಧೀರಗೊಳಿಸಿತು. ತಾರಿಣಿ ಏನೂ ಮಾತಾಡಲಿಲ್ಲ.

"ಹೌದು, ಅಣ್ಣನೆಂದಂತೆ ನೀನು ಇಂದು ಕವನಗಳನ್ನು ಮೋಹಕ ವಾಗಿ ಹಾಡಿದೆ"

ವಿಶಾಲಿ ನನ್ನೊಡನೆ ಮಾತು ಕೂಡಿಸಿದಳು.

"ನಿಮ್ಮ ಮನಸ್ಸಿಗೆ ನನ್ನ ಬಡಗೀತೆ ಹಿಡಿಯಿತೆ? ಹಾಗಾದರೆ ನಾನು ಧನ್ಯೆ." ಈಸಲ ಧೈರ್ಯವಾಗಿ ನುಡಿದಳು.

"ನಮಗೇ ಏಕೆ? ಅಲ್ಲಿದ್ದವರೆಲ್ಲಾ ಮೆಚ್ಚಿದರೆಂದಮೇಲೆ ನಾವು ಮೆಚ್ಚಿದುದರಲ್ಲಿ ಏನಾಶ್ಚರ್ಯ?"

"ಅದು ನಿಮ್ಮ ಹಿರಿಯಗುಣ."

"ಸಂಗೀತ ಮನೆಯಲ್ಲಿ ಹೇಳಿಸಿಕೊಳ್ಳುತ್ತಿರುವಿರಾ?" ನಾನೆಂದೆ.

"ಹೂಂ......ಈ ಎರಡು ವರ್ಷಗಳಿಂದ ವೀಣೆ ಪಾಠ ಹೇಳಿಸಿ ಕೊಳ್ಳುತ್ತಿದ್ದೇನೆ."

"ಭೇಷ್! ಹಾಗಾದರೆ ನಿಮ್ಮ ಸಂಗೀತವನ್ನು ನಾನೊಮ್ಮೆ ಕೇಳ ಬಹುದೇ?"

"ಅವಶ್ಯಕವಾಗಿ, ನೀವು ಒಮ್ಮೆ ನಮ್ಮ ಮನೆಗೆ ಕೇಳಲು ಬರಲೇ ಬೇಕು."

"ಏನೇ ತಾರಿಣಿ, ಅವರೊಬ್ಬರನ್ನೇ ತಾನೆ ನೀನು ಕರೆಯುತ್ತಿರು ವುದು!" ವಿಶಾಲಿ ತನ್ನ ಚೋದ್ಯವೃತ್ತಿಯನ್ನು ಇಲ್ಲಿ ತೋರಗೊಡದೆ ಇರಲಿಲ್ಲ.

"ಇಲ್ಲವಮ್ಮಾ, ನಿನ್ನನ್ನು ಕೂಡ. ನಿನ್ನನ್ನು ಕರೆಯದೆ ಅವರೊ ಬ್ಬರನ್ನೇ ಕರೆದರೆ ನನಗೆಲ್ಲಿಯ ಉಳಿಗಾಲ?"

ಭೇಷ್! ಮಾತಿಗೆ ತಕ್ಕ ಬಿಸಿಮಾತು.

"ಹಾಗಾದರೆ ಎಂದು?"

"ಇಂದೇ ಆಗಲಿ"

"ಛೇ! ಉಂಟೇ. ಸಮ್ಮೇಳನ ಮುಗಿದ ಮೇಲೆ ಹೋಗೋಣ. ಏನು ಈಗಲೇ ಅವಸರ." ನಾನಂದೆ.

"ನಿಮ್ಮಿಷ್ಟ" ಮಾತು ಮುಗಿಸಿದಳು ತಾರಿಣಿ. ಅದೇಕೆ ಬಂದೇ ಬರಬೇಕೆಂದು ಕಡ್ಡಾಯ ಮಾಡಲಿಲ್ಲವೋ ನಾ ಕಾಣೆ. ಬಹುಶಃ ಸಮ್ಮೇಳನಕ್ಕಾಗಿ ಈ ಇನ್ನೂರು ಮೈಲಿಯಿಂದ ಬಂದವರಿಗೇಕೆ ಸಮ್ಮೇಳನ ತಪ್ಪಿಸಲಿ ಎಂದೊ. ಇಲ್ಲವೇ ಈ ಹಕ್ಕಿಗಳು ತನಗೆ ಸಿಕ್ಕದೆ ಮತ್ತೆಲ್ಲಿ ಹೋದಾವು ಎಂದು ತಿಳಿದೋ ಏನೊ. ಅಂತೂ ಆ ವಿಷಯದಲ್ಲಿ ನಮ್ಮನ್ನು ಬಲವಂತಪಡಿಸಲಿಲ್ಲ.

ಆಗಲೇ ಊಟದ ವೇಳೆಯಾಗಿತ್ತು. ಹೊಟ್ಟೆಗೆ ಬಿದ್ದ ತಿಂಡಿ ಈ ವೇಳೆಗೆ ಎಂದೋ ರಕ್ತಗತವಾಗಿತ್ತು. ಈ ಭಾಷಣಗಳನ್ನು ಕೇಳುವ ಅವಾಂತರದಲ್ಲಿ ಈಗತಾನೆ ಊಟದ ಚಿಂತೆ ಹತ್ತ ತೊಡಗಿತ್ತು.

"ಊಟ ಎಷ್ಟು ಹೊತ್ತಿಗೇ ತಾರಿಣಿ?" ವಿಶಾಲಿ ಎಂದಳು.

"ಈಗಲೇ ಸಾಲದೇನು ಹೊತ್ತು. ಹೂಂ. ಹೊರಡಲು ಕೈಕಾಲು ತೊಳೆದು ಬನ್ನಿರೇಳಿ."

೫

ಊಟ ಮುಗಿಸಿ ಹಸಿವನ್ನು ಹಿಂಗಿಸಿಯಾಗಿತ್ತು. ಹೊಟ್ಟೆಯ ಯೋಚನೆ ಕಳೆದಮೇಲೆ ಮುಂದೇನು? ಹಾಸಿಗೆ ಹಿಡಿದು ಮಲಗುವುದೆಂದು ಮನಸ್ಸು ಹೇಳಿತು. ಹೂಂ........ಅದೂ ಸರಿಯಾದ ಕೆಲಸ ಈ ಹೊತ್ತಿನಲ್ಲಿ ಮಾಡಲು. ನಿದ್ರೆಯ ಯೋಚನೆ ತುಂಬಿದ ಮೇಲೆ ಕೇಳುವುದೇನಿದೆ. ಹಾಸಿಗೆ ಉರುಳಿಸಿದೆ, ಮುಖದ ಮೇಲೆ ಮುಸುಕೆಳೆದು ಮಲಗಿದೆ.

ತಾರಿಣಿ ವಿಶಾಲಿಯರು ಊಟ ಮುಗಿಸಿ ಕೊಠಡಿಗೆ ಬಂದರು.

ನಾನು ಮುಸುಕು ಎಳೆದು ಮಲಗಿರುವುದನ್ನು ಕಂಡು ನಿದ್ರೆಹೋಗಿರುವೆನೆಂದುಕೊಂಡು ಬಾಗಿಲ ಬಳಿಯಲ್ಲೇ ನಿಂತು ಮಾತನಾಡಿಕೊಂಡರು. ಅದೇಕೆ ಒಳಗೆ ಬರಲಿಲ್ಲವೆಂದು ನಾನೇನೂ ಯೋಚಿಸಬೇಕಿರಲಿಲ್ಲ. ಕಾರಣಕ್ಕೆ ಕನ್ನಡಿಯಂತಿತ್ತು. ರೂಂನಲ್ಲಿ ಕೂತು ಹರಟೆ ಹೊಡೆದರೆ ನನ್ನ ನಿದ್ರೆಗೆ ಎಲ್ಲಿ ಭಂಗಬಂದು ಎಚ್ಚತ್ತುಬಿಡುವನೋ ಎಂದೇ ಅವರು ಕೊಠಡಿಯ ಹೊರಗಿನ ವರಾಂಡದಲ್ಲಿಯೇ ಉಳಿದುದು. ವಿಶಾಲಿ ಅನ್ನುತ್ತಿದ್ದಳು.

"ಇನ್ನೂ ಊಟ ಹೊಟ್ಟೆಯ ಒಳಗೇ ಇಳಿದಿಲ್ಲ, ಆಗಲೇ ಹಾಸಿಗೆ ಬಿಚ್ಚಿ ಮಲಗಿಬಿಟ್ಟಿದ್ದಾನೆ." ಎಂದು ಟೀಕಿಸುತ್ತಿದ್ದಳು, ನಾನು ನಿಜವಾಗಿಯೂ ನಿದ್ರೆ ಹೋಗಿರುವೆನೆಂದು ಭಾವಿಸಿ.

"ಪಾಪ ಬೆಳಗಿನ ಭಾಷಣಗಳನ್ನು ಕೇಳಿ ಆಯಾಸವಾಗಿರಬೇಕು." ಎಂದು ಶಾರಿಣಿ ನನ್ನ ಪರವಾಗಿ ವಾದಿಸಿದಳು.

"ಅದೆಂತಹ ಆಯಾಸ ನಮಗೆ ಆಗದಂತಹ ಅವನಿಗೆ ಆಗಿರುವುದು...... ಅಲ್ಲ ಮೂರು ತಾಸು ಕುಳಿತಿರುವುದೇ ಆಯಾಸವಾಗಿದ್ದರೆ ಇನ್ನು ಆಫೀಸಿನಲ್ಲಿ ತಾಸುಗಟ್ಟಲೆ ಒಂದೆಡೆಯೇ ಕುಳಿತಿರಬೇಕಲ್ಲಾ........ ಆಗ ಆಯಾಸವಾಗದೇನು! ಎಂದು ಬಾಣದ ಮೇಲೆ ಬಾಣ ಎಸೆಯುತ್ತಿದ್ದಳು. ನನಗೆ ಅವಳ ಮಾತು ಕೇಳಿ ಹಾಗೆ ಮಲಗಿರುವುದಾಗಲಿಲ್ಲ. ಎದ್ದು ಹೊದ್ದಿಕೆಯನ್ನು ದೂರ ಎಸೆದು—

"ನೋಡು ವಿಶಾಲಿ! ನಾನೇನು ನಿದ್ರೆ ಹೋಗುತ್ತಿರಲಿಲ್ಲ. ಸುಮ್ಮನೆ ಬೇಕಂತಲೇ ಹಾಗೆ ಮಲಗಿದ್ದೆ. ಅದನ್ನು ಕಂಡು ನಿದ್ರೆಹೋಗಿರುವೆನೆಂದುಕೊಂಡ ನೀನು, ಎಂತಹ ಪೆದ್ದು ನೋಡು!" ಎಂದು ಹೇಳಿ ವಿಶಾಲಿಯ ಮುಖಮುರಿಯಬೇಕೆನಿಸಿತು. ಆದರೆ....ಆಸೆ ಬಹಳ ಕೆಟ್ಟದ್ದು. ಈ ಹಾಳು ಮನಸ್ಸಿಗೆ ಅವರು ಆಡುವ ಮಾತನ್ನು ಕದ್ದು ಕೇಳುವ ಬಯಕೆಯಾಗಬೇಕೆ? ನನ್ನ ಬಗ್ಗೆ ಅವರು ಏನೇನು ಹರಟುವರೆಂದು ತಿಳಿಯುವ ಈ ಕೆಟ್ಟ ವಿದ್ಯೆ ಯಾವಾಗ ಕಲಿಯಿತೋ ಮನಸ್ಸು....

ಹಾಳು ಮನಸ್ಸೇ! ಎಂದು ಅದು ಹೋದ ದಾರಿಗೇ ನಾನೂ ಹೋಗ ಬೇಕಾಯಿತು! ಆ ಘಳಿಗೆಗೆ ಮನಸ್ಸಿನ ಮೇಲೆ ಅಧಿಕಾರ ನಡೆಸುವ ಸಾಮರ್ಥ್ಯ ಈ ದೇಹಕ್ಕೆ ಇರಲಿಲ್ಲ. ಅದರ ಮೇಲೆ ಅಧಿಕಾರ ನಡೆಸುವುದು ಒಂದೆಡೆ ಇರಲಿ, ಅದರ ದಾಸಾನುದಾಸನಾಗಬೇಕೇ? ಈ ದೇಹ ಜಡ ದೇಹ!............

"ಏನಮ್ಮ ನೀನೂ ನಿಮ್ಮ ಅಣ್ಣನಂತೆ ಮಲಗುವವಳೇನು!" ಇದು ತಾರಿಣಿಯ ಪ್ರಶ್ನೆ.

"ಛೆ! ಛೇ! ಅವನು ಹಾಗೆ ಮಲಗಿದರೆ ನಾನೇಕೆ ಮಲಗಲಿ. ನಾನು ಹಾಗೆ ಮಲಗಿದರೂ ನನಗೆ ಮಧ್ಯಾಹ್ನ ನಿದ್ರೆಯೇ ಬಾರದಮ್ಮಾ"

"ಹಾಗಾದರೇನು ಮಾಡುತ್ತೀ ಈಗ?"

"ಏನು ಮಾಡುವುದು. ಅದೇ ಆಗಲಿಂದ. ಯೋಚಿಸುತ್ತಿದ್ದೇನೆ. ಬಾ, ಅಲ್ಲಿ. ಆ ಕಟ್ಟಡದಲ್ಲಿ ಹತ್ತಾರು ಪುಸ್ತಕಭಂಡಾರಗಳವರು ತಮ್ಮ ಅಂಗಡಿಗಳನ್ನು ತೆರೆದಿದ್ದಾರೆ. ಅಲ್ಲಿಗೆ ಹೋಗಿ ಒಂದಿಷ್ಟು ಪುಸ್ತಕಗಳನ್ನು ನೋಡಿ ಬರೋಣ" ಎಂದಂದು ತಾರಿಣಿಯೊಡನೆ ವಿಶಾಲಿ ಹೊರಟೇ ಹೋದಳು. ಎಲೆ ಮನಸ್ಸೇ! ಅಂತೂ ಮೋಸಮಾಡಿಯೇ ಬಿಟ್ಟಿಯಲ್ಲ! ನೀನೇನೋ ಅವರು ನನ್ನ ಬಗ್ಗೆ ಮಾತನಾಡುವುದನ್ನು ಕೇಳ ಬೇಕೆಂದು ನನ್ನ ಹಿತವಾದವನ್ನು ಕೇಳಲಿಲ್ಲ. ಆದರೆ ಈಗ ನೀನು ಕೇಳಿದ ಸಂಗತಿಗಳಾದರೂ ಏನು? ಅಂತೂ ನನ್ನನ್ನು ಹೇಡಿಯನ್ನಾಗಿ ಮಾಡಿದೆಯಲ್ಲಾ! ವಿಶಾಲಿ ಅಂದುದೆಲ್ಲವನ್ನೂ ಕೇಳಿಕೊಂಡು ಸುಮ್ಮನೆ ಇರುವಂತೆ ಮಾಡಿದೆಯಲ್ಲಾ!........

ಈಗ ಎಷ್ಟು ಬೈದರೇನು ಪ್ರಯೋಜನ. ನಡೆದುದು ನಡೆದು ಹೋಯಿತು. ಇನ್ನು ಮುಂದೆ ಈ ಚಪಲದ ಕೆಟ್ಟ ದಾರಿ ಹಿಡಿಯದ ಹಾಗೆ ನೋಡಿಕೊಳ್ಳೋಣ ಎಂದುಕೊಂಡು........ಆ ಕೆಟ್ಟ ಭಾವನೆಗಳನ್ನು ಮನಸ್ಸಿನ ಹೊರಗೆ ಹಾಕಿ ಮಲಗಿದೆ........

ಆದರೆ ನಿದ್ರೆ ಹತ್ತಬೇಕಲ್ಲಾ. ನನಗೋ ಮಧ್ಯಾಹ್ನ ಮಲಗಿಯೇ

ರೊಫಿ ಇರಲಿಲ್ಲ. ಎಂದೂ ರೊಫಿ ಇಲ್ಲದ ನೋಲೆ ನಿದ್ರೆ ಹೇಗೆ ಬಂದೀತು.
ಹಾಸಿಗೆಯ ಮೇಲೆ ಹೊರಳಾಡುತ್ತಾ ಇದ್ದೆ. ಹೊರಗಿನ ಬಿಸಿಲಿನ ತಾಪ ಒಳಗೆ ಮಲಗಿದ್ದ ನನ್ನನ್ನು ದಹಿಸುತ್ತಿತ್ತು. ನಾಲ್ಕು ಗೋಡೆಗಳ ಮಧ್ಯೆ–ಮೇಲ್ಛಾವಣಿಯ ಅಡಿಯಲ್ಲಿ ಆಸರೆ ಹೊಂದಿದ್ದ ನನಗೇ ಆ ದಗೆ ಸಹಿಸಲು ಅಸಾಧ್ಯವೆಂದಮೇಲೆ ಹೊರಗೆ ಹಾಯುವ ಪಾದಚಾರಿಗಳ ಗತಿಯೇನು ? ಅವರಿಗಾಗಿ ಬೇರಾವ ನರಕ ಬೇಕಿಲ್ಲವೆಂದುಕೊಂಡೆ. ಅವರು ಮಾಡಿದ ಎಲ್ಲಾ ಪಾಪದ ಪ್ರಾಯಶ್ಚಿತ್ತಕ್ಕೆ ಹೀಗೆ ನಾಲ್ಕು ಹೆಜ್ಜೆ ಈ ದಗೆಯಲ್ಲಿ ನಡೆಸುವುದೇ ಸಾಕೆಂದುಕೊಂಡೆ. ಹೀಗಿರುವಾಗ ಬಿಸಿ ಗಾಳಿಯೊಂದು ಬೀಸಿಬಂತು. ಹಾಸಿಗೆಯಲ್ಲೇ ಬೆವರಿನ ಸ್ನಾನವಾಯಿತು. ಭದ್ರಾವತಿಯ ಕಬ್ಬಿಣ ಕಾಸುವ ಆ ಕಡಾಯಿಗಳ ನೆನಪಾಯಿತು....

.......ಅಬ್ಬಾ, ಏನು ಬಿಸಿಲಿನ ತಾಪ! ಹಾಳು ಈ ತಾಪವನ್ನು ಮರೆಯೋಣ ಎಂದರೆ ಹಾಳು ನಿದ್ರೆಯೂ ಬರಲೊಲ್ಲದು. ನಿದ್ರೆ ಬಾರದ ಹೊರತು ಈ ತಾಪದ ಬೇಗೆ ತಡೆಯಲಾಗದು........

ಹಾಸಿಗೆಯಮೇಲೆ ಅತ್ತಿಂದಿತ್ತ, ಇತ್ತಿಂದತ್ತ ಹೊರಳಾಡ ತೊಡಗಿದೆ. ಮನಸ್ಸು ಹೊರಳಾಟಕ್ಕೆ ತಕ್ಕಂತೆ ಅತ್ತಿಂದಿತ್ತ ಹರಿದಾಡಿತು. ಅಂದಿನ ಭಾಷಣ, ಅಂದಿನ ಊಟ ಎಲ್ಲಾ ವಿಷಯಗಳ ಬಗ್ಗೆ ಚಿಂತಿಸಿ ಅದೇಕೋ ಏನೋ ತಾರಿಣಿ ನೆನಪಿನಲ್ಲಿ ತಟಕ್ಕನೆ ನಿಂತುಬಿಟ್ಟಳು. ತಾರಿಣಿ, ಅದೆಂತಹ ಹೆಸರು! ಅದೆಂತಹ ಮುದ್ದಾದ ಹೆಸರು! ತಾರೆ ಬಳಗಕ್ಕೆ ರಾಣಿ ಎಂದೇ ಇದರರ್ಥ. ಹೂಂ....ಇರಬೇಕು! ಇರಬೇಕು!

"ಅದೇನು ರೂಪು ಅವಳದು. ಅವಳೇನು ಅಷ್ಟು ಬೆಡಗಿನ ಯುವತಿಯಲ್ಲ. ಅವಳ ಆ ಮುಗ್ಧ ಚಲುವು, ಅವಳ ಆ ಮೋರೆಯ ಕಾಂತಿ, ಆ ಪ್ರಫುಲ್ಲವದನದಲ್ಲಿನ ಆ ಕಣ್ಣುಗಳೇ ಸಾಲದೆ ನೋಡಿದವರನ್ನು ಮರುಳುಮಾಡಲು. ಯಾವುದೋ ವಿಲಕ್ಷಣ ಕಾಂತಿ, ಆಕರ್ಷಣೆ ಆ ಕಂಗಳಲ್ಲಿ ಮನೆಮಾಡಿಕೊಂಡಿದೆ. ಆ ಕಣ್ಣುಗಳ ಆಕರ್ಷಣೆಯೇ ನನ್ನನ್ನು ಅವಳ ಬಗ್ಗೆ ಚಿಂತಿಸುವಂತೆ ಮಾಡಿರುವುದು. ಅದೇನು

ನೋಡಿ ಚಲ್ಲಿದ್ದಾಳೋ ಅವಳು ಆ ಕಂಗಳಿಂದ. ನಾನು ಎಷ್ಟು ಮರೆಯಲೆತ್ನಿಸಿದರೂ ತನ್ನೊಂದು ಓರೆನೋಟದಿಂದ ನೆನಪಿನ ಕೆಂಡದ ಬೂದಿಯನ್ನು ಎಬ್ಬಿಸುತ್ತಿದ್ದಾಳೆ. ಮತ್ತೆ ಮತ್ತೆ ತನ್ನ ಅಪ್ಸರೆಯ ರೂಪಿಗೆ ಬಾಯಿ ಬಿಡುವಂತೆ ಮಾಡುತ್ತಿದ್ದಾಳೆ.

"ಹೌದು. ಆ ರೂಪು, ಆ ಚೆಲುವು ನಾನೆಷ್ಟು ಬಾರಿ ಸವಿದರೂ ಅದೇಕೆ ನನಗೆ ತೃಪ್ತಿಯಾಗದು! ಆ ರೂಪಾರಾಧನೆ ಮಾಡಿದಷ್ಟೂ ಮಾಡುವ ಹಂಬಲ ಹೆಚ್ಚು ಹೆಚ್ಚುತ್ತಾ ಇದೆ. ಅದೇಕೆ ನನ್ನಲ್ಲಿ ಈ ತರಹದ ವಿಲಕ್ಷಣಭಾವನೆಗಳನ್ನು ಕೆರಳಿಸುತ್ತಿರುವುದು!

"ಇದು ಅರ್ಥವಾಗದ ಪ್ರಶ್ನೆಯಾಯಿತು. ಮನಸ್ಸು ಮತ್ತೆ ಈ ಪ್ರಶ್ನೆಯ ಅರ್ಥಕ್ಕಾಗಿ ಹೆಣಗಿ ಮತ್ತೆ ಮತ್ತೆ ವಿಫಲವಾಯಿತು. ಈ ಪ್ರಶ್ನಾರ್ಥ ಕಾಣುವ ಪ್ರಯತ್ನದಲ್ಲಿ ಮತ್ತೆ ಅದೇ ರೂಪ. ಅದೇ ತಾರಿಣಿಯ ಮುಗ್ಧ ಮನೋಹರ ರೂಪ ಕಣ್ಣ ಮುಂದೆ ನಿಲ್ಲುವುದು. ಮತ್ತೆ ಅದೇ ಕಣ್ಣುಗಳು.......ಮತ್ತೆ ಅದೇ ಆಕರ್ಷಣೆ.

"ಈ ಸಲ ಆ ಕಣ್ಣುಗಳು ನನ್ನ ಪ್ರಯತ್ನವನ್ನು ಕಂಡು ಅಣಕಿಸುವಂತೆ ತೋರಿದವು. ಅವಳ ಮೋರೆಯಲ್ಲಿ ಮಂದಹಾಸದ ನಗುವೊಂದು ಕಾಣಿಸಿಕೊಂಡು ಮಾಯವಾಯಿತು. ಆ ಮಂದಹಾಸ ನನ್ನ ಭಾವನೆಗಳಿಗೆ ಕೈಗಾಳಿ ಹಾಕಿ ಪ್ರಜ್ವಲಿಸುವಂತೆ ಮಾಡಿತು.

"ಅದೇಕೆ ಅವಳ ರೀತಿ ಹೀಗೆ? ಅದೇಕೆ ಆಕೆಗೆ ನನ್ನಲ್ಲಿ ಅಷ್ಟು ವಿಶ್ವಾಸ? ಅಷ್ಟು ಆಸಕ್ತಿ? ಅವಳೇಕೆ ಇಂದು ವಿಶಾಲಿಯೊಡನೆ ನನ್ನನ್ನು ವಹಿಸಿಕೊಂಡು ಮಾತನಾಡಿದಳು? ನಾನು ಅವಳ ಗೀತೆಯ ಬಗ್ಗೆ ಮೆಚ್ಚಿಗೆಯನ್ನು ತೋರಿದಾಗ ಅದೆಷ್ಟು ಕೃತಜ್ಞತಾಪೂರ್ವಕ ನೋಟ ಬೀರಿದಳು! ಮಾತನಾಡದಿದ್ದರೂ ಆ ನೋಟ ಅದೆಷ್ಟು ಅರ್ಥಪೂರ್ಣವಾಗಿತ್ತು? ಆಕೆಯ ಸಂಗೀತಾಭ್ಯಾಸದ ವಿಷಯವಾಗಿ ಪ್ರಶ್ನಿಸಿದಾಗ ಎಷ್ಟು ಉತ್ಸಾಹದಿಂದ ಉತ್ತರ ಕೊಟ್ಟಳು? ಆಕೆಯ ಸಂಗೀತವನ್ನು ಕೇಳುವ ಆಶೆಯನ್ನು ವ್ಯಕ್ತಪಡಿಸಿದಾಗ ಅವಳೇಕೆ ಸಂಭ್ರಮ ಹೊಂದಿ

ದಳು? ಅದೆಷ್ಟು ಉತ್ಸಾಹದಿಂದ ಅವಳು ಆಮಂತ್ರಣವಿತ್ತಳು? ಆಕೆಯ ಈ ಎಲ್ಲಾ ವರ್ತನೆ, ನಡವಳಿಕೆಯ ಅರ್ಥವೇನಿರಬಹುದು?

"ಆಕೆ ಸ್ನೇಹಮಯಿ. ಒಂದ ಒಂದೆರಡು ಗಂಟೆಗಳಲ್ಲಿಯೇ ವಿಶಾಲಿಯ ಹೃದಯವರಿತು ಅವಳ ಗೆಳತಿಯಾಗಿಬಿಟ್ಟಿದ್ದಳು. ವಿಶಾಲಿಯೊಡನೆ ಗೆಳೆತನವಿದ್ದ ಮಾತ್ರಕ್ಕೆ ಗಂಡಸಾದ ನನ್ನೊಡನೆ ಅದೇಕೆ ಅಷ್ಟು ಸಲುಗೆ ಆಕೆಗೆ? ನಮ್ಮ ಅವಳ ಪರಿಚಯ ಕೇವಲ ಒಂದು ದಿನದ ಪರಿಚಯವಾದರೂ ಆಕೆ ಚಿರಪರಿಚಿತಳಂತೆ ವಿಚಾರಿಸುವಳು! ಎಷ್ಟು ಸಂಗತಿಗಳನ್ನು ಮನಬಿಚ್ಚಿ ಹೇಳಿರುವಳು. ನನ್ನೊಡನೆ ಮಾತ್ರ ಅವಳು ಈ ರೀತಿ ನಡೆದುಕೊಳ್ಳುವಳು. ಇತರರನ್ನು ನಾಲ್ಕು ಮಾತನ್ನು ಆಡಿಸದವಳು ನನ್ನೊಡನೆ ಗಂಟೆಗಟ್ಟಲೆ ಹರಟೆ ಕೊಚ್ಚುವುದೇಕೆ? ಇವುಗಳ ಅರ್ಥವೇನು? ಅದೇಕೆ ನನಗೆ ಆಕೆಯೊಡನೆ ಮಾತನಾಡಲು ಆಸೆ ಹೊರಗಿನವಳೆನ್ನುವ ಲೇಶ ಮಾತ್ರ ಭಾವನೆ ನನ್ನ ಮನಸ್ಸಿನಲ್ಲಿ ಸುಳಿಯದು! ಆಕೆಯ ಕುಲಗೋತ್ರಗಳಾವುದನ್ನು ತಿಳಿಯದಿದ್ದರೂ, ಆಕೆಯಲ್ಲೇಕೆ ಇಲ್ಲದ ಹೊಂಗನಸು ಕಾಣಲೆತ್ನಿಸುತ್ತಿದೆ ಮನ? ಆಕೆಯ ಎಲ್ಲಾ ವಿಷಯಗಳನ್ನು ತಿಳಿಯಲು ಅದೇಕೆ ನನ್ನ ಮನಸ್ಸು ಕಾತರಗೊಂಡಿದೆ? ಆಕೆಯು ವಿವಾಹಿತಳೋ ಅಲ್ಲವೋ ಎಂಬ ಪ್ರಶ್ನೆ ನನ್ನೇಕೆ ಕಾಡತೊಡಗಿದೆ. ಆಕೆಯ ವಿಷಯವನ್ನು ತಿಳಿಯುವ ತನಕ ನನ್ನ ಮನಸ್ಸಿಗೆ ಸಮಾಧಾನವೇ ಇಲ್ಲದಾಗಿದೆ. ಆದರೆ ಅವಳೆಲ್ಲಾ ವಿಷಯವನ್ನೂ ತಿಳಿಯುವ ಬಗೆ ಹೇಗೆ?........ಕೇಳಿದರೆ ವಿಶಾಲಿಯನ್ನು ಕೇಳಬಹುದು. ಅವಳ ಎಲ್ಲಾ ವಿಷಯವನ್ನು ಕೇಳಿ ತಿಳಿಯಲು ಕೇಳಬಹುದು........ಆದರೆ ವಿಶಾಲಿಗೆ ನನ್ನ ಮನದಾಸೆಯನ್ನು ಹೇಗೆಂದು ಹೇಳುವುದು! ಹಾಗೆ ಹೇಳಿದರೂ ಕೇಳಿ ಏನೆಂದು ಕೊಂಡಾಳು? ನನ್ನ ನಡತೆಯ ವಿಷಯದಲ್ಲಿ ಅಸಹ್ಯ ಪಡದೆ ಇರುವಳೇ? ಏನುಮಾಡುವುದು? ಅವಳೆಲ್ಲಾ ವಿಷಯವನ್ನು ತಿಳಿಯುವವರೆಗೂ ನನ್ನ ಮನಸ್ಸಿನ ಸ್ವಾಸ್ಥ್ಯತೆ ಉಳಿಯದು.

"........ಆದುದಾಗಲಿ ಧೈರ್ಯ ಮಾಡಿ ಕೇಳಿಯೇ ಬಿಡಬೇಕು. ನನ್ನ ಬಗ್ಗೆ ಅವಳಿಗೆ ಏನು ಅಭಿಪ್ರಾಯ ಹುಟ್ಟಿದರೂ ಚಿಂತೆ ಇಲ್ಲ. ನಾನೆಷ್ಟು

ಕೆಟ್ಟವನಿದ್ದರೂ ಅವಳ ಅಣ್ಣತಾನೆ! ಕೇಳಿಯೇ ಬಿಡುತ್ತೇನೆ. ಅವಳ ಎಲ್ಲಾ ವಿಷಯ ತಿಳಿದು ಹೇಳೆಂದು ಕೇಳಿಯೇ ಬಿಡುತ್ತೇನೆ. ಆದರೆ......... ಆಕೆಯೊಬ್ಬ ವಿವಾಹಿತ ಯುವತಿಯಾಗಿದ್ದರೆ? ಹೌದು. ಆಕೆಯು ವಿವಾಹಿತಳಿದ್ದರೆ ಅದರ ಸುಳಿವು ಹೇಗಾದರೂ ತಿಳಿದು ಹೋಗುತ್ತಿತ್ತು. ಆಕೆಯ ಒಂದೊಂದು ನೋಟ, ಮಾತು—ಆಕೆಯು ವಿವಾಹಿತಳಲ್ಲವೆಂದು ಸಾರಿ ಹೇಳಿದಂತಿತ್ತು! ಇದಿಲ್ಲದಿದ್ದರೆ ನನ್ನ ಮನಸ್ಸಾದರೂ ಏಕೆ ಆಕೆಯ ಸಾನ್ನಿಧ್ಯಕ್ಕಾಗಿ ಪರಿತಪಿಸುತ್ತಿತ್ತು? ಆದರೂ ಈ ವಯಸ್ಸಿನತನಕ ವಿವಾಹಮಾಡದೇ ಅವಳ ತಾಯಿತಂದೆಗಳು ಏಕೆ ಬಿಟ್ಟಿದ್ದಾರು"! ಮತ್ತೆ ಮೊದಲಿನ ಸಂಶಯ. ಈಗ ವಿಶಾಲಿಯ ರೂಪ ಕಣ್ಣ ಮುಂದೆ ನಿಂತಿತ್ತು. "ಅವಳ ತಂದೆತಾಯಿಗಳು ಏಕೆ ಮದುವೆಯಿಲ್ಲದೆ ಬಿಟ್ಟಿದ್ದಾರೆನ್ನುವೆಯಾ ಅಣ್ಣಾ? ನೋಡು ನನ್ನ ಕಡೆ ನೋಡು. ನೀನೇಕೆ ನನಗೆ ಇನ್ನೂ ಮದುವೆ ಮಾಡದೇ ಬಿಟ್ಟಿರುವೇ? ಅಂತೆಯೇ ಅವರು ಕೂಡ....ಎಂದೇಕೆ ತಿಳಿಯ ಬಾರದು?

"ಹೌದು ವಿಶಾಲಿ. ನೀನು ಹೇಳುವುದು ಸರಿ. ತಾರಿಣಿಯು ನಿನ್ನಂತೆ ಇನ್ನೂ ಅವಿವಾಹಿತಳು. ಇದನ್ನು ನಾನು ಒಪ್ಪುತ್ತೇನೆ........" ಹೀಗೆ ಮನಸ್ಸಿನ ಕುದುರೆ ಅಲ್ಲಿಂದಿಲ್ಲಿಗೆ ಹಾರಿ, ಕುಣಿದು ಕುಪ್ಪಳಿಸಿ, ಕಡೆಗೊಮ್ಮೆ ನಿದ್ರಾಲೋಕಕ್ಕೆ ಕೊಂಡು ಒಯ್ದುಬಿಟ್ಟಿತು. ತಿರುಗಿ ಆ ನಿದ್ರಾಲೋಕದಿಂದ ಹಿಂದಕ್ಕೆ ಕರೆತಂದುದೆಂದರೆ ಆ ಮನಸ್ಸಿನ ಹುಚ್ಚು ಕುದುರೆಯಲ್ಲಾ; ವಿಶಾಲಿಯ ದನಿ.

"ಏನಣ್ಣಾ.......ಇನ್ನೂ ನಿದ್ದೆಯೇ" ಎಂದು ನನ್ನ ಹೊದ್ದಿಕೆಯನ್ನು ಹೊರಗೆಳೆದು ಹೇಳಿದಳು. ನಾನು ಏಳುತ್ತಾ "ಈಗ ಏನು ವೇಳೆ ವಿಶಾಲಿ. ಫಲಾಹಾರಕ್ಕೆ ಹೊತ್ತಾಯಿತೇನು?" ಎಂದೆ.

"ನೀನು ಇನ್ನೂ ಹಾಗೆಯೇ ಕೇಳುತ್ತಾ ಕುಳಿತಿರು. ಫಲಾಹಾರ ಮುಗಿದು ಮೂರು ತಾಸು ಆದೀತು!"

ಹಾಸಿಗೆ ಬಿಟ್ಟೆದ್ದು ಮುಖ ತೊಳೆದು ವಿಶಾಲಿಯೊಂದಿಗೆ ಫಲಾಹಾರ

ಗೃಹಕ್ಕೆ ಹೋದೆ. ಅಂದಿನ ಫಲಾಹಾರ ಅಷ್ಟಕ್ಕಷ್ಟೇ ಇತ್ತು. ನಮ್ಮಿಂದೇನೋ ಫಲಾಹಾರಕ್ಕೆಂದು ಒಂದೊಂದುರೂಪಾಯಿ ಸೆಳೆದಿದ್ದರು. ಆದರೆ ಫಲಾಹಾರ ಕಾಸಿಗೆ ತಕ್ಕ ಕಜ್ಜಾಯ ಕೂಡ ಆಗಿರಲಿಲ್ಲ. ಫಲಾಹಾರ ಮುಗಿಸಿ ಹೊರಗೆ ಬಂದಾಗ ವಿಶಾಲಿ ಎಂದಳು.

"ಈಗೇನು ಕೆಲಸ ಅಣ್ಣಾ? ಬಾ. ಅಲ್ಲಿರುವ ಪುಸ್ತಕ ಭಂಡಾರಗಳನ್ನು ನೋಡಿ ಬರೋಣ"

ನನಗೇನೂ ಈಗ ಮಾಡಲು ಕೆಲಸವಿರಲಿಲ್ಲ. ಆದುದರಿಂದ ವಿಶಾಲಿಯೊಡನೆ ಪುಸ್ತಕ ಭಂಡಾರಕ್ಕೆ ಹೊರಟೆ.

ಸಮ್ಮೇಳನಗೃಹದ ಬಳಿ ಹತ್ತಾರು ಪುಸ್ತಕ ಭಂಡಾರಗಳವರು ತಮ್ಮ ಪುಸ್ತಕಗಳನ್ನು ಮಾರಲು ಅಂಗಡಿಗಳನ್ನು ತೆರೆದಿದ್ದರು. ಅವುಗಳನ್ನು ನೋಡುತ್ತಾ ನಡೆದೆವು. ಒಂದು ಪುಸ್ತಕದ ಅಂಗಡಿಯಲ್ಲಿ ಕೈಲಾಸಂರವರ ಪುಸ್ತಕಗಳನ್ನು ಮಾರುತ್ತಿದ್ದರು. ಅಷ್ಟೊಂದು ಸಂಖ್ಯೆಯ ಕೈಲಾಸಂರವರ ಕೃತಿಗಳನ್ನು ಕಂಡು ನನಗೆ ಆ ವಿಚಿತ್ರ ಮನುಷ್ಯ ಇಷ್ಟೊಂದು ಪುಸ್ತಕ ಬರೆದಿರುವನೇ ಎನ್ನಿಸಿತು. ಆ ಅಂಗಡಿಯನ್ನು ಬಿಟ್ಟು ಹೊರಗೆ ಹೊರಡುವಾಗ ವಿಶಾಲಿಯು ಎರಡು ಪುಸ್ತಕಗಳನ್ನು ನನ್ನ ಕೈಗಿತ್ತಳು. ಅವುಗಳಲ್ಲಿ ಒಂದು "ಸೂಳೆ" ಎನ್ನುವ ಪುಸ್ತಕ, ಮತ್ತೊಂದು "ಕೈಲಾಸಂ ಕೈಪಿಡಿ" ಎನ್ನುವ ಕೈಲಾಸಂರವರ ವಿವಿಧ ಭಾವ ಭಂಗಿಗಳಲ್ಲಿ ತೆಗೆದಿರುವ ಚಿತ್ರಗಳ ಪುಸ್ತಕ. "ಇವೆರಡೂ ಚನ್ನಾಗಿವೆ.......ಈಗ ತಾನೇ ಪ್ರಕಟವಾದ ಪುಸ್ತಕಗಳು." ಎಂದು ಏನೇನೋ ಹೇಳಿ ನಾನು ಕೊಳ್ಳಲಿಕ್ಕೆ ಏನು ಬೇಕೋ ಎಲ್ಲಾ ಮಾಡಿದಳು. ನಾನು ಪುಸ್ತಕಗಳನ್ನು ಕೊಂಡು ವಿಶಾಲಿಯ ಕೈಗಿತ್ತೆ.

ವಿಶಾಲಿ ಪುಸ್ತಕಗಳೊಂದಿಗೆ ವಸತಿಗೃಹದ ಕಡೆಗೆ ಹೊರಟಳು. ನನಗೆ ಇಷ್ಟು ಹೊತ್ತು ಅಲ್ಲೇ ಇದ್ದು ಬೇಸರವಾಗಿದ್ದುದರಿಂದ ಅಲ್ಲೇ ಅಡ್ಡಾಡುತ್ತಾ ನಡೆದೆ. ನಾನು ಅಲ್ಲಿ ಇಲ್ಲಿ ಅಡ್ಡಾಡುತ್ತಾ ಕಾಂಪೌಂಡು ಬಾಗಿಲಬಳಿ ನಿಂತು, ಹಾದಿಯಲ್ಲಿ ಬಂದುಹೋಗುವವರನ್ನು ನೋಡುತ್ತಾ

ನಿಂತೆ. ಆ ಹಾದಿಯಲ್ಲಿ ಜನಸಂಚಾರ ಸಾಧಾರಣವಾಗಿತ್ತು. ಅಲ್ಲಿ ಹಾದುಹೋಗುವವರಿಗೆಲ್ಲಾ ಪೆಂಡಾಲ್ ಹಾಕಿರುವ ಈ ಗೃಹದಲ್ಲಿ ನಡೆಯುವುದೇನು ಎಂದು ತಿಳಿಯುವ ಕುತೂಹಲ. ಪೆಂಡಾಲಿನ ಒಂದು ಕಡೆ ಸುಸ್ವಾಗತವು ಎಂದು ಬರೆದ ಬರಹವಲ್ಲದೆ ಮತ್ತೇನೂ ಇರಲಿಲ್ಲ. ಇಲ್ಲಿ ನಡೆಯುವ ಕಾರ್ಯವೇನು? ನೂರಾರು ಜನರು ಅದೇಕೆ ಬಂದುಹೋಗಿ ಮಾಡುತ್ತಿದ್ದಾರೆ? ಎಂದುಕೊಂಡು ಹೋಗುವವರೇ ಅಲ್ಲಿ ಹಾದುಹೋಗುವ ಅರ್ಥವುಂಟು. ಆದರೆ ಯಾರೊಬ್ಬರಿಗೂ ಒಳಗೆ ಬಂದು ಕೇಳುವ ಧೈರ್ಯವಿರಲಿಲ್ಲ. ನಾನು ಬಾಗಿಲಿನಲ್ಲೇ ನಿಂತು, ಹೀಗೆ ಕುತೂಹಲವುಳ್ಳ—ಆದರೂ ಕೇಳಿ ತಿಳಿಯಲು ಧೈರ್ಯ ಸಾಲದ ವ್ಯಕ್ತಿಯೊಬ್ಬನನ್ನು ದಿಟ್ಟಿಸುತ್ತಿರುವಾಗ ನನ್ನ ಮುಂದೆ ಹೆಗಲಮೇಲೆ ಕೈ ಹಾಕಿಕೊಂಡು ಹಾದಿಯಲ್ಲಿ ನಡೆದ ಗೆಳೆಯರಿಬ್ಬರು ನಿಂತು "ಏನಿದು?........ಇಲ್ಲಿ ನಡೆಯುವುದು ಮದುವೆಯೇ....ಮುಂಜಿಯೇ?" ಎಂದು ತಮಿಳಿನಲ್ಲಿ ಕೇಳಿದರು. ನನಗೆ ಚೊಕ್ಕ ತಮಿಳು ಬಾರದು. ಬಂದ ಮಿಶ್ರತಮಿಳಿನಲ್ಲೇ ಹೇಳಿದೆ. ಅದು ಅವರಿಗೆ ಅರ್ಥವಾಗಲಿಲ್ಲ. ಕಡೆಗೆ ಇಂಗ್ಲೀಷಿನಲ್ಲಿ "There is a Kannada literary conference here" ಎಂದೆ. ಆಗ ಅವರಿಗೆ ಅರ್ಥವಾಯಿತು. ನನ್ನನ್ನು ಪ್ರಶ್ನಿಸಿದವನಿಗೆ ನಾನಿತ್ತ ಉತ್ತರದಿಂದ ತೃಪ್ತಿಯಾಯಿತು. ಆದರೆ ಆತನ ಜೊತೆಯಲ್ಲಿದ್ದ ವ್ಯಕ್ತಿಗೆ ಚೋದ್ಯ ಮಾಡಲು ಒಂದು ವಿಷಯ ಸಿಕ್ಕಂತಾಯಿತು. ಮುಂದೆ ಹೋಗುತ್ತ ಅವನು ತನ್ನ ಗೆಳೆಯನಿಗೆ ತಮಿಳಿನಲ್ಲಿ ಹೇಳುತ್ತಿದ್ದುದು ಕೇಳಿಬಂತು. ಇಲ್ಲಿನವರೆಲ್ಲಾ ಇಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತಿರುವ ಕಾಲದಲ್ಲಿ ಇವರ conferenceಗಳು ಬೇರೆ ಇಲ್ಲಿ. ಬೆರಳು ಮಡಿಸಿ ತೋರಿಸುತ್ತಾ "ಅಡ್ಯಾರಿನಲ್ಲಿ ಒಂದು Theosofical convention ಅಲ್ಲೊಂದು Science conference ಇಲ್ಲೊಂದು literary conference ....ಇವರಿಗೇನು ಬೇರೆ ಕಡೆ ಸ್ಥಳವಿಲ್ಲವೇನು ಕಾನ್ಫರೆನ್ಸುಗಳನ್ನು ಮಾಡಲು.... ...ಎಲ್ಲಾ ಕಾನ್ಫರೆನ್ಸುಗಳೂ ಇಲ್ಲೇ ಆಗಬೇಕೆ.... ...." ಎಂದು ಹಾಸ್ಯಮಾಡುತ್ತಾ ಹೇಳುತ್ತಿದ್ದ. ನಾನು ಆ ವ್ಯಕ್ತಿಯ ಕುತೂ

ಹಲ ಕಂಡು ತಿಳಿಯ ಹೇಳಿದುದು ತಪ್ಪಾಯಿತೆನಿಸಿತು. ಎಲ್ಲಿ ಹೋಗಲಿ ಈ ಜನ ತಮ್ಮ ವಕ್ರಬುದ್ಧಿ ಬಿಡುವುದಿಲ್ಲವಲ್ಲಾ......ಎಂದುಕೊಂಡು ನನ್ನಷ್ಟಕ್ಕೆ ನಾನು ಸಮಾಧಾನ ತಾಳಿದೆ. ಅವರು ಹೋದ ಹತ್ತಾರು ನಿಮಿಷಗಳ ಮೇಲೆ ಮತ್ತೊಂದು ಘಟನೆ ನಡೆಯಿತು. ನಾನು ಇನ್ನೂ ಅಲ್ಲೇ ಅತ್ತಿಂದಿತ್ತ, ಇತ್ತಿಂದತ್ತ ಠಳಾಯಿಸುತ್ತಾ ನಿಂತಿದ್ದೆ. ಆಗ ಒಂದು ಜಟಕದಲ್ಲಿ ಮೂವರು ವೃದ್ಧ ಮಹಿಳೆಯರು ತಮ್ಮ ಸಾಮಾನುಗಳ ಜತೆಗೆ ಇಳಿದರು. ಅವರು ನನ್ನನ್ನು ನೋಡಿದವರೇ ಹತ್ತಿರ ಕರೆದು ಯಾವುದು ವಸತಿಗೃಹವೆಂದು ಕೇಳಿದರು. ನಾನು ವಸತಿಗೃಹದ ಕಡೆ ಕೈತೋರಿಸಿದೆ. ಅವರು ಈಗತಾನೆ ಬಂದುದಾಗಿಯೂ ಆ ವಸತಿಗೃಹಕ್ಕೆ ತಮ್ಮ ಸಾಮಾನು ಒಯ್ದು ಕೊಡಲು ಕೇಳಿಕೊಂಡರು. ನಾನು ಇಳಿದಿದ್ದ ವಸತಿಗೃಹ ಈ ಮೊದಲೇ ಬಂದ ಪ್ರತಿನಿಧಿಗಳಿಂದ ತುಂಬಿಹೋಗಿತ್ತು. ಮುಂದೆ ಬರುವವರಿಗಾಗಿ ಅದೇ ರಸ್ತೆಯಲ್ಲಿ ಬೇರೊಂದು ಮನೆಯನ್ನು ಗೊತ್ತುಮಾಡಿದ್ದರು. ಈ ವಿಷಯ ಅವರಿಗೆ ಹೇಳಿದೆ. ಅಲ್ಲಿಗೆ ಸಾಮಾನು ಒಯ್ದುಕೊಡಲು ನನಗೆ ಹೇಳಿದರು. ನನಗೆ ಏನು ಮಾಡಲೂ ತೋರಲಿಲ್ಲ. ನನ್ನಲ್ಲಿದ್ದ ಸಮ್ಮೇಳನದ ಆ ಗುರುತಿನ ಕಾರ್ಡನ್ನು ಕಂಡು ನಾನೊಬ್ಬ ಸ್ವಯಂಸೇವಕನೆಂದುಕೊಂಡಿರಬೇಕೆಂದೆನಿಸಿತು. ಆ ವಿಷಯ ತಿಳಿಯ ಹೇಳದಿದ್ದರೆ ಮುಂದಾವ ತೊಂದರೆಗಳು ಅವರ ಕಡೆಯಿಂದ ಒದಗುವುದೊ ಎಂದು "ನಾನು ಸ್ವಯಂಸೇವಕನಲ್ಲವೆಂದೂ...........ನಾಲ್ಕು ನಿಮಿಷ ಇಲ್ಲೇ ಕಾದರೆ ಸ್ವಯಂಸೇವಕ (Volunteer) ನನ್ನು ಕರೆ ತಂದು ಅವರ ಸಾಮಾನನ್ನು ಆ ವಸತಿಗೃಹಕ್ಕೆ ಒಯ್ದು ಮುಟ್ಟಿಸುವುದಾಗಿಯೂ ಹೇಳಿ ಸ್ವಯಂಸೇವಕನನ್ನು ಕರೆತರಲು ಹೊರಟೆ—ಸ್ವಯಂಸೇವಕರಿರುವ ಗೃಹಕ್ಕೆ. ಅಲ್ಲಿಗೆ ಬರುತ್ತಿರುವಾಗಲೇ ತಾರಿಣಿ ನನ್ನ ಕಣ್ಣಿಗೆ ಬಿದ್ದಳು. ಆಕೆಗೆ ಅಲ್ಲೊಂದಿಬ್ಬರು ಮಹಿಳೆಯರು ಈಗತಾನೆ ರೈಲಿನಿಂದ ಬಂದಿರುವುದಾಗಿಯೂ ಅವರಿಗೆ ವಸತಿಗೃಹ ತೋರಿಸಬೇಕೆಂದೂ ಹೇಳಿದೆ. ತಾರಿಣಿ 'ಅವರೆಲ್ಲಿ' ಎಂದು ಕೇಳಿದಳು. ನಾನು ತಾರಿಣಿಯೊಂದಿಗೆ ಅವರಿದ್ದ ಸ್ಥಳಕ್ಕೆ ಬಂದು ತೋರಿಸಿದೆ. ಅವರಲ್ಲಿ

ಒಬ್ಬರು ನನ್ನನ್ನು ನೋಡುತ್ತಲೇ ಇಂಗ್ಲೀಷಿನಲ್ಲಿ I am sorry please, I thought you are a Volunteer, please excuse me" ಎಂದು ನನ್ನನ್ನು ಸ್ವಯಂಸೇವಕನೆಂದು ತಿಳಿದು ಕೆಲಸ ಹೇಳಿದುದಕ್ಕೆ ಕ್ಷಮಾಪಣೆ ಕೇಳಿದರು. ಅವರ ಬಾಯಿಂದ ಈ ಎಲ್ಲಾ ಮಾತುಗಳನ್ನು ಕೇಳಿ ತಾರಿಣಿ ಕೂಡಲೇ ನಡೆದಿದ್ದ ಸಂಗತಿಯನ್ನು ಊಹಿಸಿ ತಿಳಿದಳು. 'ಓಹೋ ನೀವು Volunteer ಬೇರೆ ಆಗಿದ್ದಿರಿ!' ಎಂದು ನಕ್ಕಳು.

ಮುಂದೆ ತಾರಿಣಿಯು ಅವರ ಸಾಮಾನುಗಳನ್ನು ಆಳಿಗೆ ವಹಿಸಿ ಕೊಟ್ಟು ಅವರೊಂದಿಗೆ ನಡೆದಾಗ, ನಾನು ಅಲ್ಲಿಂದ ಸಮ್ಮೇಳನದ ಸಭಾಂಗಣದ ಕಡೆಗೆ ಕಾಲ್ದೆಗೆದೆ, ಮತ್ತೆ ಯಾರಾದರೂ ಹೀಗೆಯೇ ತಿಳಿದು ಇಲ್ಲದ ತಾಪತ್ರಯಕ್ಕೆ ಹಚ್ಚಿಯಾರೆಂದು.

ಸಭಾಂಗಣದ ಬಳಿ ಗೋಡೆಯೊಂದಕ್ಕೆ ಒರಗಿಕೊಂಡು ಕೈಲಾಸಂರವರು ನಿಂತಿದ್ದರು. ಅವರೊಂದಿಗೆ ನಾಲ್ಕಾರು ಜನ ಕೈಲಾಸಂರವರನ್ನು ಮೆಚ್ಚಿದವರು—ಶಿಷ್ಯರು ಹರಟೆ ಕೊಚ್ಚುತ್ತಿದ್ದರು. ನಾನೂ ಹೋಗಿ ಅವರಲ್ಲಿ ಸೇರಿದೆ. ಅಲ್ಲಿದ್ದವರು ಕೈಲಾಸಂರವರನ್ನು ಅದೂ ಇದೂ ಪ್ರಶ್ನೆಗಳನ್ನು ಕೇಳಿ ಅವರಿಂದ ಉತ್ತರ ಪಡೆಯುತ್ತಿದ್ದರು. ಅವರ ಈ ಎಲ್ಲಾ ಪ್ರಶ್ನೋತ್ತರಗಳನ್ನು ಕೇಳಿ, ನಾನೇಕೆ ಪ್ರಶ್ನೆಯನ್ನು ಕೇಳಬಾರದು ಎಂದೆನಿಸಿತು. ಆದರೂ ಏನೆಂದು ಕೇಳುವುದೆಂಬುದು ಥಟ್ಟನೆ ಹೊಳೆಯಲಿಲ್ಲ. ಆಗ ಕೈಲಾಸಂರವರು ಸೇದುತ್ತಿದ್ದ ಸಿಗರೇಟು ಮುಗಿದುಬಂದಿತ್ತು. ಅದು ಮುಗಿದುದನ್ನು ಗಮನಿಸಿ ಕೈಲಾಸಂರವರು ಅದರ ಸ್ಥಳಕ್ಕೆ ಬೇರೊಂದು ಸಿಗರೇಟನ್ನು ಹೊತ್ತಿಸಿ ಇಟ್ಟರು. ಅದೇ ನನಗೆ ಪ್ರಶ್ನೆ ಕೇಳುವ ವಸ್ತುವಾಯಿತು. ಅಲ್ಲದೆ ವಿಶಾಲಿ ಬೇರೆ ಹೇಳಿದ್ದಳು, ಅವರು ವಿಪರೀತವಾಗಿ ಸಿಗರೇಟು ಸೇದುವರೆಂದು. ಅವರ ಮೋರೆ ಕೂಡ ಅದನ್ನೇ ಸಾರಿ ಹೇಳುತ್ತಿತ್ತು. ಆದುದರಿಂದ ನಾನು ಧೈರ್ಯಮಾಡಿ ಕೇಳಿದೆ.

"ನೀವು ಎಡಬಿಡದೆ ಒಂದರಮೇಲೊಂದು ಸಿಗರೇಟು ಸೇದುವಿ

ರೆಲ್ಲಾ. ಅದರಿಂದ ನಿಮ್ಮ ಆರೋಗ್ಯಕ್ಕೆ ಕೆಡಕಾಗದೇ?" ನನ್ನ ಪ್ರಶ್ನೆಗೆ ಅವರಿತ್ತ ಉತ್ತರ ಮರ್ಮಭೇದಕವಾಗಿತ್ತು. ಕೂಡಲೇ ಹೇಳಿದರು:— "ಕೆಡಕು! ಈ ದೇಹಕ್ಕೆ ಕೆಡಕು! ನಾಳೆ ಭಸ್ಮೀ ಭೂತವಾಗಲಿರುವ ಈ ದೇಹಕ್ಕೆ ಕೆಡಕು! ನಾನು ಈಗಿನಿಂದಲೇ ನನ್ನ ನಾಳಿನ ಚಿತೆಗೆ ಬೆಂಕಿ ಇಡುತ್ತಿದ್ದೇನೆ. ಈ ಮಾತಿನೊಂದಿಗೆ ವಿಕಟ ನಗು ಒಂದು ಸೇರಿತ್ತು. ನಾನು ಇದನ್ನು ಕೇಳಿ ತೆಪ್ಪಗಾದೆ. ಮುಂದೆ ಯಾವ ಪ್ರಶ್ನೆಯನ್ನೂ ಯಾರೂ ಕೇಳಲಿಲ್ಲ. ನನಗೆ ಅವರಿತ್ತ ಉತ್ತರ ಎಲ್ಲರನ್ನೂ ಗಾಬರಿಗೊಳಿಸಿರಬೇಕು!

ಆಹೊತ್ತಿಗೆ ಸರಿಯಾಗಿ ನಮ್ಮೊಂದಿಗೆ ಮತ್ತೊಬ್ಬ ಬಂದು ಸೇರಿದ. ಅವನು ಆಗತಾನೇ ಒಂದು ಕೈಲಾಸಂರವರ ಭಾವ ಚಿತ್ರವನ್ನು ಕೊಂಡು ತಂದಿದ್ದ. ಅದರ ಮೇಲೆ ಅವರ ಹಸ್ತಾಕ್ಷರ ಹಾಕಿಸಲು ಇಲ್ಲಿಗೆ ಬಂದಿದ್ದ. ಅವನು ಬರುವ ಸಮಯದಲ್ಲಿ ನಾವಾರೂ ಮಾತನಾಡದೇ ಗೊಂಬೆಗಳಂತೆ ನಿಂತಿರುವುದನ್ನು ಕಂಡು ಕೈಲಾಸಂರವರನ್ನು ಸಹಿ ಹಾಕಲು ಕೇಳಲು ಹೆದರಿದ. ಆದರೆ ನಾವು ಅವನನ್ನು ಪುಸಲಾಯಿಸಿದಮೇಲೆ ತಾನು ತಂದಿದ್ದ ಭಾವಚಿತ್ರವನ್ನು ಕೈಲಾಸಂರವರ ಮುಂದಿಟ್ಟು ಅದರ ಮೇಲೆ ಅವರ ಸಹಿ ಹಾಕಲು ಅವರನ್ನು ಕೇಳಿಕೊಂಡ. ಕೈಲಾಸಂರವರು ಕೂಡಲೇ ಅನುಮತಿಸಿ ಪೆನ್ನು ಕೈಯ್ಯಲ್ಲಿ ಹಿಡಿಯುತ್ತಾ ಕೇಳಿದರು "ಯಾವ ಭಾಷೆಯಲ್ಲಿ? ಕನ್ನಡದಲ್ಲೇ, ಇಂಗ್ಲೀಷಿನಲ್ಲೇ" ಅವನು ಕನ್ನಡದಲ್ಲಿಯೇ ಮಾಡಿ ಎಂದ. ಕೈಲಾಸಂರವರು ಇಂಡಿಯಾದ ಭೂಪಟದಂತೆ ಕಾಣುವ ಸಹಿಮಾಡಿಕೊಟ್ಟರು. ಆತನಿಗೆ ಯಾವ ಹೆಚ್ಚಿನ ಮಾತಿಲ್ಲದೆ ತಮ್ಮ ಸಹಿ ಮಾಡಿಕೊಟ್ಟ ಮೇಲೆ ಗುಂಪಿನಲ್ಲಿದ್ದವರೊಬ್ಬರು ತಮ್ಮೊಡನೆ ತಂದಿದ್ದ 'ಹಸ್ತಾಕ್ಷರ' ಪುಸ್ತಕವನ್ನು ಮುಂದುಮಾಡಿದರು. ಕೈಲಾಸಂ ಅದನ್ನು ಎತ್ತಿಕೊಳ್ಳುತ್ತಾ ಮೊದಲಿನವನಿಗೆ ಕೇಳಿದಂತೆ, "ಕನ್ನಡದಲ್ಲೋ, ಇಂಗ್ಲೀಷಿನಲ್ಲೋ....." ಎಂದರು. "ಈತ ಎರಡರಲ್ಲೂ ಮಾಡಿ ಸಾರ್" ಎಂದ. ಅವನ ಮಾತು ಮುಗಿಯುವುದೇ ತಡ ಕೈಲಾಸಂರವರು ಎಂದರು "ಯಾಕ್ರೀ........ನನಗೆ ಉರ್ದುನಲ್ಲಿ, ತಮಿಳಿನಲ್ಲಿ, ಮಲಯಾಳದಲ್ಲಿ ಕೂಡ ಬರುತ್ತೇರಿ........"

"ಅವುಗಳಲ್ಲೂ ಕೂಡ ಸಾರ್" ಎಂದ ಆತ.

ಕೈಲಾಸಂರವರು ಹಾಳೆಗೊಂದು ಸಹಿಯಂತೆ ದಪ್ಪದಪ್ಪ ಅಕ್ಷರ ಗಳಲ್ಲಿ ತಮಗೆ ಬಂದ ಎಲ್ಲಾ ಭಾಷೆಗಳಲ್ಲಿಯೂ ಸಹಿಮಾಡಿಕೊಟ್ಟರು. ಪುಸ್ತಕವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾ ಸಹಿಮಾಡಿಸಿಕೊಂಡಾತ, ತನ್ನೊಂದಿಗೆ ತಂದಿದ್ದ "ಗೋಲ್ಡ್ ಫ್ಲೇಕ್" ಸಿಗರೇಟಿನ ಡಬ್ಬಿಯೊಂದನ್ನು ಬೆಂಕಿಪೆಟ್ಟಿಗೆಯೊಂದಿಗೆ ಆದರದಿಂದ ಕೈಲಾಸಂರವರಿಗೆ ಇತ್ತ. ಕೈಲಾಸಂರ ವರು ಆತನು ಇತ್ತ ಕಾಣಿಕೆಯನ್ನು ಪ್ರೀತಿಯಿಂದ ಸ್ವೀಕರಿಸಿದರು. ಬಲ ವಿನಿಂದ ಕೊಡುತ್ತಿರುವ ಆ ಕಾಣಿಕೆಯನ್ನು ತಿರಸ್ಕರಿಸಿದರೆ, ಆತನ ಮನಸ್ಸು ಎಲ್ಲಿ ನೋಯುವುದೆಂದೂ, ಇಲ್ಲವೇ ತಾವು ಅಷ್ಟೊಂದು ಭಾಷೆ ಗಳಲ್ಲಿ ಮಾಡಿಕೊಟ್ಟ ಸಹಿಗೆ ಪ್ರತಿಫಲವೆಂದೂ........ಅಂತೂ ಹೆಚ್ಚು ಮಾತಿಲ್ಲದೆ ಸ್ವೀಕರಿಸಿದರು. ಕಡೆಗೆ Thanks ಹೇಳುವುದನ್ನು ಮರೆಯ ಲಿಲ್ಲ. ತಾನಿತ್ತ ಕಾಣಿಕೆಯನ್ನು ಕೈಲಾಸಂರವರು ಸ್ವೀಕರಿಸಿದುದರಿಂದ ಕೊಟ್ಟಾತನಿಗೆ ತುಂಬಾ ಸಂತೋಷವಾಯಿತು. ಈ ಸಂತೋಷದ ಹಿಗ್ಗಿನಲ್ಲಿ ಮತ್ತೆ ಮತ್ತೆ ಕೈಲಾಸಂರವರ ಕಡೆ ನೋಡುತ್ತಾ ಹೊರಟು ಹೋದ.

ಈ ವೇಳೆಗೆ ಸಭಾಂಗಣದಲ್ಲಿ ಕಾರ್ಯಕ್ರಮವಾದ ಸಿದ್ಧತೆ ಮುಗಿದು ಬಂದಿತ್ತು. ಆದರೆ ಪರಿಚಾರಕರು ಕೈಲಾಸಂರವರನ್ನು ಸಂಗಡ ಕರೆದು ಕೊಂಡು ಹೊರಟರು. ನಾನೂ ಸಭಾಂಗಣದಲ್ಲಿ ನುಗ್ಗಿ ಒಂದು ಸ್ಥಳದಲ್ಲಿ ಕುಳಿತುಕೊಂಡೆ.

ಅಂದಿನ ಕಾರ್ಯಕ್ರಮ ಗೀತೆಗಳ ವಾಚನ–ಅಧ್ಯಕ್ಷರು ಕೈಲಾ ಸಂರವರು–ಹತ್ತಾರು ಮಂದಿ ಕವಿಗಳ ಕವನಗಳನ್ನು ಹಾಡಿದರು. ಆದರ ಪೈಕಿ "ಮೈಸೂರುಮಲ್ಲಿಗೆ" ಎಂಬ ಕವನಸಂಗ್ರಹದಿಂದ ಒಬ್ಬಾತ ತುಂಬಾ ಸೊಗಸಾಗಿ ಹಾಡಿದ್ದ. ಅವನ ಗೀತೆಗಳು ಸಭಿಕರಮೇಲೆ ತುಂಬಾ ಪರಿ ಣಾಮ ಉಂಟುಮಾಡಿತು. ಸಭಿಕರು ಅವನಿಂದಲೇ ಮತ್ತೆ ನಾಲ್ಕಾರು ಹಾಡುಗಳನ್ನು ಹೇಳಿಸಿದರು. ಆದರೂ ಅವರಿಗೆ ತೃಪ್ತಿಯಾಗಲಿಲ್ಲ. ಮತ್ತೆ ಒಂದೆರಡು ಹಾಡುಗಳನ್ನು ಹೇಳಲು ಪ್ರಾರ್ಥಿಸಿಕೊಂಡರು. ಗೀತೆಗಳನ್ನು

ಹಾಡಿದವರು ಸಭಿಕರ ಪ್ರಾರ್ಥನೆಯಂತೆ ಹಾಡಲು ಸಿದ್ಧನಿದ್ದರೂ, ಮುಂದೆ ಹಾಡುವವರಿಗಾಗಿ ತನ್ನ ಹಾಡು ಮುಗಿಸಿ ಹಿಂತಿರುಗಿದ. ಸಭಿಕರು ತಮ್ಮ ಪ್ರಾರ್ಥನೆಯನ್ನು ಗಣನೆಗೆ ತಾರದೆ ಆತನು ಹೋದುದಕ್ಕಾಗಿ ರೊಚ್ಚಿಗೆದ್ದರು, ಗಲಾಟೆ ಮಾಡಿದರು; ಅಸಭ್ಯವಾಗಿ ವರ್ತಿಸಿದರು.

ಮುಂದೆ ಹಾಡಲು ಬಂದವನು ಸಭಿಕರ ಅಭೀಷ್ಟವನ್ನು ಪೂರೈಸಲು, ತನಗೆ ಬಂದ ಅದೇ ಮೈಸೂರು ಗೀತೆಯ ಹಾಡುಗಳನ್ನು ಹೇಳಿದ. ಆದರೆ ಆ ಗೀತೆಗಳು ಈ ವೇಳೆಗೆ ಹಳಸಿಹೋಗಿದ್ದುದರಿಂದ ಅವು ಸಭಿಕರಿಗೆ ಹೆಚ್ಚು ರುಚಿಸಲಿಲ್ಲ. ತನ್ನ ಪ್ರಯತ್ನದಲ್ಲಿ ಯಶಸ್ಸು ಸಿಗದುದನ್ನು ಕಂಡು ಬಂದಾತ ಸ್ವಸ್ಥಳಕ್ಕೆ ಶೀಘ್ರವಾಗಿ ಹಿಂದಿರುಗಿ ಬಿಟ್ಟ. ಮುಂದೆ ರಾಮಾಚಾರ್ಯ—ನಮ್ಮ ರೈಲು ಡಬ್ಬಿಯಲ್ಲಿ ಹಾಡಿ ಆ ಪಂಡಿತ ಗೆಳೆಯರ ಪ್ರೀತಿಗೆ ಒಳಗಾದವನು—ಹಾಡಿದ. ಈ ಸಲ ಇಲ್ಲಿ ಬೇಂದ್ರೆಯವರ ಕವನಗಳಲ್ಲಿ ಖ್ಯಾತಿವೆತ್ತ "ಗಂಗಾವತರಣ" ಎಂಬ ಪದ್ಯವನ್ನು ರಸಭರಿತವಾಗಿ, ಹೃದಯಂಗಮವಾಗಿ ಹಾಡಿದ. ಈ ಕವನ ನನಗೆ ತುಂಬಾ ಹಿಡಿಯಿತು. ಅದೇಕೋ ಕಾಣೆ. ಅವನು ಹೇಳಬೇಕೆಂದಿದ್ದ ಗೀತೆಗಳನ್ನು ಹೇಳಿ ಮುಗಿಸಿದ ಮೇಲೆ, ಅಲ್ಲಿದ್ದ ಯಾರೊಬ್ಬ ಸಭಿಕರೂ ಆತನಿಂದ ಮತ್ತೆ ನಾಲ್ಕು ಗೀತೆಗಳನ್ನು ಕೇಳಲು ಯಾವ ಒಂದು ಮೆಚ್ಚಿಕೆಯ ನುಡಿ ಆಡಲಿಲ್ಲ. ಇದೊಂದು ವಿಷಾದದ ಸಂಗತಿ.

ಅಂದಿನ ಮತ್ತೊಂದು ವಿಶೇಷ ಕಾರ್ಯಕ್ರಮವೆಂದರೆ ಕೈಲಾಸಂರವರೇ ಖುದ್ದು ತಮ್ಮ ಪದ್ಯಗಳನ್ನು ಹಾಡಿದುದು. ಅವರೇ ತಮಾಷೆಗಾಗಿ ಕಟ್ಟಿರುವ "ತಿಪ್ಪಾರಳ್ಳಿಬಲೆದೂರ" (constantinople) "ನಂಜಿ ನನ್ನ ಅಪರಂಜಿ" ಈ ಹಾಡುಗಳನ್ನು ಇಂಗ್ಲೀಷ್ ಮಟ್ಟಿನಲ್ಲಿ ಬಹಳ ಚನ್ನಾಗಿ ಹಾಡಿದರು. ಆ ಹಾಡುಗಳ ಸ್ವಾರಸ್ಯ ಸವಿಯಲು ಅವರ ಬಾಯಲ್ಲೇ ಕೇಳಬೇಕು ಆ ಹಾಡುಗಳನ್ನು! ಅದನ್ನು ಕೇಳಿದ ನನಗೆ ಅದು ಇಂಗ್ಲೀಷ್ ಹಾಡುಗಳೋ, ಕನ್ನಡ ಹಾಡುಗಳೋ ಯಾವುದೊಂದನ್ನೂ ಬೇಗ ಗುರುತಿಸುವುದು ಕಷ್ಟವಾಯಿತು. ಕನ್ನಡ ಹಾಡುಗಳು,

ಇಂಗ್ಲೀಷ್ ಧಾಟಿಯಲ್ಲಿ ಅದೆಷ್ಟು ಸಮಂಜಸವಾಗಿ ಹೊಂದಿಕೆ ಈ ಎರಡು ಭಾಷೆಗಳಿಗೆ! ಅವರ ಆ ಹಾಡುಗಳನ್ನು ಕೇಳಿ ಭಲೆ! ಕನ್ನಡ! ಭೇಷ್ ಕೈಲಾಸಂ ಎಂದುಕೊಂಡೆ........

ಅಂದಿನ ಕಾರ್ಯಕ್ರಮ ಮುಗಿದು ಭೋಜನಗೃಹದಲ್ಲಿ ಊಟ ಮುಗಿಸಿ ರೂಂಗೆ ಬಂದಾಗ ಸುಮಾರು ಹತ್ತರ ಸಮಯವಾಗಿತ್ತು.

"ಹೇಗಿತ್ತೇ ವಿಶಾಲಿ ಇಂದಿನ ಊಟ ಅಡಿಗೆ?" ನಾನು ಕೇಳಿದೆ.

"ಏನು ಊಟವೋ, ಏನು ಆಡಿಗೆಯೋ, ನನಗೇನೋ ಪೂರಾ ಹಸಿವಿತ್ತು. ಮೂಗಿಗೆ ಆಡಿಗೆ ಏನೋ ಘಮಘಮವೆನಿಸುತ್ತಿದ್ದರೂ, ಮೂಗಿನ ಹಾದಿಯನ್ನೇ ಹಿಡಿದು ಬಾಯಿಗೆ ಬಿದ್ದಾಗ ಅದನ್ನು ಒಳಗೆ ತಳ್ಳುವುದೇ ಪ್ರಯಾಸಕ್ಕಿಟ್ಟುಕೊಂಡಿತು. ಅದು ಹೇಗೆ ಊಟಮಾಡಿದರೋ ....ಅಲ್ಲಿ ಉಂಡವರೆಲ್ಲಾ." "ಹೇಗಿತ್ತಣ್ಣಾ........ನಿನಗೆ ಊಟ"

"ನಿನಗೆ ಹೇಗಿತ್ತೊ ಅದಕ್ಕಿಂತಲೂ ಒಂದು ಕೈ ಮೇಲೆ. ಎಲ್ಲಕ್ಕೂ ತೆಂಗಿನ ಎಣ್ಣೆ........ಏನು! ಇಲ್ಲಾ ಡಾಲ್ಡನಾಗಲೀ, ವನಸ್ಪತಿಯಾಗಲೀ ದೊರೆಯುವುದಿಲ್ಲವೇ?"

ಈ ವೇಳೆಗೆ ಸರಿಯಾಗಿ ತಾರಿಣಿಯು ಬಂದಳು. ಅವಳು ಬಂದವಳೇ ನಾವಾಡುತ್ತಿದ್ದ ಮಾತನ್ನು ದೂರದಿಂದಲೇ ಕೇಳುತ್ತಾ ಬಂದಿರಬೇಕು.

"ಓಹೋ! ಅಣ್ಣ ತಂಗಿಯರಲ್ಲಿ ಯಾವುದೋ ಬಿಸಿಬಿಸಿ ಮಾತುಕಥೆಯಾಗುತ್ತಿದೆ. ಹೊರಗಿನವಳಾದ ನನಗೆ ಒಳಗೆ ಬರಲು ಅವಕಾಶ ಉಂಟೇನು?"

ನಗುತ್ತಾ ಕೇಳಿದಳು—ಹೊರಗೆ ನಿಂತುಕೊಂಡೇ, "ಬಾ ತಾರಿಣಿ, ಒಳಗೆ ಬರಲು ನಿನಗೇನು ಅಡ್ಡಿ! ಬಿಸಿಬಿಸಿ ಮಾತು ಕಥೆ ಎಂದೆಲ್ಲಾ ಹೌದು. ಈಗತಾನೆ ಗಂಟಲಿಗಿಳಿದ ಆ ಬಿಸಿಬಿಸಿ ಊಟದ ವಿಷಯವೇ

ಮಾತನಾಡುತ್ತಿದ್ದುದು. ಬಾ, ಕೂತುಕೊ” ಎಂದು ವಿಶಾಲಿ ಅವಳನ್ನು ಒಳಗೆ ಕರೆದು ಕೂಡಲು ಹೇಳಿದಳು. ಅವಳು ಕೂತ ನಾಲ್ಕು ಘಳಿಗೆ ನಾವೇನೂ ಆಡದುದನ್ನು ಕಂಡು, ತಾನು ಬಂದುದರಿಂದ ನಮ್ಮ ಮಾತು ನಿಂತಿತೆಂದು ಬಗೆದು, “ಹೂಂ ಸಾಗಲಿ, ನಿಮ್ಮ ಮಾತು ಕಥೆ. ಏಕೆ? ನಾನು ಬಂದುದರಿಂದ ಅಡ್ಡಿ ಇಲ್ಲವಷ್ಟೆ?”

“ಏನೂ ಇಲ್ಲವಮ್ಮಾ, ಊಟದ ವಿಷಯ. ನೀನು ಕೂಡ ಇಲ್ಲೇ ಉಂಡವಳು. ಹೇಗಿತ್ತಮ್ಮ ಅಡಿಗೆ. ನನ್ನ ಮಟ್ಟಿಗೆ ಹೇಳುವುದಾದರೆ ಅಷ್ಟಕ್ಕಷ್ಟೆ”

“ನೀನೇ ಹಾಗೆಂದ ಮೇಲೆ ದುಡ್ಡು ಕೊಟ್ಟು ಉಂಡವರು ನಾವೇ ನನ್ನಬೇಕು? ಯಾಕೆ ಅವರು ಹಾಗೆ ಮಾಡುತ್ತಾರೆ ತಾರಿಣಿ? ಹೆಸರಿಗೇನೋ ಉಡುಪಿ ಹೋಟೆಲ್ ಸೀತಾರಾಮಾಚಾರ್ಯರ ಅತಿಥಿಗಳು! ಆದರೆ ಅತಿಥಿಗಳ ಪಾಡು ಅತಿಥಿಗಳಿಗೇ ಗೊತ್ತು. ಯಾಕೆ ತಾರಿಣಿ ಈ ಹಾಳು ತೆಂಗಿನ ಎಣ್ಣೆಯಲ್ಲದೆ ಬೇರಾವ ಎಣ್ಣೆ ಸಿಕ್ಕುವುದಿಲ್ಲವೇ ಇಲ್ಲಿ ಅಡಿಗೆಗೆ ಉಪಯೋಗಿಸಲು. ಮೊದಲಿಂದಲೂ ಕಡೆಯ ತನಕ ತೆಂಗಿನ ಎಣ್ಣೆಯನ್ನೆ ಉಪಯೋಗಿಸಿದ್ದಾರಲ್ಲಾ........”

“ಹಾಗೇನೂ ಇಲ್ಲವಮ್ಮಾ. ಎಣ್ಣೆಗಳಿಗೇನು ಬೇಕಾದ ಹಾಗೆ ಸಿಕ್ಕುತ್ತದೆ, ಅದಕ್ಕೇನು ಬರ ಮದರಾಸಿನಲ್ಲಿ. ಡಾಲ್ಡ, ವನಸ್ಪತಿ ಒಳ್ಳೆ ಎಣ್ಣೆ........ಎಲ್ಲಾ ಸಿಕ್ಕುತ್ತವೆ ಪೇಟೆಯಲ್ಲಿ ದಂಡಿಯಾಗಿ, ಆದರೂ ತೆಂಗಿನ ಎಣ್ಣೆಯನ್ನು ಇವರು ಉಪಯೋಗಿಸಿದ್ದಾರೆ. ಕಾರಣ ನನಗೆ ಖಚಿತವಾಗಿ ತಿಳಿಯದು... ....ಬಹುಶಃ ದಕ್ಷಿಣ ಕರ್ಣಾಟಕದಿಂದ ಬಂದಿರುವ ಕನ್ನಡಿಗರಿಗಾಗಿ ಹಾಗೆ ಮಾಡುತ್ತಿರಬೇಕು!

ಅವರು ಸಾಮಾನ್ಯ ತೆಂಗಿನ ಎಣ್ಣೆಯನ್ನು ಅಡಿಗೆಗೆ ಉಪಯೋಗಿಸುವುದು. ಎಲ್ಲೊ ನಿನ್ನೆ ರಾತ್ರಿ ಎಣ್ಣೆಯಲ್ಲಿ ಮಾಡಿದ್ದ ಅಡಿಗೆಯ ರುಚಿ ಅವರಿಗೆ ಸರಿಹೋಗಲಿಲ್ಲವೆಂದು ಕಾಣುತ್ತೆ. ಅವರು ಯಾರಾದರೂ ಈ ವಿಷಯ ಸೀತಾರಾಮಾಚಾರ್ಯರ ಕಿವಿಗೆ ಹಾಕಿ, ಇನ್ನು ಮುಂದೆ ಅಡಿಗೆಗೆಲ್ಲಾ ತೆಂಗಿನ ಎಣ್ಣೆಯನ್ನೇ ಉಪಯೋಗಿಸಲು ಆಗ್ರಹಪಡಿಸಿರಬೇಕು!

"ಇಲ್ಲದಿದ್ದರೆ ಮೊದಲು ದಿನ ಮಾಡಿದ ಅಡಿಗೆಯಂತೆ ಇಂದೇಕೆ ಮಾಡಬಾರದಿತ್ತು. ಮೊದಲಿನ ದಿನದ ಅಡಿಗೆಯಂತೆ ಇದ್ದಿದ್ದರೆ....ಹೇಗಾದರೂ ತಿನ್ನಬಹುದಿತ್ತು. ಹಾಗಿಲ್ಲದೆ ಎಂದೂ ತಿನ್ನದ ತೆಂಗಿನ ಎಣ್ಣೆ ಉಪಯೋಗಿಸಿದ ಅಡಿಗೆಯನ್ನು ತಿನ್ನು ಎಂದರೆ? ಹೇಗೆ ತಿನ್ನುವುದು?"

"ನಮಗೂ ಈ ಹಾಳು ತೆಂಗಿನ ಎಣ್ಣೆ ರೂಢಿಯೇ ಇಲ್ಲಮ್ಮ, ಮಲಬಾರಿನಲ್ಲಿ, ದಕ್ಷಿಣ ಕನ್ನಡದಲ್ಲಿ ಇದನ್ನು ಅಡಿಗೆಗೆ ಉಪಯೋಗಿಸುವರೆಂದು ಕೇಳಿದ್ದೆ. ಇಂದು ನಾವೇ ಅದರ ರುಚಿ ಕಂಡಂತಾಯಿತು. ಅಲ್ಲಿ ಅವರು ಹೇಗೆ ತಿನ್ನುತ್ತಾರೋ ದಿನಪ್ರತಿ ಈ ತೆಂಗಿನ ಎಣ್ಣೆಯ ಭಕ್ಷ ಭೋಜ್ಯಗಳನ್ನು.......ನಮಗೆ ಎರಡು ಹೊತ್ತಿನ ಊಟಕ್ಕೇ ಅದು ಅಸಹ್ಯ ಉಂಟುಮಾಡುವಾಗ!"

"ಹೇಗೆ ತಿನ್ನುತ್ತಾರೆ ಅಂದರೆ? ಅವರಿಗೆ ಅದು ರೂಢಿಯಾಗಿದೆ. ನಾವು ಹೇಗೆ ಎಣ್ಣೆಯನ್ನು ಬಳಸುತ್ತೇವೆಯೋ ಹಾಗೆ ಅವರು ಕೂಡ ಅದನ್ನು ಬಳಸುತ್ತಾರೆ. ರೂಢಿ ಬಿದ್ದರೆ ಯಾವ ಅಸಹ್ಯವೂ ಇರದು. ನಮಗೆ ರೂಢಿ ಇಲ್ಲದುದರಿಂದಲೇ ಹೀಗೆ!" ನಾನೆಂದೆ

"ಹೌದು, ಹೌದು," ಎಂದು ತಾನಂದುದಕ್ಕೆ ತನ್ನ ಸಮ್ಮತಿ ಸೂಚಿಸಿದಳು ತಾರಿಣಿ. "ಇದ್ದೀತು" ಎಂದು ವಿಶಾಲಿ ಸುಮ್ಮನಾದಳು.

ಈಗ ತಾರಿಣಿ ಹರಟಲು ಬೇರೊಂದು ವಿಷಯ ತೆಗೆದಳು. "ಇಂದು ಜನ ಅದೇನು ಮೆಚ್ಚಿದರೆ—ಮೈಸೂರು ಮಲ್ಲಿಗೆಯ ಹಾಡನ್ನು.... ವಿಶಾಲಿ?"

"ಹಾಗೆಂದು ತಿಳಿದಿದ್ದರೆ ನೀನು ಕೂಡ ಕಲಿತು ಹಾಡುತ್ತಿದ್ದೆ ಏನು?"

ಅದೇಕೋ ವಕ್ರವಾಗಿ ನುಡಿದಳು ವಿಶಾಲಿ. ಮುಂದೆ ಈ ವಕ್ರತೆ ಅಗ್ನಿವರ್ಷಕವಾದೀತೆಂದು ನಾನು ತಿಳಿದಿರಲಿಲ್ಲ.

"ಇಲ್ಲಮ್ಮಾ, ಅದಕ್ಕಲ್ಲಾ ನಾನು ಕೇಳಿದ್ದು. ಆ ಮೈಸೂರು

ಮಲ್ಲಿಗೆ ಹಾಡುಗಳನ್ನು ಹೇಳಿದವನು ನಿಲ್ಲಿಸಿದಾಗ ಜನ ಅದೆಷ್ಟು ಗಲಾಟೆ ಮಾಡಿದರೆಂಬುದಕ್ಕೆ"

"ಬುದ್ಧಿ ಇಲ್ಲದ ಜನ ಇನ್ನೇನು ಮಾಡಿಯಾರು ?"

"ಯಾಕಮ್ಮ ಹೀಗೆ ಹೇಳುತ್ತೀ."

"ಯಾಕೂ ಇಲ್ಲ, ಅವರ ಅಭಿರುಚಿ ಕಂಡು."

"ನನಗೆ ಅರ್ಥವಾಗದಮ್ಮ ನಿನ್ನ ಮಾತು."

"ನೋಡು, ತಾರಿಣಿ, ಮೈಸೂರುಮಲ್ಲಿಗೆಯ ಹಾಡುಗಳನ್ನು ಹಾಡಿದ ಮೇಲೆ ರಾಮಾಚಾರ್ ಎಂಬಾತ ಬೇಂದ್ರೆಯವರ ಪದ್ಯಗಳನ್ನು ಅದೆಷ್ಟು ಸೊಗಸಾಗಿ ಹಾಡಿದರು. ನೀನು ಕೇಳಿದೆಯಲ್ಲಾ, ಅವರು ಹಾಡಿದ ಆ "ಗಂಗಾವತರಣ"ವಂತೂ ಅತ್ಯದ್ಭುತವಾಗಿತ್ತು. ಅದನ್ನು ಕೇಳುತ್ತಿದ್ದ ನನಗೆ ಗಂಗೆ ಅವತರಿಸಿ ನಮ್ಮ ಮುಂದೆಯೇ ಹರಿದು ಹೋದಂತಾಯಿತು. ಏನು ಭಾವ! ಏನು ಗಾಂಭೀರ್ಯ! ಏನು ಹಿರಿಯರ್ಥ! ನಾನು ಇದು ವರೆಗೆ ಅದರಂತಹ ಗೀತೆಗಳನ್ನು ಕೇಳಿಯೇ ಇರಲಿಲ್ಲ. ಅಂತಹ ಆ ಗೀತೆಯನ್ನು ಹಾಡಿದಾಗ ಮೈಸೂರುಮಲ್ಲಿಗೆಗೆ ಚಪ್ಪಾಳೆ ತಟ್ಟಿದ ಜನ ಏನಾದರೂ ಅಂತಹ ಇನ್ನೊಂದು ಗೀತೆ ಹೇಳಲು ಅಪೇಕ್ಷಿಸಿದರೇನು ? ಅಂತಹ ಇನ್ನೂ ನಾಲ್ಕು ಅರ್ಥಪೂರಿತ ಕವಿತೆಗಳನ್ನು ಕೇಳಲು ಇಷ್ಟ ಪಟ್ಟರೇನು ? ಇಲ್ಲ—ಅವರು ಹಾಡಿ ಮುಗಿಸಿದಾಗ ಯಾರೊಬ್ಬರೂ ಮತ್ತೊಮ್ಮೆ ಎಂದು ಕೂಗಬಾರದೇ ? ಪಾಪ ! ಅದೇಕೆ ಕೂಗಿಯಾರು ಹಾಗೆಲ್ಲಾ. ಅವರ ಎಲ್ಲಾ ಆ ಕೂಗುಗಳು ಮೈಸೂರುಮಲ್ಲಿಗೆಯ ಗೀತೆ ಗಳಂತಹ ಗೀತೆಗಳಿಗೆ ಮೀಸಲಿಟ್ಟಿರುವಾಗ."

"ಹೂಂ, ಹೌದು. ನೀನಂದುದು—ನಿಜ ವಿಶಾಲಿ. ಅಲ್ಲಿದ್ದವರಿಗೆ ಅಂತಹ ಗಹನ ಗಂಭೀರ ಅರ್ಥಗರ್ಭಿತ ಕಾವ್ಯಗಳು ಬೇಕಿಲ್ಲ. ಅವು ಅವರಿಗೆ ಸೇರದು. ಮೈಸೂರು ಮಲ್ಲಿಗೆಯ ಗೀತೆಗಳಾದರೆ ಅವರಿಗೆ ಸರಿ! ಯಾಕೆ, ಆ ಕವಿತೆಗಳ ಅರ್ಥವಿವರಣೆಗಾಗಿ ತೊಡಕಿಲ್ಲ. ಎಲ್ಲಾ ಸುಲಿದ ಬಾಳೆಯ ಹಣ್ಣಿನಂತೆ. ಏನಾದರೂ ಅಂತಹ ಹಿರಿಯರ್ಥವಿದ್ದರೆ ತಾನೆ

ಅವುಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ನಡೆಸಬೇಕಾದರೆ........ ಇದರ ಮೇಲೆ ಅವೆಲ್ಲಾ ಪ್ರಣಯ ಗೀತೆಗಳು.......ಎಲ್ಲರಿಗೂ ಬೇಗನೆ ರುಚಿಸುವಂತಹದು........ಎನ್ನರಸ........ಚೆನ್ನರಸ .... ಇತ್ಯಾದಿಗಳನ್ನು ಒಳಗೊಂಡವು."

ಈ ಕಡೆಯ ಮಾತನಾಡುವಾಗ ನಾನು ಅಲ್ಲಿರುವೆನೆಂದು ತಾರಿಣಿ ಮರೆತಂತೆ ಕಾಣುತ್ತದೆ. ಇಲ್ಲದೆ ಇದ್ದರೆ ನನ್ನ ಮುಂದೆ ಯುವತಿ ಯೊಬ್ಬಳು ಆ ರೀತಿ ನುಡಿಯುವುದು ಆಶ್ಚರ್ಯವೇ ಸರಿ. ಅಂತೂ ಆ ಮಾತು ಆಡಿ ಮುಗಿಸಿದ ಮೇಲೆ ನನ್ನ ಇರವು ತಾರಿಣಿಗೆ ಆಗಿರಬೇ ಕೆಂದು ಕಾಣುತ್ತದೆ. ಇಲ್ಲದೆ ಇದ್ದಿದ್ದರೆ ಅವಳು ತನ್ನ ಮಾತನ್ನು ಹಾಗೆ ಹಟಾತ್ತಾಗಿ ಮುಗಿಸುತ್ತಿರಲಿಲ್ಲ. ಅವಳು ಮಾತು ಮುಗಿಸುವ ಮುನ್ನ ವಿಶಾಲಿಯು ಮಾತನಾಡಿದಳು. ಇನ್ನೂ ಅವಳ ಮಾತಿನ ಕಾವು ಆರಿರಲಿಲ್ಲ. ಶುದ್ಧ ತಿಳಿಗೇಡಿಜನ, "ಆ ಹಾಡುಗಳನ್ನು ಕೇಳಿದ ಅನೇಕರು ಅವುಗಳಿಂದ ಸ್ಫೂರ್ತಿ ಹೊಂದಿ ಮೈಸೂರು ಮಲ್ಲಿಗೆಗಾಗಿ ಕೆಳಗಿದ್ದ ಪುಸ್ತಕ ಭಂಡಾರಗ ಳನ್ನೆಲ್ಲಾ ಶೋಧಿಸಿ ಮುಗಿಸಿದರಂತೆ! ಒಂದು ತಾಸಿನೊಳಗಾಗಿ ಯಾರೊ ಬ್ಬರ ಅಂಗಡಿಯಲ್ಲಿ ಒಂದು ಪ್ರತಿ ಉಳಿಯದಂತೆ ಎಲ್ಲಾ ಮಾರಾಟವಾ ಯಿತಂತೆ! ಅಂತೂ ಇಂತೂ ಆ ಹಾಡುಗಳನ್ನು ಹೇಳಿದಾತ ಮೈಸೂರು ಮಲ್ಲಿಗೆಯ ಲೇಖಕರಿಗೆ ಬಿಟ್ಟಿ ಕಾನ್ವಾಸ್ ಮಾಡಿದ ಹಾಗಾಯಿತು!" ಎಂದು ನಕ್ಕಳು. ಆ ನಗು ಭಾವಗರ್ಭಿತವಾಗಿತ್ತು. ಅದೇಕೋ ಏನೋ ವಿಶಾಲಿಯ ದೃಷ್ಟಿ ಪಾಪ ಆ ಮೈಸೂರುಮಲ್ಲಿಗೆಯ ಮೇಲೆ ಬಿದ್ದಿತ್ತು. ಅವಳ ಆ ದೃಷ್ಟಿಯ ಕಾವಿಗೆ ಆ ಮಲ್ಲಿಗೆಯ ದಳಗಳು ಸುಟ್ಟುಹೋಗಿರ ಬೇಕು!

ತಾರಿಣಿಯು ಹೊತ್ತಾಯಿತೆಂದು ಎದ್ದಳು. ಹೊರಡುವಾಗ ತನ್ನಿಂದ ನಮಗೆ ನಿದ್ರಾಭಂಗ ವಾಗಿದ್ದರೆ ಕ್ಷಮಿಸಬೇಕೆಂದು ಬಿನ್ನವಿಸಿಕೊಂಡಳು. ವಿಶಾಲಿ, ನಾನೂ ಒಂದಷ್ಟು ದೂರ ತಾರಿಣಿಯನ್ನು ಕಳಿಸಿ ಬರಲು ಹೊರ ಟೆವು. ತಾರಿಣಿ "ನಾನು ಇನ್ನು ಮನೆಗೆ ಹೋಗುತ್ತೇನೆ, ನೀವಿನ್ನು ಹಿಂದಿ

ರುಗಿ" ಎಂದು ಅಲ್ಲಿದ್ದ ಲಾಂದ್ರಕಂಬದ ಬಳಿ ಹೇಳಿ ನನ್ನನ್ನು ಹಿಂತಿರುಗಿಸಿದಳು. ಬರುತ್ತಾ ವಿಶಾಲಿ ಎಂದಳು.

"ಅಣ್ಣಾ—ತಾರಿಣಿಯನ್ನು ಕಂಡು ಮಾತನಾಡಿದರೆ ನನಗೆ ಯಾವುದೋ ಜನ್ಮದ ಬಂಧು ಒಬ್ಬಳ ಕೂಡ ಮಾತನಾಡುವಂತೆ ಅನಿಸುತ್ತದೆ. ಅದೇಕೋ ಏನೋ ಅವಳೊಂದಿಗೆ ಹರಟುತ್ತಾ ಕುಳಿತರೆ ಇನ್ನೂ ಹರಟ ಬೇಕೆಂದೆನಿಸುತ್ತದೆಯೇ ಹೊರತೂ, ಮಾತು ಸಾಕೆನಿಸುವುದಿಲ್ಲ, ಎಂತಹ ವಿಚಿತ್ರ ಇದು. ನಮ್ಮ ಅವಳ ಗೆಳೆತನ ಕೇವಲ ಇಪ್ಪತ್ತು ನಾಲ್ಕು ಘಂಟೆಗಳಾದರೂ ಅವಳೊಬ್ಬಳು ನನ್ನ ಅಂತರಂಗದ ಗೆಳತಿಯಾಗಿಬಿಟ್ಟಿದ್ದಾಳೆ. ಅದೇನು ವಿನಯ, ಅದೇನು ನಡೆ ನೀತಿಯವಳದು!"

ನನಗೆ ನನ್ನ ಮನದ ಆಶೆಯನ್ನು ಈ ಹೊತ್ತಿನಲ್ಲಿ ವಿಶಾಲಿಗೆ ಹೇಳಬೇಕೆಂದೆನಿಸಿತು. ಆದರೆ ಹೇಳಲುಹೊರಟಾಗ ನಾಲಿಗೆಯೇ ಏಳದಾಯಿತು. ಹೇಳುವಕಾಲ ಇದಲ್ಲವೆಂದು ಸುಮ್ಮನಾದೆ. ಮುಂದೆ ಸಮಯ ನೋಡಿ ಹೇಳಬೇಕೆಂದುಕೊಂಡೆ. ರೂಂಗೆ ಬಂದು ಹಾಸಿಗೆ ಹಾಸಿ ಮಲಗುವಾಗ ನನಗೊಂದು ಸಂಗತಿ ಜ್ಞಾಪಕಕ್ಕೆ ಬಂದಿತು. ಈ ಸಂಗತಿಯನ್ನು ಈ ಮೊದಲೇ ಹೇಳಲು ಮರೆತಿದ್ದೆ. ನಾವಿದ್ದ ಕೊಠಡಿಯ ಪಕ್ಕದ ಕೊಠಡಿಯಲ್ಲಿರುವವರು ನಾಳೇ ಬೆಳಗ್ಗೆ ಸಮುದ್ರದ ದಂಡೆಗೆ ಹೋಗುವವರಿದ್ದರು. ಅವರು ಹೋಗುವುದನ್ನು ಕಂಡು 'ನಾವೂ ಕೂಡ ಏಕೆ ಹೋಗಬಾರದು' ಎನಿಸಿತ್ತು ನನಗೆ. ಆದರೆ ಈ ವಿಷಯ ವಿಶಾಲಿಗೆ ಈ ಮೊದಲೇ ಹೇಳಲಾಗಲಿಲ್ಲ.

"ನಾಳೆ ಪಕ್ಕದ ಕೊಠಡಿಯವರು ಸಮುದ್ರದ ದಂಡೆಗೆ ಹೋಗುತ್ತಾರೆ. ನಾವೂ ಅವರೊಂದಿಗೆ ಹೋಗೋಣೇನು ವಿಶಾಲಿ" ನಾನು ಕೇಳಿದೆ ದೀಪ ಆರಿಸಿ ಮಲಗುತ್ತಾ.

"ಅದೇನದು ಈಗ ಇದ್ದಕ್ಕಿದ್ದಂತೆ–ಯಾಕೆ ಈ ವಿಷಯ ಮೊದಲೇ ಹೇಳಲಿಲ್ಲ. ಈ ಮೊದಲೇ ಹೇಳಿದ್ದರೆ ತಾರಿಣಿಯನ್ನು ಕೂಡ ಒಯ್ಯಬಹುದಿತ್ತು."

"ಹೇಳಬೇಕೆಂದೇನೋ ಇದ್ದೆ ವಿಶಾಲಿ, ಆದರೆ ಹಾಳು ಮರೆವು. ಈಗತಾನೆ ಜ್ಞಾಪಕಕ್ಕೆ ಬಂದುದು. ನಾಳೆ ನಾವು ಹೋಗೋಣ. ಇನ್ನೊಮ್ಮೆ ತಾರಿಣಿಯೊಂದಿಗೆ ಸಂಜೆಯಲ್ಲಿ ಹೋದರಾಯಿತು. ಹೇಗಿದ್ದರೂ ಸಂಜೆಗೊಮ್ಮೆ ಹೋಗಲೇ ಬೇಕಲ್ಲಾ........''

"ಹೂಂ....ಹಾಗೆಯೇ ಆಗಲಿ. ಹಾಗಾದರೆ ನಾವು ನಾಲ್ಕುವರೆ ಗಂಟೆಗೇ ಏಳಬೇಕು, ಅವರು ಏಳುವ ಸಮಯಕ್ಕೆ."

"ಹೂಂ....ನಾಲ್ಕುವರೆಗೇ ಎದ್ದು ಸಿದ್ಧರಾಗಬೇಕು. ನಿನಗೆ ಬೇಗ ಎಚ್ಚರವಾದರೆ ನೀನು ನನ್ನನ್ನು ಎಬ್ಬಿಸು. ನನಗೆ ಆದರೆ ನಿನ್ನನ್ನು ಎಬ್ಬಿಸುತ್ತೇನೆ."

"ಜೀ ಹುಜೂರ್."

೬

ಯಾಕೋ ಏನೋ ಎಂದೂ ಇಲ್ಲದ ನಿದ್ದೆ ಇಂದು ಬಂದಿತ್ತು. ನಿನ್ನೆ ರಾತ್ರಿ ನಾನು ಬೇಗನೇ ಏಳಬೇಕೆಂದು ಮಲಗಿದ್ದುದರ ಮಾನಸಿಕ ವ್ಯಾಪಾರದಿಂದಿರಬೇಕು. ಅಂತೂ ನನಗೇನೋ ವಿಶಾಲಿಗಿಂತ ಮೊದಲೇ ಎಚ್ಚರಿಕೆಯಾಗಲಿಲ್ಲ. ನನ್ನನ್ನು ಎಚ್ಚರಿಸಿದವಳೆಂದರೆ ವಿಶಾಲಿಯೇ ಸರಿ. "ಏಳಣ್ಣಾ ಹೊತ್ತಾಯಿತು" ಎಂದು ಹತ್ತಾರುಬಾರಿ ಕೂಗಿದುದರ ಫಲವಾಗಿಯೇ ನಾನು ಎದ್ದುದು. ಎದ್ದು ನಲ್ಲಿಯ ತಣ್ಣೀರಿನಲ್ಲಿ ಮುಖ ತೊಳೆದು ನಾವು ಹೊರಡಲು ಸಿದ್ಧರಾದ ಎಷ್ಟು ಹೊತ್ತಿನಮೇಲೆಯೋ ಪಕ್ಕದ ಕೋಣೆಯುವರು ಸಿದ್ಧವಾದುದು. ಅವರು ಹೊರಟೊಡನೆಯೇ ನಾವೂ ಅವರನ್ನು ಹಿಂಬಾಲಿಸಿದೆವು. ನನಗೇನು ಗೊತ್ತು ಬೀಚಿಗೆ ಯಾವ ಹಾದಿ ಎಂದು—ನಾವು ಅವರನ್ನು ಹತ್ತು ಹೆಜ್ಜೆ ಹಿಂಬಾಲಿಸಿದಾಗ ಅವರಲ್ಲೊಬ್ಬಾತ ನನ್ನನ್ನು ಕೇಳಿದ—"ಎಲ್ಲಿಗೆ ನೀವು?" ಎಂದು.

ನಾನು ನೇರ ಉತ್ತರ ಕೊಡದೆ "ನೀವು" ಎಂದೆ.

"ಸಮುದ್ರಕ್ಕೆ"

"ನಾವೂ ಅಲ್ಲಿಗೇನೇ."

ಸಮುದ್ರದ ದಂಡೆ ಸೇರಿದಾಗ ಸೂರ್ಯೋದಯಕ್ಕೆ ಇನ್ನೂ ಹೊತ್ತು ಉಳಿದಿತ್ತು. ಸೂರ್ಯನ ಉದಯವಾದೀತೆಂದು ನಾವು ಬೇಗಬೇಗ ಹೆಜ್ಜೆ ಹಾಕಿ ಬಂದೆವು. ಇದರಿಂದಾದ ಆಯಾಸಪರಿಹಾರಕ್ಕೆಂದು ಒಂದೆಡೆ ಮರಳುದಿಣ್ಣೆಯ ಮೇಲೆ ಕೂತೆವು. ಜೊತೆಗೆ ಬಂದಿದ್ದವರು ಸ್ನಾನ ಸಂಧ್ಯಾವಂದನೆಗಾಗಿ ಬೇರೆಬೇರೆ ತಾಣಗಳಿಗೆ ಹೊರಟರು. ನಾವು ಸೂರ್ಯೋದಯವಾಗುವುದನ್ನು ಈಕ್ಷಿಸುತ್ತ ಕುಳಿತೆವು. ಎದುರಿಗೆ ನೀಲ ಸಮುದ್ರದ ಹಾಳೆ ಹರಡಿತ್ತು. ಹಿಂದೆ, ಸುತ್ತೆಲ್ಲಾ ಮರಳು, ಮೇಲೆ ತಿಳಿನೀಲಿ ಗಗನ. ಆಗ ಕೇಳಬರುತ್ತಿದ್ದ ಸದ್ದು ಸಮುದ್ರದ ಮೊರೆತವಲ್ಲದೆ ಬೇರಾವುದೂ ಇರಲಿಲ್ಲ. ಸಮುದ್ರದ ಅಲೆಗಳ ಮೇಲೆ ಬೀಸಿ ಬಂದ ಗಾಳಿ ನಮ್ಮ ಆಯಾಸಕ್ಕೆ ಎಷ್ಟೋ ಹಿತಕರವಾಗಿತ್ತು.

ನಾವು ಸಮುದ್ರವನ್ನು ಕಂಡುದು ಅದೇ ಮೊದಲು. ಪುಸ್ತಕಗಳಲ್ಲಿ ಚಲನಚಿತ್ರಗಳಲ್ಲಿ ಕಂಡಿದ್ದ ಸಮುದ್ರವನ್ನು ಈಗ ಕಣ್ಣಾರೆ ಕಾಣುತ್ತಿದ್ದೆವು. ಅದೇನು ಆ ನೀಲಸಮುದ್ರ! ಕಣ್ಣಿನ ನೋಟ ಹಾಯುವ ವರೆಗೂ ಬರೀ ನೀರೆ, ಕರೀ ನೀರೆ! ನೀರಿನ ಅಂಚು ಗಗನದ ಅಂಚನ್ನು ಎಲ್ಲೋ ದೂರದ ನಾಡಿನಲ್ಲಿ ಮುಟ್ಟಿದಂತಿತ್ತು. ನೀಲಗಗನಕ್ಕೆ ಏರಿ ಹೋಗುವ ಮೆಟ್ಟಲಿನಂತೆ ಸಮುದ್ರ ಕ್ಷಿತಿಜಕ್ಕೆ ಆತು ನಿಂತಿತ್ತು. ಅಲ್ಲೇ ಇದ್ದ ಬಂದರಿನಲ್ಲಿ ನಾಲ್ಕಾರು ಹಡಗುಗಳು ಲಂಗರು ಹಾಕಿದ್ದವು. ಅವು ಯಾವ ಯಾವ ದೇಶದವೋ ?

ಈಗಾಗಲೇ ಅಲ್ಲಿ ಇಲ್ಲಿ ಒಂದೊಂದು ಬೆಸ್ತರ ದೋಣಿಗಳು ಗಜ ಗಾತ್ರವೇಳುತ್ತಿದ್ದ ಅಲೆಗಳ ಮಧ್ಯೆ ಒಮ್ಮೆ ಕಂಡು ಒಮ್ಮೆ ಕಾಣಿಸದಾಗುತ್ತಿತ್ತು. ಅವು ನೀರಿನ ಚಲನೆಗೆ ಸಿಕ್ಕಿ ಒಮ್ಮೆ ಮುಳುಗಿಹೋದಂತೆ ಕಂಡು ಒಮ್ಮೆ ಅಲೆಗಳ ಮೇಲೆ ತುತ್ತತುದಿಯಲ್ಲಿ ಕಾಣುತ್ತಿತ್ತು. ಇದನ್ನು ನೋಡುತ್ತ ಕುಳಿತಿರುವುದೇ ಕಣ್ಣಿಗೆ ಹಬ್ಬವಾಗಿತ್ತು.

ಇನ್ನೂ ಬೆಸ್ತರೆಲ್ಲಾ ಹೊರಟಿರಲಿಲ್ಲ. ಅಲ್ಲಿಯೇ ಮರಳ ಹಾಸಿಗೆಯ ಮೇಲೆ ಭೂತಾಕಾರವಾಗಿ ಮಲಗಿದ್ದ ಕರಿ ದೋಣಿಗಳನ್ನು ತೀರದ ಕಡೆಗೆ ನೂಕಿ ನೂಕಿ ಏರಿಹೋಗುತ್ತಿದ್ದರು, ವಿಶಾಲವಾದ ಆ ಸಮುದ್ರದ ಬಸಿರಿಗೆ. ಇತ್ತ ತೀರದಲ್ಲಿ ಹತ್ತಾರು ಜನ ನಮ್ಮಂತೆ ಸೂರ್ಯನನ್ನು ಕಾಣಲೂ, ಬೆಳಗಿನ ಹವವನ್ನು ತಿನ್ನಲೂ ಬಂದವರು ಅವನ್ನು ಒಂದೇ ದೃಷ್ಟಿಯಿಂದ ಅವಲೋಕಿಸುತ್ತಿದ್ದಾರೆ. ಬೇರೆ ಬೇರೆ ಊರುಗಳಿಂದ ಬಂದ ನಮ್ಮಂತಹ ಯಾತ್ರಿಕ ಪಂಥದವರು ಉಟ್ಟ ವಸನಗಳನ್ನು ಕಳಚಿ, ಮರಳದಂಡೆಗೆ ಇರಿಸಿ, ಕೌಪೀನಧಾರಿಗಳಾಗಿ ನೀರಿಗೆ ಇಳಿಯುತ್ತಿದ್ದಾರೆ. ಚಳಿಯನ್ನು ಕಿಂಚಿತ್ತೂ ಮನಸ್ಸಿಗೆ ತಾರದೇ ಇನ್ನೊಂದು ಕಡೆ ನೀರಿಗೆ ಇಳಿದು ಆಗಲೇ ಆಚಮನ ಅರ್ಘ್ಯ ಪೂರೈಸಿ ಮೇಲೆ ಬರುತ್ತಿದ್ದಾರೆ.

ಹುಡುಗರ ಗುಂಪೊಂದು ನೀರಿನಲ್ಲಿ ಆಟವಾಡುತ್ತಿದ್ದಾರೆ. ನೀರಿನಲ್ಲಿ ಕಾಲು ಜೋಡಿಸಿ ಇರಿಸಿ ಅಲೆಯು ದೂರದಿಂದ ಬಂದು ಕಾಲನ್ನು ಬಡಿದಾಗ ಹಿಗ್ಗಿನಿಂದ ಕೂಗಿಕೊಳ್ಳುತ್ತಿದ್ದಾರೆ. ಅವರಲ್ಲಿ ಒಬ್ಬ ತುಂಟ ಹುಡುಗ ಅಲೆಯ ನೊರೆಯನ್ನು ಕಯ್ಯಿಂದ ಎತ್ತಲು ಪ್ರಯತ್ನಿಸಿ ವಿಫಲನಾಗುತ್ತಿದ್ದಾನೆ. ಆದರೂ ತನ್ನ ಪ್ರಯತ್ನ ಮತ್ತೆಮತ್ತೆ ನಡೆಸುತ್ತಿದ್ದಾನೆ. ಅದೇ ಗುಂಪಿನ ಕೆಲವು ಹುಡುಗರು ಒದ್ದೆ ಮರಳಿನಲ್ಲಿ ತಮಗೆ ತೋರಿದ ಚಿತ್ರಗಳನ್ನು ಕೊರೆಯುತ್ತಿದ್ದಾರೆ. ಕೊರೆಯುವಾಗ ಅದೆಷ್ಟು ಹೆಮ್ಮೆಯಿಂದ ಕೂಗಾಡುತ್ತಿದ್ದಾರೆ. ಆ ಹುಡುಗರನ್ನು ಕರೆದುತಂದ ವೃದ್ಧರೊಬ್ಬರು ಹುಡುಗರನ್ನು "ನೀರಿನಾಟ" ಸಾಕೆಂದು ಕರೆಯುತ್ತಿದ್ದಾರೆ. ಆದರೂ ಹುಡುಗರು ಅವರ ಹಿತವಾದ ಕಿವಿಯಮೇಲೆ ಹಾಕದೇ ತಮ್ಮ ಆಟದಲ್ಲಿ ಮಗ್ನರಾಗಿದ್ದಾರೆ.

ಇವೆಲ್ಲಾ ನೋಡುತ್ತಿದ್ದಂತೆಯೇ ನಾನು ಕೂಡ ಹಾಗೆಯೇ ಮಾಡೋಣವೆನ್ನಿಸಿತು. ಹಾಗೆ ಮಾಡಿದರೆ ನೋಡಿದವರು ನಕ್ಕಾರೆಂದು ಮನಸ್ಸಿಗೆ ಬೇಲಿ ಕೊಟ್ಟು ಸುಮ್ಮನಾದೆ. ಆದರೆ ವಿಶಾಲಿ ಇತ್ತ ಹುಡುಗಿಗೆ ಹುಡುಗಿ! ಯುವತಿಗೆ ಯುವತಿ.

ಅವಳಾಗಲೇ ಮರಳ ದಂಡೆಯ ಮೇಲೆ ಹರಡಿದ್ದ ಬಿಳಿ ಮತ್ತು ನೀಲಿ ಕಲ್ಲುಗಳನ್ನೂ, ಶಂಖ, ಕಪ್ಪೇ ಚಿಪ್ಪುಗಳನ್ನೂ ಆಯುವ ಕೆಲಸ ದಲ್ಲಿ ತೊಡಗಿದ್ದಳು! ಅವಳ ಕಡೆ ದೃಷ್ಟಿಯನ್ನೊಮ್ಮೆ ಹೊರಳಿಸಿದಾಗ,

"ನೋಡಣ್ಣಾ....ಸೂರ್ಯ........ನೋಡು ಮೇಲೇರಿ ಬರುತ್ತಿದ್ದಾನೆ!" ಎಂದು ಹಿಗ್ಗಿನಿಂದ ನುಡಿದಳು. ನನ್ನ ನೋಟವನ್ನು ಕ್ಷಿತಿಜದ ಕಡೆ ಹೊರಳಿಸಿ ನೋಡುತ್ತೇನೆ! ದಿನಮಣಿಯು ಕೆಂಡದ ಮುದ್ದೆಯಾಗಿ ಮೇಲೇರಿ ಬರುತ್ತಿದ್ದಾನೆ! ಸಮುದ್ರದ ಗರ್ಭದಿಂದ ಅವನು ಉದಯಿಸು ವುದನ್ನು ಕಂಡು ನೀರಿನಲ್ಲಿ ಆಡುತ್ತಿದ್ದ ಆ ಮಕ್ಕಳು ಹರ್ಷದಿಂದ ಕೈಚಪ್ಪಾಳೆ ತಟ್ಟಿ ಕುಣಿಯತೊಡಗಿದ್ದಾರೆ!

ಸೂರ್ಯ ಭಗವಾನನು ತಾನು ಮೇಲೇರಿ ಬಂದಂತೆಲ್ಲಾ ತನ್ನ ಮೈ ಬಣ್ಣವನ್ನು ಸುತ್ತೆಲ್ಲಾ ಪಸರಿಸಿ ರಕ್ತವರ್ಣದಿಂದ ಪ್ರಕಾಶಿಸುತ್ತಿ ದ್ದಾನೆ!

ಆಕಾಶದಲ್ಲಿ ಗಾಳಿಯ ಹಿಡಿತಕ್ಕೆ ಸಿಕ್ಕದೆ ತಪ್ಪಿಸಿಕೊಂಡು ಅಲ್ಲಿಯೇ ಉಳಿದಿದ್ದ ಆ ಬಿಳಿ ಮೋಡ, ಈಗ ರಂಗುರಂಗುಗಳನ್ನು ಹೊದ್ದು ಮೆರೆಯುತ್ತಿದೆ! ತನ್ನ ನೋಡಲು ಬಂದ ಭಕ್ತವರ್ಗವನ್ನು ತನ್ನೆಡೆಗೆ ಬರಮಾಡಿಕೊಳ್ಳಲೆಂಬಂತೆ ನೀಲಸಾಗರದ ಮಧ್ಯ ಮಿಂಚುವ, ಕ್ಷಣ ಕ್ಷಣಕ್ಕೂ ಚಂಚಲಿಸುವ ಬಂಗಾರದ ಬಟ್ಟೆಯೊಂದನ್ನು ಎಸೆದಿದ್ದಾನೆ! ಸಮಸ್ತ ಚರಾಚರ ವಸ್ತುಗಳಿಗೂ ತಾನೇ ಒಡೆಯನೆನ್ನುವ ಹಿಗ್ಗು ಅವನ ಮೋರೆಯ ಮೇಲೆ ಕುಣಿದಾಡುತ್ತಿದೆ. ಅದೆಂತಹ ದೃಶ್ಯ—ಅದನ್ನು ಕವಿಗಳೇ ವರ್ಣಿಸಬೇಕು! ಅದನ್ನು ನೋಡುತ್ತಾ ನೋಡುತ್ತಾ ವಿಶಾಲಿ ಮೈಮರೆತು ನಿಂತಳು. ಅವಳ ಮನಸ್ಸಿನಲ್ಲಿ ಆ ಉದಯಿಸಿದ ಕೆಂಡದ ಉಂಡೆ ಅದಾವ ಭಾವನೆಗಳ ತಂತಿಯನ್ನು ಮೀಟುತ್ತಿದ್ದಾನೋ! ಅದೇನು ಅವಳ ಆ ಸೂರ್ಯನನ್ನು ತಿನ್ನುವ ನೋಟ! ಸೂರ್ಯನು ಮೇಲೇರಿ ದಂತೆಲ್ಲಾ ತಾನೂ ಅವನೊಂದಿಗೆ ಏರುತ್ತಲಿರುವಂತೆ ತೋರುವ ಆ ಭಾವ ಭಂಗಿ! ಚಿತ್ರಗಾರ ನೋಡಿದ್ದರೆ ಆ ದೃಶ್ಯದಿಂದ ಒಂದು ಅಪೂರ್ವ ಚಿತ್ರ ಕಲಾಕೃತಿಯನ್ನು ರಚಿಸುತ್ತಿದ್ದ.

ಸೂರ್ಯನು ಮೇಲೇರಿದಂತೆಲ್ಲಾ ತನ್ನ ಹೊಂಬಣ್ಣ ಬದಲಾಯಿಸುತ್ತ ನಡೆದ. ತನ್ನ ಮುಂದಿನ ಪಯಣವನ್ನು ನೆನದೋ ಏನೋ! ಅವನ ಮುಖದ ಸೌಮ್ಯತೆ ಮರೆಯಾಗುತ್ತಲಿತ್ತು. ತೀಕ್ಷ್ಣತೆಯು ಹೆಚ್ಚಾಗುತ್ತಿತ್ತು.

"ಅದೆಂತಹ ದೃಶ್ಯ ಅಣ್ಣಾ!"

"ಹೂಂ"

"ಅದೆಂತಹ ಮೈಮರೆಸುವ ನೋಟ"

"ಹೂಂ"

ಅದೆಂತಹ ಪ್ರಕೃತಿಯ ಚಿತ್ತಾರದ ಚಿತ್ರ.

"ಹೂಂ, ಮುಂದೆ ಸಾಗಲಿ, ಹೀಗೆಯೇ"

ಈಗ ತಾನೆಲ್ಲಿರುವೆನೆಂದು ವಿಶಾಲಿಗೆ ಅರಿವಾಯಿತು. "ಅದು ನಾನೆಂದಿಗೂ ಮರೆಯಲಾಗದ ದೃಶ್ಯ" ಎನ್ನುವ ಉದ್ಗಾರ ಅವಳಿಂದ ಹೊರಟಿತು.

ನನಗೆ ಇನ್ನೂ ಕಾಫಿಯಾಗಿರಲಿಲ್ಲ. ಈಗ ಚನ್ನಾಗಿ ಬೆಳಕು ಹರಿದುದರಿಂದ ಕಾಫಿಯ ಚಿಂತೆ ಹತ್ತತೊಡಗಿತು. ನನ್ನ ಭಾಗಕ್ಕೆ ಸೂರ್ಯ ಉದಯವಾದರೇನು! ಕಾಫಿ ಬಿದ್ದ ಹೊರತೂ ಬೆಳಗಾಗುವಂತಿರಲಿಲ್ಲ. ಜಾಗ್ರತೆಯಾಗಿ ಕಾಲು ಹಾಕಿ ಬರಲು ವಿಶಾಲಿಗೆ ಹೇಳಿ, ಬಂದ ದಾರಿಯನ್ನು ಹಿಡಿದು ನಡೆದೆವು. ಬರುವಾಗ ವಿಶಾಲಿ "ತಾರಿಣಿ ಜೊತೆಯಲ್ಲಿದ್ದಿದ್ದರೆ ಎಷ್ಟು ಚೆನ್ನಾಗಿತ್ತು" ಎಂದು ಅವಳಿಲ್ಲದ ಕೊರತೆ ಅರಿತು ಹೇಳಿದಳು.

"ಹೂಂ ಹೌದು, ತಾರಿಣಿ ಇದ್ದಿದ್ದರೆ ಜತೆಯಲ್ಲಿ ಚೆನ್ನಾಗಿರುತ್ತಿತ್ತು." ಅವಳಿಂದ ಮಾತನ್ನು ಅವಳಿಗೇ ಹೇಳಿದೆ. ನನ್ನ ಈ ಮಾತಿನಲ್ಲಿ ಅದೇನು ಹೊಸತನ ಕಂಡಳೋ ಏನೋ ನನ್ನ ಮೋರೆಯನ್ನು ದಿಟ್ಟಿಸಿ ನಗಲಾರಂಭಿಸಿದಳು. ಬಹುಶಃ ನಾನು ಜತೆಯೆಂಬ ಪದವನ್ನು ಒತ್ತಿ ಹೇಳಿದುದರಿಂದ ಇರಬೇಕು!

"ಹೂಂ ಹೌದು ತಾರಿಣಿ ಜತೆಯಲ್ಲಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು." ಮತ್ತೆ ವಿಶಾಲಿ ನಡಿದಳು. ನಾನು ಮಾತನಾಡಲಿಲ್ಲ, ಮತ್ತೆಲ್ಲಿ ನನ್ನನ್ನು ಗೇಲಿ ಮಾಡುವಳೋ ಎಂದು. ಆದರೂ ನಗುವಿನ ಅಲೆಯೊಂದನ್ನು ತೇಲಿಸಿದೆ.

ವಿಶಾಲಿಯೇ ನುಡಿದಳು—ಗಂಭೀರಳಾಗಿ.

"ಅಣ್ಣಾ ತಾರಿಣಿಯ ಜತೆಗೆ ನನಗೆ ಯಾವಾಗಲೂ ಇರಬೇಕೆಂದೆನಿಸುತ್ತದೆ. ಅದೇಕೋ ಕಾಣೆ. ಆಕೆಯನ್ನು ನೋಡಿದಾಗಿನಿಂದಲೂ ಆಕೆಯ ಮೈತ್ರಿಗಾಗಿ ನನ್ನ ಎದೆ ಮಿಡಿಯುತ್ತಿದೆ. ಅವಳೊಡನೆ ಎಷ್ಟು ಮಾತನಾಡಿದರೂ ನನಗೆ ತೃಪ್ತಿಯಾಗದು. ಈ ನಮ್ಮ ಇಪ್ಪತ್ತುನಾಲ್ಕು ತಾಸಿನ ಗೆಳೆತನದಲ್ಲಿ ಆಕೆ ನನ್ನನ್ನು ಎಷ್ಟು ಅರ್ಥಮಾಡಿಕೊಂಡಿರುವಳು. ಆದರೂ ಆಕೆಯನ್ನು ನಾನಿನ್ನೂ ಅರ್ಥಮಾಡಿಕೊಳ್ಳುವ ಪ್ರಯತ್ನ ಕೂಡ ಮಾಡಿಲ್ಲ. ಆಕೆಯ ಸ್ವವಿಷಯ ನನಗಾವುದೂ ತಿಳಿಯದು. ಯಾವುದನ್ನೂ ಹೃದಯ ಬಿಚ್ಚಿ ಮಾತನಾಡುವ, ಅವಳೊಂದಿಗೆ ಅವಳ ವಿಷಯವನ್ನು ಕೇಳುವ ಧೈರ್ಯ ಸಾಲದು. ಆದರೂ ಆಕೆಯ ಎಲ್ಲ ವಿಷಯವನ್ನೂ ತಿಳಿಯುವ ಕುತೂಹಲ ಮಾತ್ರ ಬೆಟ್ಟದಷ್ಟು ಕುಳಿತಿದೆ! ಇನ್ನೂ ಕೇಳಿ ತಿಳಿಯುವ ಸುಯೋಗ ಒದಗಿ ಬಂದಿಲ್ಲ. ಆ ಸುಯೋಗ ಒದಗಿ ಬಂದೊಡನೆಯೇ ಆಕೆಯ ಎಲ್ಲಾ ವಿಷಯವನ್ನೂ ತಿಳಿಯಬೇಕು. ಆಕೆಯೊಡನೆ ನಿನ್ನ ನಿಕಟ ಸ್ನೇಹ ಎಂದೆಂದೂ ಉಳಿಯುವಂತೆ ಮಾಡಬೇಕು" ಮಾತು ನಿಲ್ಲಿಸಿದಳು.

ವಿಶಾಲಿಗೆ ನಾನು ಹೇಳಬೇಕೆಂದಿದ್ದ ಎಲ್ಲಾ ಸಂಗತಿಯನ್ನು ಅವಳೇ ತಾನಾಗಿಯೇ ಹೇಳಿದ್ದಳು. ನಾನು ನನ್ನ ಮನದ ಆಶಯವನ್ನು ಹೇಗೆ ಹೇಳಲಿ ಎಂದು ಮನಸ್ಸಿನಲ್ಲಿಯೇ ಪರಿತಪಿಸುತ್ತಿದ್ದ ಕಾಲದಲ್ಲಿ ನನ್ನ ಮನಸ್ಸನ್ನು ತಿಳಿದುಕೊಂಡವಳಂತೆ ಆ ಮಾತುಗಳನ್ನು ಆಡಿದ್ದಳು. ಅವಳ ಎಲ್ಲಾ ಮಾತು ಕೇಳಿ, ನನ್ನ ಭಾಗದ ಮನಸ್ಸಿನ ಹೊರೆ ಅರ್ಧ ಭಾಗದಷ್ಟು ಕಡಿಮೆಯಾಯಿತು.

ಅವಳ ಮಾತು ಕಿವಿಯಮೇಲೆ ಬಿದ್ದಾಗ ತಾರಿಣಿಯ ರೂಪು ಮನಸ್ಸಿನ ಮುಂದೆ ಬಂದು ನಿಂತಿತು. ಅದೇ ತಾರಿಣಿಯ ರೂಪು ಚಲಿಸದೆ ನಿಂತಿತು! ಅವಳ ರೂಪವನ್ನು ನೋಡುವ ಪ್ರಯತ್ನದಲ್ಲಿ ಮಳಲಿನಲ್ಲಿ ತಪ್ಪು ಹೆಜ್ಜೆ ಹಾಕುತ್ತ ನಡೆದೆ. ಹಿಂದೆ ಹಳ್ಳಹಳ್ಳವಾಗಿ ಬಿದ್ದಿದ್ದ ಹೆಜ್ಜೆಯ ಗುರುತು ನನ್ನನ್ನು ನೋಡಿ ನಗುವಂತೆ ತೋರುತ್ತಿತ್ತು.

ಬಸ್ಸು ಹಿಡಿದು ವಸತಿ ಗೃಹಕ್ಕೆ ಬಂದೆವು. ಬರುವಾಗ ದಾರಿಯಲ್ಲಿ ಒಂದಿಷ್ಟು ಫಲಾಹಾರವನ್ನು ಹೊಟ್ಟೆಗೆ ಹಾಕಿಕೊಂಡು ಬಂದಿದ್ದೆವು. ನಾವು ವಸತಿ ಗೃಹದ ಬಳಿಗೆ ಬರುವ ವೇಳೆಗೆ ಫಲಾಹಾರ ಎಂದೋ ಮುಗಿದುಹೋಗಿತ್ತು. ಆದಕ್ಕಾಗಿ ಕಾಯದೆ ಮೊದಲೇ ತಿಂಡಿ ತಿಂದು ಬಂದುದು ಎಷ್ಟೋ ಒಳ್ಳೆಯದಾಯಿತು. ನಾವು ಕೊಠಡಿಯಲ್ಲಿ ಯಾವುದೋ ಆ ಮಾತು ಈ ಮಾತು ಆಡುತ್ತ ಕುಳಿತಿರುವಾಗ್ಗೆ ತಾರಿಣಿ ಬಂದಳು. ಅವಳನ್ನು ವಿಶಾಲಿ ಸ್ವಾಗತಿಸಿದಳು.

"ಏನಮ್ಮ ವಿಶಾಲಿ; ಬೆಳಿಗ್ಗೆ ಎದ್ದವರೇ ಎಲ್ಲಿಗೆ ಹೊರಟುಬಿಟ್ಟಿದ್ದಿರಿ? ಅಣ್ಣ ತಂಗಿಯರು ಫಲಾಹಾರಕ್ಕೂ ಇಲ್ಲದೇ"

"ಹೌದು. ನಿನ್ನೆ ನಿನಗೆ ಹೇಳಲಾಗಲಿಲ್ಲ ತಾರಿಣಿ. ಇಂದು ಮುಂಜಾನೆ ಎದ್ದು ಸಮುದ್ರಕ್ಕೆ ಹೋಗಿ ಬಂದೆವು."

"ಅದೇನು ಇದ್ದಕ್ಕಿದ್ದ ಹಾಗೆ"

"ಅದಕ್ಕೇ ನಿನಗೆ ಹೇಳುವುದು ಸಾಧ್ಯವಾಗದೇ ಇದ್ದುದು. ರಾತ್ರಿ ಮಲಗುವಾಗ ಅಣ್ಣ ಪಕ್ಕದ ಕೊಠಡಿಯವರು ಸಮುದ್ರದ ದಂಡೆಗೆ ಹೋಗುತ್ತಾರೆ ಎಂದು ತಿಳಿಸಿದ. ಅವರೊಂದಿಗೆ ನಾವೇಕೆ ಹೋಗಬಾರದು ಎಂದು ನಮಗೆ ಅನಿಸಿ, ಹೋಗುವುದನ್ನು ನಿಶ್ಚಯಿಸಿ ಬೆಳಿಗ್ಗೆ ಹೋಗಿ ಬಂದೆವು."

"ನನಗೆ ಸುದ್ದಿಕೊಟ್ಟಿದ್ದರೆ ನಿಮ್ಮೊಡನೆ ಬರುವ ಆಸೆ ಇತ್ತು ನನಗೆ.... ಹೋಗಲಿ ಬಿಡು, ಹೇಗಿತ್ತಮ್ಮ ಸೂರ್ಯೋದಯದ ದೃಶ್ಯ. ನಾನು

ಅದನ್ನು ಹತ್ತಾರು ಸಲ ನೋಡಿದ್ದೇನೆ. ಆದರೂ ಅದನ್ನು ಇನ್ನೂ ಇನ್ನೂ ನೋಡಬೇಕೆನಿಸುತ್ತದೆ."

"ಹೂಂ.... ನಿನ್ನನ್ನು ನಮ್ಮೊಡನೆ ಕರೆದೊಯ್ಯಬೇಕೆಂದು ನಮ್ಮ ಮನಸ್ಸಿನಲ್ಲಿ ಪೂರಾ ಇತ್ತು ತಾರಿಣಿ ಆದರೆ ಆಗಲಿಲ್ಲ. ನೀನು ನಮ್ಮೊಡನೆ ಇಲ್ಲದಿದ್ದುದು ಏನೋ "ಬಿವರ್" ಅನಿಸದೆ ಇರಲಿಲ್ಲ. ಇನ್ನೊಂದು ಬಾರಿ ಸಂಜೆಗೆ ನಿನ್ನೊಡನೆ ಖಂಡಿತ ಬರುತ್ತೇನೆ. ಏನೂ ತಿಳಿಯಬೇಡಮ್ಮ ನಿನಗೆ ಸುದ್ದಿ ಕೊಡದೇ ಹೋದುದಕ್ಕೆ. ನಿಜಕ್ಕೂ ತಾರಿಣಿ! ಅಂತಹ ದೃಶ್ಯವನ್ನು ನಾನು ಇದುವರೆವಿಗೂ ನೋಡಿರಲಿಲ್ಲ. ಅದೇನು ಆ ದೃಶ್ಯದ ಸೊಬಗು, ಲಾವಣ್ಯ! ದೂರದ ಆಗಸದಲ್ಲಿ ಅದಾರೋ ಹವಳದ ಗೋಲಕ ವನ್ನು ತಗುಲುಹಾಕಿದಂತಿತ್ತು. ಅದನ್ನು ನೋಡುತ್ತಾ ನೋಡುತ್ತಾ ನನಗೆ ಮೈಪರಿವೇ ಇಲ್ಲದಾಗಿತ್ತು."

"ನನಗೂ ಹಾಗೇ ಆಗುತ್ತದೆ ಅದನ್ನು ನೋಡಿದಾಗಲೆಲ್ಲಾ"

ತಾರಿಣಿಯು ವಿಶಾಲಿಯನ್ನು ಮಹಿಳಾಸಮ್ಮೇಳನಕ್ಕೆ ಜತೆಗೆ ಕರೆದೊಯ್ದಳು. ಆದರೆ ಆ ಸಮ್ಮೇಳನಕ್ಕೆ ನನಗೆಲ್ಲಿಯ ಪ್ರವೇಶ. ಅವರಿಬ್ಬರೂ ಹೊರಟುಹೋದಮೇಲೆ ನಾನು ಅಲ್ಲಿ ಇಲ್ಲಿ ಒಂದಿಷ್ಟು ಅಡ್ಡಾಡಿ ಬಂದೆ. ಆದರೂ ಕಾಲ ಕೊಲ್ಲುವುದು ದುಸ್ಸಾಧ್ಯವಾಯಿತು. ಸಮ್ಮೇಳನದ ಅಂಗವಾಗಿ ಅಲ್ಲೊಂದು ವಸ್ತುಪ್ರದರ್ಶನ ಏರ್ಪಡಿಸಿರುವುದು ಈ ಸಮಯಕ್ಕೆ ಸರಿಯಾಗಿ ಜ್ಞಾಪಕಕ್ಕೆ ಬಂತು. ನೇರ ಅಲ್ಲಿಗೆ ಹೊರಟೆ ಅದನ್ನು ನೋಡಿ ಬರಲು.

ಅವರು ಏರ್ಪಡಿಸಿದ್ದ ವಸ್ತುಪ್ರದರ್ಶನ ಅಷ್ಟೇನೂ ದೊಡ್ಡದಲ್ಲ. ಚಿಕ್ಕದಾದರೂ ಚನ್ನಾಗಿ ಏರ್ಪಡಿಸಿದ್ದರು. ಹತ್ತಾರು ಕಲಾಚಿತ್ರಗಳು, ಹಲವಾರು ಕೈಬರಹದ ಮತ್ತು ಅಚ್ಚಾದ ಪುಸ್ತಕಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಅವುಗಳನ್ನು ನೋಡುವುದಕ್ಕೆ ಹೆಚ್ಚು ಕಾಲ ಹಿಡಿಯಲಿಲ್ಲ. ನೇರ ವಸತಿ ಗೃಹಕ್ಕೆ ಬಂದು, ಸ್ನಾನ ಮುಗಿಸಿ, ನಿನ್ನೆ ಕೊಂಡಿದ್ದ ಪುಸ್ತಕ "ಸೂಳೆ"ಯನ್ನು ಓದಲು ಮೊದಲಿಟ್ಟೆ. ಅದೇನೋ ಕನ್ನಡ ಪುಸ್ತಕ.

ಆದರೆ ಪುಸ್ತಕದ ಬಹು ಭಾಗವೆಲ್ಲಾ ಇಂಗ್ಲೀಷೇ. ಇಂಗ್ಲೀಷ್ ಅಷ್ಟು ಚೆನ್ನಾಗಿ ಬಾರದ ಕನ್ನಡಿಗನಿಗೆ ಇದು ಕಬ್ಬಿಣದ ಕಡಲೆಯೇ ಎಂದು ಕೊಂಡೆ! ನಾನು ಪುಸ್ತಕವನ್ನು ಅರ್ಧ ಓದಿ ಮುಗಿಸಿದ್ದೆ. ಆಗ ವಿಶಾಲಿ ಬಂದಳು.

"ಆಯಿತೇ ನಿಮ್ಮ ಸಮ್ಮೇಳನ" ನಾನು ಕೇಳಿದೆ.

"ಹೂಂ"

"ಯಾರು— ಅಧ್ಯಕ್ಷರು"

"ಶ್ರೀಮತಿ ಶಾಂತಾಬಾಯಿ ಮಾಳವಾಡರು. ಇರಲಿ ನೀನು ಏನು ಮಾಡುತ್ತಿದ್ದೆಯಣ್ಣ ಇಷ್ಟು ಹೊತ್ತು ಒಬ್ಬನೇ"

ನಾನು ಪುಸ್ತಕ ತೋರಿಸಿ ಹೇಳಿದೆ. "ಇದನ್ನು ಓದುತ್ತಿದ್ದೆ"

"ಹೇಗಿದೆ ನಾಟಕ"

"ನಾನು ಓದಿರುವವರೆಗೆ ಬಹಳ ಚನ್ನಾಗಿದೆ"

"ನಾನು ಹೇಳಲಿಲ್ಲವೇ ಚನ್ನಾಗಿರುತ್ತದೆ ಅಂತ"

ಊಟದ ಹೊತ್ತಾಗುತ್ತಾ ಬಂದಿತ್ತು. ವಿಶಾಲಿ ಮೈತೊಳೆದು ಕೊಂಡು ಬರಲು ಹೊರಟಳು. ಅವಳು ಸ್ನಾನ ಮುಗಿಸಿ ಬಂದಮೇಲೆ ಭೋಜನಾಲಯಕ್ಕೆ ಹೋಗಿ ಊಟ ಮುಗಿಸಿ ರೂಂಗೆ ಬಂದು ವಿಶ್ರಾಂತಿ ಗಾಗಿ ಹಾಸಿಗೆಗೆ ಒರಗಿದೆ. ವಿಶಾಲಿ ತನ್ನ ಹಾಸಿಗೆಯಮೇಲೆ ಕುಳಿತು ಪುಸ್ತಕ ಮೊಗಚುತ್ತಿದ್ದಳು.

"ಇಂದೇನಮ್ಮ ಕಾರ್ಯಕ್ರಮ"

"ಅದೇನೋ ನಾಲ್ಕು ಘಂಟೆಯಿಂದ ಚರ್ಚಾಗೋಷ್ಠಿಯಂತೆ, ಮಾಳವಾಡರ ಅಧ್ಯಕ್ಷತೆಯಲ್ಲಿ"

"ನೀನು ಅದಕ್ಕೆ ಹೋಗಬೇಕೆಂದಿದ್ದೀಯೇನು?"

"ಹಾಗೆಂದರೆ"

"ಏನೂ ಇಲ್ಲ. ನಾವು ಬಂದು ಎರಡು ದಿನಕ್ಕೆ ಬಂದರೂ ಸಮ್ಮೇಳನದ ಗಲಾಟೆಯಲ್ಲಿ ಮದರಾಸಿನಲ್ಲಿ ನೋಡಬೇಕಾಗಿರುವ ಸ್ಥಳಗಳನ್ನು ಒಂದೂ ನೋಡಿಲ್ಲ. ಈಗ ವಿರಾಮ ದೊರೆತಾಗ ಒಂದೊಂದನ್ನೇ ನೋಡುತ್ತಾ ಬಂದರೆ ನಾಳೆ ಸಮ್ಮೇಳನ ಮುಗಿಯುವ ಹೊತ್ತಿಗೆ ಎಲ್ಲವನ್ನೂ ನೋಡಿ ಮುಗಿಸಿ ಊರಿಗೆ ಹೊರಡಲು ಅನುಕೂಲ ವಾಗುತ್ತದೆ. ಇಲ್ಲದಿದ್ದರೆ ಸಮ್ಮೇಳನ ಮುಗಿದಮೇಲೆ ಅವುಗಳನ್ನು ನೋಡಲು ಇಲ್ಲಿ ಇರಬೇಕಾದರೆ ಹೋಟಲಲ್ಲಿ ರೂಂ ಮಾಡಬೇಕಾಗು ತ್ತದೆ."

"ಹೂಂ, ನೀನು ಹೇಳುವುದು ಸರಿ. ಹಾಗಾದರೆ ಯಾವುದನ್ನು ನೋಡತಕ್ಕದ್ದು ಇಲ್ಲಿ. ಅದಷ್ಟನ್ನೂ ವಿರಾಮ ಕಾಲದಲ್ಲಿ ನೋಡಿ ಮುಗಿಸೋಣ."

"ನನಗೇನು ಗೊತ್ತು ಯಾವುದನ್ನು ನೋಡಬೇಕೆಂದು, ನಾನೇನು ಮದರಾಸು ಬಲ್ಲವನೇನು ?"

"ಈಗ ತಾರಿಣಿ ಇದ್ದಿದ್ದರೆ ಚನ್ನಾಗಿತ್ತು. ಅವಳನ್ನು ಕೇಳಿದ್ದರೆ ಎಲ್ಲಾ ತಿಳಿಯುತ್ತಿತ್ತು."

ಅಷ್ಟು ಹೊತ್ತಿಗೆ ಸರಿಯಾಗಿ ರೂಂನಲ್ಲಿ ತಾರಿಣಿಯು ಅವತರಿಸಿ ದಳು. ಅವಳನ್ನು ಕಂಡೊಡನೆಯೇ ನಾನೆಂದೆ.

"ನಿಮಗೆ ನೂರು ವರ್ಷ ಆಯುಸ್ಸು. ಈಗತಾನೆ ವಿಶಾಲಿ ನಿಮ್ಮ ಸುದ್ದಿ ಎತ್ತಿದ್ದಳು."

"ಅದೇನಮ್ಮ ನನ್ನ ಸುದ್ದಿ. ಅದೇನು ನನ್ನನ್ನು ಬಯ್ಯುತ್ತಿದ್ದಿ ರೇನು ?" ನಗುತ್ತ ಕೇಳಿದಳು ತಾರಿಣಿ.

"ಅದೇನೂ ಇಲ್ಲ. ಅಣ್ಣ ಮದರಾಸಿನಲ್ಲಿ ನೋಡಬೇಕಾದ ಸ್ಥಳಗಳು ಯಾವುವು ಎಂದು ತಿಳಿದಿದ್ದರೆ ಅದಷ್ಟನ್ನೂ ವಿರಾಮ ಕಾಲ ದಲ್ಲಿ ನೋಡಬಹುದು ಎಂದ. ನಾನು ಹೇಳಿದೆ—ನೀನು ಇದ್ದರೆ ಯಾವುವೆಂದು ಹೇಳುತ್ತಿದ್ದಿ ಎಂದು."

"ಅಷ್ಟೇತಾನೆ"

"ಹೂಂ ಅಷ್ಟೇ. ಈಗ ಹೇಳು ಯಾವುವನ್ನು ನೋಡಿ ಹೋಗ ಬೇಕು ನಾವು ನಿಮ್ಮ ಊರಿನಲ್ಲಿ."

"ಮೊದಲನೆಯದು ನಮ್ಮ ಮನೆ!"

"ಅದು ಬಿಡಿ. ಅದನ್ನು ನೋಡದೇ ಹೋಗುತ್ತೇವೆಯೇ ಎಂದು ನಾನೆಂದೆ."

"ಸಾಕು ತಮಾಷೆ, ಹೇಳೇ ತಾರಿಣಿ."

"ಯಾವುದೆಂದು ಹೇಳಲಮ್ಮ. ಇಲ್ಲೇನಿದೆ ಅಂತಹದು ನೋಡು ವುದು. ಹೋದರೆ........ಹೋಗಬಹುದು—ಅದೇ ಅನಿಬೆಸೆಂಟರ ಕಾರ್ಯ ಶಿಬಿರ—ಹಾಗೆಯೇ ಹಿಂದೂ ಆಫೀಸು, ಮೃಗಾಲಯ,—ಲೈಬ್ರರಿ, ವಸ್ತುಪ್ರದರ್ಶನಾಲಯ, ಬೀಚು, ಪರಿಚಯವಿದ್ದರೆ ಸ್ಟುಡಿಯೋ— ಪುರುಸೊತ್ತು ಇದ್ದರೆ ನಾಲ್ಕು ಟಾಕಿ, ನಾಲ್ಕು ದೇವಸ್ಥಾನ—ನೋಡ ಬಹುದು. ಇದಕ್ಕಿಂತಲೂ ಹೆಚ್ಚಿಗೆ ಏನಿದೆ ಈ ಊರಿನಲ್ಲಿ."

"ಹಾಗಾದರೆ ಯಾವಾಗಲೇ ತಾರಿಣಿ ನಾವಿಷ್ಟನ್ನೂ ನೋಡು ವುದು."

"ಯಾಕೆ! ನಾಳೆ ಒಂದು ದಿನವಿದೆಯಲ್ಲಾ. ಅದಷ್ಟನ್ನೂ ನೋಡಿ ಮುಗಿಸಿಬಿಡೋಣ."

"ಏನೋಮ್ಮ, ಏನು ಮುಗಿಸುವುದೊ — ಏನು ಹೇಳು ಹಿಂದೂ ಆಫೀಸು ಇಂದು ನೋಡಿ ಬರೋಣವೇನು? ಫಲಾಹಾರ ಮುಗಿಸಿಕೊಂಡು?"

"ಆಗಲಿ"

ವಿಶಾಲಿ ನನ್ನ ಕಡೆ ನೋಡಿದಳು. ನಾನು ತಲೆಯಲ್ಲಾಡಿಸಿದೆ, ನನ್ನ ಒಪ್ಪಿಗೆಯುಂಟೆಂದು.

"ಇಂದು ತಾರಿಣಿಯನ್ನು ಜತೆಗೆ ಒಯ್ಯೋಣ" ನಾನು ಹೇಳಿದೆ. ಇದೇ ಮೊದಲನೆಯ ಸಲ ತಾರಿಣಿ ಎಂಬ ಹೆಸರು ತಾರಿಣಿಯ ಮುಂದೆ ನಾನು ಆಡಿದುದು. ಹೀಗೆ ಹೆಸರು ಹಿಡಿದು ಕರೆಯುವಾಗ ನನಗೆ ಹೇಗೆ ಹೇಗೋ ಆಯಿತು. ಇದನ್ನು ಕೇಳಿ ಅವಳ ಮುಖ ಕೆಂಪಾಯಿತು. ನಾಚಿದಳು.

"ನಾನು ಬರುವುದು ಬೇಕಿದ್ದರೆ."

"ಹಾಗಂದರೇನೇ, ನೀನು ಹೇಳಿದ ಈ ಎಲ್ಲಾ ಸ್ಥಳಗಳನ್ನು ನೀನೇ ಒಯ್ದು ತೋರಿಸಬೇಕು, ಹೇಳಿದ ತಪ್ಪಿಗೆ." ನಗುತ್ತಲೆಂದಳು ವಿಶಾಲಿ.

"ಹೌದು, ಇನ್ನಾರು ತೋರಿಸಬೇಕು. ನಾವು ಮದರಾಸಿಗೆ ಹೊಸಬರೆಂದು ಅರಿಯರೇನು ಅವರು!" ನನ್ನ ಮಾತೂ ಸೇರಿಸಿದೆ.

"ಆಗಲಮ್ಮ ಆಗಲಿ. ನಾನು ಹೇಳಿದುದಕ್ಕೆ ನಾನೇ ಕರೆದೊಯ್ಯು ತ್ತೇನೆ. ಇಂದು Hindu office ಗೆ ಹೋಗುವುದು ಖಂಡಿತಾ ತಾನೆ ?"

"ಹೂಂ." ವಿಶಾಲಿ ಉತ್ತರಿಸಿದಳು.

"ಹಾಗಾದರೆ ನಾನು ಆ ವೇಳೆಗೆ ಬರುವೆ" ಎಂದು ನಮ್ಮಿಂದ ಬೀಳ್ಕೊಂಡಳು ತಾರಿಣಿ, ತನ್ನ ಯಾವುದೋ ಒಂದು ಕೆಲಸವನ್ನು ನೆನೆಯುತ್ತ.

"ನೋಡಿದೆಯಾ ವಿಶಾಲಿ! ಅದೇಕೋ ಕಾಣೆ, ಆಕೆಗೆ ನಮ್ಮನ್ನು ಕಂಡರೆ ಅಷ್ಟು ವಿಶ್ವಾಸ! ಅವಳನ್ನು ನೋಡಿದಾಗಲೆಲ್ಲಾ ನನಗೆ ಅವಳು ಹೊರಗಿನವಳೆಂದು ಕಿಂಚಿತ್ತೂ ಅನಿಸುವುದಿಲ್ಲ. ಅವಳ ನಮ್ಮ ಪರಿಚಯ ಕೇವಲ ಮೂರು ದಿನದ್ದಿದ್ದರೂ ನೋಡಿದವರು ಯಾರೂ ಹಾಗೆ ತಿಳಿಯುವುದಿಲ್ಲ. ಅನೇಕರು ಆಕೆ ನಮಗೆ ಸಂಬಂಧಿಕಳೆಂದೇ ತಿಳಿದಿದ್ದಾರೆ!"

ಮಧ್ಯೆ ಬಾಯಿ ಹಾಕಿ ವಿಶಾಲಿ ನುಡಿದಳು. "ಹೌದು, ಹಾಗೆ ತಿಳಿದುದರಿಂದಲೇ ಇರಬೇಕು. ಈ ಬೆಳಗ್ಗೆ ಒಬ್ಬರು ಕೇಳಿಯೇಬಿಟ್ಟರು.

ಆ ಸ್ವಯಂಸೇವಕಿ ನಿಮಗೆ ಏನಾಗಬೇಕು ಎಂದು. ನಾನು ತಮಾಷೆ ಗೆಂದೆ "ಆಕೆ ನಮಗೆ ದೂರದ ನೆಂಟಳಾಗಬೇಕು ಎಂದು"

"ನೋಡಿದೆಯಾ ನಾನು ಹೇಳಿದ್ದು ಸುಳ್ಳೇನು! ಅದೇಕೋ ಏನೋ ಆಕೆಯೊಡನೆ ನಮ್ಮ ನಿಕಟ ಗೆಳೆತನಕ್ಕೆ ಯಾವುದೊ ಕಾಣದ ಕೈ ಬಂದು ನೆರವಾಗುತ್ತಿದೆ."

"ಏನಣ್ಣಾ! ಆಕೆಯೊಡನೆ ನಿನ್ನ ನಿಕಟ ಗೆಳೆತನ ತಾನೆ! ಕಾಣದ ಕೈ ನೆರವು!" ಹುಚ್ಚು ಹುಡುಗಿಗೆ ಇಲ್ಲಿಯೂ ತಮಾಷೆ.

ನಾನು ಮಾತನಾಡಲಿಲ್ಲ. ವಿಶಾಲಿಯೇ ಮುಂದೆ ಮಾತನಾಡಿದಳು. "ಹೂಂ ಈ ಕಾಣದ ಕೈ ನೆರವಿನಿಂದ ನಿಮ್ಮಗಳ ನಿಕಟ ಗೆಳೆತನ ಬೆಳೆದರೆ ನನಗದೆಷ್ಟು ಹಿಗ್ಗು. ನಿಕಟ ಗೆಳೆತನ ಬೆಳೆಯುವ ಆ ದಿನವೇ ನನ್ನ ಪಾಲಿನ ಪುಣ್ಯ ದಿನ ಸರಿ!"

ನಾನು ಮೌನ ಒಡೆಯಲಿಲ್ಲ. ಆದರೂ ವಿಶಾಲಿಯ ಮಾತು ಆಲಿಸಿ ಹೃದಯದ ಸಂತೋಷವನ್ನು ಮುಖ ತೋರಗೊಡದೇ ಇರಲಿಲ್ಲ. ನಾನು ಇಷ್ಟು ಕಾಲ ಯಾವ ವಿಷಯವನ್ನು ವಿಶಾಲಿಯಲ್ಲಿ ಪ್ರಸ್ತಾಪಿಸ ಬೇಕೆಂದಿದ್ದೆನೋ ಆ ವಿಷಯದ ಪ್ರಸ್ತಾಪ ಅನಾಯಾಸವಾಗಿಯೇ ಬಂದುಹೋಗಿತ್ತು. ವಿಶಾಲಿ ಮುಂದುವರೆಯುತ್ತ ನುಡಿದಳು.

"ನಾವು ಅದನ್ನು ತೆರೆದ ಕಣ್ಣಿನಿಂದ, ಆರದ ಹೃದಯದಿಂದ ನಿರೀಕ್ಷಿಸಬಹುದು. ಆದರೆ....ಆದರೆ ಆ ಕಾಣದ ಕೈ ನೆರವಿದ್ದರೆ ತಾನೆ! ನಿಮ್ಮಾ ಮನದ ಬಯಕೆಗೆ ಸಾಫಲ್ಯ ಸಿಗಲು. ನೋಡುವ....ನಮ್ಮ ಪುಣ್ಯದ ನೆಲೆಯನ್ನು........ಇಂದು ತಾರಿಣಿಯೊಂದಿಗೆ ಮಾತನಾಡು ತ್ತೇನೆ. ಅವಳೆಲ್ಲಾ ವಿಷಯವನ್ನೂ ಕೇಳಿ ತಿಳಿಯುತ್ತೇನೆ. ಆಕೆಯ ಕುಲಗೋತ್ರಗಳೆಲ್ಲವನ್ನೂ ವಿಚಾರಿಸಿ ಅರಿಯುತ್ತೇನೆ........ಸಮಯ ಸಿಕ್ಕರೆ ನಿನ್ನ ಮನದ ಬಯಕೆ ಕೂಡ....ಒಡೆದು ಹೇಳುತ್ತೇನೆ!"

ಅವಳ ಕಡೆಯ ಮಾತು ನನ್ನನ್ನು ಗಾಬರಿಗೊಳಿಸಿತು. ಬೆಚ್ಚಿ ನುಡಿದೆ....

"ಏನೇ ಅದು ವಿಶಾಲಿ ಒಡೆದು ಹೇಳುವುದು"

"ಯಾಕೆ ನಿನ್ನ ಮನಸ್ಸಿನಲ್ಲಿ ಆಕೆಗೆ ಸ್ಥಳವಿಲ್ಲವೇನು"?

"ಹೂಂ"

"ಆಕೆಯೊಡನೆ ಜೀವನಯಾತ್ರೆ ಸಾಗಿಸಲು ಮನಸ್ಸಿಲ್ಲವೇನು"?

"ಹೂಂ"

"ಹಾಗಾದರೆ ನಿನ್ನ ಒಪ್ಪಿಗೆ ಸಿಕ್ಕಂತಾಯಿತು. ಇನ್ನು ಉಳಿದಿರುವುದು ಅಮ್ಮನ ಅಭಿಪ್ರಾಯ. ನೀನು ಒಪ್ಪಿದಮೇಲೆ ಅಮ್ಮನೇನು ಮಾಡಿಯಾಳು!....ಪುಣ್ಯ ಮಾಡಿರಬೇಕು ಇಂತಹವಳನ್ನು ಸೊಸೆಯಾಗಿ ಬರಮಾಡಿಕೊಳ್ಳಲು........ನೋಡಬೇಕು! ಪುಣ್ಯದ ಯೋಗ ಯಾರಲ್ಲಿ ಹೇಗಿದೆ ಎಂಬುದನ್ನು."

ವಿಶಾಲಿ ಮಾತು ಮುಗಿಸಿ ನನ್ನನ್ನೇ ನೋಡತೊಡಗಿದಳು. ನನಗೆ ಏನು ಮಾತನಾಡಬೇಕೆಂದು ಹೊಳೆಯಲಿಲ್ಲ. ಅವಳ ಎಲ್ಲಾ ಮಾತು ಕೇಳಿ ಹೃದಯ ಕೃತಜ್ಞತೆಯಿಂದ ತುಂಬಿ ಬಂದಿತ್ತು. ಮಾತು ಮೂಕವಾಗಿ, ನೋಟದ ಮೂಲಕ ಕೃತಜ್ಞತೆಯನ್ನು ಅರ್ಪಿಸುತ್ತಿದ್ದೆ. ಅವಳು ನನ್ನ ಎಲ್ಲಾ ಮನದ ಆಶಯವನ್ನು ಕಂಡು ಮಾತನಾಡಿದ್ದಳು. ಹೀಗೆ ಮಾತನಾಡುವಾಗ ತಂಗಿಯ ಸ್ಥಾನದಲ್ಲಿ ನಿಂತು ಅಣ್ಣನಿಗೆ ಹೇಳಿದಂತಿರಲಿಲ್ಲ. ಹಿರಿಯಕ್ಕನ ಸ್ಥಾನದಿಂದ ಕಿರಿಯ ತಮ್ಮನಿಗೆ ಹೇಳಿದಂತಿತ್ತು. ನನಗೆ ಮೊದಲೇ ತಿಳಿದಿತ್ತು. ವಿಶಾಲಿ ಸಂಸ್ಕೃತಿಯಲ್ಲಿ, ಬುದ್ಧಿಶಕ್ತಿಯ ಹಿರಿಮೆಯಲ್ಲಿ ತನ್ನ ವಯಸ್ಸಿನ ಹುಡುಗಿಯರಿಗಿಂತ ಬಹಳ ಮುಂದೆ ಹೋಗಿರುವಳೆಂದು. ಅದು ಈಗ ಮತ್ತಷ್ಟು ಧೃಡವಾಯಿತು. ಅವಳ ಬಗ್ಗೆ ನನಗೆ ಅದೆಷ್ಟು ಗೌರವ ಉಂಟಾಯಿತು. ಅಂತಹ ವಿಚಾರವಂತ ತಂಗಿಯನ್ನು ಪಡೆದುದಕ್ಕೆ ಮನಸ್ಸಿನಲ್ಲಿಯೇ ಹಿಗ್ಗಿದೆ. ವಿಶಾಲಿಗೆ ನನ್ನ ಒಳಮನಸ್ಸಿನಲ್ಲಿ ಏಳುತ್ತಿದ್ದ ಭಾವನೆಗಳ ಅರಿವಾಗಿರಬೇಕು. ಅದರಿಂದಲೇ ನನ್ನಿಂದ ಏನೂ ಮಾರ್ನುಡಿಯನ್ನು ಬಯಸಲಿಲ್ಲ.

ಫಲಾಹಾರ ಮುಗಿಸಿ ತಾರಿಣಿಗಾಗಿ ಕಾಯುತ್ತಾ ಕುಳಿತಾಗ ತಾರಿಣಿ ಬಂದಳು. ತಾನು ಹೊತ್ತು ಮೀರಿ ಬಂದುದಕ್ಕೆ ನಮ್ಮ ಕ್ಷಮಾಪಣೆ ಕೇಳಿದಳು. "ಏನೂ ಅಂತಹ ತಡವಾಗಲಿಲ್ಲ. ಇನ್ನೂ ಬೇಕಾದಷ್ಟಿದೆ ಸಮಯ. ನಾವೇನೋ ಹೊರಡಲು ಸಿದ್ಧರಾಗಿ ಕುಳಿತಿದ್ದೇವೆ. ಇನ್ನು ನೀನು ಹೊರಡುವುದೇ ಬಾಕಿ ಉಳಿದಿರುವುದು." ಎಂದಳು ವಿಶಾಲಿ.

"ಅದೆಷ್ಟು ಹೊತ್ತು ನಾನು ಸಿದ್ಧಳಾಗಿ ಬರುವುದು, ಒಂದೈದು ನಿಮಿಷ. ನಮ್ಮ ದಳದವರಿಗೆ ಒಂದು ಮಾತು ತಿಳಿಸಿ ಬಂದುಬಿಡುತ್ತೇನೆ."

ತಾರಿಣಿ ತನ್ನ ದಳದವರಿಗೆ ತಿಳಿಸಿ ಬರಲು ಹೊರಟಳು. ಅವಳು ಅಂದಂತೆ ಐದು ನಿಮಿಷಗಳಲ್ಲಿಯೇ ನಮ್ಮೊಡನೆ ಬಂದು ಸೇರಿದಳು. ಮೂವರೂ ವಸತಿ ಗೃಹ ಬಿಟ್ಟು ಹೊರಟೆವು. ಅಲ್ಲಿಂದಲೇ ಬಸ್ಸು ಹಿಡಿದು Mount Roadಗೆ ಬಂದು ಇಳಿದೆವು. ಅದೇ ಮದರಾಸಿನಲ್ಲೆಲ್ಲಾ ಅತಿ ಮುಖ್ಯವಾದ ರಸ್ತೆ. ಅದು ನಮ್ಮ ಬೆಂಗಳೂರು ಅವೆನ್ಯೂ ರೋಡು ಇದ್ದಂತೆ. ಇಲ್ಲೇ ಅನೇಕ ದೊಡ್ಡ ದೊಡ್ಡ ಕಂಪೆನಿಗಳ ಕೇಂದ್ರ ಕಛೇರಿಗಳು ಇರುವುದು. ಇಲ್ಲೇ Daily Mail, Hindu, Indian Express ಮೊದಲಾದ ಪತ್ರಿಕೆಗಳ ಕಛೇರಿಗಳಿರುವುದು.

ತಾರಿಣಿ ಹಿಂದೂ ಆಫೀಸಿಗೆ ಕರೆದೊಯ್ದಳು. ಅದು ಆ ರಸ್ತೆಯಲ್ಲೆಲ್ಲಾ ಉನ್ನತ ಕಟ್ಟಡವೂ ಹೌದು, ಭಾರೀ ಕಟ್ಟಡವೂ ಹೌದು. ಅದು ಮೂರು ಅಂತಸ್ತಿನ ಕಟ್ಟಡ. ಹೆಸರು—ಕೇಸರಿ ಬಿಲ್ಡಿಂಗ್ಸ್ ಎಂದು. ಕೆಳಗಡೆಯ ಭಾಗದಲ್ಲಿ ಆಫೀಸಿನ ಕಾರ್ಯಾಲಯಗಳು, ಮೇಲಿನ ಅಂತಸ್ತಿನಲ್ಲಿ ಮುದ್ರಿಸುವ ಯಂತ್ರೋಪಕರಣಗಳು. ಅದರ ಮೇಲಿನ ಅಂತಸ್ತಿನಲ್ಲಿ, ಸಂಪಾದಕನ, ಒಡೆಯನ ಆಫೀಸುಗಳು. ಅಲ್ಲಿಗೆ ಏರಿ ಹೋಗಲು ಕೆಳಭಾಗದಿಂದ ಬೇರೆ ದಾರಿ ಇದೆ.

ತಾರಿಣಿಯು ಮೊದಲೇ ಸಂಶಯ ವ್ಯಕ್ತಪಡಿಸಿದ್ದಳು, ಇಂದು ಆಫೀಸು ನೋಡಲಾಗುತ್ತದೆಯೋ ಇಲ್ಲವೋ ಎಂದು. ಅವಳು ಸಂಶಯ

ಪಟ್ಟಿದ್ದಂತೆಯೇ ಆಯಿತು. ನೋಡಲು ಬರುವವರೆಲ್ಲರೂ ಮುಂಭಾಗಿಯಾಗಿ ಪ್ರವೇಶಕ್ಕಾಗಿ ಅಪ್ಪಣೆ ಚೀಟಿ ಪಡೆಯಬೇಕು. ಹಾಗೆ ಅಪ್ಪಣೆ ಪಡೆಯದ ಹೊರತೂ ಒಳಗೆ ಪ್ರವೇಶವಿಲ್ಲ. ಅಪ್ಪಣೆ ಚೀಟಿ ಇಂದು ಪ್ರಾರ್ಥಿಸಿದ್ದರೆ ನಾಳೆ ದೊರೆಯುವ ಸಂಭವ. ಇದು ಅಲ್ಲಿನ ರೀತಿ. ಅಂದೇ ಒಳಗೆ ಪ್ರವೇಶಿಸಲು ಅಪ್ಪಣೆಗಾಗಿ ನಾನು ಪ್ರಯತ್ನಿಸಿ ವಿಫಲನಾದೆ. ಕಡೆಗೆ ನಾಳೆ ಬಂದರಾಯಿತೆಂದುಕೊಂಡು ಅಪ್ಪಣೆಗಾಗಿ ಪ್ರಾರ್ಥನಾ ಚೀಟಿಯೊಂದನ್ನು ಬರೆದುಕೊಟ್ಟು ಹೊರಗೆ ಬರುತ್ತಾ "ಮುಂದೇನೆಂದು" ತಾರಿಣಿಯ ಕಡೆ ನೋಡಿದೆ. ಈ ಮೊದಲೇ ಮುಂದೇನು ಮಾಡಬೇಕೆಂದು ವಿಶಾಲಿಯ ಮುಖದಲ್ಲಿ ಪ್ರಶ್ನಾರ್ಥಕ ಚಿನ್ಹೆ ಎದ್ದು ಕಾಣುತ್ತಿತ್ತು. ಅವಳು ಅದೇ ಪ್ರಶ್ನಾರ್ಥಕ ದೃಷ್ಟಿಯಿಂದ ತಾರಿಣಿಯ ಕಡೆ ನೋಡಿದಳು.

"ಈಗೆಲ್ಲಿ ಹೊರಡುವುದು?............ನಾಳೆ ನೋಡಬೇಕೆಂದಿದ್ದ ಲೈಬ್ರರಿ, ವಸ್ತುಪ್ರದರ್ಶನಾಲಯ ಇಂದೇ ನೋಡಿ ಬರುವ ಬನ್ನಿ ! ಹೇಗಿದ್ದರೂ ಹೊರಟು ಬಂದಾಗಿದೆ". ಎಂದಳು ತಾರಿಣಿ

"ಯಾವುದೋ ಒಂದು. ಅಂತೂ ಬಂದಮೇಲೆ ಏನೂ ನೋಡದೆ ಹಿಂತಿರುಗದಿದ್ದರೆ ಸರಿ" ವಿಶಾಲಿ ಎಂದಳು.

ನಾನು ಹೂಂಗುಟ್ಟಿದೆ. ಮೂವರೂ 'ಕನ್ನಮೇರ' ಲೈಬ್ರರಿಗೆ ಹೊರಟೆವು. ಆ ಲೈಬ್ರರಿಯ ಹೆಸರು ಆಗಾಗ್ಗೆ ಪತ್ರಿಕೆಗಳಲ್ಲಿ ಕೇಳಿದ್ದೆ, ದಕ್ಷಿಣ ಇಂಡಿಯಾದಲ್ಲೆಲ್ಲಾ ದೊಡ್ಡ ಗ್ರಂಥಾಲಯವೆಂದು. ಅದರ ಬದಿಯಲ್ಲೇ ವಸ್ತು ಸಂಗ್ರಹಾಲಯ. ಬೆಂಗಳೂರಿನಲ್ಲಿರುವುದಕ್ಕಿಂತಲೂ ಹತ್ತು ಮಡಿ ದೊಡ್ಡದು. ಅಲ್ಲದೆ ಇಲ್ಲಿ ಅನೇಕ ಪ್ರೇಕ್ಷಣೀಯವಾದ ವಸ್ತುಗಳಿವೆ. ಅವುಗಳ ಪೈಕಿ ಹರಪ್ಪ ಮಹೇಂಜದಾರೂಗಳ ಭೂಶೋಧನೆಯ ಕಾಲದಲ್ಲಿ ದೊರೆತ ಹಿಂದೀಯ ಪೂರ್ವ ನಾಗರೀಕತೆಯ ಕುರುಹು ಎನಿಸಿದ ಅನೇಕ ವಸ್ತುಗಳನ್ನು ಇಟ್ಟಿದ್ದಾರೆ. ಆಗಿನ ಕಾಲದವರು ಉಪಯೋಗಿಸುತ್ತಿದ್ದ, ಉಡುಗೆ, ತೊಡುಗೆ, ಪಾತ್ರೆ ಸಾಮಾನುಗಳೂ, ಆಟದ ವಸ್ತುಗಳೂ

ಆಹಾರದ ಧಾನ್ಯಗಳೂ ಅಂದು ಹೇಗಿದ್ದವೋ ಇಂದೂ ಅದೇ ಸ್ಥಿತಿಯಲ್ಲಿ ಕಾದಿರಿಸಿದ್ದಾರೆ.

ಮತ್ತೊಂದು ನೋಡತಕ್ಕ ವಸ್ತುವೆಂದರೆ ಕಲಾಭಾಗದಲ್ಲಿರುವ ರವಿ ವರ್ಮನ ಚಿತ್ರಗಳು. ಅವನ ಚಿತ್ರಗಳಲ್ಲಿ ಕೆಲವನ್ನು ಇಲ್ಲಿ ಪ್ರದರ್ಶಿಸಿರುವರು. ಅವುಗಳ ಪೈಕಿ ದಮಯಂತಿ, ಶಾಕುಂತಲ ನೋಡತಕ್ಕ ಚಿತ್ರಗಳು. ಭಾರತೀಯರ ಕಲಾಕೌಶಲ್ಯವನ್ನು ಜಗತ್ತಿಗೇ ತೋರಗೊಡುವ ರತ್ನಗಳು ಅವು.

ಇದಕ್ಕೆ ಸೇರಿಕೊಂಡಿರುವಂತೆಯೇ ಕನ್ನಮೇರ ಲೈಬ್ರರಿ ಇದೆ. ಬೆಂಗಳೂರಿನ ಪಬ್ಲಿಕ್ ಲೈಬ್ರರಿಯಷ್ಟು ಸ್ಥಳ ವಿಶಾಲವಿಲ್ಲದಿದ್ದರೂ ಇರುವ ಸ್ಥಳದಲ್ಲಿಯೇ ಪುಸ್ತಕಗಳನ್ನು ತಂಬಿದ್ದಾರೆ. ಲೈಬ್ರರಿಯನ್ನು ಪ್ರವೇಶಿಸಿದಾಗ ವಿಶಾಲಿಯು ಕನ್ನಡ ಸಾಹಿತ್ಯಕ್ಕೆ ಅವರು ಮೀಸಲಿಟ್ಟಿರುವ ಭಾಗವನ್ನು ನೋಡಲು ಹೋಗಿ–ನಿರಾಶೆಗೊಂಡಳು. "ಇಷ್ಟು ದೊಡ್ಡ ಲೈಬ್ರರಿಯಲ್ಲಿ ಇಷ್ಟು ಸಣ್ಣ ಸ್ಥಾನವೇ ಕನ್ನಡಕ್ಕೆ." ಎಂದು ಬಿಸುಸುಯ್ದಳು. "ಎಲ್ಲಿ ಹೋಗಲಿ ಇವಳ ಈ ಹುಚ್ಚು ಬಿಡದಲ್ಲಾ! ಕನ್ನಡ ಸಾಹಿತ್ಯಕ್ಕೆ ಅಷ್ಟೊಂದು ಭಾಗ ಮೀಸಲಿಡಲು ಅದು ಯಾವ ಹಿರಿಯ ಭಾಷೆ! ಶುದ್ಧ ದಡ್ಡ ಹುಡುಗಿ" ಎಂದುಕೊಂಡೆ.

ನಾವು ಗ್ರಂಥಾಲಯದಲ್ಲಿ ಒಂದು ತಾಸಿಗಿಂತಲೂ ಹೆಚ್ಚಾಗಿ ಕಳೆದೆವು. ಅಲ್ಲಿಂದ ಹೊರಟಾಗ ಏಕೋ ಕಾಫಿ ಕುಡಿಯುವ ಲವಲವಿಕೆಯಾಯಿತು. ಮಧ್ಯಾಹ್ನ ಫಲಹಾರಗೃಹದಲ್ಲಿ ಅವರಿತ್ತ ಕಾಫಿಗೆ ಸಕ್ಕರೆ ಹೆಚ್ಚು ಹಾಕಿ ಅದರ ರುಚಿಯನ್ನು ಕೆಡಿಸಿದ್ದರು. ಅಲ್ಲಿ ಇದ್ದ ಹೋಟೆಲೊಂದಕ್ಕೆ ನುಗ್ಗಿದೆವು. ನಾವು ಅಲ್ಲಿದ್ದ ಕುರ್ಚಿಯಮೇಲೆ ಕೂತುಕೊಂಡಾಗ ನಮ್ಮ ಉಡುಗೆ ತೊಡುಗೆಯನ್ನೂ, ಭಾಷೆಯನ್ನೂ ಕಂಡು ನಮಗೆ Serve ಮಾಡಲು ಬಂದವನು ಕನ್ನಡದಲ್ಲಿಯೇ ನಮಗೇನು ಬೇಕೆಂದು ಕೇಳಿದನು. ನಾವು ಹೇಳಿದ ಪದಾರ್ಥವನ್ನು ಉತ್ಸಾಹದಿಂದ ತಂದೀಯುತ್ತಿದ್ದನು. ಅವನಿಗೆ ಕನ್ನಡ ಬರುವುದನ್ನು ಕಂಡು ವಿಶಾಲಿಯ ಕುತೂಹಲ ಕೆರಳಿ

ಅವನನ್ನು ಪ್ರಶ್ನಿಸಿದಳು. "ಏನು! ನೀನು ಕನ್ನಡ ಮಾತಾಡುವೆಯಾ, ನೀನೂ ಕನ್ನಡಿಗನೋ!"

"ಹೌದು. ನಮ್ಮ ಸ್ಥಳ ಮಂಗಳೂರು. ನಮ್ಮ ಒಡೆಯನು ಕೂಡ ಕನ್ನಡಿಗನೇ, ಅವನು ಉತ್ತರವಿತ್ತ. "ಭೇಷ್! ಕನ್ನಡಿಗರ ಹೋಟೆಲು ಈ ತಮಿಳು ಮಯವಾದ ಮದರಾಸಿನಲ್ಲಿ. ಅದರಲ್ಲೂ ಈ ವಸ್ತು ಪ್ರದರ್ಶನಾಲಯದ ಬಳಿಯಲ್ಲಿ!" ಎಂದು ಉಬ್ಬಿನಿಂದ ಹೇಳಿದಳು.

"ಯಾಕೆ ವಿಶಾಲಿ! ನಿನಗೆ ತಿಳಿಯದೇನು! ತಮಿಳು, ತೆಲುಗು ಮಯವಾದ ಈ ಮದರಾಸಿನಲ್ಲಿಯೂ ನಾವು ಕನ್ನಡಿಗರು ಸುಮಾರು ಮೂವತ್ತು ಸಾವಿರಕ್ಕೆ ಮೇಲಿದ್ದೇವೆಂಬುದನ್ನು" ತಾರಿಣಿ ಅಂದಳು.

"ತಿಳಿಯದೇ ಏನು—ಆದರೂ ಇಲ್ಲಿಯ ಜನಸಂಖ್ಯೆಯಲ್ಲಿ ಆ ಮೂವತ್ತು ಸಾವಿರವೇನು ದೊಡ್ಡ ಸಂಖ್ಯೆ. ಎಲ್ಲಿ ನೋಡಿದರೂ ತೆಲುಗು, ತಮಿಳು, ಇಲ್ಲಾ ಇಂಗ್ಲೀಷು ಭಾಷೆಗಳು ತಾನೇತಾನಾಗಿ ಕೇಳಿ ಬರುವ ಈ ಪಟ್ಟಣದಲ್ಲಿ ಒಮ್ಮೆ ಕನ್ನಡ ಬಲ್ಲವನನ್ನು ಕಂಡರೆ ಅದೆಷ್ಟು ಮನಸ್ಸಿಗೆ ಹರ್ಷವಾಗುವುದು!"

"ಹೌದು. ಇಲ್ಲಿಯ ಕನ್ನಡಿಗರಿಗೆ ಕನ್ನಡ ಕೇವಲ ಮಾತೃಭಾಷೆ—ಮನೆಭಾಷೆ—ಹೊರಗೆ ಹೊರಟರೆ, ತಮಿಳನ್ನಾಗಲಿ, ತೆಲುಗನ್ನಾಗಲೀ ಅವರು ಬಳಸದಿದ್ದರೆ ಅವರಿಗೆ ವಿಧಿಯೇ ಇಲ್ಲ. ಆದುದರಿಂದ ಅವರು ಅದನ್ನು ಧಾರಾಳವಾಗಿ, ತಾವು ತಮಿಳರು ಇಲ್ಲ ತೆಲುಗರು ಎನ್ನುವ ಮಟ್ಟಿಗೆ ಮಾತನಾಡುತ್ತಾರೆ. ಇಂತಹವರು ಹೊರಗೆ ಕೂಡ ಕನ್ನಡ ಬಳಸುವ ಕನ್ನಡಿಗರನ್ನು ಕಂಡರೆ ಹೆಮ್ಮೆಯಾಗದೆ ಮತ್ತೇನು?"

ತಿಂಡಿ ಮುಗಿಸಿ ನಿಧಾನವಾಗಿ ಕಾಲು ಹಾಕುತ್ತಾ ನಡೆದೆವು, ನಮ್ಮ ಸ್ವಗೃಹಕ್ಕೆ, ಪುರುಷುವಾಕಂನಲ್ಲಿನ ವಸತಿಗೃಹದ ಕಡೆಗೆ. ನಾವು ವಸತಿಗೃಹಕ್ಕೆ ಬರುವ ವೇಳೆಗೆ ನನಗೆ ಬಹಳ ಆಯಾಸವಾಗಿತ್ತು. ಕೈಕಾಲು ತೊಳೆದು ಹಾಸಿಗೆ ಉರುಳಿಸಿ ಮಲಗಿದೆ. ತಾರಿಣಿ, ವಿಶಾಲಿ

ಯರಿಗೆ ಆಯಾಸವಿದ್ದಂತೆ ತೋರಲಿಲ್ಲ. ಸಭಾಂಗಣದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ನೋಡ ಹೊರಟರು.

ಅವರು ಮರಳಿ ಬರುವ ಹೊತ್ತಿಗೆ ನನಗೆ ನಿದ್ರೆಯ ಜೊಂಪು ಹತ್ತ ತೊಡಗಿತ್ತು. ಆಗಲೇ ಊಟದ ಸಮಯವಾಗಿತ್ತು. ಅದೊಂದಿಷ್ಟು ಊಟ ಮುಗಿಸಿ ಬಂದರೆ ನಿದ್ರೆಗೆ ಅದಾವ ತೊಡಕೂ ಇರದೆಂದು ಗಲಿಬಿಲಿ ಯಿಂದ ಊಟ ಮಾಡಿ ಬಂದು ಮಲಗಿದ್ದೆ. ವಿಶಾಲಿ ಸಭೆ ಮುಗಿಸಿ ಕೊಂಡು ಬಂದು ಊಟಕ್ಕೆ ಎಬ್ಬಿಸಿದಳು. ನಿದ್ರೆಗಣ್ಣಿನಲ್ಲಿಯೇ ನನ್ನೂಟ ವಾಗಿರುವುದಾಗಿ ಹೇಳಿದೆ. ಅವಳು ತಾರಿಣಿಯೊಂದಿಗೆ ಊಟಕ್ಕೆ ಹೊರಟಳು. ಅವರು ಊಟ ಮುಗಿಸಿ ಬಂದಾಗಲೂ ನಾನು ನಿದ್ರೆಯ ಅಮಲಿನಲ್ಲಿಯೇ ಇದ್ದೆ. ಅವರು ಹೊರಭಾಗದ ತಾರಸಿಯಲ್ಲಿ ಕುಳಿತು ಅದಾವುದೋ ವಿಷಯವಾಗಿ ಹರಟೆ ಕೊಚ್ಚುತ್ತಿದ್ದರು. ಆದರೂ ಅವರಾಡುವ ಮಾತು ಯಾವುದೂ ನನಗೆ ಸ್ಪಷ್ಟವಾಗಿ ಕೇಳುತ್ತಿರಲಿಲ್ಲ. ಏನೋ ಗುಸಗುಸ ಎಂದು ಕೇಳುತ್ತಿತ್ತು. ಯಾವುದೋ ಕನಸಿನಲ್ಲಿಯ ವ್ಯಾಪಾರದಂತೆ ಭಾಸವಾಗುತ್ತಿತ್ತು. ಅಂತೂ ನಿದ್ರೆ ಯಾವಾಗ ಬಂದಿತೋ ನನಗೆ ನೆನಪು ಉಳಿಯಲಿಲ್ಲ. ಮತ್ತೆ ಪ್ರಾತಃಕಾಲದ ತಂಗಾಳಿ ಮೋರೆಗೆ ಬೀಸಿದಾಗಲೇ ನನಗೆ ಎಚ್ಚರ.

೭

ಆಗತಾನೆ ಕತ್ತಲು ಹರಿಯುತ್ತಿತ್ತು. ಜನ, ವಾಹನಗಳ ಸಂಚಾರ ಮೊದಲಾಗತೊಡಗಿತ್ತು. ಮೋಟರುಗಳು ಹಾದುಹೋಗು ವಾಗ ಮಾಡುವ ಆ ಕರ್ಕಶ ನಾದ ಕೇಳಲಾರಂಭಿಸುತ್ತಿತ್ತು. ತಂಗಾಳಿ "ಸುಯ್" ಗುಟ್ಟಿ ಮುಖಕ್ಕೆ ಬಡಿಯುತ್ತಿತ್ತು. ಹಕ್ಕಿ ಚಿಲಿಪಿಲಿಗುಟ್ಟು ವುದು ನಿರರ್ಗಳವಾಗಿ ಕೇಳಿಬರುತ್ತಿತ್ತು. ರಸ್ತೆ ಗುಡಿಸುವ ಜಲಗಾರರು ತಮ್ಮ ಕೆಲಸವನ್ನಾಗಲೇ ಆರಂಭಿಸಿದ್ದರು. ಅವರ ಕೈ ಚಾಮರದ ಕಡ್ಡಿ ಗಳು ಹಳ್ಳತಿಟ್ಟು ನೆಲದ ಮೇಲಿನ ಕಸವನ್ನು ಮುಂದೆ ತಳ್ಳುತ್ತಾ

ನಡೆದಾಗ ಉಂಟಾಗುವ "ಚರ್‌ಚರ್" ನಾದ ಕೇಳಿಬರುತ್ತಿತ್ತು. ಅದಕ್ಕೆ ಹಿಮ್ಮೇಳಗೈವಂತೆ ಗುಡಿಸುವವರ ಕಾಲಿನ ಚಕ್ಕಳದ ಜೋಡು ಚರ್‌ಚರ್‌ಗುಟ್ಟುತ್ತಿತ್ತು. ಅವರು ನಡೆಯುವಾಗಲೆಲ್ಲಾ ಅಲ್ಲಿಯೇ ಕಸದ ತೊಟ್ಟಿಗಳ ಬಳಿ ಹಾಯಾಗಿ ಮಲಗಿ ನಿದ್ರಿಸುತ್ತಿದ್ದ ನಾಯಿಗಳ ನಿದ್ರೆಗೆ ಈ ಜಲಗಾರರಿಂದ ಭಂಗ ಬಂದುದರಿಂದ ಅರೆ ನಿದ್ರೆಯ ದನಿಯಲ್ಲಿ ಅವು ಕೂಗಿಕೊಳ್ಳುತ್ತಿದ್ದವು.

ಹತ್ತಿರದ ಮನೆಯೊಂದರಿಂದ ಬೆಳಗಿನ ಕಾಫಿ, ತಿಂಡಿ ಮಾಡು ವಾಗಿನ ಡಬ್ಬ ಪಾತ್ರೆಗಳ ಶಬ್ದ ಕೇಳಿಬರುತ್ತಿತ್ತು. ಆ ಮನೆಯ ಯಜಮಾನಿಯೋ ಯಾರೋ—ಅವರ ದನಿಯಿಂದ ಹೇಳುವುದಾದರೆ ಅವರು ಯಜಮಾನಿಯೇ ಇರಬೇಕು—ಈಗಾಗಲೇ ಕೆಲಸದ ಆಳಿನ ಮೇಲೋ, ಅಡಿಗೆ ಭಟ್ಟರ ಮೇಲೋ ರೇಗಲಾರಂಭಿಸಿದ್ದರು! ಪಾಪ ಆ ಪ್ರಾಣಿಗೆ ದಿನ ಹುಟ್ಟುವ ಮುನ್ನವೇ ಬೈಗಳ ಪೂಜೆ! ಬಹುಶಃ ಆ ಮನೆಯಲ್ಲಿ ಅವನಿಗೂ—ಅವಳಿಗೂ— ಅದು ನಿತ್ಯದ ವಿಧಿಯಾಗಿರ ಬೇಕು! ಇಲ್ಲದೆಇದ್ದರೆ ಆ ಯಜಮಾನಿಯ ಒಂದೇ ಸಮನಾಗಿ ನಡೆದಿದ್ದ ಬೈಗಳಿಗೆ ಮಧ್ಯೆ ಮಧ್ಯೆ ತಡೆ ಒದಗದೆ ಇರುತ್ತಿತ್ತೆ?

ಅಂತೂ ಅವರೆಲ್ಲಾ ಬೆಳಗಿನ ದೂತರಂತೆ ಕಂಡರು. ನಾನು ಅದನ್ನೆಲ್ಲಾ ಆಲಿಸುತ್ತಾ ಬಿದ್ದಿದ್ದೆ. ಅದೆಷ್ಟೋ ಹೊತ್ತಿನಮೇಲೆ ಪೂರಾ ಬೆಳಗಾದುದು. ಇನ್ನೂ ವಿಶಾಲಿಯು ನಿದ್ದೆಹೋಗುತ್ತಲೇ ಇದ್ದಳು. ರಾತ್ರಿಯಲ್ಲಾ ಹರಟೆಯಲ್ಲಿ ಕಳೆದಿರಬೇಕು! ಇಲ್ಲದಿದ್ದರೆ ಎಂದೂ ಇಲ್ಲದ ನಿದ್ದೆ ಇಂದು ಅವಳು ಮಾಡುವುದೆಂದರೇನು? ನಾನು ಎಬ್ಬಿಸಲಿಲ್ಲ. ನೋಡೋಣ ಎಷ್ಟು ಹೊತ್ತಿಗೆ ಏಳುವಳೋ ಎಂದುಕೊಂಡು ಸುಮ್ಮನಿದ್ದೆ. ಹೊರಗೆ ಹೋಗಿ ಬೆಳಗಿನ ನಿತ್ಯವಿಧಿಯನ್ನು ತೀರಿಸಿ, ಮುಖವನ್ನು ತೊಳೆದು ಹಿಂದಿರುಗಿ ಬಂದಾಗಲೂ ವಿಶಾಲಿ ಇನ್ನೂ ನಿದ್ದೆ ಮಾಡುತ್ತಲೇ ಇದ್ದಳು. ಕಡೆಗೆ ನಾನೇ ಎಬ್ಬಿಸಬೇಕಾಯಿತು ಅವಳನ್ನು, ಬೆಳಗಿನ ಕಾಫಿಗೆ ಸೊನ್ನೆ ಬಿದ್ದೀತೆಂದು.

"ಏಳೇ ವಿಶಾಲಿ ಸಾಲದೇನು ಹೊತ್ತು, ಬೆಳ್ಳಂಬೆಳಗಾಗಿದೆ, ಇನ್ನೂ ನಿನಗೆ ನಿದ್ರೆಯೇ? ಈಗಾಗಲೇ ಕಾಫಿ ಮುಗಿದು ಬಂದಿರಬೇಕು." ಎಂದು ನಾಲ್ಕಾರು ಬಾರಿ ಕೂಗಿ ಎಬ್ಬಿಸಿದೆ. 'ಕಾಫಿ' ಎಂಬ ಶಬ್ದವನ್ನು ಕೇಳಿ ತಟಕ್ಕನೆ ಹಾಸಿಗೆ ಬಿಟ್ಟೆದ್ದು ಕುಳಿತಳು. ವಿಶಾಲಿ ನಿದ್ರೆಯ ಅಲಸಿಕೆಯನ್ನು ಕಳೆಯಲು ಮೈಕೈಯನ್ನು ಕೊಡವಿ, . ಕಣ್ಣುಜ್ಜಿ, ನಾಲ್ಕೂ ಕಡೆ ನೋಡಿದಳು. ಆಗ ಪೂರಾ ಬೆಳಕು ಹರಿದಿದ್ದುದನ್ನು ಕಂಡು—ನಾನೆಂತಹ ಮಂಕು—ಈವರೆಗೆ ಮಲಗಿದ್ದೆನಲ್ಲಾ ಎಂದು ಉದ್ಗಾರ ತೆಗೆಯುತ್ತಾ ಎದ್ದಳು.

"ಏನು ರಾತ್ರಿ ಹನ್ನೆರಡರ ತನಕ ಹರಟುತ್ತಿದ್ದಿರೆಂದು ತೋರುತ್ತೆ. ಅದಕ್ಕೇ ಒಂಭತ್ತು ಗಂಟೆಯಾದರೂ ಇನ್ನೂ ನಿದ್ದೆ."

"ಛೆ! ಹನ್ನೊಂದರ ತನಕ ಅದೂ ಇದೂ ಮಾತಾಡುತ್ತಿದ್ದು ತಾರಿಣಿಯನ್ನು ಅಷ್ಟು ದೂರ ಕಳುಹಿಸಿಕೊಟ್ಟು ಬಂದು ಮಲಗಿಬಿಟ್ಟೆ" ಎಂದಳು.

ರಾತ್ರಿ ಅಷ್ಟು ಹೊತ್ತಿನವರೆಗೆ ಅವರು ಹರಟುತ್ತಿದ್ದುದು ನನಗೆ ಸರಿಬರಲಿಲ್ಲ. ಅಲ್ಲದೆ ಅಂತಹ ಸರಿಹೊತ್ತಿನಲ್ಲಿ ಅವರಿಬ್ಬರೇ ಹೊರಗೆ ಹೋಗಿ ಬಂದುದು ನನಗೆ ಸರಿಕಾಣಲಿಲ್ಲ. ಕೊಂಚ ಗಡುಸು ದನಿಯಲ್ಲಿಯೆ ಹೇಳಿದೆ.

"ರಾತ್ರಿಯಲ್ಲಾ ಕೆಲಸಕ್ಕೆ ಬಾರದ ಕಾಡುಹರಟೆ! ಈಗ ಏಳುವುದು ಒಂಭತ್ತು ಗಂಟೆಗೆ" ನನ್ನ ಮಾತು ವಿಶಾಲಿಗೆ ಹೊಸ ತರಹದ್ದು. ಎಂದೂ ಅವಳನ್ನು ನಾನು ಈ ರೀತಿ 'ಮುಖಾರ' ಗದರಿಸಲಿಲ್ಲ. ಬೆಳಗಾಗುತ್ತಲೇ ನಾನು ಹಾಗೆ ಗದರಿದುದನ್ನು ಕೇಳಿ ಮನಸ್ಸಿಗೆ ನೋವಾಗಿರಬೇಕು. ಅವಳು ಮೋರೆ ಸಣ್ಣದು ಮಾಡಿಕೊಂಡು ಎದ್ದಳು. ಅವಳ ಮುಖವನ್ನು ನೋಡಿದೊಡನೆಯೇ ನನಗೆ ಅನಿಸಿತು ಹಾಗೆ ಗದರಬಾರದಿತ್ತು ಎಂದು.

ವಿಶಾಲಿ ಯಾವ ಮಾತಿಲ್ಲದೆ ಮುಖ ತೊಳೆದು ಫಲಾಹಾರವನ್ನು ಮುಗಿಸಿ ಬಂದಳು. ಈ ವೇಳೆಯಲ್ಲಿ ನನ್ನೊಡನೆ ಹೆಚ್ಚು ಮಾತನಾಡಲಿಲ್ಲ. ನಾನು ಕೇಳಿದುದಕ್ಕೆ 'ಉಂಟು' 'ಇಲ್ಲ' ಎಂದು ಮಾತ್ರ ಅನ್ನುತ್ತಿದ್ದಳೇ ಹೊರತೂ ಹೆಚ್ಚೇನೂ ನುಡಿದಿರಲಿಲ್ಲ. ನಾನು ನಾಲ್ಕಾರು ಬಾರಿ ಮಾತಿಗೆಳೆಯಲು ಪ್ರಯತ್ನಿಸಿ ವಿಫಲನಾದೆ. ಇದರಿಂದ ನನಗೆ ಮತ್ತಷ್ಟು ಕೋಪ ಬಂತು—"ಗಂಡಸುತನಕ್ಕೆ ಅವಮಾನವೇ? ಅವಳು ಮಾತನಾಡದಿದ್ದರೆ ನನಗೇನು!" ಎಂದುಕೊಂಡು ನಾನೂ ಮುಂದೆ ಅವಳೊಡನೆ ಮಾತಿನ ಪ್ರಸಂಗ ನಡೆಸಲಿಲ್ಲ. ಅಂದೆಲ್ಲಾ ನನಗೆ ಯಾವುದೋ ಒಂದು ತರಹದ ಮಂಕು ಕವಿದಂತಿತ್ತು. ವಿಶಾಲಿಯೊಡನೆ ಚಕಾರವೆತ್ತದೆ ಸ್ನಾನ ಮುಂತಾದುವನ್ನು ತೀರಿಸಿ ಬಂದೆ. ಆದರೆ ವಿಶಾಲಿಯಿದ್ದ ಕೊಠಡಿಯಲ್ಲಿ ಮಾತಿಲ್ಲದೆ ಒಂದು ಕ್ಷಣ ಕೂಡುವುದು ನನ್ನಿಂದಾಗದ ಕೆಲಸವಾಯಿತು. ಎದ್ದು ಹೊರಗೆ ಹೊರಟೆ. ಹೊರಗಿನಿಂದಾದರೂ ನನ್ನ ಈ "ಗೃಹಶಾಂತಿ" ದೊರೆಯಬಹುದೆಂದು. ಆದರೆ ಅದೆಲ್ಲಿಯ ಶಾಂತಿ ಹೊರಗಡೆ! ಮತ್ತಷ್ಟೂ ಮನಸ್ಸಿಗೆ ಅಲಸಿಕೆಯಾಯಿತು. ಏನೋ ಒಂದು ಕಳೆದುಕೊಂಡಂತಿತ್ತು. ಹೆಚ್ಚು ಕಾಲ ಹೊರಗಡೆ ಅಡ್ಡಾಡಲಾರದೆ ಸೀದಾ ಕೊಠಡಿಗೆ ಬಂದುಬಿಟ್ಟೆ. ಈ ವೇಳೆಗೆ ನಾನು ಮಾಡಿದುದು ತಪ್ಪೆಂದು ನನಗೆ ಮನದಟ್ಟಾಗಿತ್ತು. ವಿಶಾಲಿಯನ್ನು ತಪ್ಪಾಯಿತೆಂದು ಕೇಳದ ಹೊರತೂ ನನ್ನ ಮನಸ್ಸಿಗೆ ಸಮಾಧಾನವಾಗುವಂತಿರಲಿಲ್ಲ. ಪಾಪ ನಾನು ಅವಳನ್ನು ಹಾಗೇಕೆ ಗದರಬೇಕಿತ್ತು, ಅವಳು ಮಾಡಿದ ತಪ್ಪಾದರೂ ಏನು? ಆ ಪಕ್ಕದ ಗೃಹದಲ್ಲಿನ ರೇಗಾಟ, ಗದರಿಕೆಯನ್ನು ನೀನೂ ಕೂಡ ಅನುಕರಣ ಮಾಡಬೇಕೆ? ನಮ್ಮ ಈ ಸರಸ ಬಾಳಿನಲ್ಲಿ ವಿರಸ ಹುಟ್ಟಿಸಬೇಕೆ? ಎಂದು ಹಾಳು ಮನಸ್ಸನ್ನು ಪರಿಪರಿಯಾಗಿ ಹಳಿದುಕೊಂಡಿದ್ದೆ.

ಕೊಠಡಿಯಲ್ಲಿ ಇನ್ನೂ ವಿಶಾಲಿ ವಿಗ್ರಹದಂತೆ ಕುಳಿತಿದ್ದಳು, ಮೋರೆ ಸಪ್ಪಗೆ ಮಾಡಿಕೊಂಡು. ಅವಳೊಡನೆ ತಾರಿಣಿಯು ಕುಳಿತು

ಮಾತಿಗೆ ಆರಂಭಿಸಿದ್ದಳು, ತನ್ನ ಮೊದಲಿನ ಸಲುಗೆಯಲ್ಲೇ—ತನ್ನ ಮೊದಲಿನ ನಗುಮುಖದಲ್ಲೇ. ಅವಳು ನಾಲ್ಕು ಮಾತು ವಿಶಾಲಿಯೊಡನೆ ಆಡುವುದರಲ್ಲಿಯೇ ಅವಳಲ್ಲಿ ಆಗಿದ್ದ ಮಾರ್ಪಾಡನ್ನು ಕಂಡುಕೊಂಡಳು. ವಿಶಾಲಿಯೇನೋ ತಾರಿಣಿಯ ಪ್ರಶ್ನೆಗಳಿಗೆಲ್ಲಕ್ಕೂ ಉತ್ತರ ಕೊಡುತ್ತಿದ್ದಳೇನೋ ನಿಜ. ಆದರೆ ತನ್ನ ಮೊದಲಿನ ಸರಸ ಸರಣಿಯಲ್ಲಿ ಏನೊಂದೂ ಮಾತನಾಡುತ್ತಿರಲಿಲ್ಲ. ಇದನ್ನು ತಾರಿಣಿ ಗಮನಿಸದೆ ಇರಲಿಲ್ಲ. 'ಅದೇಕೆ ವಿಶಾಲಿ ರೀತಿ ಹೀಗೆ ಇಂದು' ಎಂದು ತನ್ನಲ್ಲಿ ತಾನೇ ಚಿಂತಿಸಿದ್ದಳು. ವಿಶಾಲಿ ಕೂಡ ತಾನೇಕೆ ತನ್ನಲ್ಲಾಗಿರುವ ಮಾರ್ಪಾಡನ್ನು ತೋರಗೊಡಬೇಕು ಎಂದುಕೊಂಡು ಮೊದಲಿನ ರೀತಿಯಲ್ಲೇ ಅವಳೊಡನೆ ಮಾತು ಬೆಳಸಿದ್ದಳು. ಆಗಾಗ್ಗೆ ನಸುನಗುತ್ತಲೂ ಇದ್ದಳು. ಆದರೆ ಆ ನಗು ಕೇವಲ ಕೃತಕವಾದ ನಗುವೆಂದು ತಾರಿಣಿಗೆ ಹೊಳೆಯದಿರಲಿಲ್ಲ.

"ಯಾಕೆ ವಿಶಾಲಿ? ಇಂದೇಕೆ ಹೀಗಿರುವೆ? ಮಯ್ಯಲ್ಲಿ ಜಡ್ಡೇನು" ನಾನು ರೂಂಗೆ ಬಂದಾಗ ತಾರಿಣಿ ವಿಶಾಲಿಯನ್ನು ಕೇಳುತ್ತಿದ್ದಳು.

"ಸರಿಯಾಗಿರದೆ ನನಗೇನು? ನಾನೇನಾಗಿರುವೆ ಇಂದು."

"ಯಾಕೋ ಅಮ್ಮ ಇಂದು ನಿನ್ನ ಮುಖ ಸಪ್ಪೆಯಾಗಿದೆ. ಯಾವುದನ್ನೊ ವಿಪರೀತ ತಲೆಗೆ ಹಚ್ಚಿಕೊಂಡಿರಬೇಕು ಎಂದು ತೋರುತ್ತೆ."

ವಿಶಾಲಿಯು ಮಾತನಾಡಲಿಲ್ಲ. ಈವರೆಗೂ ತಾರಿಣಿಗೆ ನಾನು ಬಂದುದು ತಿಳಿದಿರಲಿಲ್ಲ. ವಿಶಾಲಿಯ ಸ್ವಭಾವದಲ್ಲಾಗಿದ್ದ ಮಾರ್ಪಾಡನ್ನು ಅರಿಯುವ ಸಂಭ್ರಮದಲ್ಲಿ ನಾನು ಕಣ್ಣಿಗೆ ಬೀಳದಿದ್ದುದು ಅದೇನೂ ಹೆಚ್ಚಲ್ಲ. ಅವಳು ಒಮ್ಮೆ ಬಾಗಿಲ ಕಡೆ ತಿರುಗಿದಾಗ ನಾನು ಕಣ್ಣಿಗೆ ಬಿದ್ದೆ. ತನಗೆ ಅರ್ಥವಾಗದ ಸಮಸ್ಯೆಗೆ ನನ್ನಿಂದ ಏನಾದರೂ ಉತ್ತರ ಸಿಗಬಹುದೆಂದು ನನ್ನನ್ನು ಕೇಳಿದಳು.

"ಯಾಕೆ ಇಂದು ವಿಶಾಲಿ ಸಪ್ಪಗಿದ್ದಾಳೆ?"

“ನನಗೆ ತಿಳಿಯದು.”

“ಹಾಗಾದರೆ ನೀವೇ ಕೇಳಿ ಅವಳನ್ನು.”

ನಾನು ಮಾತನಾಡಲಿಲ್ಲ. ತಾರಿಣಿ ನನ್ನ ಮುಖವನ್ನು ನೋಡಿದಳು. ಅವಳಿಗೆ ನನ್ನ ಮುಖದಲ್ಲಿಯೂ ಏನೋ ಒಂದು ಬದಲಾವಣೆ ಕಂಡಿರಬೇಕು. ಕೂಡಲೇ ಕೇಳಿದಳು,

“ಯಾಕೆ ನೀವು ಕೂಡ ಒಂದು ತರಹ ಇದ್ದೀರಿ ?”

ನಾನ ಉತ್ತರ ಕೊಡದುದನ್ನು ಕಂಡು “ಇಂದೇನಾದರೂ ಅಣ್ಣ ತಂಗಿಯರಲ್ಲಿ ಬಿಸಿಮಾತಾಯಿತೇನು ?” ಎಂದಳು. ನಾನು ಸುಮ್ಮನೆ ಇದ್ದೆ.

“ಏನಾದರೂ ಮನಸ್ತಾಪಕ್ಕೆ ಕಾರಣವಾದ ಘಟನೆ ನಡೆಯಿತೇನು?” ಇದಕ್ಕೂ ನಾನು ಸುಮ್ಮನಿದ್ದೆ.

“ದಯವಿಟ್ಟು ನಾನು ಹೆಚ್ಚಿಗೆ ಮಾತಾಡಿದ್ದರೆ ಕ್ಷಮಿಸಿ. ನನಗೆನಿಸುತ್ತದೆ—ನಿಮ್ಮಲ್ಲಿ ಏನೋ ಮನಸ್ತಾಪವಾಗಿದೆಯೆಂದು. ನಿಮ್ಮ ಮನಸ್ತಾಪಕ್ಕೆ ನಾನೇನೂ ಕಾರಣವಲ್ಲವಷ್ಟೆ ?”

ಎಂದು ಯಾವುದೋ ಒಂದು ಅವ್ಯಕ್ತ ನೋವಿನ ದನಿಯಲ್ಲಿ ಕೇಳಿದಳು. ಅವಳ ಈ ನುಡಿ ಕೇಳಿ ನನ್ನಿಂದ ಸುಮ್ಮನಿರಲಾಗಲಿಲ್ಲ. ಕೂಡಲೆ ಬಾಯಿಬಿಟ್ಟೆ—“ಛೆ! ಛೆ! ನಿಮ್ಮಿಂದೇನೂ ಮನಸ್ತಾಪವಿಲ್ಲ.”

“ಹಾಗಾದರೆ ಯಾರಿಂದ ಮನಸ್ತಾಪ ?—ಯಾವ ವಿಷಯದಲ್ಲಿ ಮನಸ್ತಾಪ ? ಕೇಳಬಹುದೇನು ?” ಎಂದಳು.

ಅವಳ ಮಾತಿನಲ್ಲಿ ಪ್ರಾರ್ಥನೆ ಇತ್ತು. ಅವಳ ಪ್ರಾರ್ಥನೆಯನ್ನು ಮನ್ನಿಸದೇ ಇರಲು ನನ್ನಿಂದಾಗಲಿಲ್ಲ. ನಡೆದುದನ್ನು ಹೇಳದೆ ಈಗ ಗತ್ಯಂತರವೇ ಇರಲಿಲ್ಲ. “ಏನೂ ಇಲ್ಲ. ನಮ್ಮ ಮನಸ್ತಾಪಕ್ಕೆ ಕಾರಣ ಇಷ್ಟೆ—ಇಂದು ವಿಶಾಲಿ ಹೊತ್ತು ಮೀರಿ ಎದ್ದಳು. ನಾನು ಅದಾವ ಮನಸ್ಸಿನ ಸ್ಥಿತಿಯಲ್ಲಿ (mood) ಇದ್ದೆನೊ. ಹೊತ್ತು ಮೀರಿ ಎದ್ದುದಕ್ಕೆ ಗದರಿಕೊಂಡೆ. ಇದನ್ನು ಪೂರಾ ಮನಸ್ಸಿಗೆ ಹಚ್ಚಿಕೊಂಡಿದ್ದಾಳೆ ಹುಚ್ಚಿ!”

ಹಚ್ಚಿಕೊಂಡಿದ್ದಾಳೆ ಹುಚ್ಚಿ! ಎಂದು ಪ್ರಾಸಬದ್ಧವಾಗಿ ಹೇಳಿದು. ದನ್ನು ಕೇಳಿ ವಿಶಾಲಿ ನಕ್ಕಳು. ಅದೇ ಈ ಹೊತ್ತಿನ ತನಕ ನಕ್ಕ ನಗುವಿನಂತಲ್ಲಾ, ಸ್ವಾಭಾವಿಕವಾದ ನಗೆ! ವಿಶಾಲಿಯ ಮುಖದ ಮ್ಲಾನತೆ ಕಳೆದು ಮೊದಲಿನ ಸರಸಮುಖ ತೋರಿಬಂತು. ಅವಳು ಮೌನ ಒಡೆದು ಹೇಳಿದಳು—"ನಾನು ಕೂಡಾ ಅದಾವುದೋ ಮನಸ್ಸಿನ ಸ್ಥಿತಿಯಲ್ಲಿ (mood) ಆ ನಿನ್ನ ಗದರಿಕೆಯನ್ನು ವಿಪರೀತ ಮನಸ್ಸಿಗೆ ಹಚ್ಚಿಕೊಂಡೆ ಅಣ್ಣಾ........ದಯವಿಟ್ಟು ಕ್ಷಮಿಸು. ಇನ್ನುಮೇಲೆ ನಿನ್ನಮೇಲೆ ಎಂದೂ ಮುನಿಯುವುದಿಲ್ಲ" ಎಂದು ಕಣ್ಣೀರು ತಂದು ಹೇಳಿದಳು. ಆಕೆಗೆ ಏನು ಮಾಡುವುದೆಂದು ತಿಳಿಯಲಿಲ್ಲ. ಸುಮ್ಮನೆ ನಮ್ಮಿಬ್ಬರನ್ನು ದಿಟ್ಟಿಸುತ್ತಾ ಕುಳಿತಳು.

"ಕ್ಷಮೆ! ವಿಶಾಲಿ, ಕೇಳಬೇಕಾದ್ದು ಯಾರು? ನಾನೊ ನೀನೋ? ನೀನು ಕ್ಷಮಿಸಬೇಕು ನಾಸಂದ ಮಾತನ್ನು........ಕ್ಷಮಿಸುತ್ತೀ ತಾನೆ! ಗದ್ದರಿಸಿಕೊಂಡಮೇಲೆ ನಾನೆಷ್ಟು ಬಾರಿ ಅಂದುಕೊಂಡೆ ಗೊತ್ತೇ, ಗದರಿಕೊಂಡುದು ತಪ್ಪಾಯಿತು, ತಪ್ಪಾಯಿತು ಎಂದು."

ನನ್ನ ಕಣ್ಣು ಹನಿಗೂಡುತ್ತಿತ್ತು. ತಾರಿಣಿಯ ಎದುರು ಅಳುವುದೇ? ಛೇ! ಎಂದು ಆ ಹನಿಯನ್ನು ಅಲ್ಲೇ ಇಂಗಿಸಿದೆ.

ಮತ್ತೆ ಮೌನ. ಈ ಗಾಢ ಮೌನವನ್ನು ಭೇದಿಸಿ ತಾರಿಣಿಯು ನುಡಿದಳು.

"ನಿಮ್ಮಿಬ್ಬರ ಮನಸ್ತಾಪಕ್ಕೆ ಕಾರಣಳು ನಾನು. ನನ್ನೊಡನೆ ರಾತ್ರಿ ಹರಟಿದುದರಿಂದ ತಾನೇ ವಿಶಾಲಿ ಹೊತ್ತುಮೀರಿ ಎದ್ದುದು! ನೀವು ಗದರುವಂತಾದುದು! ಕ್ಷಮಿಸಿ............ದಯವಿಟ್ಟು ಕ್ಷಮಿಸಿ. ಇನ್ನೊಮ್ಮೆ ನಿಮ್ಮಿಬ್ಬರ ಮನಸ್ತಾಪಕ್ಕೆ ಕಾರಣಳಾಗದಂತೆ ನೋಡಿಕೊಳ್ಳುತ್ತೇನೆ" ತಾರಿಣಿಯ ಮುಖ ಕಪ್ಪಿಟ್ಟಿತು. ಅವಳ ಮುಖಕಾಂತಿ ಕಳೆಗುಂದಿತು.

"ಇದೆಂತಹ ಮಾತು! ತಾರಿಣಿ—ನಮ್ಮ ಮನಸ್ತಾಪಕ್ಕೆ ಕಾರಣ! ಛೆ! ಛೆ! ಅದು ಹೇಗೆ ಅವಳು ಆದಾಳು—"ನಾನೆಂದುಕೊಂಡೆ ಮನಸ್ಸಿನಲ್ಲಿ.

"ನೀವು, ನಮ್ಮ ಮನಸ್ತಾಪಕ್ಕೆ ಕಾರಣವೆಂದು ಲೇಶಮಾತ್ರ ತಿಳಿಯಬೇಡಿ. ಬೆಳಿಗ್ಗೆ ಇಂತಹದೊಂದು ಘಟನೆ ಆಗಬೇಕೆಂದಿತ್ತು, ಆಗಿಹೋಯಿತು. ಅದಕ್ಕೆ ಯಾರೂ ಕಾರಣರಲ್ಲ. ನಾವು ಬರೀ ನಿಮಿತ್ತ ಮಾತ್ರ. ಆದುದರಿಂದ ನೀವು ಈ ವಿಷಯವನ್ನು ಮನಸ್ಸಿಗೆ ತಂದು ಕೊಂಡು ಧಾವಂತ ಪಡಬೇಕಿಲ್ಲ. ಸದ್ಯ ಆ ಅನಿಷ್ಟ ಇಷ್ಟಕ್ಕೇ ಮುಗಿ ಯಿತಲ್ಲಾ."

"ಹೌದು ಈ ದಿನ ಹೀಗಾಗಬೇಕೆಂದಿತ್ತು. ಅದು ಆಗಿಹೋಯಿತು! ಯಾರೊಬ್ಬರೂ ಇದನ್ನು ಇನ್ನು ಮರೆತುಬಿಡಬೇಕು!" ಎಂದಳು ವಿಶಾಲಿ.

ಅಂತೂ ಈವರೆಗೆ ಕವಿದಿದ್ದ ಆ ಮನಸ್ತಾಪದ ಕರಿ ಮೋಡ ಚಲಿಸಿ ಮತ್ತೆ ನಿರ್ಮಲ ಮನಸ್ಸಿನ ಬಿಸಿಲು ಬೀಳತೊಡಗಿತು.

"ಇಂದು ಒಂದು ಹೊಸ ಸುದ್ದಿಯನ್ನು ತಂದಿದ್ದೇನೆ. ನಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತರೂಪವಾಗಿ." ಶಾರಿಣಿ ಎಂದಳು.

"ಏನದು?" ನಾವಿಬ್ಬರೂ ಕೇಳಿದೆವು.

"ಇಂದು ಬೇಂದ್ರೆ, ಕಸ್ತೂರಿ, ರಾಜರತ್ನಂ, ಕೈಲಾಸಂ, ಸಿ.ಕೆ.ವಿ., ರಾ. ಶಿ., ಮಾಸ್ತಿ, ವಿ. ಸೀ., ಮತ್ತು ಚ. ರಂಗಾಚಾರ್ ಇವರುಗಳು ಇಲ್ಲಿನ ಬಾನುಲಿಯಲ್ಲಿ (Radio) ಇಂದು ಒಂದೂವರೆ ಗಂಟೆಗೆ "ಜೀವನವನ್ನು ಪ್ರತಿಬಿಂಬಿಸುವುದೇ ಸಾಹಿತ್ಯ" ಎನ್ನುವ ವಿಷಯವಾಗಿ ಮಾತನಾಡುತ್ತಾರೆ."

"ಹೌದು. ಅವರು ಮಾತನಾಡುವ ವಿಷಯ ನನಗೆ ಈ ಮೊದಲೇ ತಿಳಿದಿತ್ತು. ಆದರೆ ಎಂದು ಮಾತಾಡುವರೆಂದು ತಿಳಿದಿರಲಿಲ್ಲ. ಇಂದೇ ಮಾತನಾಡುತ್ತಾರೇನು?" ವಿಶಾಲಿ ಕೇಳಿದಳು.

"ಹೂಂ"

"ಹಾಗಾದರೆ ರೇಡಿಯೋ ಕೇಳಬೇಕು........ಎಲ್ಲಿ ಕೇಳುವುದು? ....ಹೋದರೆ ಅಲ್ಲಿಗೇ ಹೋಗಬೇಕು—ರೇಡಿಯೋ ಸ್ಟೇಷನ್ನಿಗೆ—

ಅದಲ್ಲದೆ ರೇಡಿಯೋ ಇರುವವರು ನಮಗೆ ಯಾರು ಗುರುತಿದ್ದಾರೆ ಇಲ್ಲಿ?

"ಯಾಕೆ ನಾನಿಲ್ಲವೇನು?" ತಾರಿಣಿ ಕೂಡಲೇ ಉತ್ತರಿಸಿದಳು. ಸಂತೋಷಾಶ್ಚರ್ಯದಿಂದ ನಾವಿಬ್ಬರೂ ಕೇಳಿದೆವು.—

"ನಿಮ್ಮ ಮನೆಯಲ್ಲಿ ರೇಡಿಯೋ ಉಂಟೇನು!"

"ಒಂದು ಸಣ್ಣದು ಇದೆ........ಇಂದು ನೀವು ನಮ್ಮ ಮನೆಗೆ ಬರಬೇಕು ರೇಡಿಯೋ ಕೇಳಲು....ಮರೆತಿಲ್ಲಾ ತಾನೇ....ಹಿಂದೆ ನೀವು ನಮ್ಮ ಮನೆಗೆ ಬರಲು ಒಪ್ಪಿದ ಸಂಗತಿಯನ್ನು" ಸಾವಧಾನವಾಗಿ ನುಡಿದಳು.

"ಹಾಗೆಯೇ ಆಗಲಮ್ಮ ಇಂದು ನಿಮ್ಮ ಮನೆಗೆ ಬರುತ್ತೇವೆ."

"ಖಂಡಿತಾ ತಾನೆ! ನೀವು ಬರದಿದ್ದರೆ ನಾನೆಲ್ಲಿ ಬಿಡುತ್ತೇನೆ"

"ಖಂಡಿತವಾಗಿಯೂ ಬರುತ್ತೇವೆ. ಆದರೆ ಒಂದು ಮಾತು........ ನಾವು ಬರುತ್ತೇವೆಂದು ನೀವು ಮನೆಯಲ್ಲಿ ಇಲ್ಲದ ತೊಂದರೆ ಹಚ್ಚಿ ಕೊಳ್ಳದಿದ್ದರೆ........"

ತಾರಿಣಿಯು ಹಾಗೇ ಆಗಲಿ ಎನ್ನುವಂತೆ ತಲೆಯಲ್ಲಾಡಿಸಿದಳು. "ಅಂತೂ ಬರಲು ಒಪ್ಪಿದಿರಲ್ಲಾ ಬಡವರ ಮನೆಗೆ—ನಾನು ನಿಮಗೆ ಬಹಳ ಋಣಿ''

"ನಿನಗೆ ನಾವೂ ಕೂಡ''........

ತಾರಿಣಿ ಬಂದ ಕೆಲಸವಾದ ಹಿಗ್ಗಿನಿಂದ ಹೊರಟು ಹೋದಳು. ಅಂದು ನಮಗೆ ಫುರಸತ್ತು. ಪರಿಷತ್ತಿನ ಮೆಂಬರುಗಳ ಸಭೆಯಲ್ಲದೆ ಬೇರಾವ ಕಾರ್ಯಕ್ರಮವಿರಲಿಲ್ಲ. ಆ ಸಭೆಗೆ ಹೋಗಲು ನಾವು ಅದರ ಸದಸ್ಯರಾಗಿರಲಿಲ್ಲ. ನಾವು ಹೋದರೂ ನಮಗೆ ಅಲ್ಲಿ ಪ್ರವೇಶ ಕೂಡ ಇರಲಿಲ್ಲ. ಆದುದರಿಂದ ನಮಗೆ ವಿರಾಮ....

ನಮ್ಮ ಮುಂದಿನ ಕಾರ್ಯಕ್ರಮವೆಂದರೆ ಊಟ—ಆದರೆ ಆ ಕಾರ್ಯ ಕ್ರಮಕ್ಕೆ ಇನ್ನೂ ಹೊತ್ತು ಇತ್ತು. ಮನೆಯಲ್ಲಿ ಕುಳಿತು ಮಾಡುವು

ದೇನು. ಅವರಿಗೆ—ಸಮ್ಮೇಳನದ ವಸ್ತುಪ್ರದರ್ಶನಾಲಯದ ನೆನಪು ಮಾಡಿಕೊಂಡು ವಿಶಾಲಿಯೊಡನೆ ಮತ್ತೊಮ್ಮೆ ಅಲ್ಲಿ ಅಡ್ಡಾಡಿ ಬಂದೆ.

ಈಗ ಊಟದ ವೇಳೆಯಾಗಿತ್ತು. ನಾವು ಹೋಗಿ ಆ ತೆಂಗಿನ ಎಣ್ಣೆಯ ಕಷಾಯ ಒಂದಿಷ್ಟು ರುಚಿ ನೋಡಿ ಬಂದೆವು. ರೂಂನಲ್ಲಿ ಹಾಸಿಗೆಯನ್ನು ಲೋಡುದಿಂಬಾಗಿಸಿಕೊಂಡು ಕೂತು, ಅಡಕೆ ಎಲೆ ಹಾಕಿಕೊಳ್ಳಲಾರಂಭಿಸಿದೆ. ಅಂದೇಕೋ ಎಲೆ ಅಡಕೆ ಹಾಕಿಕೊಳ್ಳುವ ಆಸೆಯಾಗಿತ್ತು.

ಅದೆಷ್ಟು ವರ್ಷಗಳ ಮೇಲೋ! ಇಂದು ಬೆಳಗ್ಗೆ ವಿಶಾಲಿಯಮೇಲೆ ಕೋಪಿಸಿಕೊಂಡು ಬೀದಿಯಲ್ಲಿ ಅಡ್ಡಾಡಲು ಹೊರಟಿದ್ದೆನಲ್ಲಾ ಆಗ ಚಿಗುರೆಲೆ ಒಂದು ಅಂಗಡಿಯಲ್ಲಿ ನನ್ನ ಗಮನವೆಳೆದಿತ್ತು. ಅದನ್ನು ಬಿಡಲಾರದೆ—ತಂದಿದ್ದೆ! ಅಡಕೆ ಸುಣ್ಣಗಳನ್ನು ಹವಣಿಸಿಕೊಂಡಿದ್ದೆ. ವಿಶಾಲಿ ನಾನು ಎಲೆ ಅಡಿಕೆಯನ್ನು ಹಾಕಿಕೊಳ್ಳುವುದನ್ನು ನೋಡುತ್ತಾ ಕುಳಿತಳು.

"ನೀನು ಹಾಕೆ ವಿಶಾಲಿ ಎಲೆ ಅಡಿಕೆ."

"ಊಹೂಂ, ನಾನಿನ್ನೂ ವಿದ್ಯಾರ್ಥಿ, ಒಲ್ಲೆ"

"ಓಹೋ ಕಂಡಿದ್ದೇನೆ ಬಿಡೇ ಹಾಕಿಕೊಳ್ಳೆ"

"ಊಹೂಂ"

"ಹಾಗಾದರೆ ನಿನ್ನಿಷ್ಟ. ಅದಿರಲಿ ಬೆಳಗ್ಗೆ ಬಾಯಿ ತಪ್ಪಿ ಒಂದು ಮಾತು ಅಂದುದಕ್ಕೇ ನನ್ನ ಮೇಲೆ ಅದೆಷ್ಟು ಸಿಟ್ಟು ಮಾಡಿದೆಯೇ, ವಿಶಾಲಿ! ನಾಳೆ ಗಂಡನಾದವನು ಏನಾದರೂ ಅಂದಾಗ ನೀನು ಹಾಗೆ ಮುನಿಸಿಕೊಂಡು ಕೂತರೆ ಹೇಗೇ........'' ಗೇಲಿ ಮಾಡಿದೆ.

"ಹೇಗೆ ಅಂದರೆ. ಹೀಗೆ." ಎಂದು ಮೋರೆ ಸೊಟ್ಟಮಾಡಿ ನನ್ನನ್ನು ಅಣಕಿಸಿದಳು. ಎಷ್ಟೆಂದರೂ ವಿಶಾಲಿ ಹುಡುಗಿ. ಅದೆಲ್ಲಿ ಹೋದೀತು! ಆ ಹುಡುಗುತನ!

"ಆದಿರಲಿ ವಿಶಾಲಿ ನಿನ್ನೆ ರಾತ್ರಿ ತಾರೆಸಿಯಲ್ಲಿ ಗಂಟೆಗಟ್ಟಲೆ ಹರಟುತ್ತಿದ್ದರಲ್ಲಾ, ಅದು ಯಾವ ವಿಷಯ" ನಾನು ಯಾಕೆ ಹಾಗೆ ಕೇಳುತ್ತಿರುವೆನೆಂದು ಕೂಡಲೇ ಅರಿತಳು ಆ ಚಣಾಕ್ಷ ಹುಡುಗಿ.

"ಯಾವ ವಿಷಯಾಂದ್ರೆ.......ಅದೂ ಇದೂ ಕೆಲಸಕ್ಕೆ ಬಾರದ ವಿಷಯ" ಎಂದು ಮಾತು ಹಾರಿಸಿದಳು. ಮುಂದೆ ನಾನೇನು ಮಾತ ನಾಡುವುದು? ಇದ್ದೊಂದು ಅಸ್ತ್ರ ನಿಷ್ಪ್ರಯೋಜನವಾಯಿತು. ನಾನು ಅಸಹಾಯನಾದೆ. ನನ್ನ ಈ ಪರಿಸ್ಥಿತಿಯನ್ನು ಕಂಡು ವಿಶಾಲಿ ನಗದೇ ಇರಲಿಲ್ಲ. ನಕ್ಕು ತನ್ನ ಹಟ ತೀರಿಸಿಕೊಂಡಮೇಲೆ ತಾನೇ ಮೊದಲಿಟ್ಟಳು ಮಾತಿಗೆ. ಈ ಸಲ ಅವಳು ಮಾತಿನಲ್ಲಿ ಯಾವ ಚೋದ್ಯವನ್ನೂ ಬೆರಸದೆ—ಗಂಭೀರಳಾಗಿ ಹೇಳಿದಳು—

"ಅಣ್ಣಾ, ನಾವು ಮಾತನಾಡುತ್ತಿದ್ದುದು ಯಾವ ವಿಷಯ ಅಂತ ಕೇಳಿದೆ ತಾನೆ, ಅದು ಯಾವ ವಿಷಯವೂ ಅಲ್ಲ. ನಿನ್ನೆ ನಿನ್ನೊಡನೆ ನಾನು ಹೇಳಿದ್ದೆನಲ್ಲಾ, ಅವಳೆಲ್ಲಾ ವಿಷಯ ತಿಳಿದು ಹೇಳುತ್ತೇನೆ ಎಂದು ಅದನ್ನೇ ಮಾತನಾಡುತ್ತಿದ್ದೆವು."

ನಾನು ನಿನ್ನೊಡನೆ ಹೇಳಿದ ಹಾಗೆ ಅವಳೆಲ್ಲಾ ವಿಷಯವನ್ನೂ ಕೇಳಿದೆ. ಎಲ್ಲಾ ಸಂಗತಿಯನ್ನೂ ಆಕೆಯ ಬಾಯಿಂದಲೇ ತಿಳಿದೆ. ಆಕೆಯದು ಒಂದು ಕರುಣ ಕಥೆ ಅಣ್ಣಾ. ಯಾರೊಬ್ಬರ ಹೃದಯವನ್ನೂ ಕರಗಿಸುವ ಕಥೆ.

"ಅವಳು ಹತ್ತು ವರುಷದವಳಿರುವಾಗಲೇ ಅವಳ ತಂದೆ ತಾಯಿ ಗಳು ಕೋಲಾರದಿಂದ ಇಲ್ಲಿಗೆ ಬಂದು ನೆಲಸಿದರಂತೆ. ಅವಳ ತಂದೆಗೆ ಇಲ್ಲಿ ಒಂದು ಬಣ್ಣದ ಕಂಪೆನಿಯಲ್ಲಿ ಮ್ಯಾನೇಜರ್ (Manager) ಕೆಲಸ. ಇಲ್ಲಿಗೆ ಬರುವ ಮೊದಲು ಇವರ ಸಂಸಾರವಿದ್ದುದು ಕೋಲಾರ ದಲ್ಲೇ. ಆಗ ಇವರು ಆ ಕಂಪೆನಿಯ ಬ್ರಾಂಚೊಂದು ಬೆಂಗಳೂರಿನಲ್ಲಿ ತೆರೆದಾಗ ಅಲ್ಲಿ Manager ಆಗಿ ಕೆಲವು ಕಾಲ ಕೆಲಸ ಮಾಡಿದಮೇಲೆ ಇಲ್ಲಿಗೆ ಬಂದರಂತೆ.

ಇವರದು ಸ್ಮಾರ್ತ ಸಂಪ್ರದಾಯ ಎಂದಮೇಲೆ ನಮ್ಮೊಡನೆ ಕೊಟ್ಟುಕೊಳ್ಳುವುದು ಉಂಟು. ತಾರಿಣಿ ಇನ್ನೂ ಹತ್ತು ವರ್ಷದವಳಿರುವಾಗಲೇ ಅವರ ತಂದೆ ತಾಯಿಯರ ಬಲವಂತಕ್ಕೆ ತಂಗಿಯ ಮಗನಿಗೆ ಕೊಟ್ಟು ವಿವಾಹ ಮಾಡಿದರಂತೆ……."

ಇದುವರೆಗೂ ಕೌತುಕದಿಂದಲೇ ಕೇಳುತ್ತಾ ಕುಳಿತಿದ್ದ ನನಗೆ 'ವಿವಾಹವಾಯಿತಂತೆ' ಎನ್ನುವ ಮಾತು ಕೇಳಿ ವಜ್ರಘಾತವಾದಂತಾಯಿತು. ಸಹಸ್ರ ಚೇಳು ಹಾವುಗಳು ಒಮ್ಮೆಲೇ ಕಡಿದಂತಾಯಿತು. ನನ್ನ ಮುಖ ಕಪ್ಪಿಟ್ಟು ಕಾಂತಿಗುಂದಿ ನಿಸ್ತೇಜವಾಯಿತು. ನಾಲಿಗೆ ಸೇದಿದಂತಾಗಿ ಬಾಯಲ್ಲಿ ಮಾತೇ ಹೊರಡದಾಯಿತು. ಅವಳ ವಿಷಯವಾಗಿ ನಾನು ತಿನ್ನುತ್ತಿದ್ದ ಮುಂಡಿಗೆ ವಿಷವಾಯಿತು. ಹಾಗೆಯೇ ಗೋಡೆಗೆ ಒರಗಿದೆ. ನಿಟ್ಟುಸಿರೊಂದು ಮೋರೆಯಿಂದ ಹೊರಟಿತು.

"ಕೇಳಣ್ಣಾ ಅವಳೆಲ್ಲಾ ಸಂಗತಿ ಇಷ್ಟಕ್ಕೇ ಮುಗಿಯದು" ಎಂದು ವಿಶಾಲಿ ಮುಂದುವರಿಸಿದಳು ಮಾತು. ಆ ಮಾತು ನನ್ನಲ್ಲಾಗುವ ಬದಲಾವಣೆ ಮಾರ್ಪಾಡನ್ನು ಕಂಡು ಆಡಿದಳು.

"ತಂಗಿಯ ಮಗನೊಂದಿಗೆ ತಾರಿಣಿ ವಿವಾಹ ಮಾಡಿದರು. ಇದಾದ ಕೆಲವು ತಿಂಗಳಲ್ಲಿಯೇ ಅಜ್ಜ ಅಜ್ಜಿಯರು ತೀರಿಕೊಂಡರು. ಆದರೂ ಅವರು ಬದುಕಿದ್ದಾಗ ತಮ್ಮ ಬಾಳಿನ ಹಿರಿಯಾಸೆ—ಮೊಮ್ಮಗಳ ಮದುವೆಯನ್ನು ಕಣ್ಣಾರೆ ಕಾಣುವುದು—ಯನ್ನು ಪೂರೈಸಿಕೊಂಡಿದ್ದರು. ಅವರಿಬ್ಬರೂ ತೀರಿಹೋದುದೇನೋ ಆಯಿತು. ಆದರೆ ವಿಧಿ ಆ ಕುಟುಂಬಕ್ಕೆ ಅತಿ ಕ್ರೂರನಾಗಿದ್ದ. ಆ ವಯಸ್ಸಾದ ಎರಡು ಜೀವಗಳನ್ನು ಕೊಂಡು ಹೋಗುವುದರಲ್ಲಿ ಅವನಿಗೆ ತೃಪ್ತಿಯಾಗಲಿಲ್ಲ. ತನ್ನ ದುರಾಸೆಯ ನಾಲಗೆಯನ್ನು ಚಾಚಿದ. ಅದಕ್ಕೆ ಮುಂದೆ ಬಲಿಬಿದ್ದವನೆಂದರೆ ತಾರಿಣಿಯ ಗಂಡ. ಅವನಿಗೆ ಆಗ ಹದಿನೇಳು ವರ್ಷ ವಯಸ್ಸು. IV form ನಲ್ಲಿ ಓದುತ್ತಿದ್ದನಂತೆ. ಬುದ್ಧಿವಂತನೆಂದು ಎಲ್ಲರ ಮೆಚ್ಚಿಗೆಗೂ ಪಾತ್ರನಾಗಿದ್ದನಂತೆ. ಆದರೆ ಅವನ ಎಲ್ಲಾ ಬುದ್ಧಿವಂತಿಕೆ ವಿಧಿಯು

ಚಾಚಿದ್ದ ಆ ಕ್ರೂರ ನಾಲಗೆಯನ್ನು ಹಿಮ್ಮೆಟ್ಟಿಸಲು ಪ್ರಯೋಜನ ವಾಗಲಿಲ್ಲ.

ವಿಷಮಶೀತಜ್ವರವನ್ನು ನಿಮಿತ್ತ ಮಾಡಿಕೊಂಡು ತನ್ನ ಕೆಲಸ ವನ್ನು ಮುಗಿಸಿದ. ತನ್ನ ಮನದ ಬಯಕೆಯನ್ನು ತೀರಿಸಿಕೊಂಡು ಮುನ್ನಡೆದ.

"ಅಂತೂ ತಾರಿಣಿ ಇನ್ನೂ ಕಣ್ಣು ತೆರೆಯುವ ಮುಂಚೆಯೇ ಬಾಲ ವಿಧವೆಯಾದಳು. ಎಲ್ಲರೂ ತಾರಿಣಿಯ ಬಗ್ಗೆ ದುಃಖಿಸುವವರೇ, ತಮ್ಮ ಸಂತಾಪವನ್ನು ತೋರಿಸುವವರೇ. ಆಗ ತಾರಿಣಿಗೆ ಅದೇಕೆ ಜನ ತನ್ನ ಬಗ್ಗೆ ಅಷ್ಟೊಂದು ಸಹಾನುಭೂತಿ ತೋರಿಸುವರೆಂದು ಅರ್ಥವಾಗದು. ಆದರೆ ಮುಂದೆ ಅದರ ಅರ್ಥ ತಾನಾಗಿಯೇ ಆಗ ತೊಡಗಿತು. ತಾನು ಮೊದಲಿನಂತೆ ಸಿಂಗರಿಸಿಕೊಂಡು ಬೀದಿಯಲ್ಲಿ ಗೆಳತಿಯರೊಡನೆ ನಡೆದಾಗ ಎಲ್ಲರ ದೃಷ್ಟಿ ತನ್ನ ಸಿಂಗಾರದ ಮೇಲೆ ಏಕೆಂದು? ಎಲ್ಲರ ಮಾತು ತನ್ನ ಬಗ್ಗೆ ಏಕೆಂದು—ಆ ಜನದ ಆ ರೀತಿ ಅದೇಕೆ ಹಾಗೆಂದು ಚಿಂತಿಸುವಳು. ತನಗರಿಯದ ಈ ಸಂಗತಿಯನ್ನು ತಾಯಿಯ ಮುಂದೆ ಸವಿಸ್ತಾರವಾಗಿ ಹೇಳಿ, ಆಕೆಯನ್ನು ಕೇಳುವಳು. ತಾಯಿ ಮಗಳ ಮಾತನ್ನು ಕೇಳಿ ಏನು ಹೇಳಿಯಾಳು! "ನೀನು ವಿಧವೆಯಮ್ಮ—ಬಾಲ ವಿಧವೆಯಮ್ಮ ಅದಕ್ಕೆ ಆ ಜನದ ಕಣ್ಣು ನಿನ್ನ ಮೇಲೆ" ಎಂದು ಹೇಳಲು ಅವಳ ನಾಲಗೆ ಎದ್ದೀತೆ?

"ಮಗಳ ಮಾತು ಕೇಳಿ ಅವಳೂ ಅಳುವಳು. ನಿಟ್ಟುಸಿರಿಡು ವಳು—ಮುಂದೇನುತಾನೆ ಮಾಡಿಯಾಳು? ಮಗಳ ಮುಂದಿನ ಭವಿಷ್ಯ ವನ್ನು ನೆನೆದು ಅತ್ತು ಅತ್ತು ಕೂಡುವರು. ಅದೆಲ್ಲಾ ವಿಧಿಯಾಟವೆಂದು ತಮ್ಮಷ್ಟಕ್ಕೆ ತಾವು ಸಮಾಧಾನ ತಾಳುವರು. ಹಾಗೇಕೆ ವಿಧಿ! ಎಂದು ಅವನ ಬಗ್ಗೆ ವಿಚಾರಿಸುವರು. ಅವನೆಷ್ಟು ಕ್ರೂರನೆಂದು ಅವನನ್ನು ಬಯ್ಯುವರು. ಆದರೆ ಇವೆಲ್ಲಾ ಅವರ ಮಟ್ಟಿಗಿನ ಶಾಂತಿ ಸಮಾಧಾನ ಗಳಿಗಾಯಿತೇ ವಿನಹ ಮತ್ತೊಬ್ಬರ ದುಃಖ ಶಮನಕ್ಕೆ ನೆರವಾಗಲಿಲ್ಲ.

"ಇನ್ನು ತಾರಿಣಿಯ ತಂದೆಯ ಪಾಡು. ಅವರು ಮಗಳಿಗಾಗಿ ಪಟ್ಟ ದುಃಖಕ್ಕೆ ಪಾರವೇ ಇಲ್ಲ. ಈ ಎಲ್ಲಾ ಘಟನೆಗಳು ಜರುಗಿದ ಈ ಮೈಸೂರು ಸೀಮೆಯನ್ನು ಬಿಟ್ಟು ಬಂದು ಇಲ್ಲಿ ನೆಲಸಿದುದಕ್ಕೆ ಅದೂ ಒಂದು ಕಾರಣವಂತೆ!

ತಾರಿಣಿ ಬೆಳೆದು ನಿಂತಾಗ ಅವರಿಗೆ ಒಂದು ಹೊಸ ವಿಚಾರ ಮೂಡಿತು. ಏಕೆ ತಾರಿಣಿಗೆ ಮತ್ತೊಂದು ವಿವಾಹ ಮಾಡಬಾರದೆಂದು. ತಾರಿಣಿಯ ತಾಯಿ ಕೂಡ ಇದಕ್ಕೆ ಸಮ್ಮತಿಸಿದ್ದರು. ಮಗಳ ಒಳ್ಳೆಯ ದಕ್ಕೆ ಏನೇನು ಬೇಕೋ ಅಷ್ಟನ್ನೂ ಮಾಡಲು ಅವರು ಸಿದ್ಧರಿದ್ದರು. ಆದರೆ ಈ ವಿಷಯವನ್ನು ಯೋಚಿಸಿದಾಗಲೆಲ್ಲಾ ಪ್ರತಿ ಬಾರಿಯೂ ಅವರ ಮನಸ್ಸಿನ ಮುಂದೆ ನಿಲ್ಲುತ್ತಿದ್ದ ಪ್ರಶ್ನೆ, ಎಂದರೆ "ತಾರಿಣಿಗಾಗಿ ಎಲ್ಲಿಂದ ವರ ತರುವುದು!"—ಎಂಬ ಪ್ರಶ್ನೆ ತಮ್ಮ ಸಂಬಂಧದ ಕಡೆ ಎಲ್ಲಾ ವರನಿಗಾಗಿ ವಿಚಾರಿಸಿ ಬೇಸತ್ತರು. ಯಾರೊಬ್ಬರೂ ಎರಡನೆಯ ಲಗ್ನದ ತಾರಿಣಿಯ ಕೈ ಹಿಡಿಯಲು ಮುಂದೆ ಬರದಾದರು. ತಮಗೆ ಗುರುತಿನ ವರ ಕಡೆಯಿಂದ ವರಾನ್ವೇಷಣ ನಡೆಸಿದರು. ಯಾರೊಬ್ಬ ವರನನ್ನು ಮುಂದೆ ಕರೆತರುವಷ್ಟರಲ್ಲಿ ಯಾರೋ ಅವರಿಗೆ ತಾರಿಣಿ ಮದುವೆಯಾದ ವಿಧವೆ ಎಂದು ಸುದ್ದಿ ಹಾಕಿ ಅವರನ್ನು ಹಿಮ್ಮೆಟ್ಟಿಸುತ್ತಿದ್ದರು. ಅವರ ಬಂಧು ಜನವೇ, ಅವರ ಮನೆತನದ ರಕ್ತ ಹಂಚಿಕೊಂಡು ಹುಟ್ಟಿರುವವರೇ ತಾರಿಣಿಯ ಪ್ರಶ್ನೆ ಬಂದಾಗ ಕಠೋರವಾಗಿ ವರ್ತಿಸುವರು. ಹೃದಯ ಕಠಿಣ ಮಾಡುವರು. ಅವರು ಇಂತಹದೊಂದು ಮಂಗಳಕಾರ್ಯ ನೆರವೇರಿಸುವುದಕ್ಕಿಂತಲೂ ಅಡ್ಡಿಪಡಿಸಿ—ತಡೆಯುವುದರಲ್ಲಿ ಹೆಚ್ಚಿನ ಸಂತೋಷಪಡುತ್ತಿದ್ದರು.

ಮೈಸೂರು ಸೀಮೆಯ ವರಗಳ ಪಾಡು ಇದಾದರೆ! ಇಲ್ಲಿನ ವರಗಳ ಪಾಡು ಬೇರೆ. ಸಿಕ್ಕರೆ ತಮಿಳು ವರ ಸಿಕ್ಕಾನು. ತೆಲುಗು ವರ ಸಿಕ್ಕಾನು. ಅದೂ ಭಗೀರಥ ಪ್ರಯತ್ನ ನಡೆಸಿದರೆ. ಆದರೆ ಕನ್ನಡಿಗನು ಸಿಕ್ಕಾನೇನು! ಕನ್ನಡ ಬಲ್ಲ ಕುಟುಂಬವನ್ನೇ ನೋಡಲು ಕಷ್ಟವಾಗಿರುವ

ಮದರಾಸಿನಲ್ಲಿ ಕನ್ನಡ ವರವನ್ನೆಲ್ಲಿ ತರುವುದು! ಅದೂ ತಾರಿಣಿಯ ಮದುವೆಯ ವಿಷಯವನ್ನು ತಿಳಿಯದ ವರನನ್ನು........

ಆದರೂ ಅವರು ಪ್ರಯತ್ನ ನಡೆಸುತ್ತಿದ್ದಾರೆ. ತಮ್ಮ ಗೆಳೆಯರಿಗೂ, ಹಿತಚಿಂತಕರಿಗೂ ಸುದ್ದಿ ತಿಳಿಸಿ ಅವರ ನೆರವನ್ನು ಪಡೆಯುತ್ತಿದ್ದಾರೆ. ಈ ವರಾನ್ವೇಷಣ ಕಾರ್ಯದಲ್ಲಿ.

"ತಾರಿಣಿಯ ಮದುವೆಯ ವಿಷಯದಲ್ಲಿ ತಾರಿಣಿಯ ತಾಯಿಗೂ ಕೂಡ ಅಷ್ಟೇ ಆಸಕ್ತಿ, ಇನ್ನೂ ಒಂದು ಕೈ ಹೆಚ್ಚು. ಎಷ್ಟಾದರೂ ಆಕೆ ಹೆತ್ತ ತಾಯಿಯಲ್ಲವೆ. ಇನ್ನು ವರನ ಪ್ರಶ್ನೆ ಬಂದಾಗ ಗಂಡನಿಗಿಂತಲೂ ನೂರ್ಮಡಿಯಾಗಿ ಪರಿತಪಿಸುವರು. "ನಮ್ಮ ತಾರಿಣಿಗಾಗಿ ವರನನ್ನು ಹುಟ್ಟಿಸಿಲ್ಲವೇಕೆ ದೇವರೇ" ಎಂದು ಹಗಲಿರುಳೂ ಹಲುಬುವರು, ಕೊರಗುವರು. ಕಡೆಗೆ ಒಮ್ಮೆ ಬೇಸತ್ತು ಒಂದು ಹೊಸ ನಿರ್ಧಾರಕ್ಕೆ ಬಂದಿದ್ದಾರೆ. ತಮಗಿರುವ ತಮ್ಮನಿಗೆ ಏಕೆ ತಾರಿಣಿಯನ್ನು ಕೊಡಬಾರದೆಂದು ಯೋಚಿಸತೊಡಗಿದ್ದಾರೆ. ಅವನಿಗೇನೋ ಉಣ್ಣಲು ತಿನ್ನಲು ಅಡ್ಡಿ ಇಲ್ಲ. ವಯಸ್ಸು ೪೦ ವರ್ಷ. ಅದೊಂದೇ ವಿಚಾರಿಸತಕ್ಕ ವಿಷಯ. ಈಗಾಗಲೇ ಇಬ್ಬರು ಹೆಂಡರಾಗಿ ಅವರವರ ಗುರುತಿಗೆಂದು ಒಂದೊಂದು ಕೂಸು ಹಿಂದೆ ಉಳಿದಿವೆ. ಅವನ್ನು ನೋಡಿಕೊಳ್ಳಲು ಯಾರೂ ಇಲ್ಲದೆ ಅವನೂ ವಧೂನ್ವೇಷಣಕ್ಕೆ ತೊಡಗಿದ್ದಾನೆ. ಒಮ್ಮೆ ಅಕ್ಕನ ಮನೆಗೆ ಬಂದಾಗ ತಾರಿಣಿಯನ್ನು ಕಂಡು ಅವಳ ರೂಪಕ್ಕೆ ಬೆರಗಾಗಿ ತಾನೇಕೆ ತಾರಿಣಿಯನ್ನು ಮದುವೆಯಾಗಬಾರದೆಂದು ಯೋಚಿಸಿದ. ತಾನು ಆಕೆಯು ವಿಧವೆ ಎಂಬುದನ್ನು ಮನಸ್ಸಿಗೆ ತಾರದೆ ಮದುವೆಯಾಗುವುದಾಗಿಯೂ ಅಕ್ಕನ ಕೂಡ ಈ ವಿಷಯ ಪ್ರಸ್ತಾಪಿಸಿದನಂತೆ!

ತಮ್ಮನು ಹೇಳುವ ಮಾತು ಅಕ್ಕನಿಗೆ ಸೇರಿತು. ಹೇಗಿದ್ದರೂ ಅವನು ಬೆನ್ನಿನಲ್ಲಿ ಬಿದ್ದ ತಮ್ಮ. ಮನೆಯಲ್ಲಿ ಒಂದು ಹೆಣ್ಣು ಹುಳುವಿಲ್ಲ ವಿಚಾರಿಸಲು. ಸಂಸಾರ ದಾರಿಗೆದಾರಿಯಾಗಿದೆ. ಇಂತಹ ಸಂಸಾರವನ್ನು ಕುದುರಿಸಿದಹಾಗೆ ಆಗುತ್ತದೆ, ತಾರಿಣಿಯನ್ನು ಕೊಟ್ಟರೆ........ಅವನಿಗೆ.

ಕೊಂಚ ವಯಸ್ಸಾಗಿದೆ; ಆದರೆ ಏನೀಗ; ನೋಡುವುದಕ್ಕೆ ಲಕ್ಷಣವಾಗಿ ದೃಢಕಾಯನಾಗಿದ್ದಾನೆ ಎಂದುಕೊಂಡು ಈ ಸುದ್ದಿ ತಾರಿಣಿಯ ತಂದೆಯ ತಲೆಗೂ ಹಾಕಿದ್ದಾರೆ ಅವರು.

"ಆದರೆ ಅವರ ಮನೋಭಾವವೇ ಬೇರೆ. ಪ್ರೀತಿಯಿಂದ ಸಾಕಿದ ಮಗಳನ್ನು ಮೂರನೆಯ ಮದುವೆಗೆ—ಅದೂ ವಯಸ್ಸಾದವನಿಗೆ ಕೊಡ ಬೇಕೆ? ಎಂದು ಚಿಂತೆ ಅವರಿಗೆ. ಅವರೇನು ಮಾಡಿಯಾರು? ಬೇರಾವ 'ವರ' ಅವರಿಗೆ ಪತ್ತೆಯಾಗದು! ತಮ್ಮ ಭಾವಮೈದುನನು ಪದೇಪದೇ ಬರುತ್ತಿದ್ದಾನೆ. ಯಾವುದಾದರೊಂದು ನೆಪ ಮಾಡಿಕೊಂಡು ಬಂದಾಗ ಲೆಲ್ಲಾ 'ನಿಮ್ಮ ಅಭಿಪ್ರಾಯವೇನು?' ಎಂದು ಕೇಳುತ್ತಿದ್ದಾನೆ. ಈಗ ತಾರಿಣಿಯ ತಾಯಿ ಕೂಡ ಅವನಿಗೆ ಬೆಂಬಲವಾಗಿ ನಿಂತಿದ್ದಾರೆ!—ಮುರಿದ ಮನೆಯನ್ನು ಎತ್ತಿಹಿಡಿಯಲು ಉತ್ಸಾಹದಿಂದಿದ್ದಾರೆ. 'ಯಾವು ದನ್ನೂ ತಿಳಿಸಿಬಿಡಿ, ಪಾಪ ಅವನು ಪದೇಪದೇ ಬಂದು ಹೋಗುತ್ತಿ ದ್ದಾನೆ, ಎಂದು ಈಗೀಗ ಅನ್ನತೊಡಗಿದ್ದಾರೆ. ಆದರೆ ತಾರಿಣಿಯ ಮನ ಸ್ಸನ್ನು ಬಲ್ಲ ಅವರ ತಂದೆ 'ಹೇಳೋಣ ಹೇಳೋಣ' ಎಂದು ಕಾಲ ನೂಕುತ್ತಾ ಬರುತ್ತಿದ್ದಾರೆ. ಅವರಿಗೆ ಇನ್ನೂ ನಂಬಿಕೆ—ಅಕಸ್ಮಾತ್ತಾಗಿ ಯಾರಾದರೊಬ್ಬ 'ವರ' ಅವರ ಕಣ್ಣಿಗೆ ಬೀಳುವನೆಂದು! ಆ ಮುದಿ ಗೂಬೆಯ ಕಯ್ಯಿಂದ ತಾರಿಣಿಯನ್ನು ಬಿಡಿಸಲು ಬರುವನೆಂದು! ಅವ ನೊಡನೆ ತಮ್ಮ ಎಲ್ಲಾ ಅನಿಷ್ಟ ಮುಗಿಯುವುದೆಂದು! ಅವರು ಇನ್ನೂ ಹುಡುಕುತ್ತಿದ್ದಾರೆ. ಹಗಲಿರುಳೂ ಬರಲಿರುವ ಆ ಆಕಸ್ಮಿಕ 'ವರನಿಗಾಗಿ' ಪರಿತಪಿಸುತ್ತಿದ್ದಾರೆ!

ಇದು ತಾರಿಣಿಯ ಕಥೆ; ಕರುಣಾಜನಕವಾದ ಕಥೆ; ಯಾರೊ ಬ್ಬರ ಹೃದಯವನ್ನೂ ನಡುಗಿಸುವ ಕಥೆ! ಪಾಪ ಏನೋ ಹಸುಗೂಸಾ ಗಿದ್ದಾಗ, ಇನ್ನೂ ಪ್ರಪಂಚದ ನಿಷ್ಠುರದ ಜೀವನದ ಪರಿಚಯ ಒಂದಿ ನಿತೂ ಇಲ್ಲದಿರುವಾಗ—ಅವಳಿಗಾದ ಅಪಘಾತ!

ವಿಶಾಲಿ ಹೇಳುವುದೆಲ್ಲಾ ಹೇಳಿ ಮುಗಿದಿತ್ತು. ಮಾತು ಮುಗಿದಾಗ ನಿಟ್ಟುಸಿರೊಂದು ಅವಳಿಂದ ಹೊರಬಿತ್ತು. ಮುಖದಲ್ಲಿ ತಾರಿಣಿಯದೇ

ಆದ ಚಿಂತೆ ಆವರಿಸಿತ್ತು. ಅವಳ ಕಣ್ಣಾಲಿಗಳಲ್ಲಿ ನೀರು ತುಂಬಿತ್ತು. ಅದನ್ನು ಒರೆಸುವ ಗೋಜಿಗೂ ಹೋಗದೇ ಶಿಲಾಬಾಲಿಕೆಯಂತೆ ಕುಳಿತಿದ್ದಳು.

ಇದು ವಿಶಾಲಿಯ ಸ್ಥಿತಿ. ಇದುವರೆಗೂ ಅವಳು ಹೇಳಿದುದನ್ನು ಕೇಳುತ್ತಾ ಕುಳಿತಿದ್ದ ನನ್ನ ಸ್ಥಿತಿಯೂ ಅವಳ ಅವಸ್ಥೆಗಿಂತಲೂ ಕಡಿಮೆಯಾಗಲಿಲ್ಲ. ಅವಳ ನಿಟ್ಟುಸಿರಿನೊಂದಿಗೆ ನನ್ನದೊಂದು ಸೇರಿ ಜೊತೆಯಾಗಿ ಗಾಳಿಯಲ್ಲಿ ಕಲೆತಿತ್ತು. ನನ್ನ ಹೃದಯ ಕರಾಳ ವಿಧಿಯು ಆಕೆಯ ಮೇಲೆ ಎಸಗಿದ ಕ್ರೂರಕೃತ್ಯವನ್ನು ನೆನೆದು ಬಿಸಿಸುಯ್ಯಿತು. ಮದುವೆಯೆಂಬುದೇನೆಂದು ತಿಳಿಯದ ಮುನ್ನವೇ ವಿಧವೆಯಾದ ಅವಳ ಬಗ್ಗೆ ಅನುಕಂಪ ಮೂಡಿತು. ಅವಳ ವಯಸ್ಸಿನ ಅವಳ ಇತರ ಗೆಳತಿಯರು ತಮ್ಮ ಇನಿಯರೊಡನೆ ನಲಿಯುವುದನ್ನು ಕಂಡಾಗ, ಅವಳ ಮನಸ್ಸಿನಲ್ಲಿ ಆಗಬಹುದಾದ ಸಂಕಟವನ್ನು ಊಹಿಸಿ ತಿಳಿದೆ. ಹೃದಯ ಅವಳಿಗಾಗಿ ಮರುಗಿತು. ಈಗ ನನಗೆ ಕಾಣುತ್ತಿದ್ದ ತಾರಿಣಿಯ ಚಿತ್ರ—ನಮ್ಮೊಂದಿಗೆ ಹರಟೆ ಕೊಚ್ಚುತ್ತಲಿದ್ದ ನಗುಮುಖದ ಆ ತಾರಿಣಿಯ ಚಿತ್ರವಲ್ಲ; ಅಂದು ಸಭೆಯಲ್ಲಿ ಸುರಲೋಕದ ಸುಂದರಿಯಂತೆ ಕಂಗೊಳಿಸಿ ತನ್ನ ಇನಿದಾದ ಗಾನದಿಂದ ಮೈಮರೆಸಿದ ಆ ಸ್ವಪ್ನಸುಂದರಿಯ ಚಿತ್ರವಲ್ಲ, ಇಂದು ಕಾಣುತ್ತಿರುವ ತಾರಿಣಿಯ ಚಿತ್ರ. ಸಮಾಜದ ಮುಖದಿಂದ ವಿಧವೆ! ವಿಧವೆ! ಎನ್ನಿಸಿಕೊಂಡು ಮುಖದಲ್ಲಿ ಯಾರಿಂದಲೂ ಕಳೆಯಲಾಗದ ಮ್ಲಾನತೆ ಹೊದ್ದು, ಉಡುಗೆತೊಡುಗೆಗಳ ಬಿನ್ನಾಣಬಿಂಕಗಳಿಲ್ಲದೆ, "ನಿಮ್ಮ ಕೃಪೆಗೆ ಬಿದ್ದವಳು ಕಾಪಾಡಿ" ಎಂದು ಒಕ್ಕಂಠದಿಂದ ಎತ್ತಿದ ಕೊರಲಿನಲ್ಲಿ ಕೂಗುತ್ತಿದ್ದ ತಾರಿಣಿಯ ಚಿತ್ರ; ಅಸಹಾಯಳಾಗಿ, ತನ್ನೆಲ್ಲಾ ಪ್ರಾರ್ಥನೆಯನ್ನು ನನಗಾಗಿರಿಸಿ "ಸೆರೆ ಬಿಡಿಸಿ ಕಾಪಾಡಿ. ನನ್ನ ಅಳಿವು ಉಳಿವು ನಿಮ್ಮ ಕಯ್ಯಲ್ಲಿದೆ" ಎಂದು ದೀನಳಾಗಿ, ಕರುಣಾಮೂರ್ತಿಯಾಗಿ ಬೇಡುತ್ತಿದ್ದ ಚಿತ್ರ. ಪಾಪ ಹೆತ್ತ ತಂದೆತಾಯಿಗಳು ಅಲ್ಲಿಯೇ ನಿಂತು ನೋಡುತ್ತಿದ್ದಾರೆ, ಅಸಹಾಯರಾಗಿ ನಿಂತು ಮಗಳಿಗಾಗಿ ಮರುಗುತ್ತಿದ್ದಾರೆ.

"ಅಣ್ಣಾ ಅಣ್ಣಾ ಅದೇಕೆ ಮೌನವಾದೆ. ಅದೇಕೆ ಮಾತನಾಡದೆ ಕುಳಿತೆ?" ಎಂದು ಭುಜ ಹಿಡಿದು ಕದಲಿಸಿದ ಮೇಲೆಯೇ ನನಗೆ ಎಚ್ಚರ. ನಾನೆಲ್ಲಿರುವೆ, ಏನು ಮಾಡುತ್ತಿರುವೆನೆಂಬ ಅರಿವು. ಸುತ್ತಲೂ ನೋಡಿದೆ, ಅದೇ ಕೊಠಡಿ, ಅದೇ ಕೊಠಡಿಯಾಚೆ ಕಾಣುವ ದೃಶ್ಯಗಳು ಕಾಣುತ್ತಿತ್ತು. ಆದರೆ ಈ ಕ್ಷಣದ ಹಿಂದೆ ನಾನು ನೋಡುತ್ತಿದ್ದ ದೃಶ್ಯಗಳು ಎಲ್ಲಿಯವು ಎಂದು ತಿಳಿಯಲು ನಾಲ್ಕಾರು ನಿಮಿಷ ತಡಕಾಡಿದೆ. ಈಗ ಕೊಠಡಿಯಲ್ಲಿದ್ದ ಸ್ತ್ರೀ ಎಂದರೆ ವಿಶಾಲಿಯೊಬ್ಬಳೇ.

"ಏನಣ್ಣಾ, ಅದೇನು ಕನಸು ಕಾಣುತ್ತಿರುವೆ? ತಾರಿಣಿಯ ಈ ಸೆರೆ ಬಿಡಿಸಲು ನಿನಗೆ ಮನಸ್ಸಾಗದೇನು?" ಈಗ ನಾನು ಪೂರ್ಣ ಎಚ್ಚರದಿಂದಿದ್ದೆ. "ಮನಸ್ಸಾಗದೇನು!" ಈಗ ನನ್ನ ಕನಸಿನ ರಾಜ್ಯದಲ್ಲಿ ತಾರಿಣಿಯ ಸೆರೆ ಬಿಡಿಸಲು ಹೊರಟಿದ್ದೆ. ಆಕೆಗೆ ಎರಡನೆಯ ವಿವಾಹವೆಂದು ಮನಸ್ಸು ಅಳುಕುವುದೇ?"

"ಪಾಪ! ಮದುವೆ ಎಂದರೇನೆಂದು ತಿಳಿಯುವ ಮುನ್ನವೇ 'ವಿಧವೆ' ಎಂದು ಜನ ಕರೆಯತೊಡಗಿದರು. ಆದರೇನು! ಆಕೆಯ ಮನಸ್ಸಿಗೆ ತನ್ನ ಮದುವೆಯಾಗಿರುವುದೆಂಬುದು ಬರೀ ಕನಸು. ಯಾರೋ ಅಪರಿಚಿತರೊಬ್ಬರು ಆಟದ ಕೂಸಿಗೆ ಸಿಂಗರಿಸುವಂತೆ ತಾರಿಣಿಗೆ ಮಾಂಗಲ್ಯವೊಂದನ್ನು ಕಟ್ಟಿದ್ದರು. ಮುಂದೆ ಅವರು ಹೋದಾಗ ತಾವು ಕಟ್ಟಿದ್ದ ಮಾಂಗಲ್ಯವನ್ನು ಸಂಗಡ ಒಯ್ದರು. ಈಗ ಅವರು ಹಿಂದೆ ಸಿಂಗರಿಸಿದ್ದರೆನ್ನಲು ಯಾವ ಕಾಣುವ ಕುರುಹೂ ಇಲ್ಲ. ಅವರು ಒಂದು ಕಾಲದಲ್ಲಿ ಬದುಕಿದ್ದರು, ಸಿಂಗರಿಸಿದ್ದರು ಎನ್ನುವ ಬರೀ ನೆನಪು ಒಂದಲ್ಲದೆ—ಈ ಹಾಳು ನೆನಪೇ ಇಂದು ಭೂತದ ರೂಪತಾಳಿ ಅವಳ ಎಲ್ಲಾ ಮುಂದಿನ ಭವಿಷ್ಯಕ್ಕೆ ಆತುಕುಳಿತಿರುವುದು. ಅದೇ ನೆನಪೇ ಅವಳ ಎಲ್ಲಾ ಸೊಗಸಿನ ಕನಸಿಗೆ ಮಣ್ಣೆರಚುತ್ತಾ ಕುಳಿತಿರುವುದು.

"ಇದನ್ನು ಅರಿತೂ ಅರಿತೂ ಅದೇಕೆ ನಾನು ಆ ಭೂತಕ್ಕೆ, ಆ ನೆನಪಿನ ಭೂತಕ್ಕೆ—ಹೆದರಿ ಕುಳಿತಿರಬೇಕು? ಆ ಭೂತ ಬಂದು

ಹೆದರಿಸಲಿ. ಅದಕ್ಕಾಗಿ ಭೀತಿ ಏಕೆ? ಇಂದು ಆ ಭೂತದ ಹೆದರಿಕೆ ಇದೆ; ನಾಳೆ ಆಕೆಯನ್ನು ಕೈಹಿಡಿದಮೇಲೆ ಅದೆಲ್ಲ ಅಣಗುವುದು.........

"ಇನ್ನು ಸಮಾಜದ ದೋಷಾರೋಪಣೆ. ಇಂದು ತಾರಿಣಿಯನ್ನು ಈ ಬಾಳಿಗೆ ತಂದವರಾರು? ಅದು ಸಮಾಜವಲ್ಲವೆ? ಹತ್ತು ಕಳೆಯುವ ಮುನ್ನವೇ ಸಮಾಜದ ಆಧಾರಸ್ಥಂಭಗಳಂತಿದ್ದ ಅವಳ ಅಜ್ಜ ಅಜ್ಜಿಯರು—ತಮ್ಮ ಮತ್ತು ಸಮಾಜದ ಆಸೆ ಪೂರೈಕೆಗಾಗಿ ಅಲ್ಲವೆ ತಾರಿಣಿಗೆ ಮದುವೆ ಮಾಡಿದ್ದುದು. ಮುಂದೆ ವಿಧಿ ತನ್ನ ಕ್ರೂರಕೃತ್ಯವನ್ನು ಎಸಗಿದಾಗ ಆ ಸಮಾಜ ಯಾರ ಪ್ರೀತಿಗಾಗಿ ಆ ಮಂಗಳ ಕಾರ್ಯ ನಡೆಯಿತೋ ಆ ಸಮಾಜ, ಅವಳಿಗಾಗಿ ಏನು ಮಾಡಿತು? ಅವಳ ಪಾಲಿಗೆ ಮೌನ ಧರಿಸಿ ಕುಳಿತಿತು. ಅವಳ ತಂದೆ ತಾಯಿಯರು ಅವಳಿಗೆ ಬೇರೆ ಮದುವೆ ಮಾಡಲು ಯತ್ನಿಸಿದಾಗ ವಿಧವೆ! ವಿಧವೆ ಎಂದು ಬಂದ ಎಲ್ಲಾ ವರಗಳನ್ನು ಹಿಮ್ಮೆಟ್ಟಿಸಿತು. ಇದೇ ಸಮಾಜ ಮಾಡಿದ ಕೆಲಸ. ಅವರು ಸಮಾಜವನ್ನು ನಂಬಿದುದಕ್ಕಾಗಿ ಸಿಕ್ಕ ಪ್ರತಿಫಲ ಇದೇ ತಾನೆ?

"ಇದು ಸಮಾಜದ ಪ್ರತಿಕ್ರಿಯೆಯಾದರೆ ಸಮಾಜದ ಸುಧಾರಣೆಗೆ ಬಿಸಿರಕ್ತ ಸುರಿಯಲಾಶಿಸುವ ನಾವು ಹಿಂದಿನ ಕಂದಾಚಾರದ ಅಂಧ ಶ್ರದ್ಧೆಯ ಕಟ್ಟಳೆಯ ಕೋಟಲೆಗಳನ್ನು ಕಿತ್ತೊಗೆಯಲೇಬೇಕು. ಸಮಾಜದ ಕಟ್ಟಡವನ್ನು ಭದ್ರವಾದ ಬುನಾದಿಯ ಮೇಲೆ ಹೊಸರೀತಿಯಾಗಿ ಕಟ್ಟಬೇಕು. ತರುಣರಾದ ನಾವು ಕಂಡೂಕಂಡೂ ಇನ್ನೂ ಕೈಕಟ್ಟಿ ಕುಳಿತಿರಬೇಕೆ? ಅದಾಗದು, ಖಂಡಿತಾ ಆಗದು, ಸಮಾಜದಲ್ಲಿ ಕ್ರಾಂತಿ ಎಬ್ಬಿಸಬೇಕು. ಅಂತಹ ಕ್ರೂರ ವಿಧಿಯನ್ನು ಎದುರಿಸಿ ಸಮಾಜದ ಮೂತಿಗೆ ತಿವಿದು ಆ ಸಮಾಜಕ್ಕೆ ಬಲಿಯಾದ ಅಂತಹ ಬಲಿಪಶುಗಳನ್ನು ರಕ್ಷಿಸಬೇಕು! ಅದೇ ನಮ್ಮಂತಹ ಯುವಕರ ಮೊದಲನೆಯ ಕೆಲಸವಾಗಬೇಕು."

ವಿಶಾಲಿಯ ಕಣ್ಣುಗಳು ಆನಂದ ಬಾಷ್ಪ ಸುರಿಸಿದವು. ಮುಖದಲ್ಲಿ ಆ ನೋವು—ಮ್ಲಾನತೆ—ಕಳೆಯಿತು. ತನ್ನೊಬ್ಬ ಗೆಳತಿಯ ಜೀವನದ

ಕೊರಗು ಕಳೆಯಿತೆಂದು ಸಂತೋಷಪಟ್ಟಳು. ಅದೂ ತನ್ನ ಅಣ್ಣನಿಂದ ಎಂದು ಹೆಮ್ಮೆ ತಳೆದಳು, ಉಬ್ಬಿದ ಮನದಿಂದ, ಉಬ್ಬಿದ ಹೃದಯದಿಂದ.

"ಹಾಗಾದರೆ ಯಾವುದೊಂದು ಮಾತನ್ನು ತಾರಿಣಿಗೆ ತಿಳಿಸಲೇ ನಣ್ಣಾ" ಎಂದಳು.

ಈಗಲೇ ಈ ಸುದ್ದಿಯನ್ನು ತಾರಿಣಿಗೆ ಅವರ ತಂದೆ ತಾಯಿ ಬಂಧುವರ್ಗವನ್ನು ಒಮ್ಮೆ ಕೂಡ ಕಾಣದೆ ಇರುವಾಗ ತಿಳಿಸುವುದು ಅನುಚಿತವೆನಿಸಿತು. ಮುಂದೆ ನಾನು 'ಹೇಗಿದ್ದರೂ ಇನ್ನೂ ಒಂದು ದಿನ ಇರುವೆವಲ್ಲಾ ಹೋಗುವ ಮುನ್ನ ತಿಳಿಸಿ ಹೋದರಾಯಿತು' ಎಂದು ಕೊಂಡೆ.

"ಈಗೇನೂ ಬೇಡ ವಿಶಾಲಿ—ನಾಳೆ ಸಮಯ ಸಿಕ್ಕಾಗ ಹೇಳುವಿ ಯಂತೆ'' ಎಂದೆ.

"ನಿನ್ನಿಷ್ಟ ಅಣ್ಣಾ''

೮

ಗಂಟೆ ಒಂದಾಗುತ್ತ ಬಂದಿತ್ತು. ತಾರಿಣಿಯು ಬಂದಾಗ ಸಿಂಗರಿಸಿ ಕೊಳ್ಳುತ್ತಾ ಕುಳಿತರೆ ರೇಡಿಯೋ ಕೇಳಲು ಹೊತ್ತಾದೀತೆಂದು, ಹೋಗಿ ಹೊರಗಡೆಯ ನಲ್ಲಿಯಲ್ಲಿ ಮುಖತೊಳೆದುಕೊಂಡು, ಕ್ರಾಫ್ ತೀಡಿ ಸ್ವಚ್ಛ ಉಡುಪು ತೊಟ್ಟು ಹೊರಡಲು ಸಿದ್ಧನಾಗಿ ಕುಳಿತೆ. ವಿಶಾಲಿಯೂ ತಲೆ ಬಾಚಿಕೊಂಡು ಸಿದ್ಧಳಾದಳು.

ರೂಂನ ಹೊರಗಡೆಯ ವರಾಂಡದಲ್ಲಿ ರಪರಪನೆಂದು ಹೆಜ್ಜೆ ಹಾಕುತ್ತಾ ಯಾರೋ ಬರುತ್ತಿದ್ದರು. ಹೀಗೆ ಬರುವವಳು ತಾರಿಣಿ ಇರಬೇಕೆಂದು ತರ್ಕಿಸಿದೆವು. ತಾರಿಣಿಯೇ ನಮ್ಮನ್ನು ಕಂಡೊಡನೆ,

"ಓಹೊ ಈಗಾಗಲೇ ಸಿದ್ಧರಾಗಿ ನನ್ನ ದಾರಿ ಕಾಯುತ್ತಾ ಕುಳಿತಿದ್ದೀರೇನು ? ನಾನು ನೀವು ಇನ್ನೂ ಸಿದ್ಧರಾಗಿರಲಿಕ್ಕಿಲ್ಲ ಎಂದಿದ್ದೆ. ಸಿದ್ಧರಾದಮೇಲೆ ಇನ್ನೇನು ಹೊರಡುವುದು ತಾನೆ ?" ಎಂದಳು.

ಮೂವರೂ ವಸತಿಗೃಹದಿಂದ ಹೊರಟೆವು. ತಾರಿಣಿಯು ತನ್ನ ಮೊದಲಿನ ಚೇಷ್ಟೆ, ಸಲ್ಲಾಪದಲ್ಲಿ—ಅದೂ ಇದೂ ಮಾತನಾಡುತ್ತಾ ಬರುತ್ತಿದ್ದಳು. ನಾವಿಬ್ಬರೂ ಆಗತಾನೇ ಅವಳ ಹೃದಯ ವಿದ್ರಾವಕವಾದ ಕರುಣ ಕಥೆಯಲ್ಲಿ ಮಿಂದು ಬಂದಿದ್ದುದರಿಂದ ತಾರಿಣಿಯಷ್ಟೇ ಉತ್ಸಾಹ ದಿಂದ ಮಾತನಾಡಲು ನಮ್ಮಿಂದ ಆಗದೇ ಹೋಯಿತು. ನನಗೆ ಅವಳ ಅಂದಿನ ಉತ್ಸಾಹ ಆನಂದದಿಂದ ಪ್ರಫುಲ್ಲವಾಗಿದ್ದ ಆ ಮುಖದ ಹಿಂದೆ ಅಡಗಿದ್ದ ಅವಳ ಆ ದಾರುಣವೇದನೆ ಮನಸ್ಸಿನ ಒಳಕಣ್ಣುಗಳಿಗೆ ಗೋಚರಿಸದೆ ಇರಲಿಲ್ಲ. ಇಂತಹ ಸುರಸುಂದರಿಗೆ ಅದೆಂತಹ ಹೆಸರು "ವಿಧವೆ" ಎಂದು. ಅವಳ ಬಗ್ಗೆ ಚಿಂತಿಸುತ್ತಾ ಕಾಲು ಹಾಕುತ್ತಿದ್ದೆ. ಆದರೆ ವಿಶಾಲಿ ಅವಳ ಬಗ್ಗೆ ಅದಾವ ವಿಷಯ ಚಿಂತಿಸುತ್ತಿದ್ದಳೋ ಕಾಣೆ. ಅವಳೂ ಹೆಚ್ಚಿನ ಮಾತಿಲ್ಲದೆ ನಡೆದಿದ್ದಳು. ಆದರೂ ನಾವು ನಮ್ಮ ಒಳ ತೋಟಿಯಲ್ಲಿ ನಡೆಯುವ ಯಾವ ಒಂದು ಸಂಗತಿಯನ್ನೂ ಮುಖದ ಭಾವದಿಂದ ತೋರ್ಪಡಿಸದೆ ಮೊದಲಿನ ಸಂತೋಷದ ಮೋರೆ ಹೊತ್ತು ನಡೆದಿದ್ದವು.

ಅವರ ಮನೆ ಅಲ್ಲೆ—ಪುರುಷವಾಕಂನಲ್ಲಿ, ಸಮ್ಮೇಳನ ನಡೆಯು ತ್ತಿದ್ದ ಕಟ್ಟಡಕ್ಕೂ ಅವರ ಮನೆಗೂ ಕೇವಲ ನಾಲ್ಕು ಫರ್‌ಲಾಂಗ್ ಹಾದಿ ಅಷ್ಟೇ. ಆದುದರಿಂದಲೇ ರಾತ್ರಿ ಹೊತ್ತಾದರೂ ಉರಿಯುವ ಬೀದಿ ದೀಪದ ಬೆಳಕಿನಲ್ಲಿ ನಿರ್ಭೀತಳಾಗಿ ಮನೆಗೆ ಹೋಗುತ್ತಿದ್ದುದು.

ಮನೆ—ಅದೊಂದು ಚಿಕ್ಕದಾದ ಚೊಕ್ಕ ಮನೆ. ಅದು ಅಷ್ಟೇನೂ ದೊಡ್ಡ ಕಟ್ಟಡವಲ್ಲದಿದ್ದರೂ ನೋಡಲಿಕ್ಕೆ ಓರಣವಾಗಿತ್ತು. ಮನೆಯ ಮುಂದುಗಡೆ ಒಂದು ಕಾಂಪೌಂಡು. ಅಲ್ಲಿ ತಾರಿಣಿಯೇ ತನ್ನ ಕಯ್ಯಿಂದ ಕೃಷಿಮಾಡಿ ಬೆಳಸಿದ ರೋಜಾ ಮೊದಲಾದ ಹೂಗಿಡಗಳು. ಕಾಂಪೌಂಡು ಬಾಗಿಲ ಮೇಲೆ ಹಬ್ಬಿಸಿರುವ ಜಾಜೀ ಹೂ ಬಳ್ಳಿ ಮನೆಯ ಹತ್ತಿರ ಹೋದವರಿಗೆ ತನ್ನ ಸೂವಾಸನೆಯನ್ನು ಚೆಲ್ಲಿ ಸ್ವಾಗತಿಸಲು ಸದಾ ಸಿದ್ಧ.

ದೂರದಲ್ಲಿ ನಾವು ಬರುವುದನ್ನು ನೋಡಿ ತಾರಿಣಿಯ ತಮ್ಮ ತಂಗಿಯರು ನಾವು ಬರುತ್ತಿದ್ದೇವೆಂದು ತಾಯಿಗೆ ತಿಳಿಸಲು ಒಳಗೆ

ನುಗ್ಗಿದವು. ನಾವು ಮನೆಯನ್ನು ಪ್ರವೇಶಿಸುತ್ತಿದ್ದಂತೆಯೇ ತಾರಿಣಿಯ ತಾಯಿ ನಮ್ಮನ್ನು ಸ್ವಾಗತಿಸಲು ಹೊರಗೆ ಬಂದಿದ್ದರು. ತಾರಿಣಿ ನಮಗೆ ಅವರ ತಾಯಿಯ ಪರಿಚಯ ಮಾಡಿಕೊಟ್ಟ ಮೇಲೆ ಅವರ ತಾಯಿಗೆ "ನಾನು ಹೇಳುತ್ತಿರಲಿಲ್ಲವೇನಮ್ಮ. ಅವರೇ ಇವರು" ಎಂದು ನಮ್ಮ ಪರಿಚಯವನ್ನು ಒಂದೇ ಮಾತಿನಲ್ಲಿ ಅವರಿಗೆ ಮಾಡಿಕೊಟ್ಟಳು. 'ಅವರೇ ಇವರು' ಎಂದು ತಾರಿಣಿಯು ಹೇಳಿದಾಗ ತಾರಿಣಿಯ ತಾಯಿ ತೆರೆದ ಬಾಯಿ ಕಣ್ಣುಗಳಿಂದ ನಮ್ಮನ್ನು ನೋಡಿ "ಬನ್ನಿಯಪ್ಪಾ........ ನಮ್ಮಂತಹವರ ಮನೆಗೆ ನೀವು ಬಂದುದೇ ಹೆಚ್ಚು" ಎಂದು ತೀರ ಪರಿಚಿತರಿಗೆ ಹೇಳಿದಂತೆ ಹೇಳಿ ನಮ್ಮನ್ನು ಆದರದಿಂದ ಬರಮಾಡಿಕೊಂಡರು. ಅವರನ್ನು ನೋಡಿದುದು ನಾವು ಅದೇ ಮೊದಲನೆಯ ಸಲವಾದರೂ ಅವರು ಮಾತನಾಡಿದ ಧಾಟಿಯನ್ನು ಕಂಡು ಅವರಿಗೆ ನಮ್ಮ ಪರಿಚಯವಿರಬೇಕೆಂದುಕೊಂಡೆ. ಹೌದು ಈ ಮೊದಲೇ ನಮ್ಮ ಎಲ್ಲಾ ವಿಷಯವನ್ನು ತಾಯಿಯ ಮುಂದೆ ಹೇಳಿರಬೇಕು. ಇಲ್ಲದಿದ್ದರೆ........ ಅವರು ಆ ರೀತಿಯಾಗಿ ಅಪರಿಚಿತರಾದ ನಮ್ಮೊಡನೆ ಮಾತನಾಡುವುದೆಂದರೇನು?

ತಾರಿಣಿಯು ನಮ್ಮನ್ನು ಹಾಲಿನಲ್ಲಿ ಹಾಸಿದ ಚಾಪೆಯ ಮೇಲೆ ಕೂಡಿಸಿ ತಂದೆಯವರು ಮಲಗಿದ್ದ ಕೊಠಡಿಗೆ ಹೊರಟಳು. ಅವರು ಎದ್ದಿದ್ದರೆ ನಮ್ಮ ಪರಿಚಯ ಮಾಡಿಕೊಡಲೆಂದು ಕಾಣುತ್ತೆ. ತಾರಿಣಿಯು ಹೊರಟುಹೋದಮೇಲೆ ಅವರ ತಾಯಿ ನಮ್ಮನ್ನು ವಿಚಾರಿಸಲು ನಿಂತರು. ಅವರನ್ನು ನೋಡಿದ ಕೂಡಲೆ ನಮ್ಮ ತಾಯಿಯ ನೆನಪಾಯಿತು. ವಯಸ್ಸು ನಮ್ಮ ತಾಯಿಯ ವಯಸ್ಸೇ. ಸುಮಾರು ನಲವತ್ತೈದು ವರ್ಷಕ್ಕಿಂತಲೂ ಕಡಿಮೆ. ಆದರೂ ನಮ್ಮ ತಾಯಿಯ ಮೋರೆಯಲ್ಲಿ ಕಾಣುವ ವರ್ಚಸ್ಸು ಅವರ ಮುಖದಲ್ಲಿತ್ತು. ಎಷ್ಟೆಂದರೂ ಈಕೆ ಮುತ್ತೈದೆ.... ಇನ್ನು ಆಕಾರ, ರೂಪ, ಸ್ವಲ್ಪ ಬಜ್ಜು ಬೆಳೆದ ಶರೀರ. ಹೆಚ್ಚಿನ ಕಷ್ಟ ತಾಪತ್ರಯದಲ್ಲಿ ಬೆಳೆಯದವರಿರಬೇಕು. ಇದರ ಜೊತೆಗೆ ಸ್ವಲ್ಪ ಕುಳ್ಳು, ತಾರಿಣಿಗಿಂತಲೂ ಕುಳ್ಳು—ಅವರಿಬ್ಬರನ್ನೂ ನೋಡಿದ

ವರು ಅಕ್ಕ ತಂಗಿಯರೆಂದು ಹೇಳುವವರೇ ಹೊರತು ತಾಯಿ ಮಗಳೆಂದು ಖಂಡಿತಾ ಹೇಳಲಾರರು !

ಕಾರಣ ಅವರಿಬ್ಬರಲ್ಲಿನ ಸಮಂಜಸವಾದ ಹೋಲಿಕೆ. ಎಷ್ಟಾದರೂ ಅವರು ತಾಯಿ ಮಕ್ಕಳಲ್ಲವೇ? ಒಂದೇ ರೂಪ! ಆದರೆ ಬೇರೆ ಬೇರೆ ಕಾಲದವು—ತಾರಿಣಿಯು ಯವ್ವನ ಲೋಕದಲ್ಲಿ ಈಗ ತಾನೆ ಕಾಲಿರಿಸುತ್ತಿದ್ದಾಳೆ. ಅವಳ ತಾಯಿ ಈಗ ತಾನೆ ಅಲ್ಲಿಂದ ಕಾಲುಕೀಳುತ್ತಿದ್ದರು. ಆದರೂ ಹಿಂದಿನ ಆ ಯವ್ವನದ ಛಾಯೆ ಪೂರ್ಣವಾಗಿ ಮಾಸಿರಲಿಲ್ಲ. ಮೋರೆಯಿಂದ.

ತಾರಿಣಿಯ ತಂದೆ ಇನ್ನೂ ಮಲಗಿದ್ದುದರಿಂದ ತಾರಿಣಿಯು ಬಂದು ನಮ್ಮೊಡನೆ ಸೇರಿದಳು ಮತ್ತೆ. ತಾರಿಣಿಯ ತಂಗಿಯರು ನಮ್ಮನ್ನು ಕಂಡು ಹೆದರಿದವರಾಗಿ ತಾಯ ಬಗಲಿನಲ್ಲಿ ಸೇರಿದ್ದರು. ತಾರಿಣಿಯ ತಮ್ಮ ಮಾತ್ರ ಧೈರ್ಯವಾಗಿ ಒಂದೆಡೆಯಲ್ಲಿ ಕುಳಿತಿದ್ದ. ವಿಶಾಲಿ ತಾಯ ಬಳಿ ಸೇರಿದ್ದ ಮಕ್ಕಳನ್ನು ಬಳಿಗೆ ಕರೆದಳು. ಅವು ಗಾಬರಿಯಿಂದ ಮಿಕಮಿಕ ನೋಡುತ್ತ ಕುಳಿತರೇ ಹೊರತು ಬರಲಿಲ್ಲ. ತಾರಿಣಿ ಇದನ್ನು ಕಂಡು “ಬಾರೆ ಶಾರಿ, ವನಜ—ಇವರಾರು ಅಲ್ಲ ನಿಮ್ಮ ಮಾವ ಕಣೇ” ಎಂದು ಕರೆದಳು. ತಾರಿಣಿಯ ಬಾಯಲ್ಲಿ “ನಿಮ್ಮ ಮಾವ” ಎಂಬ ಪದವನ್ನು ಕೇಳಿ ಅವರ ತಾಯಿಯ ಮೋರೆಯ ಮೇಲೆ ವಿಚಾರದ ಸುಳಿಯೊಂದು ಕಂಡು ಮಾಯವಾಯಿತು. ಬಹುಶಃ ತಮ್ಮ ತಮ್ಮನನ್ನು ನೆನೆದಿರಬೇಕು. ಮಕ್ಕಳು ಇನ್ನೂ ತಮ್ಮ ಬಗಲು ಬಿಟ್ಟುಹೋಗದಿರುವುದನ್ನು ಕಂಡು ಅವರೇ ನುಡಿದರು “ಹೋಗ್ರೆ ಯಾಕೆ ಹೆದರುತ್ತೀರಿ. ನೋಡು ವಿಶಾಲಕ್ಕ ನಿಮ್ಮನ್ನು ಕರೆಯುತ್ತಿದ್ದಾಳೆ.” ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಆಗಲೇ ನಮ್ಮ ಹೆಸರು ಕೂಡ ಇವರಿಗೆ ತಿಳಿದುಬಿಟ್ಟಿದೆ ಎಂದು. ಈ ಮೊದಲೇ ತಾರಿಣಿಯು ಹೇಳಿರಬೇಕು ಎಂದು ಕಾಣುತ್ತೆ.

ಆದರೂ ಆ ಮಕ್ಕಳು ತಾಯಿಯನ್ನು ಬಿಟ್ಟು ಕದಲಲಿಲ್ಲ. ನಾನು ಅಲ್ಲಿ ಕುಳಿತಿದ್ದ ತಾರಿಣಿಯ ತಮ್ಮನನ್ನು ಹತ್ತಿರ ಕರೆದೆ. ಅವನು ಧೈರ್ಯ

ವಾಗಿ ಬಂದ. ಅವನ ಹೆಸರು ಕೇಳಿದೆ. "ಆನಂದರಾವ್" ಎಂದು ಉತ್ತರ ಕೊಟ್ಟ. ಹುಡುಗ ಚಟುವಟಿಕೆಯಾಗಿದ್ದ. ಕೇಳಿದ ಪ್ರಶ್ನೆಗಳಿಗೆ ತಟ್ಟನೆ ಉತ್ತರ ಕೊಡುತ್ತಿದ್ದ.

"ಯಾವ ಕ್ಲಾಸಿನಲ್ಲಿ ಓದುತ್ತೀಯು ಮಗು"

"English Fourth Year"

"ಭೇಷ್, ನಿನ್ನ ತಂಗಿ?"

"ಶಾರಿ ಮೂರನೇ ಕ್ಲಾಸು, ವನಜ ಇನ್ನೂ ಸ್ಕೂಲಿಗೇನೇ ಹೋಗುತ್ತಿಲ್ಲ."

"ನಿನಗೆ ಕನ್ನಡ ಓದಲು ಬರುತ್ತದೆಯೋ?"

"ಓಹೊ! ತಾರಿಣಕ್ಕ ನನಗೆ, ಶಾರಿಗೆ ಹೇಳಿಕೊಟ್ಟಿದ್ದಾಳೆ ಮನೆಯಲ್ಲಿ"

ಇದನ್ನೆಲ್ಲಾ ಕೇಳುತ್ತಿದ್ದ ವಿಶಾಲಿ ತಾರಿಣಿಯ ಕಡೆ ನೋಡಿ "ಅಂತು—ಕನ್ನಡಿಗರಾಗಿಯೇ ಉಳಿದಿರುವಿರಲ್ಲಾ ಇನ್ನೂ, ಅದು ಸಂತೋಷದ ಸಂಗತಿ" ಎಂದಳು. "ಹಾಗಂದರೇನೇ ತಾಯಿ, ನಾವು ಮಾತನಾಡುವುದು ಎಲ್ಲಾ ಕನ್ನಡದಲ್ಲಿ....ನಾವೇನು ಹೊರಗಿನವರು ಅಂತ ತಿಳಿದೆಯೋ........ನಾವೂ ಮೈಸೂರಿನವರೇ. ಆದರೆ ನಮ್ಮ ನೀರಿನ ಋಣ ಇಲ್ಲಿಗೆ ಆ ವರ್ಷದ ಹಿಂದೆಯೆ ಕರೆತಂದು ಬಿಟ್ಟಿದೆ." ತಾರಿಣಿಯ ತಾಯಿ ವಿಶಾಲಿಯ ಮಾತು ಕೇಳಿ ಅಂದರು. ಮುಂದೆ ನಮ್ಮ ಎಲ್ಲಾ ವಿಷಯವನ್ನು ತಿಳಿಯಲು ಕುತೂಹಲರಾಗಿ ಪ್ರಶ್ನಿಸಿದರು.

"ನಿಮ್ಮ ಸ್ಥಳ ಯಾವುದೇ ತಾಯಿ"

"ನಮ್ಮದೂ ಕೋಲಾರವೆಂದರೆ ನಿಮಗೆ ಆಶ್ಚರ್ಯವಾಗಬಹುದು. ಈಗ ಸದ್ಯಕ್ಕೆ ನಮ್ಮ ಅಣ್ಣನಿಗೆ ಬೆಂಗಳೂರಿನಲ್ಲಿ ಕೆಲಸವಿರುವುದರಿಂದ ಅಲ್ಲಿಯೇ ಇದ್ದೇವೆ. ಅದೇ ಈಗ ನಾವಿರುವ ಸ್ಥಳ. ಆದರೂ ಯಾರಾದರೂ ನಿಮ್ಮ ಸ್ಥಳ ಯಾವುದು ಎಂದರೆ ನಾವು ಕೋಲಾರವೆಂದೇ ಹೇಳುವುದು."

"ನಿಜವಾಗಿಯೂ ನಿಮ್ಮದು ಕೋಲಾರಾನಾ? ಹಾಗಾದರೆ ಸರಿ ಹೋಯಿತು. ನೀವು ಕೋಲಾರದಲ್ಲಿ ಇದ್ದುದು ಎಂದು? ಅಲ್ಲಿ ಎಲ್ಲಿ ಇದ್ದಿರಿ" ಆಶ್ಚರ್ಯಚಕಿತರಾಗಿ ಕೇಳಿದರು.

"ನಾವು ಹುಟ್ಟಿದ್ದು ಬೆಳೆದದ್ದೂ ಎಲ್ಲಾ ಕೋಲಾರದಲ್ಲಿಯೇ. ಮೊನ್ನೆ ಮೊನ್ನೆಯವರೆಗೂ ನಾವು ಅಲ್ಲಿಯೇ ಇದ್ದೆವು. ಅಲ್ಲಿಂದ ಬೆಂಗಳೂರಿಗೆ ಅಪ್ಪನಿಗೆ ವರ್ಗವಾಯಿತು. ಆಮೇಲೆ ನಾವು ಬೆಂಗಳೂರಿಗೆ ಹೋದದ್ದು. ನಾವು ಕೋಲಾರದಲ್ಲಿ ಹತ್ತಕ್ಕಿಂತಲೂ ಹೆಚ್ಚು ವರ್ಷ ವಿದ್ದೆವು. ನಾಗರಕುಂಟೆಯ ಹತ್ತಿರದ ವೆಂಕಟರಮಣ ಸ್ವಾಮಿಯ ದೇವಾಲಯದ ಬಳಿಯಲ್ಲೇ ನಮ್ಮ ಮನೆ ಇದ್ದುದು"

"ಓಹೋ! ಹಾಗೇನೂ. ನಾವಿದ್ದದ್ದು ಕಳಾಸಿ ಪಾಳ್ಯದಲ್ಲಿ. ಅಂತೂ ಇಂತೂ ನೀವು ನಮ್ಮೂರಿನವರೇ ಆದಿರಿ."

"ಓಹೊ. ಧಾರಾಳವಾಗಿ ನಿಮ್ಮ ಊರಿನವರೇ. ಜತೆಗೆ ನಿಮ್ಮ ಸಂಪ್ರದಾಯದವರೇ" ಅಷ್ಟೇ ಉದ್ವೇಗವಾಗಿ ವಿಶಾಲಿ ನುಡಿದಳು.

"ಹಾಗಾದರೆ ನಿಮ್ಮ ತಂದೆಗೆ ಅಲ್ಲಿ ಏನು ಕೆಲಸವಿತ್ತು''

"ತಾಲ್ಲೋಕು ಹೆಡ್ ಗುಮಾಸ್ತರಾಗಿದ್ದರು.''

"ಈಗಲೂ ಬೆಂಗಳೂರಿನಲ್ಲಿ ತಾನೇ ಅವರಿರುವುದು?

ವಿಶಾಲಿ ತಟ್ಟನೆ ಉತ್ತರ ಕೊಡಲಿಲ್ಲ. ನಿಧಾನವಾಗಿ ಹೇಳಿದಳು. "ಆ ಪುಣ್ಯ ನಾವು ಕೇಳಿ ಬರಲಿಲ್ಲ"

"ಅಯ್ಯೋ ಪಾಪ! ಏನಾಗಿತ್ತೊ........ಅವರಿಗೆ. ನಿಮ್ಮನ್ನು ತಬ್ಬಲಿ ಮಾಡಿಹೋದರೇನು?" ಎಂದು ಖಿನ್ನರಾಗಿ ಹೇಳಿದರು.

ವಿಶಾಲಿ ಏನೂ ನುಡಿಯಲಿಲ್ಲ. ನಾನು ಹೇಳಿದೆ. "ಅವರಿಗೆ ಯಾವ ಕಾಯಿಲೆಯೂ ಇರಲಿಲ್ಲ. ಆರೋಗ್ಯವಾಗಿಯೇ ಇದ್ದರು. ಆದರೂ ರಕ್ತವತ್ತಡದ ನೆಪದಲ್ಲಿ ವಿಧಿಯು ಮೋಸಮಾಡಿದ'' ಎಂದು ಬಿಸುಸುಯ್ದು ನುಡಿದೆ. ಇದನ್ನು ಕೇಳಿ ತಾರಿಣಿಯ ತಾಯಿ ಏನೂ ನುಡಿಯಲಿಲ್ಲ.

ಒಂದು ದೀರ್ಘ ನಿಟ್ಟುಸಿರೊಂದನ್ನು ಬಿಟ್ಟರು. ಮುಖದಲ್ಲಿ ಅವ್ಯಕ್ತ ವೇದನೆಯೊಂದು ಕಂಡೂ ಕಾಣದಾಯಿತು. ನನ್ನ ಬಾಯಿಂದ ಬಂದ ವಿಧಿಯೆಂಬ ಶಬ್ದ ಕೇಳಿ, ಅವರೂ ತಮ್ಮ ಸಂಸಾರದಲ್ಲಿ ಎಸಗಿದ ಕ್ರೂರಕೃತ್ಯವನ್ನು ಜ್ಞಾಪಕಕ್ಕೆ ತಂದುಕೊಂಡಿರಬೇಕು. ಆ ವಿಧಿಯು ಕೈಚಳಕ ನಡೆಸದ ಸಂಸಾರವೆಲ್ಲಿ? ಆ ಒಂದು ಘಳಿಗೆ ಎಲ್ಲರೂ ಸುಮ್ಮನೆ ಕುಳಿತರು. ಯಾರೊಬ್ಬರೂ ಏನೊಂದೂ ನುಡಿಯಲಿಲ್ಲ. ಗಡಿಯಾರದಲ್ಲಿ "ಠಣ್" ಎಂದು ಹೊಡೆದಾಗಲೇ ನಮಗೆ ಎಚ್ಚರ. ಗಡಿಯಾರವನ್ನು ನೋಡುತ್ತ ತಾರಿಣಿ "ಆಗಲೇ ಗಂಟೇನೇ....ಅಯ್ಯೋ ನಾವು ಬಂದ ಕೆಲಸವನ್ನೆ ಮರೆತು ಮಾತಿಗೆ ಕುಳಿತೆವಲ್ಲಾ" ಎಂದುಕೊಂಡು ತನ್ನ ಕೊಠಡಿಗೆ ಹೋಗಿ ರೇಡಿಯೋವನ್ನು ಮದರಾಸಿನ "ಸ್ಟೇಷ್ನ"ಗೆ ಹಚ್ಚಿ ನಮ್ಮನ್ನು ಕರೆದೊಯ್ದಳು.

*ಆಗ ತಾನೇ ಭಾಷಣ ಪ್ರಾರಂಭವಾಗುವುದಿತ್ತು. ಮೊದಲು ಮುಂದೆ ಮಾತನಾಡಲಿರುವ ಸಾಹಿತಿಗಳನ್ನು ಶ್ರೀ ರಮಾನಂದರೆಂಬುವರು ಪರಿಚಯಮಾಡಿಕೊಟ್ಟರು.

ಮೊದಲನೆಯ ಭಾಷಣಕಾರರಾಗಿ ಶ್ರೀ ಬೇಂದ್ರೆಯವರು ಮಾತನಾಡಿದರು. ನಾನು ಬೇಂದ್ರೆಯವರ ಭಾಷಣ ಕೇಳಿದುದು ಅದೇ ಮೊದಲನೆಯ ಸಲವಲ್ಲ. ಹಿಂದೆ ನಾನು ಮೈಸೂರಿನಲ್ಲಿ ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದಾಗ ಬೇಂದ್ರೆಯವರು ಒಮ್ಮೆ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ನಾಲ್ಕು ಗೀತೆಗಳನ್ನು ಹಾಡಿದ್ದರು. ಮತ್ತೊಂದು ಬಾರಿ ಒಂದು ಭಾಷಣ ಕೂಡ ಮಾಡಿದ್ದರು.

ಅವರ ಮಾತು ರೇಡಿಯೋನಲ್ಲಿ ಸ್ಪಷ್ಟವಾಗಿ ಕೇಳಿಬರುತ್ತಿತ್ತು. ಅವರ ಮಾತಿನ ಸರಣಿ, ಹಿಂದೆ ನಾನು ಕಾಲೇಜಿನಲ್ಲಿ ಕೇಳಿದ್ದ ಭಾಷಣ

---

*ಮದರಾಸಿನ ಬಾನುಲಿಯುಲ್ಲಾದ ಈ ಸಾಹಿತಿಗಳ ಭಾಷಣ ಪ್ರಬುದ್ಧ ಕರ್ಣಾಟಕದ ದೀಪಾವಳಿ ಸಂಚಿಕೆಯಲ್ಲಿ ಪ್ರಕಟವಾಗಿದೆ.

ವನ್ನು ನೆನಪಿಗೆ ತಂದಿತು. ಅಂದು ಅವರ ಭಾಷಣದಲ್ಲಿ ಕಾಣಬರುತ್ತಿದ್ದ ಅದೇ ಕಾವ್ಯಮಯ ಗದ್ಯ, ಅದೇ ಮಾತಿನ ಮೋಡಿ, ಅದೇ ಪದಗಳ ಪ್ರಾಸ, ಈಗಲೂ ಇವರ ಮಾತಿನಲ್ಲಿ ಕಾಣಬರುತ್ತಿತ್ತು. ಯಾವುದೋ ಒಂದು ಮಾಧುರ್ಯ ಅವರ ಭಾಷಣದಲ್ಲಿ ಸೇರಿತ್ತು. ಅವರಿಗಿತ್ತಿದ್ದ ಕೇವಲ ಅರ್ಧ ಗಂಟೆಯಲ್ಲಿ ತಾವು ಹೇಳಬೇಕೆಂದಿದ್ದುದೆಲ್ಲವನ್ನೂ ಸಂಕುಚಿಸಿ ಹೇಳಿದುದರಿಂದ ಅವರ ಭಾಷಣವನ್ನು ಅರ್ಥ ಮಾಡಿಕೊಳ್ಳುವುದು ಕೊಂಚ ಕಠಿಣವಾಯಿತು. ನನಗೇನೊ ಅವರು ಹೇಳಿದುದರಲ್ಲಿ ಅರ್ಧ ಕೂಡ ಅರ್ಥವಾಗಲಿಲ್ಲ. ಅದೇ ವಿಷಯವನ್ನು ಬೇಕಿದ್ದರೆ ತಾಸುತಾಸು ಗಳ ತನಕ ಮಾತನಾಡಬಲ್ಲವರಿದ್ದರು. ಅಂತಹವರಿಗೆ ರೇಡಿಯೋದವ ರಿತ್ತ ಕಾಲ ಒಂದು ಸೆರೆ!

ಮುಂದೆ ಮಾತನಾಡಿದವರೆಂದರೆ ಶ್ರೀಮಾನ್ ನಾ. ಕಸ್ತೂರಿಯ ವರು. ಇವರು ತಮ್ಮ ಮಾತಿನೊಡನೆ ಸಹಜ ಸಮ್ಮಿಳಿತವಾದ ಹಾಸ್ಯ ರಸದೊಡನೆ, ವ್ಯಂಗ್ಯಪ್ರಾಸಗಳೊಡನೆ ಕೇಳುವವರನ್ನು ನಗೆಗಡಲಿನಲ್ಲಿ ಚೆಲ್ಲಿ ತಮ್ಮ ಭಾಷಣವನ್ನು ಮುಂದುವರೆಸಿದರು. ಅದೇಕೋ ಕಾಣೆ ಅವರು ಮಾತನಾಡುತ್ತಿರುವಾಗ ಅವರಿಂದ ಹೊರಡುತ್ತಿದ್ದ ಶಬ್ದಗಳು ಸ್ಫುಟವಾಗಿ ಕೇಳಿಬರುತ್ತಿರಲಿಲ್ಲ. ಕಾರಣ ತಿಳಿಯದೆ "ಅವರು ಆಕಾಶವಾಣಿಯಲ್ಲಿ ಕೆಲಸ ಮಾಡಿಯೂ, ಅದೇಕೆ ಅವರ ಮಾತು ಅಸ್ಪಷ್ಟ ವಾಗಿ ಕೇಳುತ್ತಿದೆಯಲ್ಲಾ. ಸರಿಯಾಗಿ ಮೈಕನ್ನು ಹೊಂದಿಸಿಕೊಂಡು ಮಾತಾಡಬಾರದೆ" ಎಂದೆ.

ವಿಶಾಲಿ ತಾನು ಸರ್ವಜ್ಞಳೆಂಬಂತೆ "ನನಗೂ ಹಾಗೆಯೇ ಅನಿಸು ವುದು; ಬಹುಶಃ ಅವರು ಕಟ್ಟಿಸಿಕೊಂಡ ಕೃತಕ ಹಲ್ಲುಗಳಿಂದ ಆ ರೀತಿ ಕೇಳುತ್ತಿರಬೇಕು." ಎಂದಳು. ಅವಳು ಹೇಳಿದುದರಲ್ಲಿ ಸತ್ಯಾಂಶ ವಿಲ್ಲದಿರಲಿಲ್ಲ.

ಅವರ ನಂತರ ರಾಜರತ್ನಂರವರು ಮಾತನಾಡಲು ಮೊದಲಿಟ್ಟರು. ಅವರ ಭಾಷಣವನ್ನು ನಾನು ಕಾಲೇಜಿನಲ್ಲಿ ಕೇಳಿದ್ದೆ. ಈ ಮೊದಲೇ

ಅವರು ಒಳ್ಳೆಯ ವಾಗ್ಮಿಗಳೆಂದು ಎಲ್ಲರಿಂದಲೂ ಮೆಚ್ಚಿಕೆ ಪಡೆದಿದ್ದರು. ಅವರ ಕಂಠ ಕಂಚಿನ ಗಂಟೆಯಂತೆ. ಮಾತನಾಡಲಾರಂಭಿಸಿದರೆ ಮೈಕಿನ ಸಹಾಯವಿಲ್ಲದೆ ಸಾವಿರ ಮಂದಿಗೆ ಕೇಳಿಸಬಲ್ಲದು. ಅವರ ಭಾಷಣ ವೆಂದರೆ ಏಕಪ್ರವಾಹವಾಗಿ ಕೇಳಬರುವ ಗಂಟೆಯ ನಿನಾದ. ಅಸ್ಪಷ್ಟತೆ, ಕೀರಲು, ಅವರ ಕಂಠಕ್ಕೆ ಹೊಸದು. ಅವರು ತಮಗಿತ್ತಿದ್ದ ಅರ್ಧ ತಾಸಿನಲ್ಲಿಯೇ ಸ್ವಾರಸ್ಯವಾಗಿ ಮಾತನಾಡಿದರು. ಅವರ ಭಾಷಣ ನನಗೆ ಬಹಳ ಸೇರಿತು—ಅವರ ವಿಷಯ ನಿರೂಪಣೆಗಾಗಿ ಮಾತ್ರವೇ ಅಲ್ಲದೆ ಅವರ ಭಾಷಣದ ಧಾಟಿಗಾಗಿ ಕೂಡ.

"ಬಹಳ ಸೊಗಸಾಗಿ ಮಾತನಾಡಿದರು, ಭೇಷ್" ಎಂದು ನನ್ನ ಮೆಚ್ಚಿಗೆಯನ್ನು ತೋರಗೊಡದಿರಲು ನನ್ನಿಂದಾಗಲಿಲ್ಲ, ಅವರ ಭಾಷಣ ಕೊನೆಗೊಂಡಾಗ.

ತಾರಿಣಿ ವಿಶಾಲಿಯರು ನಾನು ಹೇಳಿದುದು ಅಕ್ಷರ ಸಹ ನಿಜ ವೆನ್ನುವಂತೆ ತಲೆದೂಗಿದರು.

ಈ ವೇಳೆಗೆ ರೇಡಿಯೋದಿಂದಾಗುತ್ತಿದ್ದ ಗದ್ದಲದ ಫಲವಾಗಿ, ಎದುರು ಕೊಠಡಿಯಲ್ಲಿ ಮಲಗಿದ್ದ ತಾರಿಣಿಯ ತಂದೆಗೆ ಎಚ್ಚರವಾಯಿತು. ಅವರು ಹಾಸಿಗೆಯ ಮೇಲೆ ಕುಳಿತು ರೇಡಿಯೋನಲ್ಲಿ ಸಾಗುತ್ತಿದ್ದ ಭಾಷಣವನ್ನು ಕೇಳುತ್ತಿದ್ದರು. ರಾಜರತ್ನಂರವರ ಭಾಷಣ ಮುಗಿದಾಗ "ತಾರಿಣಿ.... ಈಗ ಕನ್ನಡದಲ್ಲಿ ಇಷ್ಟು ಸೊಗಸಾಗಿ ಮಾತನಾಡಿದರಲ್ಲಾ ಅವರು ಯಾರು; ಎಲ್ಲಿಂದ ಮಾತನಾಡುತ್ತಿದ್ದಾರೆ!" ಎಂದು ಕೇಳಿದರು.

"ಇಲ್ಲಿಯೇ ಮದರಾಸಿನಿಂದಲೇ ಅಣ್ಣಾ. ಈಗ ಮಾತನಾಡಿದವರು ಕನ್ನಡ ಸಾಹಿತಿಗಳಲ್ಲಿ ಸುಪ್ರಸಿದ್ಧರಾದ ರಾಜರತ್ನಂ ಎಂಬುವರು" ತಾರಿಣಿ ಕೂಡಲೇ ತಂದೆಗೆ ಹೇಳಿದಳು.

ತಾರಿಣಿಯ ತಂದೆ ತಮಗೆ ತಿಳಿಯದಿದ್ದ ಇನ್ನೊಂದು ಸಂಗತಿ ಯನ್ನೂ ಕೇಳಿದರು. ರಾಜರತ್ನಂರವರ ಭಾಷಣವಾದಮೇಲೆ ನಾನು ನನ್ನ ಮೆಚ್ಚಿಕೆಯನ್ನು ತೋರಗೊಡಲು ಬಾಯಿಬಿಟ್ಟಿದ್ದೆ. ನನ್ನ ಸ್ವರ

ಅವರಿಗೆ ಕೇಳಿಸಿರಬೇಕು! ಅವರು ಕೊಠಡಿಯಿಂದಲೇ ಮಾತನಾಡು ತ್ತಿದ್ದುದರಿಂದ ಈ ಕೊಠಡಿಯಲ್ಲಿ ಯಾರು ಯಾರು ರೇಡಿಯೋ ಕೇಳುತ್ತಿರುವ ರೆಂದು ಅವರಿಗೆ ತಿಳಿಯದು. ನನ್ನ ದನಿ ಕೇಳಿದ ಕೂಡಲೇ ಅದು ಯಾರದೋ ಹೊಸಬರದು ಎಂದು ಕೂಡಲೇ ಅರಿತುಕೊಂಡರು. ತಮಗೆ ತಿಳಿಯದ ಆ ಹೊಸಬರು ಯಾರು ಎಂದು ತಿಳಿಯಲು ಕುತೂಹಲದಿಂದ ಪ್ರಶ್ನಿಸಿದರು.

"ಯಾರದು ತಾರಿಣಿ ಆ ದನಿ. ಯಾರೋ ಹೊಸಬರು ಬಂದಿರು ವಂತೆ ತೋರುವುದಲ್ಲಾ."

"ಹೂಂ, ಆ ದನಿ ಹೊಸಬರದೇ. ನಾನು ನಿನಗೆ ಹೇಳುತ್ತಿರಲಿಲ್ಲ ವೇನಣ್ಣಾ, ಸಮ್ಮೇಳನಕ್ಕೆ ಇಂಥಹವರಿಬ್ಬರು ಬಂದಿದ್ದಾರೆ ಎಂದು. ಅವರೇ ಇವರು. ಇಂದು ರೇಡಿಯೋ ಕೇಳಲು ನಮ್ಮ ಮನೆಗೆ ಬಂದಿದ್ದಾರೆ. "ಸಮ್ಮೇಳನಕ್ಕೆ ಇಂಥಹವರು ಇಬ್ಬರು ಬಂದಿರುವರೆಂದು ಹೇಳಿದೆನಲ್ಲಾ ಅವರೇ ಇವರು" ಎಂಬ ತಾರಿಣಿಯ ಮಾತು ನನ್ನನ್ನು ದಿಗ್ಭ್ರಮೆಗೊಳಿಸಿತು—ಅವರಿಗೆ ಅದೆಂತಹವರೆಂದು ಹೇಳಿರಬೇಕು? ಇವಳು ಅಲ್ಲಿ ನಮ್ಮೊಡನೆ ಇದ್ದು ಮಾತನಾಡಿದ ಎಲ್ಲ ಸಂಗತಿಯನ್ನೂ ಇವರಿಗೆ ಈ ಮೊದಲೇ ಹೇಳಿರಬಹುದೆಂದುಕೊಂಡೆ.

ತಾರಿಣಿಯ ಉತ್ತರವನ್ನು ಕೇಳಿ, ತಾರಿಣಿಯ ತಂದೆಯವರೇ ರೂಂಗೆ ಎದ್ದು ಬಂದರು ನಮ್ಮನ್ನು ನೋಡಲು. ಅವರು ಆಗತಾನೇ ಹಾಸಿಗೆಯಿಂದ ಎದ್ದವರಾದುದರಿಂದ ಕ್ರಾಪೆಲ್ಲಾ ಕೆದರಿಹೋಗಿತ್ತು. ಅವರು ಆಗ ಒಂದು ನೆಟ್‌ಬನೀನು ಒಂದು ಪಂಚೆಯಲ್ಲಿ ಇದ್ದರು.

ಅವರ ವಯಸ್ಸು ಸುಮಾರು ಐವತ್ತು ಇರಬೇಕು. ಆದರೂ ದೃಢಕಾಯರಾಗಿದ್ದರು. ತಾರಿಣಿಯ ಚಿಂತೆಯಿಂದಾಗಿ ಮುಖದಲ್ಲಿ ತಲೆ ಯಲ್ಲಿ ಈಗೀಗ ಒಂದೊಂದು ಬಿಳಿಯ ನರೆಗೂದಲು ಕಾಣಬರಲಾರಂಭಿ ಸಿತ್ತು. ವಯಸ್ಸಿನ ಚಿನ್ಹೆಗಳಾದ ಮುಖದ ಸುಕ್ಕು ಗೆರೆಗಳೂ ತೀರ ಕಡಿಮೆ. ಆಜಾನುಬಾಹುವಾದ ಶರೀರ. ಸುಮಾರು ಆರು ಅಡಿಗಿಂತಲೂ

ಎತ್ತರವಾದ ಭವ್ಯ ಆಕೃತಿ. ಅವರ ಎತ್ತರವನ್ನು ಕಂಡು "ತಾರಿಣಿಯು ತಂದೆಯನ್ನು ಹೋತಿದ್ದಾಳೆ ಎತ್ತರದಲ್ಲಿ!" ಎಂದುಕೊಂಡೆ ಮನಸ್ಸಿನಲ್ಲಿ.

ಅವರು ರೂಂನೊಳಕ್ಕೆ ಬರುತ್ತಿದ್ದಂತೆಯೇ ಅವರಿಗೆ ವಂದನೆಯನ್ನು ಮಾಡಿದೆ. ಅವರು ಪ್ರತಿವಂದನೆಯನ್ನು ಮಾಡಿ ಅಲ್ಲಿಯೇ ಇದ್ದ ಕುರ್ಚಿಯಲ್ಲಿ ಕುಳಿತರು.

"ನಿದ್ರೆಯಾಯಿತೆ?" ಲೋಕಾರೂಢಿಯಾಗಿ ನಾನೆಂದೆ.

"ಆಗಲೇ ಆಗಿತ್ತು. ಅದಾರದೋ ಭಾಷಣ ಸಾಗಿತ್ತು ರೇಡಿಯೋ ದಲ್ಲಿ. ಅದನ್ನು ಕೇಳುತ್ತಾ ಕುಳಿತಿದ್ದೆ."

ಅವರನ್ನು, ನನ್ನನ್ನು ವಿಶಾಲಿಯು ಕುತೂಹಲಪೂರಿತ ದೃಷ್ಟಿಯಲ್ಲಿ ನೋಡುತ್ತಾ ಕುಳಿತಳು. ತಾರಿಣಿ ವಿಶಾಲಿಯ, ನನ್ನ ಪರಿಚಯವನ್ನು ಅವರಿಗೆ ಮಾಡಿಕೊಟ್ಟು ಅವರ ಪರಿಚಯ ಒಂದೆರಡು ಮಾತಿನಲ್ಲಿ ನನಗೂ ಮಾಡಿಕೊಟ್ಟಳು.

ಇತ್ತ ರೇಡಿಯೋನಲ್ಲಿ ಕೈಲಾಸಂರವರ ಭಾಷಣ ನಡೆಯತೊಡ ಗಿತ್ತು. ಅವರ ಮುಖವೇನೋ ನನ್ನೊಡನೆ ಮಾತನಾಡುವ ಆಶೆಯನ್ನು ತೋರಿಸುತ್ತಿದ್ದರೂ, ಮಾತನಾಡಿದರೆ ರೇಡಿಯೋ ಭಾಷಣಕ್ಕೆ ತೊಂದರೆ ಯಾಗುವುದೆಂದು ಯಾವ ಮಾತನ್ನೂ ಆಡದೆ ಕುಳಿತರು. ನಾನು ಆಗಾಗ್ಗೆ ಅವರ ಮೋರೆಯನ್ನು ದಿಟ್ಟಿಸಿ ನೋಡುತ್ತಿದ್ದಾಗ ಅವರು ಭಾಷಣದಲ್ಲಿ ಮಗ್ನರಾಗಿರುವಂತೆ ತೋರಲಿಲ್ಲ. ಯಾವುದೋ ಗಹನವಾದ ವಿಷಯ ಒಂದನ್ನು ಯೋಚಿಸುತ್ತ ಕುಳಿತಿರಬೇಕೆಂದೆನಿಸಿತು.

ಈಗ ಕೈಲಾಸಂರವರು ಮಾತನಾಡುತ್ತಿದ್ದರು. ಅವರ ಸ್ವರ, ಮಾತಿನ ಧಾಟಿ—ಹಿಂದಣ ದಿನ ಕೇಳಿದ ಭಾಷಣದ ಪ್ರತಿಯೇ. ಒಂದು ತರಹ ಎಳೆಯ ಮಕ್ಕಳು ಸಲ್ಲಾಪಿಸುವಾಗ ಕೇಳಿಬರುವ ಸ್ವರ. ಆದರೂ ಅವರ ಮಾತು ಆಡುವುದರಲ್ಲಿ ಹೊಸ ವಿಚಾರವಿತ್ತು, ಹೊಸ ಭಾವನೆಗ ಳಿತ್ತು, ಹೊಸ-ದೃಷ್ಟಿ ಇತ್ತು.

ಅವರದು ಮುಗಿದಾಗ ವಿಶಾಲಿ ಎಂದಳು ಹುಸಿನಗುತ್ತ,

"ಎಲ್ಲಿ ಹೋಗಲಿ ಕೈಲಾಸಂ ಕೈಲಾಸಂಏ! ಇಲ್ಲಿ ಕೂಡ ತಮ್ಮ ಪಾತು, ಸಾತು, ಕಿಟ್ಟಿಗಳನ್ನು ಮರೆತಿಲ್ಲ."

ಅವರದಾದಮೇಲೆ ಮಾಸ್ತಿಯವರು, ಸೀತಾರಾಮಯ್ಯ, ರಾ. ಶಿ. ಸಿ. ಕೆ. ವಿ. ಮೊದಲಾದವರು ಆ ವಿಚಾರದಲ್ಲಿ ತಮ್ಮ ತಮ್ಮ ಅಭಿಪ್ರಾಯವನ್ನು ಸುಲಲಿತವಾದ ವಾಣಿಯಲ್ಲಿ ಮಂಡಿಸಿದರು. ಅಂತೂ ಎಲ್ಲರ ಭಾಷಣಗಳೂ ಕೇಳಲು ಯೋಗ್ಯವಾಗಿದ್ದುವು. ಎಲ್ಲರೂ ಒಂದೊಂದು ಹೊಸ ದೃಷ್ಟಿಯಿಂದ ವಿಷಯವನ್ನು ವಿಚಾರಮಾಡಿದ್ದರು. ಎಷ್ಟಾದರೂ ಅವರು ನಾಡಿನ ಹಿರಿಯ ಸಾಹಿತಿಗಳಲ್ಲವೇ?

ಇವರ ಭಾಷಣಗಳು ಮುಗಿಯುವ ವೇಳೆಗೆ ತಾಸು ಮೂರುವರೆಯಾಗಿತ್ತು. ಒಂಬತ್ತು ಮಂದಿ ಸಾಹಿತಿಗಳು ಮೂರು ಗಂಟೆಗಳಕಾಲ ತಮ್ಮ ಭಾಷಣದ ಬೆಡಗನ್ನು ಅವ್ಯಾಹತವಾಗಿ ಪ್ರದರ್ಶಿಸಿದ್ದರು. ಮದರಾಸಿನ ಸ್ಟೇಷನ್ನಿನಲ್ಲಿ ಕನ್ನಡಕ್ಕಾಗಿ ಅಷ್ಟೊಂದು ಕಾಲ ಕೊಟ್ಟದ್ದುದಕ್ಕಾಗಿ ತಾರಿಣಿ,

"ಅಂತೂ ನಮ್ಮ ನುಡಿ ಭಾಗ್ಯವೊ ಎನ್ನುವಂತೆ ಮೂರು ಗಂಟೆಗಳ ಕಾಲ ಕೊಟ್ಟರಲ್ಲಾ ಕನ್ನಡಕ್ಕೆ" ಎಂದಳು.

"ಇನ್ನು ಮೇಲೆ ಆಗಾಗ್ಗೆ ಹೀಗೆ ಕನ್ನಡಕ್ಕೂ ಅವಕಾಶ ಕೊಡುವರಂತೆ." ವಿಶಾಲಿ ಎಂದಳು.

"ಏನಾದರೂ ಮಾಡಿ ಕೇಂದ್ರ ಆಕಾಶವಾಣಿಯ ಸ್ಟೇಷನ್ನಿನಲ್ಲಿಯೂ ಕನ್ನಡಕ್ಕೆ ಒಂದು ಸ್ಥಾನ ಗಿಟ್ಟಿಸಬೇಕು.* ಕನ್ನಡನಾಡು ಇಷ್ಟು ದೊಡ್ಡದಿದ್ದರೂ, ಕನ್ನಡನುಡಿ ಇಷ್ಟೊಂದು ಮಂದಿಯ ದಿನಬಳಕೆಯ ಭಾಷೆಯಾಗಿದ್ದರೂ ಅದಕ್ಕೆ ಒಂದು ಸ್ಥಾನ ಕೇಂದ್ರ ಆಕಾಶವಾಣಿಯಲ್ಲಿ ದೊರೆಯದಿರುವುದು ವಿಷಾದದ ಸಂಗತಿಯೇ ಸರಿ! ಏನೂ ಇಲ್ಲ,

*ತಾರಿಣಿಯ ಈ ಆಸೆ 1947ನೇ ಅಕ್ಟೋಬರ್ 2ನೇ ತಾರೀಖು ಕೈಗೂಡಿತು.

ಅಂತಹ ಮಲೆಯಾಳಭಾಷೆಗೇ ಅಲ್ಲಿ ಒಂದು ಸ್ಥಾನ ಕೊಟ್ಟಿರುವರು. ಮಲೆಯಾಳಕ್ಕಿಂತಲೂ ಕೀಳೆನಿಸಿತೇನು ಕನ್ನಡನಾಡು?" ತಾರಿಣಿಯು ನೊಂದು ನುಡಿದಳು. ತಾರಿಣಿಯ ತಂದೆ ಆಶ್ಚರ್ಯಚಕಿತರಾಗಿ ಮಗಳು ಹೇಳುವ ಮಾತು ಕೇಳುತ್ತಾ, ಆಗಾಗ್ಗೆ ನನ್ನ ಕಡೆ ನೋಡುತ್ತ ಕುಳಿತರು.

ಹೌದು. ಈ ವಂಚನೆ ಈ ಆಕಾಶವಾಣಿಯಲ್ಲಿ ಮಾತ್ರವೇ ಅಲ್ಲಮ್ಮ ತಾರಿಣಿ, ಇತರ ಎಲ್ಲಾ ವಿಷಯಗಳಲ್ಲಿ ಕೂಡ ತಪ್ಪಿಲ್ಲ. ಇದಕ್ಕೆ ಕಾರಣ ಏನು ಗೊತ್ತೆ? ನಮ್ಮ ಕನ್ನಡ ನಾಡು ಇಂದು ಒಂದು ನಾಡಾಗಿಲ್ಲ. ಕನ್ನಡನುಡಿ ಒಂದು ಭಾಷೆಯಾಗಿಲ್ಲ. ಕನ್ನಡ ನಾಡು ಹರಿದು ಹಂಚಿಹೋಗಿದೆ. ತಮಿಳರ ತೆಲುಗರ, ಮರಾಟರ ಪಾಲಾಗಿ ಹೋಗಿದೆ. ಈಗ ಇರುವ ಕನ್ನಡ ನಾಡು ಭೂಪಟದಲ್ಲಿ ಮಾತ್ರ; ಭಾಷೆ ಅಡುಗೆಯ ಮನೆಯಲ್ಲಿ. ಇಂದು ಕನ್ನಡ ಜನ ಕನ್ನಡತನ ಮರೆತಿದ್ದಾರೆ. ತಮಿಳು, ತೆಲುಗು, ಮರಾಟರ, ಗುಲಾಮರಾಗಿದ್ದಾರೆ. ಅವರ ಸಂಸ್ಕೃತಿ ಇಂದು ಇವರದಾಗಿದೆ. ಅವರ ಹಿರಿಮೆ ಇವರದಾಗಿದೆ. ಅವರ ನುಡಿ ಇಂದು ಇವರ ನುಡಿಯಾಗಿದೆ....ಹೀಗೆ ಕನ್ನಡ ನಾಡಿನ ವಿಷಯವಿರುವಾಗ, ಕೇಂದ್ರ ಆಕಾಶವಾಣಿಯಲ್ಲಿ ಹೇಗೆ ದೊರೆತೀತು ಕನ್ನಡ ನುಡಿಗೆ ಒಂದು ಸ್ಥಾನ. ಹರಿದು ಹಂಚಿರುವ ಕನ್ನಡ ನಾಡು ಒಂದಾಗುವವರೆಗೂ ಆ ಸ್ಥಾನ ಸಿಗಲಾರದು. ಕನ್ನಡ ನುಡಿಯು ಪ್ರಸಾರವಾಗದ ಹೊರತೂ ಆ ಸ್ಥಾನ ಸಿಗದು. ಈ ನಾಡ ನುಡಿಗಳನ್ನು ಒಂದಾಗಿಸುವ ಪ್ರಯತ್ನ ನಡೆಯುದವರೆಗೂ ಕನ್ನಡನುಡಿಗೆ ವಂಚನೆ ತಪ್ಪದು. ಭೇದಾಭಾವ ಅಳಿಯದು. ತಾಯ್ನುಡಿಯ ಮೇಲೆ ಮಮತೆ ಇರುವ ಕನ್ನಡಿಗರೆಲ್ಲಾ ಆ ಏಕೀಕರಣಕ್ಕಾಗಿ ದುಡಿಯಬೇಕು! ಸಮಯ ಬಂದರೆ ಮಡಿಯಲೂ ಬೇಕು!"

ವಿಶಾಲಿಯ ಈ ಉತ್ಸಾಹದ ನುಡಿಗಳನ್ನು ಕೇಳಿ ತಾರಿಣಿಯ ತಂದೆ—ಸದಾಶಿವರಾಯರು—ಬಾಯಿಬಿಟ್ಟು ಕುಳಿತರು. ಅವರಿಗೆ ಇದುವರೆಗೂ ತಿಳಿಯದಿದ್ದ ಅನೇಕ ವಿಷಯಗಳನ್ನು ವಿಶಾಲಿ ಹೇಳಿದ್ದಳು.

ಅವರ ಕನ್ನಡತನದ ಆ ಸತ್ತ ನಾಡಿಗಳಿಗೆ ಹೊಸ ರಕ್ತ ತುಂಬಿ ಮಿಡಿದಳು. ವಯಸ್ಸಿನಲ್ಲಿ ಚಿಕ್ಕವಳಿದ್ದರೂ ವಿಚಾರದಲ್ಲಿ ದೊಡ್ಡವರನ್ನೂ ಮೀರಿಸುವ ವಿಶಾಲಿಯನ್ನು ಕಂಡ ಸದಾಶಿವರಾಯರು ಮೂಗಿನ ಮೇಲೆ ಬೆರಳಿಟ್ಟು ಅವಳನ್ನು ದಿಟ್ಟಿಸುತ್ತಾ ಕುಳಿತುದರಲ್ಲಿ ಆಶ್ಚರ್ಯವೇನು.

"ನಿನ್ನಂತಹ ನುಡಿಭಕ್ತಳು ಸಾವಿರ ಮಂದಿ ಇದ್ದರೆ ಈ ಏಕೀಕರಣವಾಗುವ ಕೆಲಸ ಅದೆಷ್ಟು ದೊಡ್ಡದು" ತಾರಿಣಿ ಮಧ್ಯೆ ಬಾಯಿ ಹಾಕಿದಳು.

"ಹೌದು. ನನ್ನಂತಹ ಮಾತುಗಾರ ನುಡಿಭಕ್ತಳಿರುವುದರಿಂದಲೇ ಈ ಏಕೀಕರಣ ಕಾರ್ಯವು ಇನ್ನೂ ಬಹಳ ದೂರ ಉಳಿದಿರುವುದು! ಕನ್ನಡ ಏಕೀಕರಣ ಬರಿ ಮಾತುಗಳಿಂದ ಪೂರೈಸುವುದಿದ್ದರೆ ಅದು ಬೇರೆಯ ರೀತಿಯಾಗಿರುತ್ತಿತ್ತು. ಆದರೆ ಅದು ಬರಿಯ ಮಾತಿನಿಂದ ಪೂರೈಸಲಾಗುವ ಕೆಲಸವಲ್ಲ. ಆಡಿದ ಮಾತನ್ನು ಮಾಡಿ ತೋರಿಸುವ ಕರ್ಮಯೋಗಿಗಳು ಬೇಕು! ತಾಯಿನುಡಿಯ ಮಮತೆಗಾಗಿ ತನುಮನ ಧನವನ್ನು ಅರ್ಪಿಸಿ, ಅದಕ್ಕಾಗಿ ಹಗಲಿರುಳೂ ದುಡಿಯುವ ನಿಸ್ವಾರ್ಥಿಗಳು ಬೇಕು! ಅಂತಹವರಿಂದಲೇ ನಿಜವಾಗಿಯೂ ಏಕೀಕರಣ ಕೆಲಸ ಸಾಧ್ಯವಾಗಬೇಕಿದ್ದರೆ! ನನ್ನಂತಹ ಮಾತುಗಾರ ಮಲ್ಲಿಯರು ಎಷ್ಟಿದ್ದರೇನು?"

ಈ ಮಾತು ತಾರಿಣಿಯ ತಂದೆಯನ್ನು ಮತ್ತಿಷ್ಟು ಬೆರಗುಗೊಳಿಸಿತು. ಅವಳ ಮಾತು ಕೇಳಿ ಚಕಿತರಾಗಿ,

"ಭೇಷ್ ಮಗು! ಸರಿಯಾಗಿ ಮಾತನಾಡಿದೆ. ಹೌದು ಏಕೀಕರಣ ಏಕೀಕರಣ ಎಂದು ಮಾತಿನ ಪ್ರಕರಣ ನಡೆಸಿದರೇನು ಬಂತು? ಅದನ್ನು ಕಾರ್ಯರೂಪಕ್ಕೆ ತರುವವರು ಬೇಕು. ನೀನೆಂದಂತೆ ನಿಸ್ವಾರ್ಥ ಕರ್ಮಯೋಗಿಗಳು ಬೇಕು."

ಎಂದು ಅವರೂ ಮಾತಿಗೆ ಸೇರಿದರು. ಇವರ ಮಾತನ್ನು ಕೇಳಿ ವಿಶಾಲಿ ಅದೇಕೋ ಅವಾಕ್ಕಾದಳು. ಹಿರಿಯರೆದುರು ಸಮಯದ

ಉತ್ಸಾಹದ ಭರದಲ್ಲಿ ಆಡಿದ ಮಾತುಗಳು ಅವರಲ್ಲಿ ತನ್ನ ಬಗ್ಗೆ ತಪ್ಪು ಅಭಿಪ್ರಾಯ ಏರ್ಪಡಿಸಿತೆಂದು ಇರಬೇಕು. ವಿಶಾಲಿ ಹಾಗೆ ಚಿಂತಿಸಲು ಕಾರಣವಿಲ್ಲ. ಅವಳ ಸುಡಿಭಕ್ತಿಯನ್ನು ಮೆಚ್ಚಿಯೇ ಸದಾಶಿವರಾಯರು ವಿಶಾಲಿಯ ಬಗ್ಗೆ ಹೆಚ್ಚಿನ ಗೌರವ ತಳೆದಿದ್ದರು. ಈಗ ಯಾರೊಬ್ಬರೂ ಮಾತನಾಡದೇ ಕುಳಿತಾಗ—ನಾನು ಮಾತಿಗೆ ಹಚ್ಚಿದೆ. ನಾನು ತಮಾಷೆ ಗೆಂದೆ. "ಈಗ ನಮ್ಮ ವಿಶಾಲಿ, ನಿಮ್ಮ ತಾರಿಣಿಯರು ಪಾಸು ಮಾಡಿದ ಈ ಏಕೀಕರಣ ಮಸೂದೆಯನ್ನು ವೈಸ್‌ರಾಯರಿಗೆ ಕೊಡಬೇಕು !"

ಎಲ್ಲರೂ ನಕ್ಕರು. ನಮ್ಮ ನಗುವಿನ ಅಬ್ಬರ ಕೇಳಿ ತಾರಿಣಿಯ ತಾಯಿ ರೂಂ ತನಕ ಬಂದು—ತಮ್ಮ ಪತಿ ಮತ್ತು ತಾರಿಣಿಯರನ್ನು ಉದ್ದೇಶಿಸಿ, "ಅದೇನು ತಾರಿಣಿ, ಮನೆಗೆ ಬಂದವರನ್ನು ಬರೀ ಮಾತು ನಗುವಿನಲ್ಲಿ ಹೊಟ್ಟೆ ತುಂಬಿಸಬೇಕೆಂದಿದ್ದೀರಾ! ಕಾಫಿ ಆರುತ್ತಾ ಬಂದಿದೆ. ಗಂಟೆ ನಾಲ್ಕು ಆದರೂ ನಿಮ್ಮಲ್ಲಿ ಯಾರೊಬ್ಬರಿಗೂ ಅದರ ನೆನಪಾಗಲಿಲ್ಲ ವೇನು !" ಎಂದು ಟೀಕಿಸಿದರು.

ಕಾಫಿಯ ನೆನಪೇ! ನನಗೆ ಈ ಮೊದಲೇ ಆಗಿತ್ತು. ಆದರೆ ಅದನ್ನು ಬರಿ ನೆನಪು ಮಾಡಿಕೊಂಡು ತಣಿಯಬಹುದಿದ್ದರೆ ಹೀಗೆ ನೂರಾರು ಬಾರಿ ಕುಡಿದು ತಣಿಯುತ್ತಿದ್ದೆ—ಈ ವೇಳೆಗಾಗಲೇ. ಆದರೆ! ಕಾಫಿ ಬರಿಯ ನೆನಪಿನಿಂದ ತಣಿಯುವ ವಸ್ತುವಲ್ಲ. ಅದಿಲ್ಲದೆ ನನಗೆ ಒಂದು ತರಹದ ಮಂಕು ಕವಿದಿತ್ತು. ಆದರೆ ಅದನ್ನು ಬಾಯಿಬಿಟ್ಟು ಕೇಳುವುದು ಯಾರನ್ನು! ನಾವು ಬಂದಿರುವುದೋ ಅಪರಿಚಿತರೊಬ್ಬರ ಮನೆಗೆ. ಅವರು ನಮ್ಮ ಮೇಲೆ ಕನಿಕರಪಟ್ಟು ಮಾಡಿಕೊಡಬಹುದೆಂದು ಈವರೆವಿಗೂ ಊಹಿಸಿದ್ದೆ. ಆದರೆ ನಾಲ್ಕು ಗಂಟೆಯಾದರೂ ಅದರ ಸುದ್ದಿಯನ್ನು ಯಾರೊಬ್ಬರೂ ಎತ್ತದಿದ್ದ ಮೇಲೆ ತೆಪ್ಪಗೆ ಕುಳಿತಿದ್ದೆ. ಈಗ ತಾರಿಣಿಯ ತಾಯಿ ಕಾಫಿಗೆ ಕರೆದಿದ್ದರು. ನಮ್ಮನ್ನು ಕಾಯಿಸಿ ದುದಕ್ಕೆ ತನ್ನ ಗಂಡನನ್ನು, ತಾರಿಣಿಯನ್ನು ಆಡಿದ್ದರು. ಅನ್ಯಾಯವಾಗಿ ಈ ಜನದ ಬಗ್ಗೆ ಈ ಕ್ಷಣದ ಹಿಂದೆ ತಪ್ಪು ಅಭಿಪ್ರಾಯ ಮೂಡಿಸು

ತ್ತಿದ್ದೆನಲ್ಲಾ ಕೇವಲ ಯಕ್ಕಶ್ಚಿತ ಕಾಫಿಗಾಗಿ! ಎಂದುಕೊಂಡೆ. ಸದಾಶಿವರಾಯರು ನಮ್ಮನ್ನು 'ಹಾಲಿಗೆ' ಕರೆದೊಯ್ದರು. ಅಲ್ಲಿ ಚಾಪೆಯ ಮುಂದೆ ನಮಗಾಗಿ ಎಲೆಗಳಲ್ಲಿ ಫಲಾಹಾರದ ತಿಂಡಿಗಳನ್ನು ಇರಿಸಿದ್ದರು. ಅವನ್ನು ನೋಡುತ್ತಲೆ "ಅಯ್ಯೋ! ಏನಿದು ಇವೆಲ್ಲಾ. ನೀವು ನಮಗಾಗಿ ಇಲ್ಲದ ತೊಂದರೆ ಹಚ್ಚಿಕೊಂಡಿರುವಿರಲ್ಲಾ...." ಎಂದೆ.

"ಅಂತಹುದೇನೂ ಇಲ್ಲ. ಮಧ್ಯಾನ್ಹ ಕಾಫಿಯ ವೇಳೆಗೆ ಏನಾದರೂ ಮಾಡುವ ಪದ್ಧತಿ....ನೀವು ಹಾಗೇನೂ ಭಾವಿಸಬೇಡಿ" ಎಂದು ತಾರಿಣಿಯ ತಾಯಿ ನುಡಿದರು.

ತಾರಿಣಿಯ ತಾಯಿ "ಅಂತಹ ತೊಂದರೆ ಏನೂ ಇಲ್ಲ," ಎಂದು ಕೊಂಡೇ ಹಪ್ಪಳ, ಉಪ್ಪಿಟ್ಟು, ಸಂಡಿಗೆ, ಬೊಂಡಗಳನ್ನು ಫಲಾಹಾರ ಕ್ಕಾಗಿ ಮಾಡಿದ್ದರು. ಇಷ್ಟೊಂದು ತಿಂಡಿಗಳನ್ನು ದಿನಪ್ರತಿಯಂತೆ ಇಂದು ಮಾಡಿದ್ದರೆಂಬ ಮಾತು ಬರೀ ಸೋಗು!! ಇದಿಷ್ಟನ್ನೂ—ಬಂದ ಅತಿಥಿ ಗಳಿಗಾಗಿಯೇ—ಮಾಡಿದ್ದರೆಂದು ಯಾರೇನೂ ಹೇಳಬೇಕಿರಲಿಲ್ಲ.

ಸದಾಶಿವರಾಯರು "ಹೂಂ, ಏಕೆ ಎಲೆಯ ಮುಂದೆ ಸುಮ್ಮನೆ ಕುಳಿತಿರಿ? ಕೈ ಬಾಯಿ ಕಾಳಗಕ್ಕೆ ಮೊದಲಿಡಿ" ಎಂದು ಸೈನ್ಯಾಧಿಕಾರಿ ತನ್ನ ಕಡೆಯ ದಳಗಳಿಗೆ ಹುಕುಂ ಕೊಡುವ ಜೋರಿನಲ್ಲೇ ಹೇಳಿದರು. ಇನ್ನು ಅವರ ಮಾತಿಗೆ ತಡೆಯುಂಟೆ! ಕಾಳಗಕ್ಕೆ ಮೊದಲಾಯಿತು. ರೇಡಿಯೋದಲ್ಲಿ ಭಾಷಣ ನಡೆಯುತ್ತಿದ್ದಾಗ ನಾಲಗೆಯನ್ನು ಬಿಗಿಹಿಡಿದು ಕುಳಿತಿದ್ದ ಸದಾಶಿವರಾಯರಿಗೆ ಈಗ ಮಾತನಾಡಲು ಯಾರ ಆತಂಕ ವಿರಲಿಲ್ಲ. ಅದೂ ಇದೂ ಮಾತಿಗೆ ಮೊದಲಿಟ್ಟರು. ಅವರೊಡನೆ ನಾಲ್ಕು ಮಾತನಾಡುವುದರೊಳಗೇ ತಾರಿಣಿಯಂತೆಯೇ ಇವರು ಹರಟೆಪ್ರಿಯ ರೆನಿಸಿತು. ಆ ಹರಟೆಪ್ರಿಯತೆ ಇವರ ಮಗಳಿಗೆ ಬಂದ 'ಬಳುವಳಿ' ಎಂದುಕೊಂಡೆ.

"ನೋಡಿ ನಿಮ್ಮ ಹೆಸರು ತಿಳಿಯದು—ವ್ಯಾಸರಾಯರೆಂದೇ?— ನಮ್ಮ ತಾರಿಣಿ ನಿಮ್ಮ ಬಗ್ಗೆ ಈ ಮೂರು ದಿನಗಳಲ್ಲಿ ಅದೆಷ್ಟೋ ಸಂಗತಿ

ಯನ್ನು ಹೇಳಿದ್ದಾಳೆ. ನಿಮ್ಮ ತಂಗಿಯ ಗುಣ. ಅಭಿರುಚಿಗಳ ಬಗ್ಗೆ ಅದೆಷ್ಟೋ ಹೊಗಳಿದ್ದಾಳೆ. ನಿಮ್ಮೊಂದಿಗೆ ಅವಳು ಹರಟಿದ ಎಲ್ಲಾ ವಿಷಯವನ್ನು ನಮಗೆ ಚಾಚೂ ತಪ್ಪದೆ ಹೇಳಿ ಮುಗಿಸಿದ್ದಾಳೆ. ಇವೆಲ್ಲ ದರ ಫಲವಾಗಿಯೇ ನಿಮಗೆ ನಾನಿನ್ನೂ ಅಪರಿಚಿತನಾಗಿದ್ದರೂ ನಮಗೆ ನೀವು ಎಂದೋ ಪರಿಚಿತರಾಗಿಬಿಟ್ಟಿದ್ದೀರಿ! ಆದುದರಿಂದ ನೀವು ನಮ್ಮ ಈ ನಡವಳಿಕೆಯನ್ನು ಕಂಡು ಅಚ್ಚರಿಪಡಬೇಕಿಲ್ಲ" ಎಂದು ಪೀಠಿಕೆ ಹಾಕಿ ಮಾತಿಗೆ ಮೊದಲಿಟ್ಟರು. ಕುಲಗೋತ್ರ, ತಂದೆತಾಯಿಯ ವಿಷಯ, ನನ್ನ ವ್ಯಾಸಂಗ, ನೌಕರಿ, ಎಲ್ಲಾ ಕೇಳಿದರು. ಅಲ್ಲದೆ ಮಧ್ಯೆ ಮಧ್ಯೆ ತಮ್ಮ ಎಲ್ಲಾ ವಿಷಯಗಳನ್ನೂ ಹೇಳಿದರು. ಆದರೂ ತಾರಿಣಿಯ ವಿಷಯವಾಗಿ ನಾನು ಉಸಿರೆತ್ತಿದಾಗ ಮಾತ್ರ ಅದೇಕೋ ಬೆಚ್ಚಿಬೀಳು ತ್ತಿದ್ದರು. ಆ ಷಯದಲ್ಲಿ ಆಸಕ್ತಿ ಇಲ್ಲದವರಂತೆ ತೋರಗೊಟ್ಟು ಸರ್ರನೆ ಬೇರೊಂದು ವಿಷಯಕ್ಕೆ ಮಾತು ಹಾರಿಸಿಬಿಡುತ್ತಿದ್ದರು. ಈ ಮಾತಿನ ಲ್ಲಿನ ಮಾರ್ಪಾಡನ್ನು ನಾನು ಗಮನಿಸದೆ ಇರಲಿಲ್ಲ. ತಾರಿಣಿಯ ಕಥೆ ಯನ್ನು ನನ್ನ ಮುಂದೆ ಈ ಸಮಯದಲ್ಲಿ ಹೇಳಲು ಹಿಂತೆಗೆದು ಈ ರೀತಿ ಅವರು ಮಾಡುವರೆಂದು ನನಗನಿಸದೆ ಇರಲಿಲ್ಲ. ಪಾಪ ತಾರಿಣಿ ತನ್ನ ಎಲ್ಲಾ ವಿಷಯವನ್ನು ಈ ಮೊದಲೇ ನಮ್ಮ ಕಿವಿಗಳಿಗೆ ಹಾಕಿ ನಮ್ಮ ಸಹಾನುಭೂತಿಯನ್ನು ಗಳಿಸಿರುವಳೆಂದು ಅವರಿಗೆ ಹೇಗೆ ತಿಳಿದೀತು! ಅಂತೂ ಮಾತುಕಥೆಯ ಸಂಭ್ರಮದಲ್ಲಿ ತಿಂಡಿ ತಿಂದುದರ ಅರಿವೂ ನನಗಿರಲಿಲ್ಲ. ಆದರೆ ಎಲೆ ಮಾತ್ರ ಖಾಲಿಯಾಗಿತ್ತು. ತಾರಿಣಿಯು ತಮ್ಮ ಗಡಿಯಾರದ ಕಡೆ ನೋಡಿ "ಅಣ್ಣಾ ಗಂಟೆ ನಾಲ್ಕುವರೆ ಆಯಿತು, ಆಫೀಸಿಗೆ ಹೋಗುವುದಿಲ್ಲವೇ" ಎಂದಾಗಲೇ ಅವರಿಗೆ ಆಫೀಸಿನ ನೆನಪಾದುದು, ಅವರು ನನ್ನೊಡನೆ ಮಾತು ಮುಗಿಸಿ ಎದ್ದುದು. ಗಡಿಬಿಡಿಯಲ್ಲೇ ಬಟ್ಟೆಬರೆ ಹಾಕಿಕೊಂಡು ಐದು ನಿಮಿಷದಲ್ಲಿ ಆಫೀಸಿಗೆ ಹೊರಡಲು ಸಿದ್ಧರಾದರು. ಅವರು ಮನೆಯನ್ನು ಬಿಟ್ಟು ಹೊರಡುತ್ತಿರು ವಾಗ್ಗೆ ನಾನು ಹೇಳಿದೆ.

"ನಮ್ಮಿಂದ ನಿಮಗೆ ಆಫೀಸಿಗೆ ಹೊತ್ತಾಯಿತು ದಯವಿಟ್ಟು ಕ್ಷಮಿಸಿ."

"ಏನು ಆಫೀಸಿಗೆ? ಇಂದು ಒಂದು ದಿನ ಹೊತ್ತಾದರೆ ಏನು ಕೊಳ್ಳೆ ಹೋಗುವುದು. ನೀವು ಯಾವಾಗಲೂ ಸಿಕ್ಕುವಿರೇನು ನಮ್ಮೊಡನೆ ಹರಟಲು? ಏನೋ ಇಂದು ಸಿಕ್ಕಿದಿರಿ! ಅದೂ ಆಕಸ್ಮಿಕವಾಗಿ ಇದೊಂದು ದಿನ ಒಂದು ತಾಸು ಹೊತ್ತು ಮೀರಿಹೋದರೇನಂತೆ!" ಮುಂದೆ ತಡೆದು ಮಾತನಾಡಿದರು. "ಆದರೆ........ನೀವೇನೂ ತಿಳಿಯ ಬೇಡಿ. ಒಂದು ಪ್ರಾರ್ಥಿಸುತ್ತೇನೆ. ನೀವು ಅಪರೂಪವಾಗಿ ಸಿಕ್ಕಿದ್ದೀರಿ ....ನಾಳೆ ಒಂದು ದಿನ ನಮ್ಮ ಮನೆಯಲ್ಲಿ ನಿಂತು ಹೋಗಬೇಕು .... ಬಡವರ ಮನೆ ಆತಿಥ್ಯ ಸ್ವೀಕರಿಸಿ"

ಏನು ಹೇಳಲೂ ನನಗೆ ತೋರಲಿಲ್ಲ ಆದರೂ ಆಫೀಸಿಗೆ ಹೊರಟಿ ರುವವರನ್ನು ನಿಲ್ಲಿಸಿಕೊಂಡು ಮತ್ತಷ್ಟು ಹೊತ್ತು ಮಾಡುವುದು ನನಗೆ ಸರಿಬರಲಿಲ್ಲ. "ಇನ್ನೂ ನಾವು ನಾಳೆ ಇಲ್ಲೇ ಇರುತ್ತೇವಲ್ಲ........ ನೋಡೋಣ. ಊರಿಗೆ ಹೋಗುವ ಮುನ್ನ ನಿಮ್ಮ ಮನೆಗೆ ಬಂದು ಹೋಗುತ್ತೇವೆ. ದಯವಿಟ್ಟು ನಾಳೆಯೇ ಬರಬೇಕೆಂದು ಆಗ್ರಹಪಡಿಸ ಬೇಡಿ" ಎಂದೆ.

"ಬರುವುದು ಖಂಡಿತ ತಾನೆ ಮುಂದೆಯಾದರೂ. ಹಾಗಾದರೆ ನಾಳೆಯೇ ಬಂದು ತೀರಬೇಕೆಂದೇನೂ ನನ್ನ ಬಲವಂತವಿಲ್ಲ........ಆದರೂ ನಮ್ಮ ಮೇಲೆ ವಿಶ್ವಾಸವಿಟ್ಟು ಬರಬೇಕು" ಎಂದು ಹೇಳಿ ನನ್ನಿಂದ ಹೂಂ ಗುಟ್ಟಿಸಿ ಹೊರಟು ಹೋದರು.

ಸದಾಶಿವರಾಯರು ಹೊರಟುಹೋದ ಮೇಲೆ ತಾರಿಣಿಯು ರೇಡಿಯೋಗೆ ಕೈಹಚ್ಚಿ ಯಾವುದೋ ಹಿಂದಿ ಹಾಡನ್ನು ಆಲಿಸುತ್ತ ಕುಳಿತಳು. ವಿಶಾಲಿ ತಾರಿಣಿಯ ತಾಯಿಯೊಂದಿಗೆ ಹರಟೆ ಕೊಚ್ಚುತ್ತ ಕುಳಿತಳು. ನಾನು ಅವರ ಹರಟೆ ಆಲಿಸುತ್ತಾ ಕುಳಿತೆ. ತಾರಿಣಿ ರೇಡಿಯೋವನ್ನು ಆಲಿಸುತ್ತಾ ಕುಳಿತವಳು ಏನನ್ನೋ ಜ್ಞಾಪಿಸಿಕೊಂಡ ವಳಂತೆ—ತ್ವರೆಯಿಂದ ಒಳಗೆ ಬಂದು, ವಿಶಾಲಿಯು, ನನ್ನ ಕಡೆ ನೋಡುತ್ತಾ, "ನಾವೆಂತಹ ಮಂಕರು, ನಿನ್ನೆ ಹಿಂದೂ ಆಫೀಸನ್ನು

ನೋಡಲು ಅನುಮತಿಗಾಗಿ ಒದ್ದುಕೊಟ್ಟು ಇಂದು ಮಾತಿನಲ್ಲಿ ಹೋಗು ವುದನ್ನು ಮರೆಯುತ್ತಿದ್ದೆವಲ್ಲಾ" ಎಂದು ನಮ್ಮನ್ನು ಎಚ್ಚರಿಸಿದಳು.

"ಹೌದೇ ತಾರಿಣಿ. ನೀನು ಈಗ ಎಚ್ಚರಿಸದಿದ್ದರೆ ಅನ್ಯಾಯ ವಾಗಿ ನೋಡುವುದನ್ನು ಕಳೆದುಕೊಳ್ಳುತ್ತಿದ್ದೆವಲ್ಲೇ" ಎಂದು ರಾಗವಾಗಿ ಹೇಳಿದಳು ವಿಶಾಲಿ .

"ಸಾಕು. ಇನ್ನು ಮಾತು. ಈಗಲೇ ಹೊತ್ತಾಯಿತೆಂದು ಕಾಣುತ್ತೆ. ಹೊರಡೋಣ.... ಇನ್ನೇಕೆ ತಡ ಮಾಡಬೇಕು" ನಾನೆಂದೆ.

ತಾರಿಣಿ ಬಟ್ಟೆ ಬದಲಿಸಿ ಬಂದಳು. ನಾನು ಕೆದರಿದ ಕ್ರಾಪನ್ನು ಮತ್ತೆ ಸರಿಮಾಡಿಕೊಂಡು ಎದ್ದೆ. "ನಾವು ಹೋಗಿ ಬರುತ್ತೇವೆ, ನಮ್ಮಿಂದ ನಿಮಗೆ ತುಂಬಾ ತೊಂದರೆಯಾಯಿತು" ಎಂದು ತಾರಿಣಿಯ ತಾಯಿಗೆ ಹೋಗುವಾಗ ಹೇಳಿದೆ.

"ಛೆ! ಛೆ! ನೀವು ಬಂದುದರಿಂದ ನಮಗೇನೂ ತೊಂದರೆಯಾಗ ಲಿಲ್ಲ........ ನಿಮ್ಮಂತಹವರು ನಮ್ಮಂತಹವರ ಮನೆಗೆ ಬಂದುದೇ ಹೆಚ್ಚು. ನೀವು ಹೊರಡುವ ಮುನ್ನ ಒಂದು ದಿನ ನಮ್ಮಲ್ಲಿ ಇದ್ದೇ ಹೋಗ ಬೇಕು. ಅಪರೂಪವಾಗಿ ಸಿಕ್ಕಿದ ನಮ್ಮ ಊರಿನವರನ್ನು ನಾವು ಹಾಗೇ ಬಿಡಲಾಗುತ್ತದೆಯೇ. ನೀವು ಖಂಡಿತ ಇರಲೇಬೇಕು, ಒಂದು ದಿನ ಮಟ್ಟಿಗಾದರೂ ನಮ್ಮಲ್ಲಿ.... ಯಾಕೆ ಯೋಚನೆ.... ಹೂಂ ಎಂದುಬಿಡಿ"

ಸದಾಶಿವರಾಯರು ಈ ಮೊದಲೇ ನನ್ನಿಂದ ಹೂಂ ಅನ್ನಿಸಿ ಬಿಟ್ಟಿದ್ದರು. ಇನ್ನು ಈಗ ಇವರ ಪ್ರಯತ್ನ ಬೇರೆ........ "ನಾಳೆ ಊರಿಗೆ ಹೋಗಬೇಕೆಂದಿರುವೆವಲ್ಲಾ" ಎಂದೆ ಮಾತಿಗಾಗಿ.

"ಆಗದು, ನೀವು ನಮಗಾಗಿ ಹೋಗುವುದನ್ನು ಮುಂದುವರಿಸ ಬೇಕು. ನಮ್ಮ ಆತಿಥ್ಯ ಒಂದು ದಿನವಾದರೂ ತೆಗೆದುಕೊಳ್ಳಬೇಕು".... ಎಂದು ಬಲವಂತಮಾಡಿದರು.

ನಾನು ಮೌನವಾಗಿ ತಾರಿಣಿಯ ಕಡೆ ನೋಡಿದೆ.

ತಾರಿಣಿಯು ಕೂಡ "ನನ್ನ ಪ್ರಾರ್ಥನೆ ಕೂಡ ಅದೇ ಆಗಿದೆ. ನಾಳೆ ನಮ್ಮಲ್ಲಿ ಇದ್ದು........ಹೊರಡಲೇ ಬೇಕು ನೀವು" ಎಂದು ಪ್ರಾರ್ಥಿಸುವಂತೆ ನೋಡಿದಳು.

ಆ ಜನಗಳ ಸೌಜನ್ಯ, ಪ್ರೀತಿ, ವಿಶ್ವಾಸಗಳ ಅರಿವು ಆಗಲೇ ಆಗಿತ್ತು. ಪ್ರೀತಿಯಿಂದ ಆಮಂತ್ರಣವಿತ್ತ ಆ ದಂಪತಿಗಳ ಮನಸ್ಸನ್ನು 'ಆಗದು' ಎಂದು ಹೇಳಿ ನೋಯಿಸಲು ನನಗೆ ಮನಸ್ಸು ಬರಲಿಲ್ಲ. ಇದರ ಮೇಲೆ ನಾಳೆಯೇ ಊರಿಗೆ ಹೊರಟೇ ತೀರಬೇಕೆನ್ನುವಷ್ಟು ತುರುತಿನ ಕೆಲಸ ಊರಿನಲ್ಲಿ ಯಾವುದೂ ಇರಲಿಲ್ಲ. ನಾವು ಒಂದು ದಿನ ಹೋಗುವುದು ನಿಧಾನವಾದರೆ ಯಾವ ಸಾಮ್ರಾಜ್ಯ ಕೊಳ್ಳೆಹೋಗುತ್ತಿರ ಲಿಲ್ಲ. ಆದುದರಿಂದ ಅವರ ಆಮಂತ್ರಣವನ್ನು ಸ್ವೀಕರಿಸಿದೆ. "ಆಗಲಿ, ನಿಮ್ಮ ಸೌಜನ್ಯಕ್ಕೆ ನಾವು ಮಾರುಹೋಗದಿರಲಾರೆವು" ಎಂದು ಒಪ್ಪಿಗೆ ಯನ್ನಿತ್ತೆ. ತಾಯಿಮಕ್ಕಳ ಮೋರೆಯಮೇಲೆ ಸಂತೋಷ ಉಕ್ಕಿ ಹರಿಯಿತು. ಮತ್ತೊಂದು ದಿನ ತನ್ನ ಗೆಳತಿಯ ಸಂಪರ್ಕ ದೊರೆಯಿ ತೆಂದು ತಾರಿಣಿಗೆ ಸಂತೋಷವಾಯಿತು. ಪ್ರೀತಿಯಿಂದ ಇತ್ತ ಆಮಂತ್ರಣವನ್ನು ನಾವು ಪುರಸ್ಕರಿಸಿದುದಕ್ಕೆ ತಾರಿಣಿ ತಾಯಿಗೆ ಸಂತೋಷವಾಯಿತು.

ನಾವು ಅವರಿಂದ ಬೀಳ್ಕೊಂಡು ಹಿಂದೂ ಆಫೀಸಿಗೆ ಹೊರಟೆವು. ನಾವು ಹೋಗುವುದನ್ನು ಆ ಮಕ್ಕಳು ಕೌತುಕದಿಂದ ನೋಡುತ್ತಿದ್ದುವು. ಅವನ್ನೂ ಜತೆಯಲ್ಲಿ ಒಯ್ಯುವ ಮನಸ್ಸಿತ್ತು ನನಗೆ. ಆದರೆ ಒಳಗೆ ಪ್ರವೇಶ ಮೂರು ಮಂದಿಗೆ ಮಾತ್ರವಿದ್ದುದರಿಂದ ಯಾರನ್ನೂ ಒಯ್ಯಲಾ ಗಲಿಲ್ಲ. ಹೋಗುತ್ತಾ ತಾರಿಣಿಗೆ ಅಂದೆ. "ಹೋಗಲಿ ಆ ಮಕ್ಕಳನ್ನು ನೀವು ಸಾಯಂಕಾಲದ ವಿವಿಧ ವಿನೋದಾವಳಿಗೆ ಖಂಡಿತ ಕರೆದು ತನ್ನಿ ....ಪಾಪ ಮಕ್ಕಳು ನೋಡಿ ಸಂತೋಷಪಡಲಿ."

ತಾರಿಣಿ ಹಾಗೇ ಆಗಲೆಂದಳು.

೧೪೫

ಹಿಂದೂ ಆಫೀಸಿನ ಯಂತ್ರೋಪಕರಣಗಳನ್ನು ನೋಡಲು ಇಂದು ಯಾವ ತೊಡಕೂ ಇರಲಿಲ್ಲ. ನಿನ್ನೆ ನಾನು ಸಲ್ಲಿಸಿದ್ದ ಪ್ರಾರ್ಥನಾಪತ್ರಕ್ಕೆ ಮನ್ನಣೆ ಇತ್ತು. ಒಳಗೆ ಪ್ರವೇಶಿಸಲು ಅನುಮತಿ ಇತ್ತಿದ್ದರು. ಜತೆಗೆ ಯಂತ್ರೋಪಕರಣಗಳನ್ನು ವಿವರಿಸಲೆಂದೇ ನಮ್ಮೊಡನೆ ಒಬ್ಬ ಕೆಲಸ ಗಾರನನ್ನು ಕಳುಹಿಸಿದ್ದರು. ಆತ ಅಲ್ಲಿ ಜೋಡಿಸಿದ್ದ ಎಲ್ಲಾ ಯಂತ್ರ ಗಳನ್ನೂ ತೋರಗೊಟ್ಟು ಅವುಗಳ ಕೆಲಸಕಾರ್ಯ, ಉಪಯೋಗಗಳನ್ನು ವಿವರಿಸಿ ಹೇಳಿದ. ಅಲ್ಲಿದ್ದ ಒಂದು ಹೊಸ ಯಂತ್ರ—ಟೆಲಿಪ್ರಿಂಟರ್— ಅನ್ನು ತೋರಿಸಿ ಅದು ಕೆಲಸ ಮಾಡುವ ವಿಧಾನ ವರ್ಣಿಸಿದ.

ಮುಂದೆ ಮೊಳೆಗಳನ್ನು ಜೋಡಿಸುವ, ಜೋಡಿಸಿದ ಮೊಳೆಗಳ ಅಚ್ಚನ್ನು ರಟ್ಟಿನ ಅಚ್ಚನ್ನಾಗಿ ಮಾಡುವ ಯಂತ್ರಗಳನ್ನು ತೋರಿಸಿದ. ಹೀಗೆ ಪ್ರತಿಮಾಡಿದ ರಟ್ಟಿನ ಅಚ್ಚನ್ನು ಸೀಸದ ಸುರುಳಿಯಾಕಾರದ ಅಚ್ಚನ್ನಾಗಿ ಪರಿವರ್ತಿಸುವವರೆಗಿನ ಎಲ್ಲಾ ವಿಧಾನವನ್ನೂ ತೋರಿಸಿ, ವಿವರಿಸಿದ.

ಒಂದು ಕಡೆ ಭೂತಾಕಾರದ ನಾಲ್ಕು ಮುದ್ರಿಸುವ ಯಂತ್ರಗಳು. ಈ ಯಂತ್ರಗಳು ತನಗೆ ತಾನೇ ಕೆಲಸಮಾಡಿ ಐದು ನಿಮಿಷಕ್ಕೆ ಸುಮಾರು ಒಂದು ಸಾವಿರ ಪ್ರತಿಗಳನ್ನು ಮುದ್ರಿಸಿ, ಕತ್ತರಿಸಿ, ಮಡಚಿ ಬರುತ್ತಿರುವ ಅದ್ಭುತವನ್ನು ವಿಶಾಲಿ ಕಂಡು "ಇದೇನು ಯಂತ್ರದ ಮಾಯಾಜಾಲ." ಎಂದಳು.

ನಾವು ಅಲ್ಲಿ ಆ ಯಂತ್ರದ ವಿಭಾಗದಲ್ಲಿ ನೋಡುವುದನ್ನೆಲ್ಲಾ ನೋಡಿ ಮುಗಿಸಿದ್ದೆವು. ನಮ್ಮೊಡನೆ ಬಂದು, ಯಂತ್ರೋಪಕರಣಗಳನ್ನು ವಿವರಿಸಿ ತೋರಿಸಲು ನೆರವಾದ ಆ ಕೆಲಸಗಾರನಿಗೆ ವಂದನೆಯನ್ನು ಸಲ್ಲಿಸಿ—ವಸತಿ ಗೃಹಕ್ಕೆ ಹಿಂತಿರುಗಿದೆವು.

ಸಮ್ಮೇಳನದ ಕಡೆಯ ಅಂಗವಾಗಿ ಇಂದು ವಿವಿಧ ವಿನೋದಾವಳಿ ಇತ್ತು. ಅದಕ್ಕೆ ಹೊತ್ತು ಮೀರಿ ಹೋಗಕೂಡದೆಂದು ವಿಶಾಲಿ ಮೊದಲೇ ಎಚ್ಚರಿಸಿದ್ದಳು. ಅವಳ ಎಚ್ಚರಿಕೆಯನ್ನು ಮರೆಯುವ ಧೈರ್ಯ ನನ್ನಲ್ಲಿಯದು.

ಇನ್ನೂ ವಿವಿಧ ವಿನೋದಾವಳಿಗೆ ಹೊತ್ತು ಇದ್ದಾಗಲೇ ವಸತಿ ಗೃಹ ಸೇರಿದೆವು. ತಾರಿಣಿ ತನ್ನ ಸ್ವಯಂಸೇವಕ ಕೆಲಸ ಮಾಡಲು ನಮ್ಮಿಂದ ಬೀಳ್ಕೊಂಡಳು. ಅವಳು ಹೊರಡುವಾಗ ನಾನು ಆ ವಿಷಯ ವನ್ನು ಆಕೆಗೆ ಎಚ್ಚರಿಸದೆ ಇರಲಿಲ್ಲ.

"ನೀವು ಮನೆಗೆ ಹೋಗುವಿರೇನು?"

"ಹೂಂ"

"ಹಾಗಾದರೆ ಆ ಮಕ್ಕಳನ್ನು ವಿವಿಧವಿನೋದಾವಳಿಗೆ ಕರೆತರು ವುದನ್ನು ಮರೆಯಬೇಡಿ!"

ಹಾಗೆಯೇ ಆಗಲೆಂದು ತಾರಿಣಿ ಒಪ್ಪಿ ಹೊರಟಳು. ನಡೆದ ವಿವಿಧ ವಿನೋದಾವಳಿಯಲ್ಲಿ ನೃತ್ಯ–ಸಂಗೀತ–ನಾಟಕ–ಎಲ್ಲಾ ಸೇರಿತ್ತು. ಮೊದಲು ನೃತ್ಯ ನಂತರ ಸಂಗೀತ–ಕಡೆಯದಾಗಿ ನಾಟಕ, ಅಲ್ಲಿಯ ಸ್ವಯಂಸೇವಕರಿಂದ, ಅವರು ಕೈಲಾಸಂರವರ ನಾಟಕ—ಬಂಡವಳ ವಿಲ್ಲದ ಬಡಾಯಿಯನ್ನು ಆರಿಸಿದ್ದರು.

ಒಟ್ಟಿನಲ್ಲಿ ಅಂದಿನ ಕಾರ್ಯಕ್ರಮ ಮನಸ್ಸಿಗೆ ರಂಜಿಸಿತು. ಅದು ವಿವಿಧ ವಿನೋದ ಹಾವಳಿಯಾಗದೆ, ವಿವಿಧ ವಿನೋದಾವಳಿಯಾಗಿತ್ತು. ತಾರಿಣಿ ನನ್ನ ಹೇಳಿಕೆಯ ಮೇರೆಗೆ ತಮ್ಮ, ತಂಗಿಯರನ್ನು ಕರೆತಂದಿ ದ್ದಳು. ಆ ಮಕ್ಕಳು ಮನೆಗೆ ಹೋಗುವಾಗ ತಾವು ಕಂಡ ದೃಶ್ಯಗಳನ್ನು ನೆನೆಯುತ್ತಾ, ಒಬ್ಬರಿಗೊಬ್ಬರು ವರ್ಣಿಸುತ್ತಾ ಹೊರಟವು—ತಾರಿಣಿಯ ಜೊತೆಯಲ್ಲಿ.

ನಾವು ಫಲಾಹಾರ ಗೃಹಕ್ಕೆ ಹೋಗಿ ಊಟ ಮುಗಿಸಿದೆವು. ಮಧ್ಯಾಹ್ನ ಹೊಟ್ಟೆಗೆ ಬಿದ್ದಿದ್ದ ಆ ಫಲಾಹಾರ ಇನ್ನೂ ಅರಗಿರಲಿಲ್ಲ. ಆದರೂ ಕೊಟ್ಟ ದುಡ್ಡಿಗೆ ಪರಿಹಾರವೆಂದು ನಾಲ್ಕು ಅಗಳು ಬಾಯಿಗೆ ಇರಿಸಿ ಬಂದೆವು. ಬರುವಾಗ ವಿಶಾಲಿ ಹೇಳಿದಳು,

"ಇಂದು ಸೀತಾರಾಮಾಚಾರ್ಯರು ಬಂದ ಅತಿಥಿಗಳಿಗಾಗಿ ಮಧ್ಯಾಹ್ನ ಒಂದು Special ಫಲಾಹಾರ ಏರ್ಪಡಿಸಿದ್ದರೆಂದು."

"ಹಾಗೇನೂ" ಎಂದು ಮಾತು ಮುಗಿಸಿದ್ದೆನೇ ಹೊರತು ಅದರ ಬಗ್ಗೆ ಯಾವ ಕುತೂಹಲ ತೋರಗೊಡಲಿಲ್ಲ. ನಾವು ಮಧ್ಯಾಹ್ನ ಹೊಡೆದ ಫಲಹಾರದ ಮುಂದೆ ಅದೇನು ಮಹಾ!

ಮಲಗಿದಾಗ ನನಗೆ ಕೂಡಲೇ ನಿದ್ರೆ ಹತ್ತಲಿಲ್ಲ. ಮಧ್ಯಾಹ್ನದ ದಣಿವಿನಿಂದ ವಿಶಾಲಿಗೆ ಕೂಡಲೇ ನಿದ್ರೆ ಹತ್ತಿತ್ತು. ಆದರೆ ನನಗೆ........ ನಿದ್ರೆ ?

ಇಂದೂ ವಿಶಾಲಿಯೊಡನೆ ಎಂದಿನಂತೆ ಹರಟಲು ತಾರಿಣಿ ಬರಬಹುದೆಂದು ಇದ್ದೆ. ಆದರೆ ಅವಳು ಬರಲಿಲ್ಲ. ಬಹುಶಃ ಇಂದಿನ ಬೆಳಗಿನ ಮನಸ್ತಾಪವನ್ನು ನೆನೆದೋ, ಇಲ್ಲವೇ ನಾವುಗಳು ಅವರ ಮನೆಗೆ ಒಂದು ದಿನದ ಮಟ್ಟಿಗೆ ಬಂದಿರಲು ಒಪ್ಪಿದುದರಿಂದ, ಹರಟಲು ಸಾಕಷ್ಟು ಕಾಲವಿದೆ ಎಂದು ತಿಳಿದೋ ಏನೋ ಅಂತು ಬರಲಿಲ್ಲ.

ಇಂದಿಗೆ ಸರಿಯಾಗಿ ನಾವು ಬಂದು ಮೂರು ದಿನವಾಯಿತು. ಈ ಮೂರು ದಿನಗಳಲ್ಲಿ ಈ ವಸತಿ ಗೃಹ ನಮಗೆ ಎಷ್ಟೋ ಒಗ್ಗಿ ಹೋಗಿತ್ತು. ನಾಳೆ ಹೇಗೆ ಈ ಮೂರು ದಿನ ಆಶ್ರಯವಿತ್ತ ಈ ವಸತಿ ಗೃಹವನ್ನು ಬಿಟ್ಟು ಹೊರಡುವುದೆಂದರೆ ನಮ್ಮ ಸ್ವಂತದ ಮನೆಯನ್ನೇ ಬಿಟ್ಟು ಹೊರಟಂತೆ........ಎಂದೆನಿಸಿತು. ಹಿಂದೆ ಕಾಲೇಜಿನಲ್ಲಿ ಓದಿದ ಕವಿಯ Prisoner of chillon ಕವಿತೆಯ ನೆನಪು ಅದೇಕೋ ಆಯಿತು. ಅಂದು ಆಗದೇ ಇದ್ದ ಒಂದು ಭಾವದ ಅರಿವು ಇಂದು ಆಗಿತ್ತು.

ಅಲ್ಲಿಯ ಆ ಕೈದಿ ತನ್ನ ಎಲ್ಲಾ ಆಯುಷ್ಯವನ್ನು ಸೆರೆಮನೆಯಲ್ಲಿಯೇ ಕಳೆದ. ಒಂದು ದಿನ ಅಧಿಕಾರಿಗಳು ಬಂದು ಅವನನ್ನು ಬಿಡುಗಡೆಮಾಡಿ ಬೇಕಾದಲ್ಲಿಗೆ ಹೋಗಲು ಅನುಮತಿ ಇತ್ತಾಗ ಇಷ್ಟು ದಿನ ಸಂಗಾತಿಗಳಾಗಿದ್ದ ಕೈಸರಪಳಿ, ಇಲಿ, ಜೇಡರ ಹುಳು, ತನ್ನ ಮನೆಯಂತೆಯೇ ಇದ್ದ ಆ ಸೆರೆಮನೆಯನ್ನು ಬಿಟ್ಟು ಹೊರಡಲಾರದೆ, ಅಯ್ಯೋ ಇವರು ನನ್ನ ಮನೆಯಿಂದ ನನ್ನನ್ನು ಓಡಿಸುತ್ತಿದ್ದಾರಲ್ಲಾ...., ಎಂದು ಗೋಳಾಡಿದುದೇಕೆಂದು ಇಂದು ಅರಿವಾಯಿತು.

ಹೌದು ನಾನಿದ್ದ ಈ ಎಪ್ಪತ್ತೆರಡು ತಾಸುಗಳಲ್ಲಿ ಆ ವಸತಿ ಗೃಹವೇ ನಮ್ಮ ಮನೆಯಾಗಿತ್ತು. ಇಲ್ಲಿ ಕಳೆದ ಈ ಅವಧಿಯಲ್ಲಿ—ಈ ಪ್ರಪಂಚದ ಬಂಧನಗಳನ್ನೂ ಕಿತ್ತೊಗೆದು ಯಾವುದೋ ಲೋಕದಲ್ಲಿ, ಯಾವ ತಾಪತ್ರಯ, ಯೋಚನೆಗಳಿಗೆ ಸಿಲುಕದೆ ವಿಹರಿಸಿದಂತಿತ್ತು. ಈಗ ಈ ವಸತಿ ಗೃಹವನ್ನು ಬಿಟ್ಟು ಹೊರಡುವುದೆಂದರೆ "ನಾವು ವಿಹರಿಸುತ್ತಿದ್ದ ಲೋಕದಿಂದ ಮರಳಿ—ನಮ್ಮ ಎಲ್ಲಾ ಸ್ವತಂತ್ರವನ್ನು ಕಸಿದು ಮತ್ತೆ ತಾಪತ್ರಯದ ಸಂಕೋಲೆ ಹಾಕಿ ನಾವಿದ್ದ ಈ ಭೂಮಿಗೇ ನೂಕಿದಂತಿತ್ತು. ಅದೆಂತಹ ಬದಲಾವಣೆ! ಈ ಮೂರು ದಿನಗಳಲ್ಲಿ, ಅದೆಂತಹ ಸ್ವರ್ಗಸಿಕ್ಕಿತ್ತು, ಈ ಎಪ್ಪತ್ತೆರಡು ತಾಸುಗಳಲ್ಲಿ.

ಇದುವರೆಗೂ ನಮಗೆ ಆಶ್ರಯನೀಡಿ, ಕಾಲಕಾಲಕ್ಕೆ ಅನ್ನ, ಫಲಾಹಾರಗಳನ್ನು ಒದಗಿಸಿ ಮನದ ಬೇಸರ ನೀಗಿಸಲು ಹತ್ತಾರು ಮನರಂಜನೆಗಳನ್ನು ಒದಗಿಸಿ, ಅತಿ ಪ್ರೀತಿಯಿಂದ ನೋಡಿಕೊಂಡ—ಸ್ವಾಗತಸಮಿತಿಯವರಿಗೂ ನಮಗೂ ಇಂದಿಗೆ ಋಣ ತೀರಿತು. ನಾಳೆ ಬೆಳಿಗ್ಗೆಗೆ ನಾವು ಅವರ ಅತಿಥಿಗಳಲ್ಲ! ಅವರಿಗೂ ನಮಗೂ ಯಾವ ನೈತಿಕ ಸಂಬಂಧವೂ ಇರುವುದಿಲ್ಲ! ಎಲ್ಲಾ ಸಂಬಂಧ ಈ ರಾತ್ರಿಗೇ ಮುಕ್ತಾಯ. ಅದೆಂತಹ ಬದಲಾವಣೆ. ನಾಳಿನ ಮುಂಜಾನೆಯ ಒಳಗೆ! ಎಲ್ಲವೂ ಹೀಗೆಯೇ, ಎಲ್ಲದರ ರೀತಿಯೂ ಹೀಗೆಯೇ........ ಈ ಪ್ರಪಂಚದ ರೀತಿನೀತಿಗಳೆಲ್ಲವೂ ಹೀಗೆಯೇ........

ಇಂತಹ ಯೋಚನೆಗಳಲ್ಲಿ ನಿದ್ರೆ ಹತ್ತೀತೆ? ಹತ್ತುವವರೆಗೂ ಹೊರಳಾಡುತ್ತಿದ್ದೆ. ಮುಂದೆ ಅದೆಷ್ಟೋ ಕಾಲದಮೇಲೆಯೇ ನಾನು ನಿದ್ರೆಯ ಸೆರೆಯಾಳಾದುದು!

ನಿನ್ನೆ ರಾತ್ರಿ ನಾನು ಯೋಚಿಸಿದ್ದ ಎಲ್ಲಾ ಬದಲಾವಣೆ ಈ ಬೆಳಗಾಗುವ ವೇಳೆಗೆ ಬಂದಿತ್ತು. ಇದುವರೆಗೆ ನಾವು ಉಳಿದಿದ್ದ ವಸತಿಗೃಹ ಅದಾವುದೊ ಒಂದು ಅವ್ಯಕ್ತ ನೋವನ್ನು ಹೊರಪಡಿಸಿದಂತಿತ್ತು. ಅದರ ಮುಖದ ಮೇಲೆ ಇಂದು ಕಳೆಯೇ ಇರಲಿಲ್ಲ; ಅಲ್ಲಿ ಉಳಿದಿದ್ದವರೆಲ್ಲರ ಮುಖದ ಮೇಲೆ ಕೂಡ.

ಎಲ್ಲರೂ ಆ ವಸತಿ ಗೃಹದ ಋಣ ತೀರಿತೆಂದು ಮುಂದಿನ ನೀರಿನ ಋಣವಿರುವಲ್ಲಿಗೆ ಹೋಗಲು ಗಂಟು ಮೂಟೆ ಕಟ್ಟುವವರೇ. ಬೆಳಗಿನ ಗಾಡಿಗಲ್ಲದಿದ್ದರೂ, ಮಧ್ಯಾಹ್ನದ ಗಾಡಿಗಾಗಿ ಸಿದ್ಧರಾಗುವವರೇ.

ನಾವು ಬೆಳಿಗ್ಗೆ ಎದ್ದವರೇ ನಲ್ಲಿಯಲ್ಲಿ ಮುಖ ತೊಳೆದು ಪಕ್ಕದ ರಸ್ತೆಯಲ್ಲೇ ಇದ್ದ ಹೋಟಲೊಂದಕ್ಕೆ ನುಗ್ಗಿ ಕಾಫಿ ಕುಡಿದು ಮುಗಿಸಿ, ಎಲ್ಲರಂತೆ ಗೃಹತ್ಯಾಗಕ್ಕೆ ಸಿದ್ಧರಾದೆವು. ಹಾಸಿಗೆ ಬಟ್ಟೆಗಳನ್ನು ಕಟ್ಟ ತೊಡಗೆದೆವು. ನಾವು ಬಟ್ಟೆಬರೆಗಳನ್ನು ಕಟ್ಟಿ ಮುಗಿಸಿ, ನಮಗೆ ಈವರೆಗೆ ಆಶ್ರಯ ನೀಡಿದ್ದ ವಸತಿ ಗೃಹಕ್ಕೆ ಕಡೆಯ ವಂದನೆ ಸಲ್ಲಿಸಲು ನಿಂತಾಗ ತಾರಿಣಿಯು ಬಂದಳು, ಜತೆಗೆ ಒಬ್ಬ ಆಳು ಮಗನನ್ನು ಕರೆತಂದಿದ್ದಳು. ನಾವು ಸಿದ್ಧರಾಗಿ ಕುಳಿತಿರುವುದನ್ನು ಕಂಡು,

"ಆಗಲೇ ಗಂಟುಮೂಟೆ ಕಟ್ಟಾಯಿತೇನೂ?" ಎಂದು ಕೇಳಿದಳು.

ನಮಗೆ ಇದುವರೆಗೂ ಆಶ್ರಯವಿತ್ತ ಈ ಗೃಹದಿಂದ ಹೊರಡುವುದು ಮನಸ್ಸಿಗೆ ಅತಿ ವೇದನೆಯಾಗಿತ್ತು. ಆ ಮನದ ಅಲಸಿಕೆಯಲ್ಲಿ ತಾರಿಣಿಯ ಪ್ರಶ್ನೆಗೆ ಉತ್ತರವೀಯುವುದೂ ದುಸ್ಸಾಧ್ಯವಾಯಿತು.

"ಹೂಂ" ಎಂದು ಮಾತ್ರ ಅಂದೆ.

ತನ್ನೊಡನೆ ಕರೆತಂದ ಆಳುಮಗನೊಡನೆ ನಮ್ಮ ಎಲ್ಲಾ ಸಾಮಾನುಗಳನ್ನು ತನ್ನ ಮನೆಗೆ ಸಾಗಿಸಿದಳು. ನಮ್ಮ ಸಾಮಾನೆಲ್ಲಾ

ಒಯ್ದ ಮೇಲೆ ಮೂವರೂ ಹೊರಟೆವು. ಕಾಂಪೌಂಡು ಬಾಗಿಲು ದಾಟುವವರೆಗೂ ಸುಮ್ಮನಿದ್ದ ವಿಶಾಲಿ ತಾರಿಣಿಯ ಕಡೆ ನೋಡಿ "ಅದೆಂತಹ ಬಂಧನ ತಾರಿಣಿ! ಈ ಮೂರು ದಿನ ಇಲ್ಲಿದ್ದ ಮಾತ್ರಕ್ಕೇ ಇದನ್ನು ಬಿಟ್ಟು ಹೊರಡುವುದೆಂದರೆ ಮನಸ್ಸಿಗೆ ಗರಗಸ ಹಚ್ಚಿದಂತಾಗಿದೆ ಯಲ್ಲಾ!" ಎಂದಳು. ತಾರಿಣಿ ಅವಳ ಮೋರೆಯನ್ನು ದಿಟ್ಟಿಸಿದಳಾದರೂ ಏನೊಂದೂ ನುಡಿಯಲಿಲ್ಲ. ಆಕೆಗೆ ನಮ್ಮ ಈ ವಿರಹ ವ್ಯಥೆಯು ಅರಿವಾಗಿರಬೇಕು. ವಸತಿ ಗೃಹವನ್ನು ಹಿಂದುಳಿಸಿ ಹೊರಟಮೇಲೆ ಈ ಅಗಲಿಕೆಯ ನೋವು ಕಡಿಮೆಯಾಗುತ್ತಾ ಬಂತು. ಎಲ್ಲಾ ಅಲ್ಪ ಕಾಲದ ನಲವು, ನಲಿವು, ನೋವು ಎಂದುಕೊಂಡೆ. ಈಗ ಮನಸ್ಸಿನಿಂದ ಆ ವಸತಿ ಗೃಹದ ವ್ಯಾಮೋಹ ಕಡಿಮೆಯಾಗುತ್ತ ಬಂದಿತ್ತು. ಈಗ ಮನಸ್ಸು ನಮ್ಮನ್ನು ಅತಿಥಿಗಳನ್ನಾಗಿ ಆಹ್ವಾನಿಸಿದ ತಾರಿಣಿಯ ತಂದೆ ತಾಯಿಗಳ ಕಡೆ ಹರಿಯುತ್ತಿತ್ತು. ಅದೇಕೆ ಆ ದಂಪತಿಗಳಿಬ್ಬರೂ ನಮ್ಮನ್ನು ಈ ಒಂದು ದಿನದ ಮಟ್ಟಿಗಾದರೂ ತಮ್ಮ ಮನೆಯಲ್ಲಿರಲು ಆಹ್ವಾನಿಸಿದರು? ಎಂದು ನನ್ನನ್ನು ನಾನೇ ಕೇಳಿಕೊಂಡೆ. ಹೌದು. ಅದೇಕೆ ಆಹ್ವಾನಿಸಿದರು? ಇದಕ್ಕೆ ನೇರ ಉತ್ತರ ತಿಳಿಯಲಾರದೆ ಪರೋಕ್ಷವಾಗಿಯಾದರೂ ತಿಳಿಯಲು ಹವಣಿಸಿತು ಮನಸ್ಸು. ನಿನ್ನೆ ರೇಡಿಯೋ ಕೇಳುತ್ತಿದ್ದಾಗ ಸದಾಶಿವರಾಯರು ನನ್ನನ್ನೂ, ತಾರಿಣಿ ಯನ್ನೂ ನೋಡಿ ಹತ್ತಾರು ಬಾರಿ ನಕ್ಕಿದ್ದರು. ಮುಂದೆ ದಾರ್ಶನಿಕನಂತೆ ಮಹತ್ತರ ಸಮಸ್ಯೆಯೊಂದನ್ನು ಒಡೆಸುವಂತೆ ಕುಳಿತರು. ಬಹುಶಃ ನನ್ನಿಂದೇನಾದರೂ ಅವರ ಸಂಸಾರದ ಸಿಕ್ಕು ಬಿಡಿಸಲು ನೆರವಾಗ ಬಹುದೆಂದೇ ಇರಬೇಕು. ಅದಕ್ಕಾಗಿಯೇ ಇರಬೇಕು—ಆಫೀಸಿಗೆ ಹೋಗುವ ಮುನ್ನ ತಮ್ಮ ಅತಿಥಿಗಳಾಗಿ ಒಂದು ದಿನವಾದರೂ ನಿಂತೇ ಹೋಗಬೇಕೆಂದು ಆಗ್ರಹಪಡಿಸಿದುದು.... ಅದರಂತೆಯೇ ತಾರಿಣಿಯ ತಾಯಿ ಕೂಡ. ಅವರು ನನ್ನನ್ನು ಕಂಡು ಎಷ್ಟು ಹರ್ಷಗೊಂಡರೆಂಬುದು ನನ್ನ ಗಮನಕ್ಕೆ ಬಾರದಿರಲಿಲ್ಲ! ಆಕೆಯ ಮನಸ್ಸಿನಲ್ಲೂ ತಮ್ಮ ಪ್ರೀತಿಯ ಮಗಳು ತಾರಿಣಿಯ ಪ್ರಶ್ನೆಗೆ ನನ್ನಿಂದೇನಾದರೂ ಉತ್ತರ ದೊರೆಯ

ಬಹುದೆಂದು ಆಸೆ ಇಸ್ತಿರಬೇಕು. ಆದುದರಿಂದಲೇ ಅವರು ನಮ್ಮನ್ನು ಅಷ್ಟು ವಿಧವಾಗಿ ಉಪಚರಿಸಿದುದು. ನಮ್ಮನ್ನು ಈ ಒಂದು ದಿನವಾದರೂ ಅವರಲ್ಲಿ ನಿಲ್ಲಲು ಕೇಳಿಕೊಂಡುದು. ಹೌದು. ತಮ್ಮ ಬಾಳಿನೊಂದಿಗೆ ಬೆರೆತ ಈ ನೋವಿಗೆ ನಾನೇನಾದರೂ ಮದ್ದಾಗ ಬಹುದೆಂದು ಅವರು ಊಹಿಸಿರಬೇಕು. ನೋಡೋಣ! ಅವರು ಮದ್ದೇನಾದರೂ ಅಪೇಕ್ಷಿಸಿದರೆ ನಾನು ತೆರೆದ ಕೈಯಿಂದ ನೀಡುತ್ತೇನೆ. ಹಾಗೇನಾದರೂ ಅವರು ಅಪೇಕ್ಷಿಸದೆ ನಾನಾಗಿ ನಾನೇ ನೀಡಬೇಕೇನು? ನಾನಾಗಿ ನಾನೆ?.... ಹೌದು. ತಾರಿಣಿಯ ಮನದ ದುಃಖ ಬಲ್ಲ— ನಾನೇ, ನೀಡಬೇಕು! ಕಡೆಗೆ ವಿಶಾಲಿಯ ಕಡೆಯಿಂದಲಾದರೂ........ ಅಂತೂ; ಅವರ ಈ ಮನೋರೋಗವನ್ನು ಶಮನ ಮಾಡಬೇಕು." ಎಂದು ತಾರಿಣಿಯ ಬಗ್ಗೆ ಯೋಚಿಸುತ್ತಾ ಅವರ ಮನೆಯ ಕಾಂಪೌಂಡು ಗೇಟನ್ನು ಮೆಟ್ಟಿದ್ದೆ.

ತಾರಿಣಿಯ ತಂದೆ ಇಂದು ಮನೆಯಲ್ಲಿಯೇ ಇದ್ದರು. ಇಂದು ಅವರಿಗೆ ರವಿವಾರವೆಂದು ವಿರಾಮ. ನಮ್ಮನ್ನು ಸ್ವಾಗತಿಸಲು ಅವರೇ ಮುಂದೆ ಬಂದರು. ಮುಂದಾಗಿ ಬಂದು ನಮ್ಮೆಲ್ಲ ಸಾಮಾನುಗಳನ್ನೂ ಅವರೇ ಒಂದೆಡೆ ಅಣಿಯಾಗಿ ಜೋಡಿಸಿಟ್ಟಿದ್ದರು. ಅವರು ನಮ್ಮನ್ನು ತಮ್ಮ ರೂಂಗೆ ಆದರದಿಂದ ಕರೆದೊಯ್ದರು. ಅವರ ಆಮಂತ್ರಣವನ್ನು ಮನ್ನಿಸಿ ಬಂದುದಕ್ಕಾಗಿ ನಮ್ಮನ್ನು ಮಿತಿಮೀರಿ ಹೊಗಳಿದರು. ನಾವು ರೂಂನಲ್ಲಿ ಕುಳಿತು ಇನ್ನೂ ಐದು ನಿಮಿಷ ಕೂಡ ಆಗಿರಲಿಲ್ಲ, ಆಗಲೇ ಕಾಫಿ, ಉಪ್ಪಿಟ್ಟು. ನಾವು ಬೆಳಗ್ಗೆ ಫಲಾಹಾರ ಮಾಡಿರುವುದಾಗಿ ಎಷ್ಟು ಹೇಳಿದರೂ ಸ್ವಲ್ಪವಾದರೂ ತೆಗೆದುಕೊಳ್ಳಲು ಬಲವಂತ ಮಾಡಿದರು. ಅವರ ಆಗ್ರಹಕ್ಕೆ ಹೆದರಿ ಕುಳಿತು ಹೊಟ್ಟೆಯನ್ನು ಮತ್ತೆ ತುಂಬಿದೆವು.

ಫಲಾಹಾರ ಮುಗಿದೊಡನೆ ತಾರಿಣಿ ತನ್ನ ಪುಸ್ತಕ, ತನ್ನ ಲೇಖನ ಗಳನ್ನು ತೋರಿಸಲು ವಿಶಾಲಿಯನ್ನು ತನ್ನ ಕೊಠಡಿಗೆ ಕರೆದೊಯ್ದಳು. ನಾನು ಅಲ್ಲಿಯೇ ಕುಳಿತು ಸದಾಶಿವರಾಯರೊಡನೆ ಮಾತಿಗೆ ಮೊದಲಿಟ್ಟೆ.

"ಇಂದಿಗೆ ಮುಗಿಯಿತೆಂದು ಕಾಣುತ್ತದೆ ನಿಮ್ಮ ಎಲ್ಲಾ ಸಮ್ಮೇಳನ"

"ಹೌದು" ನಾನು ಉತ್ತರಿಸಿದೆ. "ಯಾಕೆ ನೀವು ಇಷ್ಟು ಸಮೀಪದಲ್ಲಿ ಇದ್ದುಕೊಂಡು ಯಾವ ಒಂದು ಕಾರ್ಯಕ್ರಮಕ್ಕೆ ಬಾರದಿದ್ದುದು?" ಎಂದು ಕೇಳಿದೆ.

"ಅಯ್ಯೋ ಅದೇನು ಹೇಳುತ್ತೀರಿ? ಈ ಹಾಳು ಆಫೀಸಿನ ಅವಾಂತರ.... ನನಗೋ ವಿಲ್ಲು ಕೆಲಸಗಾರನಂತೆ—ಎಂಟರಿಂದ ಹನ್ನೆರಡು ಮತ್ತೆ ನಾಲ್ಕರಿಂದ ಎಂಟರ ತನಕ ಕೆಲಸದ ವೇಳೆ. ಇನ್ನು ವಿರಾಮವೆಂದರೆ ರವಿವಾರಕ್ಕಾಗಿ ಕಾಯಬೇಕು. ಹೀಗಿರುವಾಗ ಹೇಗೆ ಬರಲಾಗುವುದು! ನಾನು ಹೋಗದಿದ್ದರೂ ನನ್ನ ಮಗಳು ತಾರಿಣಿಯನ್ನು ನನ್ನ ಪ್ರತಿನಿಧಿಯಾಗಿ ಕಳುಹಿಸಿಕೊಟ್ಟಿರುವೆನಲ್ಲಾ, ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸಲು." ಎಂದು ನಗುತ್ತಾ ನುಡಿದರು.

ಅದೂ ಇದೂ ಕೆಲಸಕ್ಕೆ ಬಾರದ ಹರಟೆಯಾದ ಮೇಲೆ ಆಕಸ್ಮಾತ್ತಾಗಿ ತಾರಿಣಿಯ ಸುದ್ದಿ ಪ್ರಸ್ತಾಪ ಬಂತು. ಉತ್ಸಾಹದ ದನಿಯಲ್ಲಿ ಹೇಳಿದರು. "ಅವಳು ಅದೆಷ್ಟು ಬುದ್ಧಿವಂತೆ ಗೊತ್ತೆ? ಸೊಗಸಾಗಿ ಸಂಗೀತ ಬರುತ್ತದೆ. ದಿನಾ ಮೇಷ್ಟ್ರು ಬಂದು ವೀಣೆಯ ಪಾಠ ಹೇಳಿ ಹೋಗುತ್ತಿದ್ದಾರೆ ಈ ಒಂದು ವರ್ಷದಿಂದ. ಅವಳ ಕ್ಲಾಸಿನಲ್ಲಿ ಅವಳದೇ ಒಂದನೆಯ ನಂಬರ್. ಮೊದಲಿಂದಲೂ ಅಷ್ಟೆ. ಆ ಸ್ಥಾನ ಬೇರೊಬ್ಬರಿಗೆ ಬಿಟ್ಟುಕೊಟ್ಟಿಲ್ಲಾ ಅವಳು. ಮುಂದೆ M. B. B. S. ತನಕ ಓದಿಸುವ ಮನಸ್ಸು ಇದೆ. ಅಂತಹ ಬುದ್ಧಿವಂತಳನ್ನು ಓದಿಸದೆ ಇನ್ನಾರನ್ನು ಓದಿಸಬೇಕು? ನೋಡಬೇಕು ಅದು ಓದಿ ಮುಗಿಸಲು ಇನ್ನೂ ಆರು ವರ್ಷಗಳಾದರೂ ಬೇಕಲ್ಲಾ..." ಯೋಚಿಸುತ್ತಾ, ಮರಳಿ "ಅಂದಹಾಗೆ ನಿಮ್ಮ ತಂಗಿ—ಅವರು ಏನು ಓದುತ್ತಿದ್ದಾರೆ?"

"ಅವಳು ಕೂಡ ನಿಮ್ಮ ತಾರಿಣಿಯ ಕ್ಲಾಸೇ, ಅಲ್ಲಿಯೂ ಅವಳೇ ತನ್ನ ತರಗತಿಯಲ್ಲಿ First. ಇದರ ಮೇಲೆ ಅವಳೊಬ್ಬ ಸಾಹಿತಿ ಬೇರೆ.

ಅವಳು ಓದದೇ ಬಿಟ್ಟ ಕನ್ನಡ ಪುಸ್ತಕಗಳಿಲ್ಲ. ಎಲ್ಲಾ ಗೊತ್ತೆನ್ನುತ್ತಾಳೆ. ಬಹಳ ಪ್ರಚಂಡಳು. ಜತೆಗೆ ನಾಲ್ಕಾರು ಕಥೆಗಳನ್ನು ಬರೆದಿದ್ದಾಳೆ. ಈಗಾಗಲೇ ಸಂಪಾದಕರಿಂದ ಷಹಬಾಸ್‌ಗಿರಿ ಪಡೆದಿದ್ದಾಳೆ!

"ಮೊನ್ನೆ ಅವಳೊಂದು ಕಥೆ ಬರೆದಿದ್ದಾಳೆ. "ನಮ್ಮ ಅಣ್ಣನ ಮದುವೆಯ ನೆನಪು" ಅಂತ ಅದರ ಹೆಸರು. ಬಹಳ ತಮಾಷೆ ಕಥೆ ಅದು. ನಡೆದ ಹಾಗೇ ಬರೆದಿದ್ದಾಳೆ."

ಈ ಮಾತು ಕಿವಿಯ ಮೇಲೆ ಬೀಳುತ್ತಲೆ ಸದಾಶಿವರಾಯರ ಮುಖ ವಿವರ್ಣವಾಯಿತು. ಅದೇಕೋ ಕಾಣೆ! ಇದರಿಂದ ನನಗೆ ಮದುವೆಯಾಗಿರಬೇಕೆಂದು ಊಹಿಸಿರಬಹುದೇ? ಅಥವಾ ಬೇರಾವ ವಿಷಯವನ್ನಾದರೂ ಮನಸ್ಸಿಗೆ ತಂದುಕೊಂಡಿರಬಹುದೇ? ಮುಂದಿನ ಕ್ಷಣದಲ್ಲಿಯೇ ಮುಖದ ಆ ವಿವರ್ಣತೆಯನ್ನು ಕಳೆಯಲು ಪ್ರಯತ್ನಿಸುತ್ತಿದ್ದಂತೆ ತೋರಿತು. ಅದನ್ನು ಗಮನಿಸಿಯೂ ಗಮನಿಸದವನಂತೆ ನಾನು ಮಾತು ಮುಂದುವರೆಸಿದೆ.

"ಹುಚ್ಚು ಹುಡುಗಿ. ಇನ್ನೂ ಹುಡುಗುತನ. ಆ ಕಥೆ ಕೇಳಿ ಹೊಟ್ಟೆ ಹುಣ್ಣಾಯಿತು. ಅಂತಹದೆಷ್ಟೋ ಕಥೆಗಳನ್ನು ಬರೆದಿದ್ದಾಳೆ."

ತಮ್ಮ ಮಗಳ ಬಗ್ಗೆ ಅಭಿಮಾನದಿಂದ ಅವರು ನುಡಿದಾಗ ನಾನೇಕೆ ಸುಮ್ಮನಿರಬೇಕು ಎಂದು ವಿಶಾಲಿಯ ಹೊಗಳಿಕೆಗೆ ತೊಡಗಿದೆ. ಆದರೂ ನನ್ನ ಹೊಗಳಿಕೆಯಲ್ಲಿ ಇದ್ದ ಸಂಗತಿಯನ್ನು ಹೇಳಿದ್ದೇನೇ ಹೊರತೂ ಯಾವುದನ್ನೂ ಉತ್ಪ್ರೇಕ್ಷಿಸಿರಲಿಲ್ಲ.

ಸದಾಶಿವರಾಯರು ತಮ್ಮ ಮೊದಲಿನ ಉತ್ಸಾಹದಲ್ಲಿಯೇ ನುಡಿದರು.

"ಹೌದು ಇದೇ ರೀತಿ ನಮ್ಮ ತಾರಿಣಿಗೂ ಗೀಳು ನೋಡಿ. ಅವಳು ಕೂಡ ಅದೆಂತಹದೋ ಕವನಗಳನ್ನು ಕಟ್ಟಿದ್ದಾಳೆ. ಕಥೆಗಳನ್ನು ಬರೆದಿದ್ದಾಳೆ—ಅವಳು ಅದನ್ನು ಎಷ್ಟು ಸೊಗಸಾಗಿ ಬರೆದಿದ್ದಾಳೆ

ಗೊತ್ತೇ, ನಾನೇ ನಂಬಲಿಲ್ಲ ಮೊದಲು ಅವನ್ನು ತಾರಿಣಿ ಬರೆದಳೆಂದು— ಆದರೆ ಆಮೇಲೆ ನಂಬಬೇಕಾಯಿತು. ಅದೇಕೋ ಕಾಣೆ ಅವಳಿಗೆ ಕನ್ನಡವೆಂದರೆ ಹುಚ್ಚು—ತಮಿಳು ಕೂಡ ಚನ್ನಾಗಿ ಬರುತ್ತೆ—ಆದರೆ ಕನ್ನಡದ ಬಗ್ಗೆ ಅವಳಿಗೆ ಯಾವಾಗಲೂ ಹೆಮ್ಮೆ."

"ಹೌದು. ಆಕೆ ಎಷ್ಟಾದರೂ ಕನ್ನಡ ಸಾಹಿತಿಯಲ್ಲವೆ? ಕನ್ನಡಿತಿ ಯಲ್ಲವೆ?"

"ನಾವೆಲ್ಲಾ ಏನು ಕನ್ನಡಿಗರೋ ಏನೊ. ನಿಮ್ಮ ತಂಗಿ ಹೇಳಿದ ಹಾಗೆ ನಮ್ಮದೆಲ್ಲಾ ಬರೀ ಮಾತಿನ ಕನ್ನಡತನ. ಕೆಲಸದಲ್ಲಿ ಇಲ್ಲ"

"ಹೌದು. ಅವಳಂದುದು ಸತ್ಯ. ಇಲ್ಲದೆ ಇದ್ದರೆ ಕನ್ನಡ ನಾಡು ಒಂದಾಗಲು ಇಷ್ಟು ಕಾಲ ಬೇಕಿತ್ತೆ?"

ವಿಷಯ ಬದಲಾಯಿಸಿ ತಾರಿಣಿಯ ತಂದೆ ಕೇಳಿದರು. "ನಿಮಗೆ ಈಕೆಯೊಬ್ಬಳೇ ತಂಗಿ ಎಂದು ಕಾಣುತ್ತೆ. ಆಕೆಯ ಭಾರವನ್ನು ಕಳೆದು ಕೊಂಡು ಇರಬೇಕೆಂದು ತೋರುತ್ತೆ." ಅವರು ಯಾವ ವಿಷಯವಾಗಿ ಮಾತನಾಡುತ್ತಿದ್ದಾರೆಂದು ಕೂಡಲೇ ಅರಿತೆ.

"ಅದೇನೊ ನಿಜ ಸ್ವಾಮಿ. ಇವಳೊಬ್ಬಳೇ ತಂಗಿ. ಆದರೂ ಇನ್ನೂ ಹೊರೆ ಬೆಟ್ಟದ ಹಾಗೆ ಕೂತಿದೆ. ಮೊನ್ನೆ ನಮ್ಮ ತಾಯಿ ಒಬ್ಬ ವರನನ್ನ ಕಿವಿಯ ಮೇಲೆ ಹಾಕಿದ್ದಳು. ಅವರನ್ನು ನೋಡಿ ವಿಚಾರಿಸ ಲಾಗಲಿಲ್ಲ. ನಾಳೆ ಊರಿಗೆ ಹೋದಮೇಲೆ ನನ್ನ ಮೊದಲನೆಯ ಕೆಲಸವೇ ಅವರನ್ನು ಕಂಡು ಮಾತನಾಡುವುದು. ಹಾಗೆ ಮಾಡದೇ ಇದ್ದರೆ ಹೇಗೆ ಸ್ವಾಮಿ. ಬೆಳೆದ ಹುಡುಗಿಯನ್ನು ಅದೆಷ್ಟು ದಿನವೆಂದು ಮನೆಯಲ್ಲಿ ಇಟ್ಟುಕೊಂಡಿರುವುದಕ್ಕಾಗುತ್ತೆ." ನನಗೆ ತಿಳಿಯದಂತೆಯೇ ನನ್ನ ಬಾಯಿಂದ ಈ ಕಡೇ ಮಾತು ಹೊರಬಿತ್ತು. ಈ ಮಾತು ಸದಾಶಿವ ರಾಯರ ಹೃದಯಕ್ಕೆ ಈಟಿಯ ಇರಿತವಾಯಿತು. ಅವರೂ ಒಂದು ರೀತಿಯಲ್ಲಿ ಹುಡುಗಿಯನ್ನು ಮನೆಯಲ್ಲಿ ಇಟ್ಟುಕೊಂಡು ಇರುವವರೇ ಎನ್ನುವ ವಿಷಯ ಲೇಶಮಾತ್ರವೂ ಈ ಮಾತು ಹೇಳುವಾಗ ನನಗೆ

ಜ್ಞಾಪಕಕ್ಕೆ ಬರಲಿಲ್ಲ. ಮುಂದೆ ನನ್ನ ಮಾತಿನ ಪ್ರಭಾವ ಅರಿವಾದಾಗ ನಾನು ಹಾಗೆ ಮಾತನಾಡಿದುದು ತಪ್ಪೆಂದೆನಿಸಿತು.

ನೊಂದು ನುಡಿದರು ಸದಾಶಿವರಾಯರು:—

"ಈ ಒಂದು ವಿಷಯದಲ್ಲಿ ನಮ್ಮಿಬ್ಬರದೂ ಒಂದೇ ಚಿಂತೆ. ಯಾರದೂ ಅಂತೀರಿ—ಅದೇ ತಾರಿಣಿಯದು—ಆದರೂ ನಿಮ್ಮದೇ ಬೇರೆಯ ತರಹದ ಚಿಂತೆ; ನನ್ನದೇ ಬೇರೆಯ ತರಹದ್ದು. ನಿಮ್ಮ ಚಿಂತೆ ಬೇಗನೆ ನಿವಾರಿಸಲು ಸಾಧ್ಯ. ಆದರೆ ನನ್ನದು........ಕಳೆಯಲು ಅವನೇ ಇಳಿದು ಬರಬೇಕು ಕೈಲಾಸದಿಂದ." ನಾನು ಮಾತನಾಡಲಿಲ್ಲ. ಅವರೇ ಮುಂದುವರೆಸಿದರು.

"ನೋಡಿ, ಈವರೆಗೆ ತಾರಿಣಿಯ ವಿಷಯದಲ್ಲಿ ಬಚ್ಚಿಟ್ಟ ಸಂಗತಿಯೊಂದನ್ನು ಈಗ ಹೇಳುತ್ತಿದ್ದೇನೆ. ತಾರಿಣಿಯು ನಮ್ಮ ಹೊಟ್ಟೆಯಲ್ಲಿಯೇ ಹುಟ್ಟಬಾರದಿತ್ತು ಎಂದೆನಿಸುತ್ತದೆ, ಅವಳ ದುಃಖ ನೆನೆದರೆ. ಅವಳ ಹಣೆಯ ಬರಹ ಮೊದಲಿನಿಂದಲೂ ಖೊಡಿ. ನೋಡಿ! ಅವಳ ಅಜ್ಜ ಅಜ್ಜಿಯರ ಬಲವಂತಕ್ಕೆ ಅವಳ ಮದುವೆಯನ್ನು ಹತ್ತನೇ ವಯಸ್ಸಿನಲ್ಲಿಯೇ ಮಾಡಿ ಮುಗಿಸಿದೆ—ಹಾಗೆಯೇ ಅವಳ ತಲೆಯ ಮೇಲೆ ಬಂಡೆ ಎಳೆದೆ—ಇದೇ ಕೈಗಳಿಂದ. ತಾರಿಣಿಯ ಗಂಡನೆಂಬುವನು—ತಾರಿಣಿಯು ಇನ್ನೂ 'ಪರಕಾರ'ದ ಹುಡುಗಿಯಾಗಿರುವಾಗಲೇ—ತೀರಿಕೊಂಡು ತಾರಿಣಿಯ ಶತ್ರುವಾಗಿ ಪರಿಣಮಿಸಿದ. ಮುಂದೆಲ್ಲಾ ಅವಳ ಸುಖಕ್ಕೆ ಕಂಟಕಸ್ವರೂಪನಾದ. ಅವನು ಸತ್ತು ಅವಳ ಹಣೆಯ ಮೇಲೆ ವಿಧವೆ ಎಂದು ಬರೆದ—ಹಾಳು ವಿಧಿಯಿಂದ ಬರೆಸಿದ! ಏನೂ ಅರಿಯದ ಕಂದಮ್ಮನ ಬಾಳನ್ನು ನಾವಾಗಿ ನಾವೇ ಮಣ್ಣುಗೂಡಿಸಿದೆವು. ಇದಕ್ಕಾಗಿ ನಾವು ಪಡುವ ದುಃಖಕ್ಕೆ ಕೊನೆ ಮೊದಲಿಲ್ಲ. ಆದರೆ ಯಾರೇನು ಮಾಡಿಯಾರು? ಎಲ್ಲಾ ನಮ್ಮ ಪಾಪದ ಫಲ. ಆ ಕೂಸು ಉಣ್ಣುತ್ತಿದೆ........ಹಾಗೆಂದು ಸುಮ್ಮನೆ ನೋಡಿಕೊಂಡು ಕೂತಿರಲು ನನಗಾಗದು. ಅವಳ ವಿಷಯವನ್ನು ನೆನೆದಾಗ—ಹೃದಯ 'ಭಗ್' ಎಂದು ಹತ್ತಿಕೊಳ್ಳುತ್ತಿದೆ. ಕಣ್ಣೀರಿನ ಕೋಡಿ

ಹರಿಯುತ್ತದೆ. ಮೈ ಕಾದು ಕೆಂಡವಾಗುತ್ತದೆ. ಆದರೂ ನಾನೇನು ಮಾಡಿಯೇನು? ಅಂದು ಅವಳ ತಲೆಯಮೇಲೆ ಬಂಡೆ ಎಳೆದ ಕೈಯ್ಯೇ ಇಂದೂ ಉಳಿದಿದೆ. ಅದರ ಪರಿಹಾರವೆಂದು ಏನೂ ಮಾಡದಾಗಿದೆ.

ಒಮ್ಮೆ ನನಗೆ ಅನಿಸುತ್ತದೆ—ನಮ್ಮ ತಾರಿಣಿಗೆ ಮದುವೆಯೇ ಆಗಿಲ್ಲ. ಆಗಿದೆ ಎಂದು ಜನ ಆಡಿಕೊಳ್ಳುವುದು ಬರಿ ಸುಳ್ಳು. ಹೊಟ್ಟೆಯ ಉರಿಯಿಂದ ಜನರಾಡಿಕೊಳ್ಳುವ ಮಾತು—ಎಂದು. ಆ ಹೊತ್ತಿನಲ್ಲಿ ನನಗೆ ಯಾವುದೊ ಅಪೂರ್ವ ಸಂತೋಷವಾಗುತ್ತದೆ. ಆ ಸಂತೋಷದ ಭರದಲ್ಲಿ ತಾರಿಣಿಯನ್ನು ಅಪ್ಪಿ—ನೀನಿನ್ನು ಸಧವೆ! ಮದುವೆಯಾಗದವಳು! ಎಂದು ಹೇಳಬೇಕೆನಿಸುತ್ತದೆ. ಆದರೆ ಹೀಗೆ ಹೇಳ ಹೋದಾಗ ನಾಲಿಗೆಯೇ ಏಳದಾಗುತ್ತದೆ. ಎಲ್ಲಿಂದಲೋ ಒಂದು ಕೂಗು ಕೇಳ ಬರುತ್ತದೆ. ಅದೋ ಕರ್ಕಶದನಿಯಲ್ಲಿ "ಆಗದು, ಅದಾಗದು, ತಾರಿಣಿಯು ವಿಧವೆ, ಬಾಲವಿಧವೆ" ಎಂದು. ಅದನ್ನು ಕೇಳಿ ನನ್ನೆಲ್ಲಾ ಸಂತೋಷ, ಧೈರ್ಯ ಎಲ್ಲಿ ಅಡಗುವುದೊ ನಾನರಿಯೆ. ಮತ್ತೆ ಆ ವಿಷಯ ನನ್ನನ್ನು ದುಃಖದ ಕಡಾಯಿಗೆ ಎಸೆಯುತ್ತದೆ. ಆ ದುಃಖದ ಬಿಸಿಯಲ್ಲಿ ಬೆಂದು ಬೇಯುತ್ತಿದ್ದೇನೆ........

ಇಂದಿಗೆ ಇಂತಹದೆಷ್ಟೊ ಬಾರಿ ಈ ದುಃಖದ ಕಡಾಯಲ್ಲಿ ಬೆಂದಿರುವುದು!

ಇನ್ನು ಪರಿಹಾರದ ಮಾತು! ಅದನ್ನು ತಿಳಿದೂ, ತಿಳಿದೂ, ಮಾಡುವ ಚೈತನ್ಯವಿಲ್ಲದೆ ಸುಮ್ಮನೆ ಕುಳಿತಿರುವುದಾಗಿದೆ. ಎಷ್ಟೋ ವೇಳೆ ನನಗೆ ನಾನೇ ಅಂದುಕೊಳ್ಳುತ್ತೇನೆ—ಅದೇಕೆ ನನಗೆ ಚೈತನ್ಯವಿಲ್ಲ. ಅದೇಕೆ ಪರಿಹಾರ ನನ್ನಿಂದಾಗದ ಮಾತು! ಎಂದು. ಆ ಸಮಯದಲ್ಲಿ ಮನಸ್ಸಿಗೆ ಇಲ್ಲದ ಧೈರ್ಯ—ನಂಬಿಕೆ ಕೂಡಿಬರುತ್ತದೆ. ಆ ಸಮಯದಲ್ಲಿ ಯಾರೊಬ್ಬ ವರನನ್ನಾದರೂ ಕರೆದು ತಾರಿಣಿಗೆ ಮದುವೆಮಾಡಬೇಕೆಂದೆನಿಸುತ್ತದೆ. ಮದುವೆ ಮಾಡಬೇಕು ನಿಜ. ಆದರೆ—ಮದುವೆ ಮಾಡುವ ಬಗೆ?—ಎಲ್ಲಿಂದ ತರಲಿ ತಾರಿಣಿಗಾಗಿ ವರ; ತಾರಿಣಿಯನ್ನು ಒಪ್ಪುವ

ವರ. ನನ್ನೆಲ್ಲಾ ಬಾಳನ್ನು ಅದಕ್ಕಾಗಿ—ವರಾನ್ವೇಷಣಕ್ಕಾಗಿ ಸವೆಸಿದ್ದೇನೆ. ಆದರೂ ಯಾರೊಬ್ಬರೂ ನನ್ನ ಕಣ್ಣಿಗೆ ಬೀಳರು...............
ಈಗ ಕೆಲವು ತಿಂಗಳುಗಳಿಂದೀಚೆಗೆ ಮನಸ್ಸು ಸಂಚುಮಾಡುತ್ತಿದೆ—ತಾರಿಣಿಯನ್ನು ಮುದಿಗೂಬೆಯೊಂದಕ್ಕೆ ಆಹುತಿಮಾಡಬೇಕೆಂದು. ಆದರೆ ಅದೇ ಮನಸ್ಸು, ಅದೇ ಘಳಿಗೆಯಲ್ಲೇ ಮಾರ್ನುಡಿಯುತ್ತದೆ.

"ತಾರಿಣಿಯನ್ನು ಅವನಿಗೆ ಬಲಿಕೊಡುವ ಬದಲು, ಮನೆಯಲ್ಲಿಯೇ ಉಳಿಸಿರಿ. ನೀವು ತಾರಿಣಿಯನ್ನು ಈ ಮದುವೆಗೆ ಬಲವಂತಪಡಿಸಿದರೆ ಅವಳು ನಿಮ್ಮ ಕೈಗೆ ಸಿಕ್ಕದೇ ಹೋದಾಳು!" ಎಂದು.

"ಅದಕ್ಕಾಗಿಯೇ ನಾನು—ಅವನು ಹತ್ತು ಬಾರಿ ಬಂದು ಹೋದರೂ ಏನೊಂದು ನಿರ್ಧಾರವನ್ನೂ ಹೇಳಿಲ್ಲ. ಅವನು ಬಂದು ಕೇಳಿದಾಗಲೆಲ್ಲಾ 'ಮುಂದೆ ಯೋಚಿಸಿ ಹೇಳುವೆ' ಎಂದು ಕಾಲ ನೂಕುತ್ತಾ ಬರುತ್ತಿದ್ದೇನೆ.

"ನನಗಿನ್ನೂ ಭರವಸೆ ಇದೆ. ಯಾವನೋ ಒಬ್ಬ ದೇವತೆ ತಾರಿಣಿಗಾಗಿ ಅವತರಿಸುವನೆಂದು: ವರನಾಗಿ ವರಿಸುವನೆಂದು. ಅವನಾರು? ಎಲ್ಲಿಯವನೆಂದು ಯಾವುದೂ ತಿಳಿಯದು. ಆದರೂ ಆಸೆಯು ಬಿಟ್ಟಿಲ್ಲ, ತಾರಿಣಿಗಾಗಿ ಆ ವರದೇವತೆಯು ಅವತರಿಸುವನೆಂಬ ಆಶೆಯು ಬಿಟ್ಟಿಲ್ಲ. ಆ ಕಾಣದ ವರನಿಗಾಗಿ ಕಾದು ಕುಳಿತಿದ್ದೇನೆ. ಸದಾ ಅವನಿಗಾಗಿ ಎದುರು ನೋಡುತ್ತಿದ್ದೇನೆ. ಯಾವಾಗಲೂ ಅವನ ಬಗ್ಗೆ ಚಿಂತಿಸುತ್ತಿದ್ದೇನೆ. ಅವನು ಎಂದು ಬರುವನೊ, ನನಗೆ ತಿಳಿಯದು, ಆದರೂ ಕಾಯುತ್ತಿದ್ದೇನೆ— ಅವನಿಗಾಗಿ ಕಾಯುತ್ತಿದ್ದೇನೆ........"

"ಸದಾಶಿವರಾಯರು ಮಾತು ಮುಗಿಸಿ ಕಣ್ಣೀರನ್ನು ಒರೆಸಿಕೊಂಡರು. ಅವರು ಅಂದ ಆ ನುಡಿ—ಅವನಿಗಾಗಿ ಕಾಯುತ್ತಿದ್ದೇನೆ ಎಂಬುದು ಕಿವಿಯಲ್ಲಿ ಇನ್ನೂ ಮಾರ್ದನಿಗೊಡುತ್ತಲೇ ಇತ್ತು. ಈ ವರೆಗೂ ಮೌನವಾಗಿ ಮೊದಲಿನಿಂದ ಕಡೆಯತನಕ ಕೇಳುತ್ತ ಕುಳಿತಿದ್ದ ನನಗೆ—ಇನ್ನೂ ಹಾಗೆಯೇ ಕುಳಿತಿರುವುದು ದುಸ್ಸಹವಾಯಿತು. ಮೌನ ಒಡೆದು ನುಡಿದೆ.

“ನಿಮ್ಮ ದುಃಖ ಕಲ್ಪನಾತೀತವಾದುದು. ಕಲ್ಲುಕಣ್ಣೀರಿಡಿಸುವಂತಹದು! ಎಂದಮೇಲೆ ಅದನ್ನು ಕೇಳಿ ಅದರ ಹುಚ್ಚುಹೊಳೆಯಲ್ಲಿ ಮುಳುಗಿ ಏಳದವರಾರು? ನನಗೆ ಎನಿಸುತ್ತದೆ. ನಿಮ್ಮ ದುಃಖದ ಅವಧಿ ತುತ್ತತುದಿ ಮುಟ್ಟಿರಬೇಕೆಂದು—ನಿಮ್ಮ ಪ್ರಾರ್ಥನೆ ದೇವರಿಗೆ ಸೇರಿದೆ ಎಂದು ....ಇನ್ನು ನೀವು ಸಮಾಧಾನ ತಾಳಿ. ನಾನು ನನ್ನ ಕೈಲಾದಮಟ್ಟಿಗೂ ನಿಮ್ಮ ದುಃಖಶಮನ ಮಾಡಲು ಯತ್ನಿಸುತ್ತೇನೆ. ಇದಕ್ಕೆ ಒಂದು ಕೊನೆ ಕಾಣಿಸಲು ಯತ್ನಿಸುತ್ತೇನೆ.”

“ಹಾಂ” ಎಚ್ಚತ್ತು ನುಡಿದರು.

“ಏನಾದರೂ ಮಾಡಿ ನಿಮ್ಮ ಈ ದಾರುಣವೇದನೆಗೆ ಕೊನೆ ಮುಟ್ಟಿಸುತ್ತೇನೆ.”

“ನಿಜವೆ?”

“ದೈವದಾಣೆಗೂ ಸತ್ಯ. ಇನ್ನೊಂದು ತಿಂಗಳಲ್ಲಿಯೇ ಇದೇ ಪಾಪದ ಕೂಸು ತಾರಿಣಿಯು ನಿಮ್ಮ ಕಣ್ಣುಗಳ ಮುಂದೆಯೇ ಮಂಗಳಾಂಗಿಯಾಗುವುದನ್ನು ನೋಡುವಿರಿ.” “ಮತ್ತೊಮ್ಮೆ ಹೇಳಿ, ಮತ್ತೊಮ್ಮೆ ಹೇಳಿ” ಆ ಮಾತು ಉದ್ವೇಗದಲ್ಲಿ ನುಡಿದರು. “ಖಂಡಿತವಾಗಿಯೂ, ಅದಕ್ಕಾಗಿ ನನ್ನೆಲ್ಲಾ ತನುಮನಧನ ಅರ್ಪಿಸುತ್ತೇನೆ” ನನ್ನ ಮಾತನ್ನು ಅವರು ನಂಬದಾದರು. ತಾವು ಕನಸಿನಲ್ಲಿ ಕೇಳುತ್ತಿರಬೇಕೆಂದು ಅವರಿಗೆ ಭಾಸವಾಯಿತು. ತಮ್ಮ ಆಸನದಿಂದ ಎದ್ದು ನನ್ನ ಕೈಹಿಡಿದುಕೊಂಡರು. ಪ್ರೀತಿಯಿಂದ ನೇವರಿಸಿದರು. ತಂದೆ ಮಗನ ಕೈ ನೇವರಿಸುವಂತೆ. ಉನ್ಮಾದದಲ್ಲಿ ಮತ್ತೆ ನುಡಿದರು. “ಮಗು. ಆ ಮಾತನ್ನು ಇನ್ನೊಮ್ಮೆಯಾಡು.” ಎಂದು ಒರಲಿದರು. ನನಗೆ ಅವರು ಉನ್ಮತ್ತರಂತೆ ತೋರಿದರು. ಆದರೆ ಅವರು ನನ್ನನ್ನು ನೇವರಿಸಿದ ಮೇಲೆ ಶಾಂತರಾಗಿ ಎದ್ದು ತಮ್ಮ ಆಸನದಲ್ಲಿ ಕೂತರು. ಅವರ ಬಾಯಿಂದ ಮುಂದೇನೂ ಮಾತು ಹೊರಡಲಿಲ್ಲ. ಕಣ್ಣುಗಳಲ್ಲಿ ಆನಂದ ಬಾಷ್ಪಗಳನ್ನು ಸುರಿಸುತ್ತಿದ್ದರು. ಆಗಲೇ ತಾರಿಣಿ ಮತ್ತು ವಿಶಾಲಿಯರು ಕೊಠಡಿಯ

ಒಳಗೆ ಪ್ರವೇಶಿಸಿದರು. ಸದಾಶಿವರಾಯರು ತಾರಿಣಿಯನ್ನು ಕಂಡೊಡನೆಯೇ ಎದ್ದು ಅವಳನ್ನು ಬಳಿಗೆ ಎಳೆದುಕೊಂಡು "ಮಗುವೇ ಇಂದಿಗೆ ನಿನ್ನ ಅನಿಷ್ಟ ಕಳೆಯಿತಮ್ಮಾ" ಎಂದು ತಲೆದಡವಿದರು. ತಾರಿಣಿಗೆ ನಡೆದ ಒಂದು ಸಂಗತಿಯೂ ತಿಳಿಯದುದರಿಂದ ತಂದೆಯ ಮಾತು ಏನೂ ಅರ್ಥವಾಗಲಿಲ್ಲ. ಆಗಾಗ್ಗೆ ತಂದೆಯುವರು ಇದೇ ರೀತಿಯಲ್ಲಿ ಉನ್ಮತ್ತರಂತೆ ಆಡುವುದನ್ನು ತಿಳಿದಿದ್ದರಿಂದ—ಈಗಲೂ ಅವರು ಅಂತಹ ಉನ್ಮತ್ತತೆಯಲ್ಲಿ ಇರುವರೆಂದು ಊಹಿಸಿ ತಿಳಿದು,

"ಇರಲಿ ಅಣ್ಣಾ........ಇವರಿಗೆ ಒಂದಿಷ್ಟು 'ಅಡ್ಯರ್' ತೋರಿಸಿ ಬರುತ್ತೇನ್ಪೆ. ನಾಳೆ ಊರಿಗೆ ಹೊರಡುವರು. ಅದೇನು ನೋಡಬೇಕೋ ಅದೆಲ್ಲಾ ನೋಡಿ ಮುಗಿಸಬೇಕಂತೆ!" ಎಂದಳು.

ತಂದೆ ಮಗಳ ಕಡೆ ನೋಡಿ, ನನ್ನ ಕಡೆ ನೋಡಿದರು. ಅದೇನು ಕಂಡರೋ ಕಾಣೆ........"ಹೂಂ ಹೋಗಿ ಬನ್ನಿ." ಎಂದೆನ್ನುತ್ತಾ ನನ್ನ ಕಡೆ ನೋಡಿ "ನನ್ನ ಎಲ್ಲಾ ವಿಷಯ ನಿಮಗೆ ಬೇಸರ ಹಿಡಿಸಿರಬಹುದು. ನೀವು ಖಂಡಿತವಾಗಿ ಹೋಗಿ ಬನ್ನಿ" ಎಂದು ನನ್ನನ್ನು ಹೋಗಗೊಟ್ಟರು. ನಾವು ಹೊರಗೆ ಹೊರಟಾಗ ಅವರು ಅಡುಗೆಯ ಮನೆಯ ಕಡೆ ನುಗ್ಗಿದರು ನಡೆದ ಎಲ್ಲಾ—ಸಂತೋಷದ—ಸಂಗತಿಯನ್ನು ತಮ್ಮಾಕೆಗೆ ಅರುಹಲೆಂದೋ ಏನೊ!

ನನಗೆ ಈವರೆಗೂ ಅವರ ಎಲ್ಲಾ ಮಾತು ಕೇಳಿ ಮನಸ್ಸಿಗೆ ಒಂದು ತರಹ ಮಂಕು ಹಿಡಿದಿತ್ತು. ಹೊರಗಿನ ವಾತಾವರಣ ಬೇಕೆನಿಸಿತ್ತು. ಇಂತಹ ಸನ್ನಿವೇಶದಲ್ಲಿಯೇ 'ಅಡ್ಯಾರಿ'ಗೆ ಹೋಗುವ ಸಂದರ್ಭ ಒದಗಿ ಬಂದಮೇಲೆ ಕೇಳುವುದೇನಿದೆ? ಎದ್ದು ಹೊರಟೆ.

ಮೂವರೂ ಬಸ್ಸು ಹತ್ತಿ ಬಿಸಿಲು ನೆತ್ತಿಯವರೆಗೆ ಬಂದಾಗ ಅಡ್ಯಾರ್ ತಲುಪಿದೆವು. 'ಅಡ್ಯಾರಿ'ನ ಪ್ರಸಿದ್ಧಿ ಅಲ್ಲಿ ಅನಿಬೆಸೆಂಟರು ಸ್ಥಾಪಿಸಿರುವ ಥಿಯಾಸಾಫಿ ದರ್ಶನದ ಕೇಂದ್ರ ಕಛೇರಿ ಇರುವುದರಿಂದ. ಈ ಥಿಯಾಸಫಿಯ ಕಾರ್ಯಾಲಯವು ಸುತ್ತೆಲ್ಲಾ ಇರುವ ಗಿಡಮರಗಳ ಮಧ್ಯೆ ಇರುವ ಆಶ್ರಮದಂತೆ ಕಾಣುತ್ತದೆ.

"ನಿಮ್ಮ ದುಃಖ ಕಲ್ಪನಾತೀತವಾದುದು. ಕಲ್ಲುಕಣ್ಣೀರಿಡಿಸು ವಂತಹದು! ಎಂದಮೇಲೆ ಅದನ್ನು ಕೇಳಿ ಅದರ ಹುಚ್ಚುಹೊಳೆಯಲ್ಲಿ ಮುಳುಗಿ ಏಳದವರಾರು? ನನಗೆ ಎನಿಸುತ್ತದೆ. ನಿಮ್ಮ ದುಃಖದ ಅವಧಿ ತುತ್ತುತುದಿ ಮುಟ್ಟಿರಬೇಕೆಂದು—ನಿಮ್ಮ ಪ್ರಾರ್ಥನೆ ದೇವರಿಗೆ ಸೇರಿದೆ ಎಂದು ....ಇನ್ನು ನೀವು ಸಮಾಧಾನ ತಾಳಿ. ನಾನು ನನ್ನ ಕೈಲಾದಮಟ್ಟಿಗೂ ನಿಮ್ಮ ದುಃಖಶಮನ ಮಾಡಲು ಯತ್ನಿಸುತ್ತೇನೆ. ಇದಕ್ಕೆ ಒಂದು ಕೊನೆ ಕಾಣಿಸಲು ಯತ್ನಿಸುತ್ತೇನೆ."

"ಹಾಂ" ಎಚ್ಚತ್ತು ನುಡಿದರು.

"ಏನಾದರೂ ಮಾಡಿ ನಿಮ್ಮ ಈ ದಾರುಣವೇದನೆಗೆ ಕೊನೆ ಮುಟ್ಟಿಸುತ್ತೇನೆ."

"ನಿಜವೆ?"

"ದೈವದಾಣೆಗೂ ಸತ್ಯ. ಇನ್ನೊಂದು ತಿಂಗಳಲ್ಲಿಯೇ ಇದೇ ಪಾಪದ ಕೂಸು ತಾರಿಣಿಯು ನಿಮ್ಮ ಕಣ್ಣುಗಳ ಮುಂದೆಯೇ ಮಂಗಳಾಂಗಿಯಾಗುವುದನ್ನು ನೋಡುವಿರಿ." "ಮತ್ತೊಮ್ಮೆ ಹೇಳಿ, ಮತ್ತೊಮ್ಮೆ ಹೇಳಿ" ಆ ಮಾತು ಉದ್ವೇಗದಲ್ಲಿ ನುಡಿದರು. "ಖಂಡಿತ ವಾಗಿಯೂ, ಅದಕ್ಕಾಗಿ ನನ್ನೆಲ್ಲಾ ತನುಮನಧನ ಅರ್ಪಿಸುತ್ತೇನೆ" ನನ್ನ ಮಾತನ್ನು ಅವರು ನಂಬಡಾದರು. ತಾವು ಕನಸಿನಲ್ಲಿ ಕೇಳುತ್ತಿರ ಬೇಕೆಂದು ಅವರಿಗೆ ಭಾಸವಾಯಿತು. ತಮ್ಮ ಆಸನದಿಂದ ಎದ್ದು ನನ್ನ ಕೈಹಿಡಿದುಕೊಂಡರು. ಪ್ರೀತಿಯಿಂದ ನೇವರಿಸಿದರು. ತಂದೆ ಮಗನ ಕೈ ನೇವರಿಸುವಂತೆ. ಉನ್ಮಾದದಲ್ಲಿ ಮತ್ತೆ ನುಡಿದರು. "ಮಗು. ಆ ಮಾತನ್ನು ಇನ್ನೊಮ್ಮೆಯಾಡು." ಎಂದು ಒರಲಿದರು. ನನಗೆ ಅವರು ಉನ್ಮತ್ತರಂತೆ ತೋರಿದರು. ಆದರೆ ಅವರು ನನ್ನನ್ನು ನೇವರಿಸಿದ ಮೇಲೆ ಶಾಂತರಾಗಿ ಎದ್ದು ತಮ್ಮ ಆಸನದಲ್ಲಿ ಕೂತರು. ಅವರ ಬಾಯಿಂದ ಮುಂದೇನೂ ಮಾತು ಹೊರಡಲಿಲ್ಲ. ಕಣ್ಣುಗಳಲ್ಲಿ ಆನಂದ ಬಾಷ್ಪಗಳನ್ನು ಸುರಿಸುತ್ತಿದ್ದರು. ಆಗಲೇ ತಾರಿಣಿ ಮತ್ತು ವಿಶಾಲಿಯರು ಕೊಠಡಿಯ

ಒಳಗೆ ಪ್ರವೇಶಿಸಿದರು. ಸದಾಶಿವರಾಯರು ತಾರಿಣಿಯನ್ನು ಕಂಡೊಡನೆಯೇ ಎದ್ದು ಅವಳನ್ನು ಬಳಿಗೆ ಎಳೆದುಕೊಂಡು "ಮಗುವೇ ಇಂದಿಗೆ ನಿನ್ನ ಅನಿಷ್ಟ ಕಳೆಯಿತಮ್ಮಾ" ಎಂದು ತಲೆದಡವಿದರು. ತಾರಿಣಿಗೆ ನಡೆದ ಒಂದು ಸಂಗತಿಯೂ ತಿಳಿಯದುದರಿಂದ ತಂದೆಯ ಮಾತು ಏನೂ ಅರ್ಥವಾಗಲಿಲ್ಲ. ಆಗಾಗ್ಗೆ ತಂದೆಯುವರು ಇದೇ ರೀತಿಯಲ್ಲಿ ಉನ್ಮತ್ತರಂತೆ ಆಡುವುದನ್ನು ತಿಳಿದಿದ್ದರಿಂದ—ಈಗಲೂ ಅವರು ಅಂತಹ ಉನ್ಮತ್ತತೆಯಲ್ಲಿ ಇರುವರೆಂದು ಊಹಿಸಿ ತಿಳಿದು,

"ಇರಲಿ ಅಣ್ಣ........ಇವರಿಗೆ ಒಂದಿಷ್ಟು 'ಅಡ್ಯರ್' ತೋರಿಸಿ ಬರುತ್ತೇನ್ನೆ. ನಾಳೆ ಊರಿಗೆ ಹೊರಡುವರು. ಅದೇನು ನೋಡಬೇಕೋ ಅದೆಲ್ಲಾ ನೋಡಿ ಮುಗಿಸಬೇಕಂತೆ!" ಎಂದಳು.

ತಂದೆ ಮಗಳ ಕಡೆ ನೋಡಿ. ನನ್ನ ಕಡೆ ನೋಡಿದರು. ಅದೇನು ಕಂಡರೋ ಕಾಣೆ........"ಹೂಂ ಹೋಗಿ ಬನ್ನಿ." ಎಂದೆನ್ನುತ್ತಾ ನನ್ನ ಕಡೆ ನೋಡಿ "ನನ್ನ ಎಲ್ಲಾ ವಿಷಯ ನಿಮಗೆ ಬೇಸರ ಹಿಡಿಸಿರಬಹುದು. ನೀವು ಖಂಡಿತವಾಗಿ ಹೋಗಿ ಬನ್ನಿ" ಎಂದು ನನ್ನನ್ನು ಹೋಗಗೊಟ್ಟರು. ನಾವು ಹೊರಗೆ ಹೊರಟಾಗ ಅವರು ಅಡುಗೆಯ ಮನೆಯ ಕಡೆ ನುಗ್ಗಿದರು ನಡೆದ ಎಲ್ಲಾ— ಸಂತೋಷದ— ಸಂಗತಿಯನ್ನು ತಮ್ಮಾಕೆಗೆ ಅರುಹಲೆಂದೋ ಏನೊ!

ನನಗೆ ಈವರೆಗೂ ಅವರ ಎಲ್ಲಾ ಮಾತು ಕೇಳಿ ಮನಸ್ಸಿಗೆ ಒಂದು ತರಹ ಮಂಕು ಹಿಡಿದಿತ್ತು. ಹೊರಗಿನ ವಾತಾವರಣ ಬೇಕೆನಿಸಿತ್ತು. ಇಂತಹ ಸನ್ನಿವೇಶದಲ್ಲಿಯೇ 'ಅಡ್ಯಾರ್'ಗೆ ಹೋಗುವ ಸಂದರ್ಭ ಒದಗಿ ಬಂದಮೇಲೆ ಕೇಳುವುದೇನಿದೆ? ಎದ್ದು ಹೊರಟೆ.

ಮೂವರೂ ಬಸ್ಸು ಹತ್ತಿ ಬಿಸಿಲು ನೆತ್ತಿಯವರೆಗೆ ಬಂದಾಗ ಅಡ್ಯಾರ್ ತಲುಪಿದೆವು. 'ಅಡ್ಯಾರ್'ನ ಪ್ರಸಿದ್ಧಿ ಅಲ್ಲಿ ಅನಿಬೆಸೆಂಟರು ಸ್ಥಾಪಿಸಿರುವ ಥಿಯಾಸಾಫಿ ದರ್ಶನದ ಕೇಂದ್ರ ಕಛೇರಿ ಇರುವುದರಿಂದ. ಈ ಥಿಯಾಸಫಿಯ ಕಾರ್ಯಾಲಯು ಸುತ್ತೆಲ್ಲಾ ಇರುವ ಗಿಡಮರಗಳ ಮಧ್ಯೆ ಇರುವ ಆಶ್ರಮದಂತೆ ಕಾಣುತ್ತದೆ.

ಸುತ್ತಲೂ ಬೆಳೆದು ನಿಂತ ತೆಂಗಿನ ಮತ್ತು ಅಡಕೆಯ ಮರಗಳು. ಅಲ್ಲದೆ ಇತರ ಜಾತಿಯ ಮರಗಳು— ಇವುಗಳ ಮಧ್ಯೆಯೇ ಕಾರ್ಯಾಲಯ, ಅದಕ್ಕೆ ಸೇರಿಕೊಂಡಿರುವಂತೆ ಇತರ ಗೃಹಗಳು.

ಒಂದು ಗೃಹದಲ್ಲಿ ಕಪಾಟುಗಳ ತುಂಬಾ ಪುಸ್ತಕಗಳನ್ನು ಅಡಕಿದ್ದಾರೆ. ಥಿಯಾಸಫಿ ದರ್ಶನದ ಬಗ್ಗೆ ಇರುವ ಎಲ್ಲಾ ಸಾಹಿತ್ಯ ಶೇಕರಿಸಿದ್ದಾರೆ.

ಅಡ್ಯಾರಿನಲ್ಲಿ ನಮ್ಮ ಸಮ್ಮೇಳನ ನಡೆದ ದಿನವೇ ಅಲ್ಲಿ ಒಂದು ಸಮ್ಮೇಳನ (Convention) ನಡೆಯಿತು. ಇದಕ್ಕೆ ದೇಶ-ವಿದೇಶಗಳಿಂದ ಪ್ರತಿನಿಧಿಗಳು ಬಂದಿದ್ದರು. ಇಲ್ಲಿಯ ಕಾರ್ಯಕಲಾಪಗಳು ನಾವು ಹೋಗುವ ಹೊತ್ತಿನಲ್ಲಿ ಮುಗಿದುಹೋಗಿದ್ದವು. ಬಂದಿದ್ದವರೆಲ್ಲಾ ಒಬ್ಬೊಬ್ಬರಂತೆ ತಮ್ಮ ತಮ್ಮ ಊರುಗಳಿಗೆ ಹೊರಟಿದ್ದರು. ಎಲ್ಲೋ ಕೆಲವು ತೀವ್ರ ಅಭಿಮಾನವರ್ಗಕ್ಕೆ ಸೇರಿದವರು ಇನ್ನೂ ಅಲ್ಲಿಯೇ ಇದ್ದರು. ಅಲ್ಲಿನ ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ತಿಳಿದು ಮರಳಲು. ಸಮ್ಮೇಳನ ಆ ಆಲದ ಮರದ ಅಡಿಯಲ್ಲಿ ನಡೆಯಿತಂತೆ. ಆ ಆಲದ ಮರವೋ ಅದೊಂದು ಪುರಾತನ ಮರ. ಅದರ ಬಿಳಲು ಒಂದೊಂದೂ ನೆಲಕ್ಕೆ ತಾಕಿಕೊಂಡು, ಒಂದೊಂದು ಕಂಬಗಳನ್ನಾಗಿ ಮಾಡಿದೆ. ನೋಡಿದರೆ ಯಾವುದು ಖಾಂಡ, ಯಾವುದು ಬಿಳಲು ಎಂದು ಪತ್ತೆ ಹಚ್ಚಲಾಗುವುದಿಲ್ಲ. ಎಲ್ಲಾ ಒಂದೇ ತರಹೆ ಇದೆ. ಈ ಬಿಳಲುಗಳು ಸುಮಾರು ನಲವತ್ತಕ್ಕಿಂತಲೂ ಹೆಚ್ಚಿರಬೇಕು. ಇವುಗಳ ಮಧ್ಯೆ ಜನ ನುಸುಳಿಕೊಂಡು ಹೋಗಿ ಬಂದು ಮಾಡಬಹುದು. ಅಡ್ಯಾರಿನಲ್ಲಿ ಈ ಮರದ ಸಿದ್ಧಿ ಬಹಳ.

ತಾರಿಣಿ ಎಲ್ಲವನ್ನೂ ನೋಡಗೊಟ್ಟಮೇಲೆ "ಇಲ್ಲಿಯೊಂದು ಬೀಚ್ ಇದೆ. ದೋಣಿಗಳಲ್ಲಿ ಜನ ಕೂತು ಸಂಚಾರ ಮಾಡಲು ಅನುಕೂಲವಾಗಿದೆ. ಅದಕ್ಕಾಗಿಯೇ ಬಹಳ ಜನ ಈ ಬೀಚಿಗೆ ಬರುವುದು." ಎಂದು ಸುದ್ದಿ ಇತ್ತಳು. ನಾವು ಮೂವರೂ ಬೀಚಿಗೆ ಹೊರಟೆವು. ಆಗತಾನೆ

ಮರಳು ಕಾದಿತ್ತು. ಹೊತ್ತು ಹನ್ನೊಂದು ಮೀರಿತ್ತು. ಆಗಲೇ ನನ್ನಂತಹ ಹತ್ತಾರು ಪ್ರವಾಸಿಕರು ತಮ್ಮ ನೌಕಾ ವಿಹಾರವನ್ನು ತೀರಿಸಿ ಕೊಂಡು ಬರುತ್ತಿದ್ದರು. ಇನ್ನು ಕೆಲವರು ಈಗತಾನೇ ಹೊರಡುತ್ತಿದ್ದರು.

ಕೆಲವು ಜನ ಅಂಬಿಗರು ದೋಣಿಗಳನ್ನು ದಡ ಮುಟ್ಟಿಸಿ, ತಮ್ಮ ಆ ದಿನದ ವರಮಾನ ಎಣಿಸತೊಡಗಿದ್ದರು, ಮನೆಗೆ ಹೊರಡಲು ಆತುರ ರಾಗಿ. ಮತ್ತೆ ಕೆಲವು ಅಂಬಿಗರು ಆದ ಸಂಪಾದನೆಯೂ ಸಾಲದೆಂದು ಬರುವ ಇತರ ಯಾತ್ರಿಕರಿಗಾಗಿ ಕಾಯುತ್ತ ಕುಳಿತಿದ್ದರು, ಹುಟ್ಟು ಕೆಳಗಿಟ್ಟು ದೋಣಿಯಲ್ಲಿ ಕುಳಿತು, ದೋಣಿಯನ್ನು ಕಾಣುತ್ತಾ. ವಿಶಾಲಿ ಎಂದಳು ತಾರಿಣಿಗೆ, "ನೀನು ಎಂದಾದರೂ ದೋಣಿಯಲ್ಲಿ ಕುಳಿತಿರುವಿ ಯೇನು?"

"ಅನೇಕ ಸಾರಿ. ನೀನು"

"ಇಲ್ಲಮ್ಮಾ ನನಗೆ ಇದುವರೆವಿಗೂ ಅಂತಹ ಸುಯೋಗ ಒದಗಿರಲಿಲ್ಲ"

"ನೀವು", ನನ್ನ ಕಡೆ ದೃಷ್ಟಿ ಮಾಡಿ ಕೇಳಿದಳು.

"ನನಗೂ ಅಷ್ಟೇ."

"ಹಾಗಾದರೆ ಈಗ ನೀವು ಆ ಅನುಭವ ಪಡೆಯಬೇಕು." ಎಂದಳು. ನನ್ನ ಮನಸ್ಸಿನಲ್ಲಿ ಇದ್ದುದು ಹಾಗೆಯೆ.

"ಹೂಂ ಬನ್ನಿ" ಎಂದು ದೋಣಿಯ ಕಡೆ ನಡೆದವು. ನಮ್ಮನ್ನು ನೋಡುತ್ತಲೇ ಹುಟ್ಟು ಕೆಳಗಿಟ್ಟು ಕುಳಿತ ಅಂಬಿಗನೊಬ್ಬನು ಮುಂದೆ ಬರುತ್ತಾ ಕೇಳಿದ, ತಮಿಳಿನಲ್ಲಿ "ಬರುತ್ತೀರೇನು?" ತಾರಿಣಿಯು ಹೌದೆಂದು ಹೇಳಿ ಕೊಡಬೇಕಾದ ಬಾಡಿಗೆಯನ್ನು ನಿಷ್ಕರ್ಷಿಸಿದಳು. ಮೂವರೂ ಹೋಗಿ ದೋಣಿಯಲ್ಲಿ ಕುಳಿತೆವು. ಅಂಬಿಗರಿಬ್ಬರು ದೋಣಿ ಯನ್ನು ತೀರದಿಂದ ನಾಲ್ಕು ಹೆಜ್ಜೆ ಮುಂದಕ್ಕೆ ತಳ್ಳಿ, ನೀರು ಸೊಂಟಕ್ಕೆ ಬಂದಾಗ ಏರಿ ದೋಣಿಯ ಹುಟ್ಟನ್ನು ಕೈಗೆ ತೆಗೆದುಕೊಂಡರು. ದೋಣಿ ಹೊರಟಿತು ಗಾಳಿ ವೇಗದಲ್ಲಿ.

ಅದು ಹೋಗುತ್ತಿದ್ದ ರಭಸಕ್ಕೆ ತಂಗಾಳಿ ರಪರಪನೆ ಮುಖಕ್ಕೆ ಬಡಿಯುತ್ತಿತ್ತು. ಹುಟ್ಟಿನಿಂದೆದ್ದ ನೀರಿನ ತುಂತುರು ಹನಿಗಳು ಗಾಳಿಯ ಹೊಡೆತಕ್ಕೆ ಸಿಕ್ಕಿ ಮೈಮೇಲೆ ಪ್ರೋಕ್ಷಿಸಿದಂತಿತ್ತು. ಇದ್ದ ಬಿಸಿಲಿಗೆ ಎಷ್ಟೋ ತಂಪೆನಿಸುತ್ತಿತ್ತು ಈ ಸೇಚನೆ. ಅಂಬಿಗರು ತೀರದಲ್ಲಿಯೇ ಹುಟ್ಟು ಹಾಕುತ್ತಾ ದೋಣಿಯನ್ನು ನಡೆಸಿದಾಗ ತಾರಿಣಿಯು ಅಂಬಿಗರಿಗೆ ಹೇಳಿದಳು. "ಸ್ವಲ್ಪ ಒಳಕ್ಕೆ ನಡೆಸು" ಎಂದು. ಅಂಬಿಗರು ಹಾಗೇ ಮಾಡಿದರು. ಅಲೆಗಳು ಮನುಷ್ಯನ ಮುಮ್ಮಡಿ, ನಾಲ್ಮಡಿಯಷ್ಟು ಎತ್ತರ ಬರುತ್ತಿತ್ತು. ದೋಣಿ ಅವುಗಳ ಮೇಲೆ ಹಾದಾಗ, ಗಿರಿಶೃಂಗವನ್ನು ಏರಿದಂತೆ ಆಗುತ್ತಿತ್ತು. ಮುಂದೆ ತಗ್ಗು ಅಲೆಯ ಮಧ್ಯೆ ದೋಣಿ ಹೋದಾಗ ಪಾತಾಳದ ಮಾರ್ಗದಲ್ಲಿ ಸಾಗುತ್ತಿದ್ದಂತೆ ಭಾಸವಾಗುತ್ತಿತ್ತು. ಸುತ್ತೆಲ್ಲಾ ಎದ್ದ ನೀರು ನಮ್ಮ ದೋಣಿಗೆ ಬಡಿದು ಇನ್ನೊಂದು ಕ್ಷಣದಲ್ಲಿ ನಮ್ಮ ದೋಣಿ ಮೊಗಚೀತೆಂದು ತೋರುತಿತ್ತು. ವಿಶಾಲಿಗೆ ನಿಜವಾಗಿಯೂ ಹೆದರಿಕೆಯಾಯಿತು. ಆದರೆ ತಾರಿಣಿ ನಗುತ್ತಾ ತಾನು ಕಲಿತಿದ್ದ 'ದೋಣಿ ಸಾಗಲಿ ಮುಂದೆ ಹೋಗಲಿ' ಎಂಬ ಗೀತೆಯ ಚರಣ ಒಂದನ್ನು ಹಾಡುತ್ತಿದ್ದಳು.

ದೋಣಿ ತೀರವನ್ನು ಮೂರು ನಾಲ್ಕು ಫರ್‌ಲಾಂಗ್ ಹಿಂದುಳಿಸಿ ಸಾಗಿದಾಗ, ಹಿರಿಯಲೆಯೊಂದರ ಕಿಬ್ಬದಿಯಲ್ಲಿ ನಡೆದಾಗ "ದಮ್ಮಯ್ಯ ಹಿಂದಕ್ಕೆ ಒಯ್ಯಿರಿ ದೋಣಿ" ಎಂದು ವಿಶಾಲಿ ಕೂಗಿಕೊಂಡಳು, ಹೆದರಿಕೆಯಿಂದ. ನನಗೂ ಹಿಂದಿರುಗುವುದು ಬೇಕಿತ್ತು. ಆದರೆ ತಾರಿಣಿಯು ಧೈರ್ಯದಿಂದ ಕುಳಿತಿರುವಾಗ ಹಿಂತಿರುಗಿಸೆಂದು ಹೇಳಲು ನಾಚಿದೆ. ಆದರೆ ಈಗ ವಿಶಾಲಿಯ ಮಾತನ್ನು ನೆಪ ಮಾಡಿಕೊಂಡು ಅಂಬಿಗರಿಗೆ ಸಂಜ್ಞೆ ಮಾಡಿದೆ. ಅವರು ಅದನ್ನು ಅರಿತು ಹಿನ್ನೆಡೆದರು. ಅಂತೂ ಇಂತೂ ದೋಣಿ ದಡ ಮುಟ್ಟಿದಾಗ ವಿಶಾಲಿ "ಗೆದ್ದೆನಪ್ಪಾ" ಎಂದುಕೊಂಡು ದೋಣಿಯಿಂದ ಚಿಗಿದು ಮರಳಿನ ಮೇಲೆ ನಿಂತಳು.

"ಯಾಕೆ ವಿಶಾಲಿ ಹೆದರಿಕೆ ಏನು!" ನಾನು ಕೇಳಿದೆ.

"ನನಗೆ—ನಾವು ದಡವನ್ನು ಮರಳಿ ಕಾಣುವೆವೆಂದು ಎಣಿಸಿರಲಿಲ್ಲ."

"ಶುದ್ಧ ಪಿರಿಕಿ ಕಾಣೇ ನೀನು." ಎಂದು ನಾನು ಮೇಲೆ ಅಂದು ತೋರಿಸಿದೆ, ಅದು ಅಕ್ಷರಶಃ ನನಗೆ ಅನ್ವಯಿಸುತ್ತಿತ್ತು.

"ನೀನು ಹಾಗೆ ಬಿರುದಿತ್ತರೂ ಚಿಂತೆಯಿಲ್ಲ, ದೇವರ ದಯೆಯಿಂದ ಕ್ಷೇಮವಾಗಿ ದಡ ಮುಟ್ಟಿದೆವಲ್ಲಾ" ತಾರಿಣಿಯ ಕಡೆ ನೋಡಿ "ನಿನ್ನ ಹಾಡು ಹಾಳಾಯಿತು! ನಾನು ಹೆದರಿ ಸಾಯುತ್ತಿದ್ದರೆ ನೀನು 'ದೋಣಿ ಸಾಗಲಿ ಮುಂದೆ ಹೋಗಲೀ' ಎಂದು ಹೇಳುತ್ತಿದ್ದೆಯಲ್ಲಾ" ಎಂದು ಬೈದಳು.

ತಾರಿಣಿಯು ಮಾತನಾಡದಿದ್ದರೂ ನಕ್ಕಳು.

'ಅಡ್ಯಾರ್' ನೋಡಿಯಾಯಿತು. ಹೋಗುವ ವೇಳೆಗೆ ಬಿಸಿಲಿನ ತಾಪ ಬಹಳ ಜೋರಾಗಿತ್ತು. ಬಾಯಿ ಆರುತ್ತಾ ಬಂದಿತ್ತು. ಅಲ್ಲಿಯೇ ನಮ್ಮಂತಹ ಹಸಿದ ತೋಳಗಳಿಗಾಗಿಯೇ ಇರಿಸಿದ್ದ ತೆಂಗಿನಕಾಯಿ—ಎಳನೀರಿನ ಕಡೆ ವಿಶಾಲಿಯು ದೃಷ್ಟಿ ಬೀರಿದಳು.— ಈ ಮೊದಲೇ ನನ್ನ ದೃಷ್ಟಿಯೂ ಕೂಡ ಆ ಕಡೆಗೆ ಹರಿದಿತ್ತೆಂದು ಹೇಳಬೇಕಿಲ್ಲ.

ಮೂವರೂ ಒಂದೊಂದು ಎಳೆನೀರನ್ನು ಕುಡಿದು ಮತ್ತೊಂದಕ್ಕೆ ಆರ್ಡರ್ ಕೊಡುವಾಗ ತಾರಿಣಿಯು ಮನೆಯಲ್ಲಿ ನಮಗಾಗಿ ಕಾಯುತ್ತಿರುವ ಅಡಿಗೆಯನ್ನು ಜ್ಞಾಪಿಸಿದುದರಿಂದ—ಒಂದಕ್ಕೆ ನಿಲ್ಲಿಸಿದೆವು. ಆ ಹೊತ್ತಿಗೆ ದೇವತೆಗಳು ನಮಗಾಗಿ ಸ್ವರ್ಗದಿಂದ ಕಳುಹಿಸಿದ ಅಮೃತವೋ ಅನ್ನುವಂತೆ—ಆ ಎಳನೀರು ತೋರಿತು. ಕಲಿಯುಗದ ಶ್ರಮಜೀವಿಗಳ ಅಮೃತದ ಸಹೋದರ ಪಾನೀಯ ಎಂದಮೇಲೆ ಕೇಳುವುದೇನಿದೆ.

ಪುನಃ ಬಸ್ಸು ಹತ್ತಿ ಹೊರಟೆವು. ಮನೆಗೆ ಬಂದಾಗ ಬಿಸಿಲಿನಿಂದ ನೆಲ ಕಾದು ಕೆಂಡವಾಗಿತ್ತು. ಹಾದಿಯಲ್ಲವನ್ನೂ ಬಸ್ಸಿನಲ್ಲೇ ಕಳೆದು

ಬರದಿದ್ದರೆ—ನನ್ನ ಪಾದಗಳು ಚರ್ಮದವಾಗಿ ಉಳಿಯುತ್ತಿತ್ತೊ ಇಲ್ಲವೊ ನಾನು ಹೇಳಲಾರೆ.

"ಯಾಕೆ ಇಷ್ಟು ತಡ ಮಾಡಿದಿರಿ"

ಸದಾಶಿವರಾಯರು ನಾವು ಮನೆಯನ್ನು ಪ್ರವೇಶಿಸುತ್ತಲೇ ಕೇಳಿದರು.

ತಾರಿಣಿಯೇ ತಂಪಿಗೆ ಉತ್ತರವಿತ್ತಳು.

"ಅಣ್ಣಾ, ಇವರನ್ನು ಒಂದಿಷ್ಟು ನೀರಿನಮೇಲೆ ಹಾಯಿಸಿ ಬಂದೆ."

"ಭೇಷ್. ಹೇಗಿತ್ತು ನೌಕಾ ಪ್ರಯಾಣ. ಆದರೂ ನೀವು ಹೋದ ಹೊತ್ತು ಸರಿಯಿಲ್ಲ. ಸಂಜೆ, ಇಲ್ಲವೇ ಬೆಳಗಿನ ಮುಂಜಾನೆಯಲ್ಲಿ ಹೋಗಬೇಕು. ಆಗ ನೋಡಬೇಕು ಅದರ ಮಜಾ"

"ಸಾಲದೇನು ಹೊತ್ತು ಊಟಕ್ಕೆ. ನೀವು ಮಾತನಾಡಲು ನಿಂತರೆ ಬಂದವರು ಮೂರು ಘಂಟೆಯಾದೀತು ಎಲೆ ಕಾಣಲು." ತಾರಿಣಿಯ ತಾಯಿ ಒಳಗಿನಿಂದಲೇ ನುಡಿದರು.

"ಹೌದು, ಹೌದು ನಿನಗೆ ಮಾತಿಗೆ ದಾರಿ ಸಿಗಲಿಲ್ಲವೇನೋ ಅದಕ್ಕೆ ಈ ಟೀಕೆ." ಎಂದು ತಮ್ಮಾಕೆಯ ಕಡೆಗೆ ಮಾತಿನ ಚಿಲ್ಲೆ ಎಸೆದರು. ಅವರಿಬ್ಬರಲ್ಲೂ ನಗೆಯ ಮಿಂಚೊಂದು ಮಿಂಚಿಹೋಯಿತು. ನನಗೇನೂ ಹೆಚ್ಚು ಹಸಿವಿಲ್ಲ ಫಲಾಹಾರದ ಮೇಲೆ ಫಲಾಹಾರವಾಗಿತ್ತು. ಊಟ ಎಷ್ಟು ಹೊತ್ತಿಗೆ ಆದರೂ ನನಗೆ ಚಿಂತೆ ಇರಲಿಲ್ಲ. ಅದಕ್ಕೆ ಆ ಮಕ್ಕಳು........

"ನಿಮ್ಮದು ಮಿಂದಾಯಿತೇನು?" ಸದಾಶಿವರಾಯರು ಕೇಳಿದರು.

"ಇನ್ನೂ ಇಲ್ಲ"

"ಹಾಗಿದ್ದರೆ ಒಂದಿಷ್ಟು ಮಿಂದು ಬನ್ನಿರಿ. ಅಷ್ಟರಲ್ಲಿ ಎಲೆ ಹಾಕಿ ಸಿದ್ಧ ಮಾಡಿಟ್ಟಿರುತ್ತೇನೆ."

ಅಂದಿನ ಊಟ, ಸರಸ ಸಂಭಾಷಣೆಯ ಮಧ್ಯೆ, ನಗುಲಹರಿಗಳ ಮಧ್ಯೆ ಸಾಗಿತು. ನಾನೆಂದೂ ಅಂತಹ ಸವಿ ಭೋಜನ ಮಾಡಿರಲಿಲ್ಲ. ಆ ಸವಿ, ಭೋಜನದಲ್ಲಿ ಮಾತ್ರವೇ ಅಲ್ಲ ಇದ್ದುದು— ಆಗುತ್ತಿದ್ದ ಮಾತಿನಲ್ಲಿ ಕೂಡಾ ಇತ್ತು.

೧೦

ಊಟವಾಗಿ ಎಲೆ ಅಡಕೆಯನ್ನು ಮೆಲ್ಲತೊಡಗಿದಾಗ ಗಂಟೆ—ತಾರಿಣಿಯ ತಾಯಿ ಅಂದಂತೆ—ಮೂರು ಆಗಿರದಿದ್ದರೂ, ಮೂರರ ಹತ್ತಿರವಾಗುತ್ತಾ ಬಂದಿತ್ತು. ಮತ್ತೆ ಮಾತಿಗೆ ಮೊದಲು—ಸದಾಶಿವ ರಾಯರೊಡನೆ. "ಊಟ ಹೇಗಿತ್ತು ರಾಯರಿಗೆ ?"

"ಉತ್ಪ್ರೇಕ್ಷೆಗೆ ಅವಕಾಶ ಕೊಡದೆ ಹೇಳುವುದಾದರೆ ಇಂತಹ ಸವಿ ಯೂಟವನ್ನು ನನ್ನ ನಾಲಿಗೆ ಸವಿದಿದ್ದಿಲ್ಲ" ನಾನೆಂದೆ.

ತಾರಿಣಿಯು ಅಲ್ಲೆ ವಿಶಾಲಿಯೊಂದಿಗೆ ಹರಟುತ್ತಾ ಕುಳಿತಿದ್ದವಳು, "ನೀವು ಹಾಗೆಂದರೆ ನಾನು ನಂಬುವುದಿಲ್ಲ" ಎಂದಳು.

"ಹೌದು, ನಿಜ ಹೇಳಿದರೆ ನಿಮಗೆ ನಂಬಿಕೆ ಇಲ್ಲ. ಬೇಕಿದ್ದರೆ ವಿಶಾಲಿಯನ್ನೇ ಕೇಳಿ"

"ಹೌದು. ಅಣ್ಣ ಹೇಳಿದುದರಲ್ಲಿ ಮಿಥ್ಯಾಂಶವಿಲ್ಲ. ನಿಜವಾಗಿಯೂ ನಮ್ಮ "ಅತ್ತೆ"ಯವರ ಕೈ ರಸಗೈಯೇ ಸರಿ!"

ಸದಾಶಿವರಾಯರು ನುಡಿದರು—ಇದನ್ನು ಕೇಳಿ ನಗುತ್ತಾ, "ಓಹೊಹೋ ಆಗಲೇ ಅವಳು ನಿನಗೆ 'ಅತ್ತೆ' ಯಾಗಿಬಿಟ್ಟಳೇನು? ಅದಕ್ಕೇ ಈ ಹೊಗಳಿಕೇ" ವಿಶಾಲಿಯು ನಾಚಿಕೊಂಡಳು. ತಾರಿಣಿಯು ಅರ್ಥಪೂರ್ಣ ದೃಷ್ಟಿಯಿಂದ ನನ್ನ ಕಡೆಗೆ ನೋಡಿದಳು. ಸದಾಶಿವ ರಾಯರು ಹೊಸ ಸೊಸೆಯ ಬಗ್ಗೆ ಯೋಚಿಸುತ್ತಿದ್ದರು—ಮುಂದೆ ಬರಬಹುದಾದ ಆ ಸೊಸೆಯನ್ನು ಮನಸ್ಸಿನಲ್ಲಿ ಕಾಣಲು ಯತ್ನಿಸುತ್ತಿ

ದ್ದರು. ವಿಶಾಲಿಯಂತಹ ಸೊಸೆ ಸಿಕ್ಕಲ್ಲಿ ತಾನೆಂತಹ ಭಾಗ್ಯಶಾಲಿಗಳೆಂದು ಚಿಂತಿಸುತ್ತಿರಬೇಕು! ಇವೆಲ್ಲಾ ಅವರ ಮುಖಭಾವವನ್ನು ನೋಡಿ ಮಾಡಿದ ನನ್ನ ಊಹೆ. ಅದೆಷ್ಟು ನಿಜವೋ ಕಾಣೆ.

ತಾರಿಣಿಯು ಒಂದು ಹೊಸ ವಿಷಯವನ್ನು ತೆಗೆಯುವ ದನಿಯಲ್ಲಿ ಹೇಳಿದಳು.

"ಅಣ್ಣಾ, ಇವತ್ತು ಇವರು ಜಮಿನಿ ಸ್ಟುಡಿಯೋ ನೋಡಬೇಕೆಂದಿದ್ದಾರೆ! ನಿನಗೆ ಅಲ್ಲಿ ಯಾರಾದರೂ ಪರಿಚಯಸ್ಥರು ಇದ್ದಾರೇನಣ್ಣಾ?"

ನನ್ನ ಮನಸ್ಸಿನಲ್ಲಿ ಹೋಗುವುದರೊಳಗೆ ಯಾವುದಾದರೊಂದು ಸ್ಟುಡಿಯೊ ನೋಡಿ ಹೋಗಬೇಕೆಂದಿತ್ತು. ಆದರೆ ಹಿಂದೆ ತಾರಿಣಿ ಹೇಳಿದ್ದಳು—ಪರಿಚಯವಿದ್ದರೆ ಮಾತ್ರ ಸ್ಟುಡಿಯೊ ಅಂತ. ಈ ಊರಿನಲ್ಲಿ ಸ್ಟುಡಿಯೋ ನೋಡಲು ಯಾರ ಪರಿಚಯ ತರಲಿ? ಎಂದೇ ಆ ವಿಷಯವನ್ನು ಮನಸ್ಸಿನಿಂದ ಕಿತ್ತೊಗೆದಿದ್ದೆ, ಈಗ ವಿಶಾಲಿಯಿಂದ ಪ್ರೇರಿತಳಾಗಿ ತಾರಿಣಿಯು ಈ ಮಾತು ತೆಗೆದಿದ್ದಳು. ಸ್ಟುಡಿಯೊ ನೋಡುವ ಯೋಗ ನಮಗೆ ಇರಬೇಕೆಂದುಕೊಂಡೆ.

"ಸ್ಟುಡಿಯೊ ನೋಡಬೇಕೇನು? ಒಂದು ಕ್ಷಣ ಸದಾಶಿವರಾಯರು ತಲೆಗೆದರುತ್ತಾ ಕುಳಿತರು. ತಮಗಿರಬಹುದಾದ ಗೆಳೆಯರೆಲ್ಲರನ್ನೂ ಜ್ಞಾಪಕಕ್ಕೆ ತಂದುಕೊಳ್ಳಲೆತ್ನಿಸಿದರು. ಮುಂದೆ ಹೇಳಿದರು—ಸ್ಟುಡಿಯೋ ತೋರಿಸಬಲ್ಲವನೊಬ್ಬನ ಸ್ನೇಹಿತನ ನೆನಪು ಬಂತಂತೆ—

"ಆ ಸ್ಟುಡಿಯೋದಲ್ಲಿ ನನಗೆ ಯಾರೊಬ್ಬರ ಪರಿಚಯವಿಲ್ಲ. ಆದರೂ ಆ ಸ್ಟುಡಿಯೋದ ಮ್ಯಾನೇಜರ್ ಪರಿಚಯವಿರುವ ಗೆಳೆಯನೊಬ್ಬನು ಇದ್ದಾನೆ. ಅವನನ್ನು ಹಿಡಿದರೆ ಕೆಲಸವಾಗಬಹುದೆಂದು ತೋರುತ್ತೆ."

"ಅಣ್ಣಾ—ಅವನನ್ನು ಹಿಡಿದು ಈ ಕೆಲಸ ಮಾಡಿಸಬೇಕಣ್ಣಾ" ತಾರಿಣಿ ನುಡಿದಳು.

"ಹೂಂ....ಹಾಗೆಯೇ ಆಗಲಿ. ಅವನಿಗೆ ಫೋನು ಮಾಡಿ ವಿಷಯ ತಿಳಿಸುತ್ತೇನೆ. ಇಂದು ಅವನಿಗೆ ಕೂಡ ವಿರಾಮವಿರಬಹುದು—ಅವನನ್ನೂ ಕೂಡ ಒಯ್ಯೋಣ."

ಸದಾಶಿವರಾಯರು ತಾವು ಆಡಿದಂತೆ ಫೋನು ಮಾಡಿ ಬರಲು ಹೊರಟರು. ವಿಶಾಲಿ ತಾರಿಣಿಯ ತಾಯಿಯೊಂದಿಗೆ ಹರಟುತ್ತಾ ಕುಳಿತಳು. ಅವರು ತಮಗೆ ತಿಳಿಯದಿದ್ದ ಅನೇಕ ಸಂಗತಿಗಳನ್ನು ವಿಶಾಲಿಯನ್ನು ಕೇಳಿ ತಿಳಿದರು. ಅವರೆಲ್ಲಾ ಮಾತುಕಥೆಯಲ್ಲಿ ನಾನು ಬರೀ ಪ್ರೇಕ್ಷಕನಿದ್ದೆನೇ—ಹೊರತು—ಯಾವ ಮಾತಿನ ಭಾಗವನ್ನೂ ವಹಿಸಲಿಲ್ಲ. ಅವರ ಹರಟೆ ಇನ್ನೂ ನಡೆಯುತ್ತಲಿರುವಾಗಲೇ ತಾರಿಣಿಯ ತಂದೆ—ಸದಾಶಿವರಾಯರು ಬಂದರು. ಅವರ ಮೋರೆಯಲ್ಲಿ ಹೋದ ಕೆಲಸ ಮಾಡಿಕೊಂಡು ಬಂದ ಹೆಮ್ಮೆ ಇತ್ತು.

"ಏನಾಯಿತಣ್ಣಾ ಹೋದ ಕೆಲಸ...."ತಂದೆಯನ್ನು ಕಾಣುತ್ತಲೇ ತಾರಿಣಿಯು ಕೇಳಿದಳು.

"ಆಯಿತು ತಾರಿಣಿ ನಾನು ಹೋದ ಕೆಲಸ. ಆ ನನ್ನ ಗೆಳೆಯ ಮನೆಯಲ್ಲಿಯೇ ಇದ್ದ. ಅವನಿಗೆ ಸ್ಟುಡಿಯೋಗೆ ನಮ್ಮೊಂದಿಗೆ ಬರಲು ಹೇಳಿದೆ. ಅವನಿಗೆ ಬೇರಾವುದೋ ಅನಿವಾರ್ಯದ ಕೆಲಸವಿದೆಯಂತೆ, ಬರಲು ಆಗದೆಂದು ಹೇಳಿದ. ಆದರೂ ತಾನೊಂದು ಪತ್ರ ಮ್ಯಾನೇಜರಿಗೆ ಕೊಡುವುದಾಗಿಯೂ, ಅದು ತನ್ನ ಭಾಗದ ಕೆಲಸ ಮಾಡುವುದೆಂದೂ ಹೇಳಿದ. ಕಾಗದವನ್ನು ಈಗ ಜವಾನನ ಕೈಲಿ ಕಳುಹಿಸುತ್ತಾನಂತೆ.

"ನೀವು ಇನ್ನೇಕೆ ಸಾವಧಾನ ಮಾಡಬೇಕು. ಆಳು ಪತ್ರ ತಂದು ಕೊಡುವ ವೇಳೆಗೆ ಒಂದಿಷ್ಟು ಕಾಫಿ ರುಚಿ ಕಂಡು ಹೊರಡಲು ಸಿದ್ಧರಾಗೋಣ! ಅವನು ಕಾಗದ ತಂದಮೇಲೆ ಸಿದ್ಧರಾಗುತ್ತಾ ಕುಳಿತರೆ ಹೊತ್ತಾದೀತು."

"ಅಂತೂ ಹೋದ ಕೆಲಸ ಮಾಡಿಕೊಂಡು ಬಂದೆಯಲ್ಲಾ" ಎಂದು ತನ್ನ ಮೆಚ್ಚಿಕೆಯನ್ನು ತಾರಿಣಿ ತೋರಿಸಿದಳು. ನಾವು ಕೃತಜ್ಞತಾ ದೃಷ್ಟಿಯಿಂದ ಸದಾಶಿವರಾಯರನ್ನು ನೋಡಿದೆವು.

ಆಳು ಕಾಗದ ತಂದುಕೊಟ್ಟ. ನಾನು, ವಿಶಾಲಿ, ತಾರಿಣಿ, ಸದಾಶಿವರಾಯರು ಮತ್ತು ಆ ಮಕ್ಕಳು ಇಷ್ಟು ಜನ ಸ್ಟುಡಿಯೋದ ರಸ್ತೆ ಹಿಡಿದೆವು.

ಸದಾಶಿವರಾಯರಿಗೆ ರಜವಿದ್ದುದರಿಂದಲೂ ನನ್ನ ಸಹವಾಸ ಅವರಿಗೆ ಬೇಕಿದ್ದುದರಿಂದಲೂ, ನಮ್ಮೊಡನೆ ಬರಲು ಅವರು ಬಂದಿದ್ದರು. ಇನ್ನು ಆ ಮಕ್ಕಳು—ನಾನೇ ಬಲವಂತ ಮಾಡಿ ಜತೆಗೆ ಕರೆದುಕೊಂಡು ಬಂದಿದ್ದೆ. ನಮ್ಮ ಈ ಪರಿವಾರವನ್ನು ದೂರದಿಂದಲೇ ಕಂಡು ಮುಂಭಾಗ ದಲ್ಲಿಯೇ ಇದ್ದ ಆ ವಿಚಾರಣಾ ಶಾಖೆಯಲ್ಲಿನ ನೌಕರ ಹೊರ ಬಾಗಿಲಿಗೆ ಬಂದ. ನಮ್ಮೊಡನೆ ತಂದಿದ್ದ ಪರಿಚಯ ಪತ್ರ—ನಮಗೆ ಸ್ಟುಡಿಯೋದ ಪ್ರವೇಶಕ್ಕೆ ಸಿಕ್ಕಿದುದಲ್ಲದೆ– ನಮ್ಮ ಯೋಗ್ಯತೆ, ಗೌರವವನ್ನೂ ಹೆಚ್ಚಿಸಿತು. ಆತನೇ ನಮ್ಮೊಡನೆ ಬಂದು ಆ ಜಮಿನಿ ಸ್ಟುಡಿಯೋದಲ್ಲಿ ನೋಡಬೇಕಿರುವುದನ್ನೆಲ್ಲಾ ತೋರಗೊಟ್ಟ.

ಜಮಿನಿ ಸ್ಟುಡಿಯೋ—ನಾನು ಬೇರಾವ ಸ್ಟುಡಿಯೋಗಳನ್ನು ಈ ಮೊದಲೇ ನೋಡದುದರಿಂದ, ದೊಡ್ಡ ಉದ್ಯಾನವನ್ನು ಒಳಗೊಂಡ ಅನೇಕ ಕಾರ್ಯಗಾರಗಳನ್ನು ಒಳಗೊಂಡ ಒಂದು ಕಾಲೊನಿ ಎಂದು ಕೊಂಡಿದ್ದೆ. ಆದರೆ ನನ್ನ ಈ ಭಾವನೆ ನಿಜವಾಗಲಿಲ್ಲ. ಅಲ್ಲಿ ಏನೊ ಹತ್ತಾರು ವಿವಿಧ ಜಾತಿಯ ವೃಕ್ಷಗಳೂ, ಕೈತೋಟಗಳೂ ಇದ್ದ ಪಾರ್ಕು ಒಂದು ಇತ್ತು; ಸ್ಟುಡಿಯೋದ ಕೆಲಸಕಾರ್ಯಗಳಿಗೆ ಸೇರಿದ್ದ ನಾಲ್ಕಾರು ಕಟ್ಟಡಗಳು ಇದ್ದವು. ಆದರೂ ಅಲ್ಲಿದ್ದ ಉದ್ಯಾನ—ಕಟ್ಟಡಗಳು, ನನ್ನ ಭಾವನೆಯ ಸ್ಟುಡಿಯೋಡೊಡನೆ ಹೋಲಿಸಿದಾಗ ಬಹಳ ಸಣ್ಣದು. ಆ ಸ್ಟುಡಿಯೋಗೆ ಸೇರಿದ ಕಟ್ಟಡಗಳ ಪೈಕಿ—ಒಂದು ಚಿತ್ರಮಂದಿರ, ಡೈರೆಕ್ಟರ ಆಫೀಸು, Make up room, Costume room, Godown ಮತ್ತು Close up room, Sound recording and Developing roomಗಳು.

'ಮೇಕ್ ಅಪ್' ರೂಂನಲ್ಲಿ ಕನ್ನಡ ನಟ ಮತ್ತು ಸಂಗೀತಗಾರ ರಾದ ಶ್ರೀಯುತ ರಾಜಅಯ್ಯಂಗಾರ್ಯರು—ಅಂದು ರಾತ್ರಿ ನಡೆಯಲಿದ್ದ

ನಾಟ್ಯರಾಣಿ ಚಿತ್ರದ—ಷೂಟಿಂಗಿಗಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. 'ಕಾಸ್ಟ್ಯೂಂ' ರೂಂನಲ್ಲಿ ಬೇರೆ ಬೇರೆ ಕಾಲದ ಬೇರೆ ಬೇರೆ ರೀತಿಯ ಚಿತ್ರಗಳಿಗೆ ಅವಶ್ಯಕವಾಗುವ ಬಟ್ಟೆಬರೆಗಳನ್ನು ಇಟ್ಟಿದ್ದರು. ಅಲ್ಲಿಯೇ ನಾಲ್ಕಾರು ದರ್ಜಿಗಳು, ಹೊಸ ನಮೂನೆ ಬಟ್ಟೆಬರೆಗಳನ್ನು ಹೊಲಿಯುವ ಕೆಲಸದಲ್ಲಿ ಮಗ್ನರಾಗಿದ್ದರು.

ಇದನ್ನು ಕಂಡ ವಿಶಾಲಿ—"ಇದೇನೇನೇ ಈಗಿನ ಫ್ಯಾಷನ್ನಿನವರ ಮನೆ?" ಎಂದು ಕೇಳಿದ್ದಳು.

'ಗೋಡವುನ್'ನಲ್ಲಿ—ಚಲನಚಿತ್ರದ ಸಿದ್ಧತೆಗೆ ನೆರವಾಗುವ—ಎಲ್ಲಾ ವಸ್ತುಗಳನ್ನು ಶೇಖರಿಸಿದ್ದರು. ಈಟಿ, ಗುರಾಣಿ, ಕತ್ತಿ, ಬಾಣ, ಬಿಲ್ಲು, ಕಿರೀಟಗಳು ಮತ್ತಿತರ ಆಯುಧಗಳು ಮತ್ತು ಒಡವೆಗಳು, ಸದಾಕಾಲಕ್ಕೂ ನೆರವಾಗುವ ಕೃತಕದ ಹಣ್ಣುಗಳು—ಮಾವು, ಸೇಬು, ಅಂಜೂರ, ಕಿತ್ತಳೆಗಳೂ; ತಿಂಡಿತಿನಿಸುಗಳೂ; ಮೈಸೂರುಪಾಕು, ಜಾಂಗೀರು, ಪೇಡ, ಮೊದಲಾದುವುಗಳ ಜೊತೆಗೆ ಕೃತಕ ಗಡ್ಡ ಮೀಸೆಗಳನ್ನು ಓರಣವಾಗಿ ಇರಿಸಿದ್ದರು. ಇವರ ಜತೆಗೆ ಹಿಂದಿನ ಕಾಲದ ಕಂಚಿ ಕಾಳಹಸ್ತಿಗಳ ವೈಭವಗಳನ್ನು ತೋರಿಸಿ, ಮಾಡಿಟ್ಟಿರುವ ಸಣ್ಣ ಮಾದರಿಗಳೂ ಇದ್ದುವು. ಚಿತ್ರಗಳಲ್ಲಿ ಅವುಗಳನ್ನು ತೋರಿಸಬೇಕಾದಾಗ ಇವುಗಳ ಚಿತ್ರ ತೆಗೆದು ದೊಡ್ಡದು ಮಾಡಿ ಚಿತ್ರಗಳಿಗೆ ಅಂಟಿಸುತ್ತಿದ್ದರು. ಒಟ್ಟಿನಮೇಲೆ ಆ ಗೋಡೌನು ಒಂದು ಸಣ್ಣ ಪ್ರಪಂಚದಂತಿತ್ತು. ಹೊರಗಡೆ ಪ್ರಪಂಚದಲ್ಲಿ ಕಾಣುವ ಎಲ್ಲಾ ಜಾತಿಯ ವಸ್ತುಗಳ ನಮೂನೆಗಳಿದ್ದುವು.

ಅಲ್ಲಿದ್ದ ಮೈಸೂರುಪಾಕು ಕಂಡು ವಿಶಾಲಿ 'ಅದಕ್ಕೇ ಈ ತಿಂಡಿಗಳಿಗೆ ಚಿತ್ರದಲ್ಲಿ ಯಾವ ನೊಣ, ಇರುವೆಗಳೂ ಹತ್ತುವುದಿಲ್ಲ' ಎಂದು ಹಾಸ್ಯ ಮಾಡಿದ್ದಳು. ಈ ಕಟ್ಟಡಗಳ ಮಧ್ಯೆ ಇದ್ದ ವಿಶಾಲ ಮೈದಾನದಲ್ಲಿ ಒಂದು ಡೇರೆಯನ್ನು ರಚಿಸಿದ್ದರು—ನಾಟ್ಯರಾಣಿ ಚಿತ್ರಕ್ಕೆಂದು—ಹಿಂದಣ ದಿನ ಆ ಚಿತ್ರದ ಷೂಟಿಂಗ್—ಸರ್ಕಸ್ ದೃಶ್ಯಗಳನ್ನು—ತೆಗೆದರಂತೆ—ತೆರವನ್ನು ಅಲ್ಲಿಯ ಕೆಲಸಗಾರರು ಕೇಳುತ್ತಿದ್ದರು.

ಮತ್ತೊಂದು ಭಾಗದಲ್ಲಿ ಉದಯಶಂಕರರವರ 'ಕಲ್ಪನಾ' ಎಂಬ ಚಿತ್ರಕ್ಕೆ ಹಿನ್ನೆಲೆಯ ಸಿದ್ಧತೆ ಮಾಡುತ್ತಿದ್ದರು. ಅಲ್ಲಿನ ಕುಶಲ ಶಿಲ್ಪಿಗಳು ಅಲ್ಲೊಂದು ಹಿಮಗಿರಿಯನ್ನು ರಚಿಸಿದ್ದರು. ಶಂಕರ ನಿವಾಸ ಕೈಲಾಸ ಪರ್ವತದ ದೃಶ್ಯಕ್ಕಾಗಿ—ಅದನ್ನು ಕಂಡು ನಾನು ಬೆರಗಾಗಿ ನಿಂತೆ. ಅಷ್ಟು ಅದ್ಭುತವಾಗಿ ರಚಿಸಿದ್ದರು. ಆ ಗಿರಿಶೃಂಗಗಳನ್ನು ಅದಕ್ಕೆ ಬಳಿದಿದ್ದ ಬಣ್ಣ ಕೂಡ ಬಿಳಿ ಮಿಂಚಿನಂತೆಯೇ ತೋರುತ್ತಿತ್ತು. ಇಂತಹ ದೃಶ್ಯ ಸಂಯೋಜನೆಗಳನ್ನು ಒಳಗೊಂಡ ಆ ಚಿತ್ರ ನಿಜವಾಗಿಯೇ ಅದ್ಭುತ ಚಿತ್ರವಾಗುವುದೆಂದುಕೊಂಡೆ.

ಮತ್ತೊಂದು ಗೃಹದಲ್ಲಿ ಮರದ ಕೆಲಸಗಾರರು ಮುಂದೆ ತೆಗೆಯಲಿದ್ದ "ತುಳಸಿ ಜಲಂಧರ"ವೆಂಬ ಪೌರಾಣಿಕ ಚಿತ್ರಕ್ಕೆ ಬೇಕಾಗುವ—ಅರಮನೆ—ಕೋಟೆಕೊತ್ತಲಗಳನ್ನು ಕೃತಕವಾಗಿ ರಚಿಸುತ್ತಿದ್ದರು. ಮತ್ತೊಂದು ಕಡೆ ಇಂದು ನಡೆಯಲಿದ್ದ "ಷೂಟಿಂಗ್"ಗಾಗಿ ಸಿದ್ಧತೆ ಮಾಡುತ್ತಿದ್ದರು. ಅದೊಂದು ಸಭಾಂಗಣದ ದೃಶ್ಯವನ್ನು ತೆಗೆಯುವ ಪ್ರಯತ್ನದಲ್ಲಿ ಇದ್ದರು. ಅದು ಕೃತಕ ಸಭಾಂಗಣವಾದರೂ ಯಾವ ರಾಜಾಸ್ಥಾನಕ್ಕೂ ಕಡಿಮೆ ಇರಲಿಲ್ಲ, 'ಅಲ್ಲಿನ' ಚಿತ್ತಾರದಲ್ಲಿ, ಅಲಂಕಾರದಲ್ಲಿ. ಕೆಲಸಗಾರರು ಅಲ್ಲಿದ್ದ ಸಿಂಹಾಸನವನ್ನು ಹೊಳೆಯುವಂತೆ ಉಜ್ಜುತ್ತಿದ್ದರು. ಎಲೆಕ್ಟ್ರಿಕ್ ದೀಪಗಳನ್ನು ಅಲ್ಲಿ ಇಲ್ಲಿ ಕಟ್ಟುತ್ತಿದ್ದರು, ಷೂಟಿಂಗ್ ಸಮಯದಲ್ಲಿ ಬೇಕಾಗುವ ಬೆಳಕಿಗಾಗಿ. ಅವರು ಮಾಡುತ್ತಿದ್ದ ಸಂಭ್ರಮವನ್ನು ನೋಡಿ ಸದಾಶಿವರಾಯರು "ಇಲ್ಲೇ ನಿಂತು ಚಿತ್ರದ ಷೂಟಿಂಗ್ ನೋಡಿ ಹೋಗೋಣವೇನು?" ಎಂದು ಕೇಳಿದರು. ನನಗೆ ಅಂದು 'ಟ್ರಿಪ್ಲಿಕೇನ್' ಸಮುದ್ರದ ದಂಡೆಗೆ ಸಂಜೆಯ ಸೊಬಗನ್ನು ನೋಡಲು ಹೋಗುವ ಆಶೆ ಇತ್ತು. ಮನಸ್ಸಿನ ಈ ಆಶೆಯನ್ನು ಅಷ್ಟಕ್ಕೆ ಕಲ್ಲೆಸೆಯುವುದು ನನ್ನ ಮನಸ್ಸಿಗೆ ಬರಲಿಲ್ಲ. ಮಾತಿಲ್ಲದೆ ಬರೀ ಹೂಂಗುಟ್ಟಿದೆ. ವಿಶಾಲಿಗೆ ಕೂಡ ನನ್ನ ಮನಸ್ಸಿನಲ್ಲಿದ್ದಂತೆಯೇ ಇರಬೇಕು. ಅವಳೂ ನನ್ನಂತೆ ಬಾಯಿಬಿಟ್ಟು ಏನೂ ನುಡಿಯಲಿಲ್ಲ.

ಆದರೆ ತಾರಿಣಿ ಮಾತ್ರ ನನ್ನೆಲ್ಲಾ ಮನಸ್ಸಿನ ವ್ಯಾಪಾರವನ್ನೂ ಬಲ್ಲವಳಂತೆ "ಬೇಡ ಅಣ್ಣಾ, ಇವರು ಊರಿಗೆ ಹೊರಡುವವರು. ಹೊರಡುವ ಮುನ್ನ ಸಂಜೆಯಲ್ಲಿ ಸಮುದ್ರದ ದಂಡೆಗೊಮ್ಮೆ ಹೋಗುವ ಮನಸ್ಸುಳ್ಳವರಾಗಿದ್ದಾರೆ!" ಎಂದಳು.

"ಹೌದೇನೂ" ನನ್ನ ಕಡೆ ನೋಡಿ ನುಡಿದರು—ಮಗಳ ಮಾತನ್ನು ಕೇಳಿ ಸದಾಶಿವರಾಯರು

ಇದಕ್ಕೂ ಮಾತನಾಡಲಿಲ್ಲ—ಕೋಲೆ ಬಸವಣ್ಣನಂತೆ ಹೂಂಗುಟ್ಟಿದೆ. ತಾರಿಣಿಯು ವ್ಯಕ್ತಪಡಿಸಿದ ಅಭಿಪ್ರಾಯ ನನ್ನದೇ ಎಂದು ತಲೆಯಲ್ಲಾಡಿಸಿದೆ.

"ಹಾಗಾದರೆ ಬನ್ನಿ ಹೋಗೋಣ ಬೀಚಿಗೆ—ಇಲ್ಲಿ ನೋಡುವುದೆಲ್ಲಾ ಮುಗಿದಹಾಗಾಯಿತು!" ಎಂದರು.

ಹೊತ್ತು ಐದರಮೇಲೆ ಆಗಿತ್ತು. ಆಗಲೇ ಸೂರ್ಯನ ಕಾವು ಕಡಿಮೆಯಾಗುತ್ತಾ ಬಂದಿತ್ತು. ಮರಳಿನ ಕಾವು ಕೂಡ ಆರತೊಡಗಿತ್ತು. ಅಂದು ರವಿವಾರ. ಸಾಮಾನ್ಯ ಜನರ ರಜಾ ದಿನ. ವಾರದ ಕೆಲಸದಿಂದಾದ ಬೇಸರ ಕಳೆಯಲಿದ್ದ ರಜಾ ದಿನ. ಜನರು ಅಲ್ಲಿ ಇಲ್ಲಿ ಚಲ್ಲಿ ಕುಳಿತಿದ್ದರು. ಕೆಲವು ಜನ ಓಡಾಡುತ್ತಲಿದ್ದರು ಅತ್ತಿಂದಿತ್ತ. ಇದರ ಮೇಲೆ ಸಿಗರೇಟು, ಬೀಡಾಗಳನ್ನು ಮಾರುವ ಹುಡುಗರ ಗಲಭೆ ಬೇರೆ. ಅಲ್ಲೇ ಇದ್ದ ರೇಡಿಯೋ ಅದಾವುದೊ ತಮಿಳು ಹಾಡೊಂದನ್ನು ಹೇಳುತ್ತಿತ್ತು. ಆ ಹಾಡನ್ನು ಧ್ವನಿವರ್ಧಕಗಳಿಂದ ಸುತ್ತೆಲ್ಲಾ ಒಂದು ಮೈಲಿಯ ತನಕ ಕಿವಿಗಿವುಡಾಗುವಂತೆ—ಕೇಳಿಸಿದ್ದರು.

ನಾವು ಜನರ ಗದ್ದಲ ಹೆಚ್ಚು ಇಲ್ಲದ ಪ್ರಶಾಂತವಾದ ತಾಣವನ್ನು ಹುಡುಕಿ ಕುಳಿತೆವು. ಜತೆಗೆ ಬಂದಿದ್ದ ಮಕ್ಕಳು—ಮರಳಿನ ದಂಡೆಯಲ್ಲಿ ಕುಳಿತು ಆಡಲು ಮೊದಲಿಟ್ಟವು. ಆ ಹೆಣ್ಣು ಹುಡುಗಿಯರು ದಂಡೆಯ ಮೇಲೆ ಚೆಲ್ಲಿರುವ ಕಪ್ಪೇಚಿಪ್ಪು, ಶಂಖಗಳನ್ನು ಆಯಲು ಹೊರಟವು. ತಾರಿಣಿಯ ತಮ್ಮ ನನ್ನೊಡನೆ ನಾಲ್ಕು ನಿಮಿಷ ಗಂಭೀರವಾಗಿ

ಕುಳಿತಿದ್ದು ಹೆಚ್ಚು ಕಾಲ ಹಾಗೆ ಕುಳಿತಿರಲಾಗದೆ ತಂಗಿಯರ ಆರಿಸುವ ಕೆಲಸಕ್ಕಾಗಿ ನೆರವಾಗಲು ಹೊರಟ.

ವಿಶಾಲಿಯು ದೂರದಿಗಂತದಲ್ಲಿ ಆವುದೋ ಒಂದು ಅದ್ಭುತವನ್ನು ಕಾಣುವಂತೆ ದಿಟ್ಟಿಸುತ್ತಾ ಕುಳಿತಳು. ತಾರಿಣಿ ಅಲ್ಲಿ ಇಲ್ಲಿ ಹಾಯುವ ಜನರ ಮೇಲೆ ತನ್ನ ದೃಷ್ಟಿಭ್ರಮರವನ್ನು ಹಾರಿಸಿದ್ದಳು. ನಾನು ತೀರದಲ್ಲೇ ಹುಟ್ಟುಹಾಕುತ್ತಾ ನಡೆದ ದೋಣಿಯೊಂದನ್ನು ನೋಡುತ್ತಾ ಕುಳಿತೆ. ನೀರಿನಲ್ಲಿ ದಾರಿಮಾಡಿಕೊಂಡು ಬಿಲ್ಲಿನಿಂದ ಹಾರುವ ಅಂಬಿನವೇಗದಲ್ಲಿ ನಡೆದಿದ್ದ ಆ ದೋಣಿಯನ್ನು ಕಾಣುವುದು ಅತಿ ರಂಜನೆಯ ನೋಟ ವಾಗಿತ್ತು. ಅದನ್ನು ನೆಟ್ಟನೋಟದಿಂದ ನೋಡುತ್ತಾ ಕುಳಿತೆ. ಆ ನೆಟ್ಟ ನೋಟದ ಜತೆಗೆ ವಿಚಾರದ ಲಹರಿಯನ್ನು ಹಚ್ಚಿದೆ. ಇದೇನು ಮಾನವನ ಶೌರ್ಯ–ಸಾಹಸಗಳು! ಅದೇನು ಪ್ರಕೃತಿಯೊಂದಿಗೆ ಅವನು ನಡೆಸಿದ ಹೋರಾಟಗಳು! ಆ ಚಿತ್ರ ಕಣ್ಣ ಮುಂದೆ ಹಾಯಿತು. ಪ್ರಕೃತಿಯ ಮೇಲೆ ಅಧಿಕಾರಮುದ್ರೆಯನ್ನು ಒತ್ತಿ ತನ್ನ ಅಂಕಿತದಲ್ಲಿ ಇಟ್ಟುಕೊಳ್ಳುವ ಮಾನವನೂ ಅದೆಷ್ಟು ಬಾರಿ ಹೆಣಗಿದ್ದಾನು, ಅದೆಷ್ಟು ಬಾರಿ ಹಂಬಲಿಸಿದ್ದಾನು. ಮೊದಲಿನಿಂದಲೂ ಪ್ರಕೃತಿಯ ರಾಕ್ಷಸೀಶಕ್ತಿ ಯನ್ನು ಅರಿತೂ ಅರಿತೂ ಮಾನವನು ಅದರೊಂದಿಗೆ ಕಾಯುತ್ತಾ ಕುಳಿತಿದ್ದಾನೆ. ಹೋರಾಟದಲ್ಲಿ ಮೇಲಿಂದ ಮೇಲೆ ಸೋಲಿನ ಪೆಟ್ಟು ಬೀಳುತ್ತಿದ್ದರೂ ಅದನ್ನು ಲೇಶಮಾತ್ರ ಲಕ್ಷಿಸದೆ ಮತ್ತೆ ಮತ್ತೆ ಹೋರಾಟ ನಡೆಸುತ್ತಿದ್ದಾನೆ. ಮತ್ತೆ ಅಧಿಕಾರ ನಡೆಸುವ ಪ್ರಯತ್ನ ಮಾಡುತ್ತಿದ್ದಾನೆ. ಪ್ರಕೃತಿಯ ಮೇಲೆ ಅಧಿಕಾರ ನಡೆಸುವ ಅವನ ಹಂಬಲಹೇ ಅವನ ಏಕೈಕ ಬಲ. ಈ ಪ್ರಭುತ್ವಾಕಾಂಕ್ಷೆಯೇ ಮಾನವನಿಗೆ ಇಲ್ಲದ ಧೈರ್ಯ ತುಂಬಿ ಇಲ್ಲದ ಮನಸ್ಥೈರ್ಯ ತಂದುಕೊಟ್ಟು ಅವನನ್ನು ಜಯದ ಹಾದಿ ಯಲ್ಲಿ ಮುನ್ನಡೆಸುತ್ತಿರುವುದು!

ಅಂತೂ ಕಡೆಗೊಮ್ಮೆ ತನ್ನ ಸಂತತ ಯತ್ನದ ಫಲವಾಗಿ ಮಾನವನು ಪ್ರಕೃತಿಯ ಮೇಲೆ ತನ್ನ ಅಧಿಕಾರಮುದ್ರೆಯನ್ನು ಒತ್ತಿದ್ದು—ಅದರ

ಆಳರಸನಾದ. ತನಗೆ ಬೇಕಾದ ರೀತಿಯಲ್ಲಿ ಪ್ರಕೃತಿಯ ರಾಕ್ಷಸೀ ಶಕ್ತಿಯನ್ನು ಉಪಯೋಗಿಸಿಕೊಳ್ಳಲು ಸಮರ್ಥನಾದ. ಹೀಗೆ ಪ್ರಕೃತಿಯ ಗುಟ್ಟನ್ನು ಅರಿತು ಅದನ್ನು ಮಾನವನಿಗೆ ಅಧೀನಪಡಿಸಿದ—ಅವನ ಬುದ್ಧಿಶಕ್ತಿಯ ಹಿರಿಮೆಯನ್ನು ನೆನೆದೆ. ಅದನ್ನು ಮಾನವನಿಗೆಂದೇ ಬಳುವಳಿಯಾಗಿತ್ತ ಆ ಸೃಷ್ಟಿಕರ್ತನ ಸೃಷ್ಟಿಸಾಮರ್ಥ್ಯವನ್ನು ಕಂಡು ಚಿಂತಿಸಿದೆ. ಆಶ್ಚರ್ಯದ ಕೌತುಕದಲ್ಲಿ ನಾಲ್ಕು ಘಳಿಗೆ ನನ್ನನ್ನು ನಾನೇ ಮರೆತು ಕುಳಿತೆ.

ವಿಶಾಲಿ ಇನ್ನೂ ದಿಗಂತದಲ್ಲಿ ಕಾಣುವ ಆ ಅದ್ಭುತವನ್ನು ನೆಟ್ಟ ನೋಟದಲ್ಲಿ ನೋಡುತ್ತಲಿದ್ದಳು. ಅವಳೆಲ್ಲಾ ನೋಟವನ್ನೂ ಮೊದಲಿನಿಂದಲೂ ಕಂಡಿದ್ದ ತಾರಿಣಿ "ಅದೇನೇ! ವಿಶಾಲಿ ಹಾಗೆ ನೋಡುತ್ತಿದ್ದಿ?" ನಾನು ಆಗಿನಿಂದಲೂ ನೋಡುತ್ತಿದ್ದೇನೆ, ನೀನು ಸಮುದ್ರದ ಮೇಲೆ ನೆಟ್ಟ ದೃಷ್ಟಿಯನ್ನು ಬದಲಿಸಲಿಲ್ಲ. ಏನು ಅದನ್ನೆಲ್ಲಾ ಕುಡಿದು ಮುಗಿಸಲು ಎಷ್ಟು ಕಾಲಬೇಕೆಂದು ಎಣಿಕೆ ಹಾಕುತ್ತಿದ್ದೀಯೇನು!" ಕುಚೇಷ್ಟೆಗೆಂದಳು.

"ಇಲ್ಲಮ್ಮಾ. ಹಾಗೇನೂ ಇಲ್ಲ. ದೂರದಲ್ಲಿ ಹಡಗೊಂದು ಹೊಗೆ ಕಾರುತ್ತಾ ಓಡುತಿತ್ತು. ನಿಧಾನವಾಗಿ ಅದು ಹಾಯುವುದನ್ನೆ ನೋಡುತ್ತಲಿದ್ದೆ"

"ಏನು ಅದನ್ನು ಹಾಗೆ ನೋಡಬೇಕೆ?"

"ಅದು ನಿಮಗೆ ಸಾಮಾನ್ಯ ದೃಶ್ಯ. ಆದರೆ ನನಗೆ........"

"ಅಲ್ಲ, ಈಗ ಅಂತಹ ಸುರಕ್ಷಿತ ಹಡಗುಗಳಿದ್ದರೂ, ದಿಕ್ಸೂಚಿ, ಅಲೆಯಂಚಿಗಳಿದ್ದೂ ಈ ಹಡಗುಗಳಿಗೆ—ಯಾರು ಮುಳುಗಿಸುತ್ತಾರೋ, ಎಲ್ಲಿ ಮುಳುಗುವುದೋ ಎನ್ನುವ ಭೀತಿ ತಪ್ಪಿಲ್ಲವಲ್ಲಾ........ಹಿಂದೆ ನಮ್ಮ ಪೂರ್ವಿಕರು ಇನ್ನೂ ದಿಕ್ಕು ಸೂಚಿಯನ್ನು ಕಾಣದಿದ್ದ ಕಾಲದಲ್ಲಿ 'ಉಗಿ' ಎಣ್ಣೆಗಳನ್ನು ಕಂಡರಿಯದ ಕಾಲದಲ್ಲಿ ದೂರದೇಶಗಳಿಗೆ ವ್ಯಾಪಾರಕ್ಕೆಂದು ಹೊರಡುತ್ತಿದ್ದರಲ್ಲಾ, ಕಾಣದ ದೇಶಗಳೊಡನೆ ವ್ಯಾಪಾರ ನಡೆಸು

ತ್ತಿದ್ದರಲ್ಲಾ ಅವರ ಕೆಚ್ಚನ್ನು ಯೋಚಿಸುತ್ತಾ ಕುಳಿತೆ. ನೋಡು ತಾರಿಣಿ ನಮ್ಮ ಪೂರ್ವದ ಕನ್ನಡಿಗರು ಕ್ರಿಸ್ತಪೂರ್ವ ಮೂರನೆಯ ಶತಮಾನದ ಮೊದಲೇ—ಸುಮಾತ್ರ, ಜಾವ, ಇತ್ತ ಪಶ್ಚಿಮದಲ್ಲಿ ಈಜಿಪ್ತಗಳೊಂದಿಗೆ ವ್ಯಾಪಾರ ಮಾಡುತ್ತಿದ್ದುದಲ್ಲದೆ.... ಮೆಕ್ಸಿಕೊ ಸುಮಾತ್ರ, ಜಾವಾ, ಕಾಂಬೋಡಿಯಗಳಲ್ಲಿ ಒಂದು ಚಕ್ರಾಧಿಪತ್ಯ ಕಟ್ಟಿ ಆಳಿದರು.... ಎಂದ ಮೇಲೆ ಆಗಿನ—ನಮ್ಮವರು ಅದೆಷ್ಟು ಸಮುದ್ರಯಾನದಲ್ಲಿ ನಿಪುಣರಾಗಿ ದ್ದಿರಬೇಕು ?"

"ಹೂಂ ಹೌದು. ನಮ್ಮವರು ನೌಕಾಪ್ರಯಾಣದಲ್ಲಿಯೇ ಏಕೆ ಎಲ್ಲದರಲ್ಲಿಯೂ ನಿಪುಣರಾಗಿದ್ದರು..... ಆದರೆ ಅವರ ಎಲ್ಲಾ ನಿಪುಣತೆ, —ಕಾಲ ಬಂದಂತೆಲ್ಲಾ ಅವರೊಂದಿಗೇ ಗತವಾಯಿತು. ಮುಂದೆ ನಮ್ಮ ವರಿಗೆ ನೌಕೆಯ ಹೆಸರೇ ಇಲ್ಲವಾಗಿ ಹೊರಗಿನವರು ಬಂದು ನಮಗೆ ಕಲಿಸ ಬೇಕಾಯಿತು.

"ಹೀಗಾದುದು ನಮ್ಮ ಆ ನೌಕಾವಿದ್ಯಕ್ಕೆ ಮಾತ್ರವೇ ಅಲ್ಲ ತಾರಿಣಿ.... ಎಲ್ಲಾ ವಿದ್ಯಕ್ಕೂ ಕೂಡ ನಮ್ಮವರು—ಇದ್ದ ಸಂಪತ್ತಿನಿಂದ ಆಲಸಿಕರಾದರು. ಬರಬರುತ್ತಾ ಈ ಅಲಸಿಕತೆಯೇ ಮೈಗಳ್ಳತನ ವಾಯಿತು. ಆ ಮೈಗಳ್ಳತನವೇ ಅವರನ್ನು ಹಾಳುಮಾಡಿದ್ದು !"

ಆಗಲೇ ಸೂರ್ಯ ಪಶ್ಚಿಮಾಂಬುಧಿಯಲ್ಲಿ ಮುಳುಗುತ್ತಾ ಬಂದಿದ್ದ. ಈಗ ದಿನದ ಅವಿಶ್ರಾಂತ ದುಡಿತದ ಫಲವಾಗಿ ಆಯಾಸ ಹೊಂದಿ ಆಫೀಸು ಮುಗಿಸಿ ಮನೆಗೆ ಹೊರಡುವ ಕಾರಕೂನನಂತೆ ಸೂರ್ಯನು ತನ್ನ ಮನೆಗೆ ಹಣ್ಣಾಗಿ ನಡೆದಿದ್ದ. ದಿನದ ಕೆಲಸದಿಂದಾಗಿ ಅವನ ಮೋರೆ ಕೆಂಪಾಗಿ ಇತ್ತು. ಆದರೂ ತನ್ನ ನಂಬಿದ ಲೋಕದ ಜನರಿಗೆ ಕಡೆಯ ಸೇವೆಯೇ ಇದು ಎಂಬಂತೆ—ಸುತ್ತೆಲ್ಲಾ ಚೆಲ್ಲಿದ್ದ ಮೋಡಗಳ ಸಾಲಿಗೆ ರಂಗುರಂಗು ಗಳನ್ನು ಕೊಟ್ಟು ನಡೆದಿದ್ದ. ರಂಗುರಂಗುಗಳ ಹೊದ್ದಿಕೆಯ ಈ ಮೋಡ ಗಳ ಸಾಲು ಕಾಣದ ದೇಶ ಒಂದನ್ನು ಗೆಲ್ಲಲು ಹೊರಟಿದ್ದ ಸೈನ್ಯದ ಪಡೆ ಯಂತೆ ತೋರುತ್ತಿತ್ತು, ಅವುಗಳ ಆಕಾರ—ದೂಳೆಬ್ಬಿಸುತ್ತಾ ನಡೆದ

ಅದರ ಮಂದಗಮನಗಳಿಂದ ಅವು ಅಶ್ವಪಡೆಯಂತೆ ತೋರುತ್ತಿತ್ತು. ತಾರಿಣಿ, ವಿಶಾಲಿಯರು ಅದನ್ನು ನೋಡುತ್ತಾ ಕುಳಿತರು. ಸದಾಶಿವ ರಾಯರು—ಮಗಳ ಸೌಂದರ್ಯಾನುಭೂತಿಯನ್ನು ಕಂಡು ತಮಾಷೆ ಗೆಂದರು.

"ಏನೇ ಅದು ತಾರಿಣಿ. ಮೋಡಗಳನ್ನು ತಿನ್ನಲೆಂಬಂತೆ ಬಾಯಿ ದೆರೆದಿದ್ದೀಯಲ್ಲೆ."

"ನೋಡಣ್ಣಾ! ಆ ಮೋಡದ ಸಾಲು ಎಷ್ಟು ಮನೋಹರವಾಗಿ ಕಾಣುತ್ತೆ. ನಾವು ಇಂದು ಕಂಡ ಕೈಲಾಸ ಶಿಖರದಂತೆ!"

"ಹೂಂ"

"ನೋಡು, ಸುತ್ತೆಲ್ಲಾ ಬಾನಿನ ಕಡಲಿನ ನೀಲಿಗೆ ಅದು ಎಷ್ಟು ರಮ್ಯವಾಗಿ ಕಾಣುತ್ತಲಿದೆ."

"ಹೌದು ಚನ್ನಾಗಿದೆ."

"ಅದೇಕಣ್ಣಾ ಕಡಲಿಗೆ ಈ ಬಣ್ಣ.... ಈ ಕಡುನೀಲಿ ಬಣ್ಣ?" ಇದ್ದಕ್ಕಿದ್ದ ಹಾಗೆ ತಾರಿಣಿಯು ಪ್ರಶ್ನಿಸಿದಳು. ಮೋಡಗಳನ್ನು ನೋಡು ತ್ತಿದ್ದವಳು ಈಗ ಸಮುದ್ರವನ್ನು ನೋಡುತ್ತಿದ್ದಳು.

"ಬಹುಶಃ ಆಕಾಶದ ಪ್ರತಿಫಲನದಿಂದಿರಬೇಕು!"

"ಹಾಗಾದರೆ.... ಮೋಡ ಕವಿತ ದಿನ ಕೂಡ ಕಡಲು ನೀಲಿ ಯಾಗಿಯೇ ಇರುವುದಲ್ಲಾ"

ಇದನ್ನು ಕೇಳಿ ಸದಾಶಿವರಾಯರಿಗೆ ಏನೂ ಹೊಳೆಯಲಿಲ್ಲ. ತಬ್ಬಿಬ್ಬಾದರು. ಅವರ ಸ್ಥಿತಿಯನ್ನು ಕಂಡು ನಾನು ಹೇಳಿದೆ.

"ಮೊನ್ನೆ ಮೊನ್ನೆಯವರೆಗೂ ಕಡಲಿನ ನೀಲಿಗೆ ಆಕಾಶದ ಪ್ರತಿಫಲನ ಕಾರಣವೆಂದು ತಿಳಿದಿದ್ದರು. ಆದರೆ ಈಚೆಗೆ ಸರ್ ಸಿ. ವಿ. ರಾಮನ್ ರವರು ಈ ವಿಷಯವಾಗಿ ಪರಿಶೋಧನೆ ನಡೆಸಿ ಅದಕ್ಕೆ ಬೇರೊಂದು ಕಾರಣವನ್ನು ಕೊಟ್ಟಿದ್ದಾರೆ. ಅವರ ಪ್ರಕಾರ ಕಡಲಿನ ನೀಲಿಗೆ ಸೂರ್ಯನೇ

ಕಾರಣವಂತೆ! ಅವನ ರಶ್ಮಿಗಳು ಛಿದ್ರಛಿದ್ರವಾಗಿ ಪ್ರತಿಫಲಿಸುವುದೇ ಕಾರಣವಂತೆ"

"ಇದ್ದೀತು! ಇದ್ದೀತು! ಆದರೂ ಅವರ ಗಮನವನ್ನು ಇದು ಸೆಳೆದುದು ಆಶ್ಚರ್ಯವೇ ಸರಿ!"

"ಅದರಲ್ಲಿ ಆಶ್ಚರ್ಯವೇನೂ ಇಲ್ಲ. ರಾಮನರು ಹುಟ್ಟಿ ಬೆಳೆದಿದ್ದು ಎಲ್ಲಾ ಸಮುದ್ರದ ತೀರದಲ್ಲೇ. ಅವರು ಕಡಲಿನೊಂದಿಗೆ ಆಡಿ ಬೆಳೆದವರು. ಅಂತಹವರಿಗೆ ಕಡಲಿನ ಈ ಬಣ್ಣದ ವಿಷಯದಲ್ಲಿ ಕುತೂಹಲ ಕೆರಳಿದುದರಲ್ಲಿ ಏನಾಶ್ಚರ್ಯ?"

ತಾರಿಣಿ ಈ ವಿಷಯದ ಎಳೆಯನ್ನು ಬೇಕೆಂದು ವಿಷಯಕ್ಕೆ ಸಂಬಂಧಿಸಿದಳು.

"ಹಾಗೆಯೇ ಕಡಲತೀರದಲ್ಲಿಯೇ ಬೆಳೆದು ದೊಡ್ಡವರಾದ ರಾಮನರ ವೈಜ್ಞಾನಿಕ ಮನೋಭಾವಕ್ಕೆ ಈ ಕಡಲು ಪುಟ ಕೊಟ್ಟಂತೆ.... ನಮ್ಮ ಕಾರಂತರಿಗೆ ಕೂಡ ಈ ಕಡಲು ಅವರ ಸಾಹಿತ್ಯದ ಮನೋಭಾವವನ್ನು ಕೆರಳಿಸಿ ಅವರದೊಂದು ಶ್ರೇಷ್ಠ ಕಲಾಕೃತಿ—ಮರಳಿಮಣ್ಣಿಗೆಯೆಂಬ ಕಾದಂಬರಿಯನ್ನು ಜಗತ್ತಿಗೆ ನೀಡಿಸಿದೆ. ಅದು ಕಡಲಿನೊಂದಿಗೆ ಬಾಳಿಬದುಕುವ ತಲಾಂತರ ಕಥೆ."

"ಯಾರದು? ಕಾರಂತರೆನ್ನುವುದು ತಾರಿಣಿ"

ತಮ್ಮ ಸಾಹಿತ್ಯದ ಅಜ್ಞಾನವನ್ನು ತೋರಗೊಡುತ್ತಾ ಸದಾಶಿವ ರಾಯರೆಂದರು:

"ಅವರೂ ಕನ್ನಡ ಸಾಹಿತ್ಯದ ಸವ್ಯಸಾಚಿಗಳು. ಅವರ ಪೂರಾ ಹೆಸರು ಕೋಟ ಶಿವರಾಮಕಾರಂತರೆಂದು—ಕನ್ನಡದ ಶ್ರೇಷ್ಠ ಕಾದಂಬರಿಗಾರರಲ್ಲೊಬ್ಬರು. ಬಾಲಪ್ರಪಂಚದ ಬೃಹಸ್ಪತಿಗಳು''

''ಓ ಹೊಳೆಯಿತು. ಆಗಾಗ್ಗೆ ಸಾಹಿತ್ಯದ ವಿಷಯದಲ್ಲಿ ಮಾತನಾಡುವಾಗ ಅವರ ಹೆಸರು ಹೇಳುತ್ತಿದ್ದುದು ನೆನಪಿನಲ್ಲಿದೆ."

ಅವರ ಹೆಸರು ನೆನಪಿನಲ್ಲಿಡದಿದ್ದರೆ.... ಕನ್ನಡತನಕ್ಕೇ, ಕನ್ನಡಿಗರಿಗೇ ಅವಮಾನ! ತನ್ನ ನುಡಿಭಕ್ತಿಯ ಆವೇಶದಲ್ಲಿ ತಾರಿಣಿ ತಂದೆಯನ್ನು ಕಟುವಾಗಿಯೇ ಟೀಕಿಸಿದಳು.

ಮಗಳ ಟೀಕೆಯನ್ನು ಕೇಳಿಯೂ ಕೂಡ ಸದಾಶಿವರಾಯರು ಸುಮ್ಮನಿದ್ದರು.

ವಿಶಾಲಿ ಎಂದಳು "ಅವರು ಈಚೆಗೆ ಬರೆದ ಪುಸ್ತಕ 'ಮುಗಿದ ಯುದ್ಧ' ಕಾದಂಬರಿ ಓದಿದೆಯೇನು ?"

"ಇಲ್ಲವಮ್ಮಾ....ಓದಲು ಅದು ನನಗೆ ದೊರೆಯಲೇ ಇಲ್ಲ. ಏನು ಅದರ ಕಥೆ"

"ಆದೊಂದು ಯುದ್ಧದ ಕಾವಿಗೆ ಸಿಕ್ಕಿ ಬೆಂದುಹೋದ ಒಬ್ಬ ಬಡ ಶಾಲಾ ಮಾಸ್ತರನ ಕಥೆ" ಸೊಗಸಾಗಿ ಬರೆದಿದ್ದಾರೆ—ಕೆಲವೆಡೆಯಲ್ಲಿ ತಮ್ಮ ಮರಳಿ ಮಣ್ಣಿಗೆಯನ್ನೂ ಮೀರಿಸಿ ಮುಂದೆ ಹೋಗಿದ್ದಾರೆ."

"ಹಾಗಾದರೆ ಕನ್ನಡಕ್ಕೆ ಶುಕ್ರದೆಶೆ ತಿರುಗಿರಬೇಕು. ಅದಿರಲಿ ಕಾರಂತರಕಾದಂಬರಿ—ಮರಳಿ ಮಣ್ಣಿಗೆಯನ್ನು ಇಂಗ್ಲೀಷಿಗೆ ತರುವ ಪ್ರಯತ್ನ ನಡೆದಿದೆ* ಎಂದು ಕೇಳಿದೆ—ಏನು ಆ ವಿಷಯ ನಿನಗೆ ಗೊತ್ತೇನು!"

"ನನಗೆ ಸರಿಯಾಗಿ ತಿಳಿಯದಮ್ಮ. 'ಹಗಲುಗನಸು'ಗಳ ಮೂರ್ತಿ ರಾಯರು ಈ ಕಾರ್ಯಮಾಡುತ್ತಿದ್ದಾರಂತೆ. ಹೀಗೆಂದು ನನಗೆ ಹಿಂದೆ ಒಬ್ಬರು ಹೇಳಿದ್ದರು. ಇದರ ಸತ್ಯಾಂಶ ಎಷ್ಟೊ ನನಗೆ ತಿಳಿಯದು. ಅವರೊಂದು ವೇಳೆ ಅನುವಾದ ಮಾಡುತ್ತಿರುವುದು ನಿಜವಾದರೆ ಅವರ ಕಯ್ಯಲ್ಲಿ ಅನುವಾದ ಸೊಗಸಾಗಿ ಬರುತ್ತದೆನ್ನಲು ಯಾವ ಅಡ್ಡಿಯೂ ಇಲ್ಲ........ನೋಡಬೇಕು, ನನಗಂತೂ ಅನುವಾದ ಅಚ್ಚಾಗಿ ಕೈಗೆ ಬರುವವರೆಗೂ ನಂಬಿಕೆ ಇಲ್ಲ"

---

* ಈಚೆಗೆ ಈ ಗ್ರಂಥ ಶ್ರಿ ಕಾರಂತರಿಂದಲೇ ಪ್ರಕಟಗೊಂಡಿದೆ.

ದೂರದಲ್ಲಿ ಬಂದರಿನ ಬಳಿ ಇದ್ದ ದೀಪದಗೃಹದ ದೀಪಗಳು ಹತ್ತಿಕೊಂಡವು. ತನ್ನ ಅಗ್ನಿವರ್ಷಕ ಕಣ್ಣುಗಳ ಕಾಂತಿಯನ್ನು ಸುತ್ತೆಲ್ಲಾ ಮೈಲಿಮೈಲಿಗಳ ತನಕ ಎಸೆಯತೊಡಗಿತು. ದಂಡೆಯಲ್ಲಿ ಇದ್ದ ಜನವೆಲ್ಲಾ ಮನೆಯ ಮುಖ ಹಿಡಿದಿದ್ದರು. ಗದ್ದಲ ಕಡಿಮೆಯಾಗತೊಡಗಿತ್ತು. ತಾರಿಣಿ ದೀಪಗೃಹದ ಕಡೆ ಕೈತೋರಿಸುತ್ತಾ

"ನೀವು ನಾಳೆ ಇರುವುದಾದರೆ ಆ ದೀಪಗೃಹಕ್ಕೆ ಹೋಗಿ ಬರಬಹುದಿತ್ತು. ಅಲ್ಲಿಂದ ನೋಡಿದರೆ ಮದರಾಸಿನ ನಾಲ್ಕು ಸಿಟ್ಟಿನ ದೃಶ್ಯ ಕಾಣುತ್ತದೆ."

"ಇಲ್ಲಮ್ಮಾ ನಾಳೆ ನಾವು ಹೊರಡಲೇ ಬೇಕು" ಎಲ್ಲರೂ ಎದ್ದು ಹೊರಟರು. ಮಕ್ಕಳು ಮರಳು ಚಲ್ಲಾಡುತ್ತಾ ಮುಂದೆ ನಡೆದರು. ವಿಶಾಲಿ–ದೀಪಗೃಹವನ್ನು ನೋಡುತ್ತಾ ಬರುತ್ತಿದ್ದಳು.

"ಅದೇಕೆ ತಾರಿಣಿ ದೀಪಗೃಹ ಕ್ಷಣಕ್ಷಣಕ್ಕೂ ಆರಿ ಹತ್ತಿಕೊಳ್ಳುವುದು?"

"ದೂರದ ಹಡಗಿಗೆ ಬಂದರು ಇಂತಹ ಕಡೆ ಇದೆ ಎಂದು ತೋರಿಸಲು"

"ಹಾಗೇನು. ಹಾಗಾದರೆ ಈ ಆರಿ ಹತ್ತುವ ದೀಪದಿಂದ ಅವರು ಬಂದರು ಇಂತಹ ಕಡೆ ಇದೆ ಎಂದು ಪತ್ತೆ ಹಚ್ಚಬಲ್ಲರೇನು?"

"ಓ, ಅಷ್ಟೇ ಅಲ್ಲಾ. ಇಂತಹ ಕಡೆ ಯಾವ ಬಂದರು ಇದೆ ಎಂಬುದನ್ನು ಕೂಡ. ಈ ಆರಿಹತ್ತುವ ನಡುವಣ ಕಾಲದ ಗಣನೆಯಿಂದ ಇಂತಹದೇ ಬಂದರು. ಇಷ್ಟೇ ದೂರದಲ್ಲಿ ಇದೆ ಎಂಬುದನ್ನು ಕೂಡ ನೈಲಿಗಳಾಚೆಯಿಂದಲೇ ಗೊತ್ತು ಹಚ್ಚುತ್ತಾರೆ."

"ಓಹೊ! ಹಾಗಾದರೆ ಇವರಿಂದ ಒಳ್ಳೆಯ ಅನುಕೂಲ ಹಡಗಿನವರಿಗೆ"

ನಾವು ಮನೆಗೆ ಬಂದಮೇಲೆ ತಾರಿಣಿಯು ರೇಡಿಯೋಗೆ ಕೈಹಚ್ಚಿ ಬೊಂಬಾಯಿಯ ಸ್ಟೇಷನ್‌ಗೆ ತಿರುಗಿಸಿದಳು. ಅದು ಯ್ಯಾವುದೊ ಹಿಂದಿಯ

ಹಾಡನ್ನು ಪ್ರಸರಿಸತೊಡಗಿತು. ಆ ಹಿಂದಿ ಹಾಡನ್ನು ಕೇಳುತ್ತಾ ಕುಳಿತಿದ್ದ ನನ್ನ ದೃಷ್ಟಿ ಇದ್ದಕ್ಕಿದ್ದ ಹಾಗೆಯೇ ಮೂಲೆಯಲ್ಲಿ ಒರಗಿಸಿದ್ದ ವೀಣೆಯ ಕಡೆ ಹೊರಳಿತು....ಮೊನ್ನೆ ನೀವು ಒಂದು ಮಾತು ಕೊಟ್ಟಿದ್ದಿರಲ್ಲಾ, ಅದರ ನೆನಪಿದೆಯೇ ನಿಮಗೆ ಎಂದು ಕೇಳಿದೆ.

"ಅದು ಯಾವುದು? ನಾನು ಕೊಟ್ಟ ಮಾತು"—ಎಂದು ತಾರಿಣಿ ನಾಲ್ಕಾರು ನಿಮಿಷ ಯೋಚಿಸಿ—ಕಡೆಗೆ ಯಾವುದೆಂದು ತಿಳಿಯದೆ "ಯಾವ ಮಾತು?" ನೆನಪಿಗೆ ಹತ್ತಲೊಲ್ಲದು ಎಂದಳು. "ಹೋಗಲಿ ಬಿಡಿ ನಾನೇ ನೆನಪು ಮಾಡಿಕೊಡುತ್ತೇನೆ" ಎಂದು ಅಲ್ಲಿ ಒರಗಿಸಿದ್ದ ವೀಣೆಯನ್ನು ತೋರಗೊಡುತ್ತಾ "ಒಂದು ನಾಲ್ಕು ಗೀತೆಗಳನ್ನು ವೀಣೆಯ ಮೇಲೆ ನುಡಿಸುವಿರಾ?"

ತಾರಿಣಿಯು ಮುಗುಳುನಗೆ ನಕ್ಕಳು. ನನ್ನ ಮಾತನ್ನು ಆಲಿಸಿ ಸದಾಶಿವರಾಯರು "ಹೌದು. ಅಂದಹಾಗೆ ತಾರಿಣಿಯ ಸಂಗೀತ ವಿದ್ಯಾ ಪ್ರದರ್ಶನ ನಿಮ್ಮ ಮುಂದೆ ಮಾಡಿಸಬೇಕೆಂದಿದ್ದೆ. ಈಗ ಅನಾಯಾಸವಾಗಿ ಒದಗಿ ಬಂದ ಅವಕಾಶ—ಹೂಂ....ತಾರಿಣಿ—ಒಂದೆರಡು ಗೀತೆಗಳನ್ನು ನುಡಿಸಮ್ಮ—ಅವರು ಕೇಳಲಿ" ಎಂದರು. ತಾರಿಣಿಯು ರೇಡಿಯೋ ಸಂಗೀತಕ್ಕೆ ಕೊನೆ ಮುಟ್ಟಿಸಿ—ತನ್ನ ವೀಣೆಯ ಸಂಗೀತಕ್ಕೆ ಮೊದಲಿಟ್ಟಳು. ಅರ್ಧಗಂಟೆಯವರೆಗೆ ನಾಲ್ಕು ಕೀರ್ತನೆಗಳನ್ನು ಬಾರಿಸಿದಳು. ಅವಳ ಕಂಠದಿಂದ ಬರುತ್ತಿದ್ದ ಆ ಹಾಡಿನ ಮಾಧುರ್ಯಕ್ಕೆ ತಕ್ಕಂತೆ ವೀಣೆಯ ತಂತಿ ಮಂಜುಳನಾದ ಹೊರಡಿಸುತ್ತಿತ್ತು. ಅವಳು ಹಾಡಿದ ಅರ್ಧ ಗಂಟೆಯಲ್ಲಿ ನಿಜವಾದ ಸಂಗೀತವೇನೆಂದು ತಿಳಿಯಿತು. ತಾರಿಣಿಗಾಗಿಯೇ ಆ ಗಾಂಧರ್ವವಿದ್ಯೆ ಹುಟ್ಟಿರಬೇಕೆಂದುಕೊಂಡೆ. ಅಷ್ಟು ಮನೋಹರವಾಗಿತ್ತು.

ಅವಳು ಹಾಡಿದ ಆ ಮೂವತ್ತು ನಿಮಿಷಗಳು—ನನ್ನನ್ನು ಹಿಂದೆ ಒಯ್ದಿದ್ದ ಅದೇ ಕಿನ್ನರ ಲೋಕಕ್ಕೆ—ಅದೇ ಸುರಸುಂದರಿಯ ಸಾನಿಧ್ಯಕ್ಕೆ ಒಯ್ದಿದ್ದಿತು. ತಾರಿಣಿಯು ಕಡೆಯ ಕೀರ್ತನೆಯನ್ನು ನುಡಿಸಿ—ಬುರುಕಿಯನ್ನು ವೀಣೆಗೆ ಹಾಕಲಾರಂಭಿಸಿದಾಗ

"ತುಂಬಾ ಸೊಗಸಾಗಿ ಹಾಡಿದಿರಿ" ಎಂದು ಮೆಚ್ಚಿಗೆಯನ್ನು ತೋರಿಸಿದೆ.

ಒಳಗೆ ಊಟದ ಸಿದ್ಧತೆ ತಾರಿಣಿಯ ತಾಯಿ ಮಾಡುತ್ತಿದ್ದರು. ತಾರಿಣಿಯು ತಾಯಿಯ ಸಿದ್ಧತೆಯಲ್ಲಿ ನೆರವಾಗಲು ವೀಣೆಯನ್ನು ಸ್ವಸ್ಥಾನದಲ್ಲಿ ಇರಿಸಿ ಅಡಿಗೆ ಮನೆಯ ಕಡೆ ಹೊರಟಳು. ವಿಶಾಲಿ—ಗಂಡಸರಾದ ನಮ್ಮೊಂದಿಗೇನು ಕುಳಿತಿರುವುದೆಂದು ತಾರಿಣಿಯೊಡನೆ ಹೊರಟಳು.

ತಾರಿಣಿಯು ಹಾಡುತ್ತಿದ್ದಾಗ—ಸಂತೋಷದ ಭಾವ ಸದಾಶಿವರಾಯರ ಮೋರೆಯ ಮೇಲೆ ಕಾಣಿಸುವ ಬದಲು—ಮನದಲ್ಲಾಗುವ ದಾರುಣ ವೇದನೆಯ ಛಾಯೆ ಕಾಣುತ್ತಿತ್ತು. ಅದೇಕೆ ಹಾಗೆಂದು ನನಗೆ ಅರ್ಥವಾಗಲಿಲ್ಲ. ಮುಂದೆ ಅವರು ನನ್ನನ್ನು ಮಾತಿಗೆ ಎಳೆದ ಕೂಡಲೇ—ಅದೇಕೆ ತಾರಿಣಿಯ ಹಾಡು ಸಂತೋಷಪಡಿಸುವ ಬದಲು ಅವರಿಗೆ ದುಃಖ ತಂದಿತ್ತು ಎಂದು ತಿಳಿಯಿತು.

"ನೋಡಿ! ನಮ್ಮ ತಾರಿಣಿಗೆ ಅವನು ಇಷ್ಟೆಲ್ಲಾ ಸೌಭಾಗ್ಯ ಕೊಟ್ಟಿದ್ದಾನೆ. ವಿದ್ಯೆ ಕೊಟ್ಟಿದ್ದಾನೆ. ಯೌವನ ಕೊಟ್ಟಿದ್ದಾನೆ. ಈ ಗಾಂಧರ್ವ ವಿದ್ಯೆಯನ್ನು ತಾರಿಣಿಗೆಂದೇ ಬಿಟ್ಟಿದ್ದಾನೆ.—ಆದರೆ ಇವೆಲ್ಲಾ ಅಡವಿಯ ಕುಸುಮದಂತಾಗುತ್ತದೆಯಲ್ಲಾ ಎನ್ನುವ ಚಿಂತೆ ಅವಳ ಒಂದೊಂದು ಸಂಪತ್ತು ನೆನೆದಾಗ ಅನಿಸುತ್ತದೆ.... ಇಷ್ಟೆಲ್ಲಾ ಕೊಟ್ಟಾತ ಅದೇತಕ್ಕೋ ಅದೊಂದು ಸಂಪತ್ತನ್ನು—ಸೌಭಾಗ್ಯವನ್ನು ಕಸಿದುಕೊಂಡನು ಎಂದು ಯೋಚಿಸಿದಾಗ ಮನಸ್ಸಿಗೆ ಮುಳ್ಳು ಚುಚ್ಚಿದಂತಾಗುತ್ತದೆ."

ನಾನೆಂದೆ "ಸದಾಶಿವರಾಯರೇ, ನೀವು ಇನ್ನು ಮೇಲೆ ತಾರಿಣಿಯ ಬಗ್ಗೆ ಚಿಂತಿಸಬೇಕಿಲ್ಲಾ, ಆಕೆಗಾಗಿ ನೀವು ಕೊರಗಬೇಕಾಗಿಲ್ಲ. ಇಷ್ಟೆಲ್ಲಾ ಸೌಭಾಗ್ಯ ಕೊಟ್ಟಾತ—ಆದೊಂದು ಸೌಭಾಗ್ಯ ಕೊಟ್ಟಿಲ್ಲದೆ ಇಲ್ಲ. ಆದರೆ ಸೌಭಾಗ್ಯ ಸಿದ್ಧಿಗೆ ಕಾಲ ಬೇಕಿತ್ತು. ಈಗ ಕಾಲ ಕೂಡಿ ಬಂದಿದೆ. ಇಷ್ಟರಲ್ಲಿಯೇ ಆ ಸೌಭಾಗ್ಯದ ಮಾಲೆ ತಾರಿಣಿಯ ಕುತ್ತಿಗೆಗೆ ಬೀಳುವುದನ್ನು ನೀವು ನೋಡುವಿರಿ."

"ಏನು ಮಾಡುವನೋ ಏನೋ....ಇದುವರೆಗೂ ಆ ಸೌಭಾಗ್ಯಕ್ಕಾಗಿ ಕಾದು ಕುಳಿತಿದ್ದೆ. ಇದುವರೆಗೂ ಆ ಕಾಲ ಬರಲಿಲ್ಲ. ಮುಂದೆ ಬರುವುದೆಂದು ನೀವು ಹೇಳುವಿರಿ....ಅದಕ್ಕಾಗಿ ಕಾದು ಕುಳಿತಿರುವುದು ನನ್ನ ಕರ್ತವ್ಯ.—ಅದಕ್ಕಾಗಿ ಆತುರಪಡಿಸಲು ನಾನೆಷ್ಟರವನು!.... ....ಕಾಯುವ ಕೆಲಸ ನನ್ನದು, ಕಾಯುತ್ತಿರುತ್ತೇನೆ."

"ಕೇವಲ ಒಂದು ತಿಂಗಳಮಟ್ಟಿಗೆ—ನಿಮ್ಮೆಲ್ಲಾ ಈ ಬೇಗುದಿ, ಸಂಕಟ—ಆಮೇಲೆ ಸಂಕಟ, ದುಃಖಗಳೇನೆಂದು ನಿಮಗೆ ತಿಳಿಯದೆ ಹೋದಾವು! ಯೋಚನೆ ಮಾಡಬೇಡಿ!"

"ನಿಮ್ಮಂತಹವರು ನನ್ನಂತಹನಿಗಾಗಿ ಮರುಗಲಿರುವಾಗ ನನಗೆ ಏತರ ಯೋಚನೆ? ಆದರೂ........ನೀವು ಹೇಳುವುದು ನನ್ನ ಮನಸ್ಸಿಗೆ ಅದೇಕೊ ಬರಲೊಲ್ಲದು. ನನ್ನ ಮನಸ್ಸಿಗೆ ಇನ್ನೂ ಸಂಶಯ. ಇಷ್ಟು ವರ್ಷಗಳಿಂದಲೂ, ಸಂಶಯಿಸಿ, ಸಂಶಯಿಸಿ ಜಡವಾದ ಈ ಮನಸ್ಸಿಗೆ ನೀವು ಹೇಳುವುದು....ಮನಸ್ಸಿಗೆ ಬರಲೊಲ್ಲದು."

"ಹಾಗೇನೂ ತಿಳಿಯಬೇಡಿ. ಆಗಲೇ ಹೇಳಿರುವೆನಲ್ಲಾ. ನಿಮ್ಮೆಲ್ಲಾ ದುಃಖ ಪರಮಾತ್ಮನಿಗೆ ಸೇರಿದೆ ಎಂದು."

ಇದ್ದಕ್ಕಿದ್ದ ಹಾಗೆಯೇ ತಮ್ಮ ಚಿಂತೆಯನ್ನು ಬದಿಗಿರಿಸಿ ನಸು ನಕ್ಕು ಕೇಳಿದರು. "ಅದು ಹೇಗೆ ತಿಳಿಯಿತು ನಿಮಗೆ ನಮ್ಮ ದುಃಖ ದೇವರಿಗೆ ಸೇರಿದೆ ಎಂದು."

ಈ ಪ್ರಶ್ನೆ ನನ್ನನ್ನು ತಬ್ಬಿಬ್ಬಾಗಿಸಿತು. ಏನು ಹೇಳಲು ಕೂಡಲೇ ತೋಚಲಿಲ್ಲ. "ನನಗೆ ಹಾಗೆನಿಸುತ್ತದೆ....ನನಗೆ ತೀರ ಹತ್ತಿರದ ಸಂಬಂಧಿಗೆಳೆಯನೊಬ್ಬನು ಇರುವನು. ಅವನ ವಯಸ್ಸು, ವಿದ್ಯೆ—ಎಲ್ಲಾ ನನ್ನ ಹಾಗೆಯೇ. ಅವನಿಗೂ ಕೈತುಂಬಾ ಸಂಪಾದನೆ. ಅವನಿಗೆ ನಿಮ್ಮ ಕರುಣ ಕಥೆಯನ್ನು ಹೇಳಿದರೆ ಖಂಡಿತವಾಗಿಯೂ ನಿಮ್ಮ ದುಃಖವನ್ನು ಹೊಟ್ಟೆಗೆ ಹಾಕಿಕೊಳ್ಳುವನೆಂದು ಪೂರ್ಣ ಭರವಸೆ ನನಗಿದೆ. ನಾನು

ಊರಿಗೆ ಹೋದೊಡನೆ ಅವನನ್ನು ಕಂಡು ನಿಮ್ಮ ಕಥೆಯನ್ನು ಹೇಳುವುದು, ತಾರಿಣಿಯ ವರನನ್ನಾಗಿ ಮಾಡುವುದು."

"ಮುಖ್ಯ ನಿಮ್ಮಂತಹ ಸಹೃದಯರ ವಿಶ್ವಾಸ.... ನಿಮ್ಮ ಕೆಲಸದ ಋಣ ತೀರಿಸಲು ನಾನು ಎಷ್ಟು ಜನ್ಮ ಪಡೆಯಬೇಕೊ ಕಾಣೆ...."

"ನೀವು ಹಾಗೆನ್ನಬೇಡಿ. ಅದು ಬಹಳ ದೊಡ್ಡ ಮಾತು. ಅದಿರಲಿ, ಆ ನನ್ನ ಗೆಳೆಯನಿಗೆ ತೋರಿಸಲು ನಿಮ್ಮ ತಾರಿಣಿಯದೊಂದು ಚಿತ್ರ ವಿದ್ದರೆ ಚೆನ್ನಾಗಿತ್ತು."

ಸದಾಶಿವರಾಯರು ತಮ್ಮ ಪೆಟ್ಟಿಗೆಯಿಂದ ಒಂದು ಕವರನ್ನು ತೆಗೆದು ತಾರಿಣಿಯ ಚಿತ್ರ ಒಂದನ್ನು—ನನಗೆ ಕೊಟ್ಟರು. ತಮ್ಮ ಮನೆಯವರ ಚಿತ್ರಗಳೆಲ್ಲವನ್ನೂ ತೋರಿಸಿ, "ಇವನ್ನು ನಾನೇ ತೆಗೆದುದು, ತಿಂಗಳ ಹಿಂದೆ" ಎಂದು ಉತ್ಸಾಹದಲ್ಲಿ ಹೇಳಿದರು.

ಅವರು ತೆಗೆದ ಫೋಟೋಗಳನ್ನು ಕಂಡಮೇಲೆ ಅವರೊಬ್ಬರು ಒಳ್ಳೆಯ "Photographer" ಅಂತ ಅನಿಸಿತು.

ತಾರಿಣಿಯ ತಾಯಿ ತಮ್ಮ ಅಡಿಗೆ ಕೆಲಸವನ್ನು ಮುಗಿಸಿ, ಹೊರಗಿನ ಗಾಳಿಗೆ ಮೈಯೊಡ್ಡಲು—ವರಾಂಡಕ್ಕೆ ಬಂದರು. ನಾವು ರೂಂನಲ್ಲಿ ಮಾತನಾಡುತ್ತಿರುವುದನ್ನು ಬಾಗಿಲಿನಿಂದಲೇ ಇಣಿಕಿ ನೋಡಿ, ಸದಾಶಿವರಾಯರಿಗೆ ಕೇಳಿಸುವಂತೆ—ತಾರಿಣಿಯ ಮೇಲೆ ಗದರಿ ಕೊಂಡರು.

"ಏ ತಾರಿಣಿ! ಊಟಕ್ಕೆ ಸಾಲದೇನು ಹೊತ್ತು! ನೀವು ಊಟಕ್ಕೆ ಕಾಯುವುದರ ಜೊತೆಗೆ ಬಂದವರನ್ನೂ ಕಾಯಿಸಬೇಕೇ?"

"ಹೂಂ ಹೌದು ರಾಯರೇ! ಊಟದ ಚಿಂತೆ ನನಗೆ ಈವರೆಗೂ ಹತ್ತೇ ಇರಲಿಲ್ಲ. ಏಳಿ ಕೈತೊಳೆದು ಬನ್ನಿರೇಳಿ."

ಸದಾಶಿವರಾಯರು ಊಟಕ್ಕೆ ಎಬ್ಬಿಸಿದರು.

ಮತ್ತೆ ಸವಿಯೂಟ. ಮಧ್ಯಾಹ್ನ ಉಂಡಷ್ಟೇ ಸವಿಯೂಟ.

ತಾರಿಣಿಯ ತಾಯಿಯ ಎರಡು ಹೊತ್ತಿನ ಊಟ ಉಂಡು "ಅಡುಗೆಯಲ್ಲಿ ಅನ್ನಪೂರ್ಣದೇವಿಯೇ" ಎಂದುಕೊಳ್ಳದಿರಲಿಲ್ಲ. ರುಚಿಕರವಾದ ಬಿಸಿಯೂಟ ಹೊಟ್ಟೆಗೆ ಸೇರಿದಾಗ ನಿದ್ರೆಗೆ ಆಹ್ವಾನವಿತ್ತಿತು. ಇನ್ನು ಮಾತುಕಥೆಯಲ್ಲಿ ಭಾಗವಹಿಸಿ ಕಾಲಹರಣ ಮಾಡುವುದು ನನ್ನಿಂದಾಗದಾಯಿತು. ನೆಲ ಕಂಡು ಮುಸುಕು ಎಳೆದು ಮಲಗುವುದು ಅತಿ ಪ್ರಿಯವಾದ ಕೆಲಸವಾಯಿತು. ಆದರೆ ಸದಾಶಿವರಾಯರು ನಿದ್ರೆಗೆ ಅವಕಾಶವೆಲ್ಲಿ ಕೊಟ್ಟಾರು—ಮನಸ್ಸಿಗೆ ಬೇಡದೇ ಇದ್ದರೂ ಮಾತಿಗೆ ಕುಳಿತೆ. ಆದರೆ—ಹರಟೆಯಲ್ಲಿ ನನಗೆ ರುಚಿ ಇಲ್ಲವೆಂದು ತೋರಿಸಿಕೊಳ್ಳಲು ಬಹಳ ಕಾಲ ಬೇಕಾಗಲಿಲ್ಲ. ಮಾತಿನ ಮಧ್ಯೆ ನಿದ್ರೆಯ ಭಂಟರು "ತೂಕಡಿಕೆ, ಆಕಳಿಕೆ" ಹತ್ತಾರು ಬಾರಿ ಇಣಿಕಿ ನೋಡಿದರು. ಈ ನಿದ್ರಾಭಂಟರ ಆಗಮನ ಕಂಡು ಸದಾಶಿವರಾಯರು,

"ಬೆಳಗಿನಿಂದಲೂ ಪುರಸತ್ತು ಇಲ್ಲದೆ ಸುತ್ತಿದುದರಿಂದ ರಾಯರಿಗೆ ಆಯಾಸವಾಗಿರಬೇಕು. ಹೋಗಿ ಒಂದಿಷ್ಟು ಮಲಗಿ ಹೋಗಿ" ಎಂದು ನನಗೆ ಮಲಗಲು ಅಪ್ಪಣೆ ಕೊಟ್ಟರು. ಈ ಅಪ್ಪಣೆಗಾಗಿಯೇ ನಾನು ಬಹಳ ಕಾಲ—ಎದುರುಕಾಯುತ್ತಿದ್ದುದು. ನಾನು ಹಾಸಿಗೆಯಮೇಲೆ ಮಲಗಿದ್ದಾಗಲೂ—ವಿಶಾಲಿಗಾಗಲಿ, ತಾರಿಣಿಗಾಗಲಿ, ತಾರಿಣಿಯ ತಂದೆ ತಾಯಿಗಳಿಗಾಗಲಿ ನಿದ್ರೆಯೇ ಬಾರದೆಂದು ತೋರುತ್ತದೆ—ಇನ್ನೂ ಅದೂ ಇದೂ ಹರಟುತ್ತಲೇ ಇದ್ದರು. ಹರಟಲಿ—ಎಷ್ಟು ಹರಟುತ್ತಾರೋ ಅಷ್ಟೂ ಹರಟಲಿ. ನಾಳೆ ಎಲ್ಲಿ ಸಿಕ್ಕುತ್ತಾಳೆ ವಿಶಾಲಿ ಹರಟಲು—ಎಂದುಕೊಂಡು ಮಲಗಿದೆ.

* * * *

ನಾವು ಮದರಾಸನ್ನು ಬಿಟ್ಟು ಹೊರಡುವ ಬೆಳಗ್ಗೆ ಬಂತು. ಈ ಬೆಳಗಿನೊಡನೆ ನಮ್ಮ ಮದರಾಸಿನ ನೀರಿನ ಋಣ ತೀರಿತು. ಇನ್ನು ನಾವು ಇಲ್ಲಿರುವುದು ಕೆಲವೇ ಗಂಟೆಗಳು. ನಮ್ಮ ಬಟ್ಟೆಬರೆಗಳನ್ನು ಕಟ್ಟಿಟ್ಟು— ಮದರಾಸು—ಹಾಗೂ ತಾರಿಣಿಯ ಮನೆ— ಬಿಟ್ಟು

ಹೊರಡಲು ಸಿದ್ಧರಾದೆವು. ಬಿಟ್ಟು ಹೊರಡುವಾಗ ತಾರಿಣಿ ವಿಶಾಲಿಯರು ಒಬ್ಬರನ್ನೊಬ್ಬರು ಅಗಲದಾದರ:—ಇಬ್ಬರೂ ಕಣ್ಣೀರಿನ ಕೋಡಿ ಹರಿಸಿದ್ದರು—ಅಗಲುವಾಗ—ಈ ನಾಲ್ಕು ದಿನಗಳಲ್ಲಿ ಅವರು ಜೀವದ ಗೆಳತಿಯರಾಗಿ ಬಿಟ್ಟಿದ್ದರು. ಒಬ್ಬರ ಕಷ್ಟಸುಖಗಳನ್ನು ಮತ್ತೊಬ್ಬರಲ್ಲಿ ಹೇಳಿಕೊಂಡಿದ್ದರು; ಅಲ್ಲದೆ ಪಾಲುಗೊಂಡಿದ್ದರು. ಇಂತಹ ಇವರು ಅಗಲಬೇಕಾದರೆ ಕಣ್ಣೀರು ಸುರಿಸಿದ್ದರೆ ಆಶ್ಚರ್ಯವೇನು ?

ನನ್ನ ಮಟ್ಟಿಗೆ ಹೇಳುವುದಾದರೆ ತಾರಿಣಿಯಿಂದ ಅಗಲುವುದು—ನನ್ನ ನಾಲ್ಕು ದಿನದ ಬಾಳಿನೊಂದಿಗೆ ಒಂದಾಗಿ ಬೆರೆತಿದ್ದ ಯಾವುದೋ ಒಂದು ವಸ್ತುವನ್ನು ಈಗ ಕಳೆದುಕೊಂಡಂತಿತ್ತು. ಸದಾ ನಗುತ್ತಿರುವ, ಆ ಸಲ್ಲಾಪದ ಸವಿನುಡಿಯ ಸಾನ್ನಿಧ್ಯ ತಪ್ಪಿದಂತಾಯಿತು. ಈ ಮೂರು ದಿನಗಳಲ್ಲಿ ತಾರಿಣಿ ಅಷ್ಟು ಆತ್ಮೀಯಳಾಗಿದ್ದಳು ನನಗೆ!

ಇನ್ನು ಅವಳ ಮನೆಯ ಜನರೊ! ಯಾವ ಒಂದು ಮೋಸ, ಕಾರ್ಪಣ್ಯಗಳನ್ನು ಅರಿಯದ ಜನರು. ಬೆಳ್ಳಗಿರುವುದೆಲ್ಲಾ ಹಾಲೆಂದು ಬಗೆಯುವ ಜನ. ಅವರ ಪರಿಚಯ ಕೇವಲ ಒಂದು ದಿನದ ಪರಿಚಯ. ಆದರೆ ಅವರು ನಮ್ಮನ್ನು ನಡೆಸಿಕೊಂಡರೀತಿ, ಬಂಧುಬಳಗದವರನ್ನು ನಡೆಸಿಕೊಳ್ಳುವರೀತಿ—ಅಂತಹ ಸಜ್ಜನರಿಗೆ ಅದೆಂತಹ ದುಃಖ!

ಇಂತಹ ಸಜ್ಜನರನ್ನು ಬಿಟ್ಟು ಹೊರಡಬೇಕೇ....ಎನಿಸಿತು. ಆದರೆ ಹೋಗದೆ ನಾವು ಇಲ್ಲಿ ಎಷ್ಟು ದಿನ ತಾನೇ ಉಳಿಯಲಾದೀತು! ಇದ್ದ ಒಂದು ದಿನದ ಮಟ್ಟಿಗಾದರೂ ಇವರ ಬಾಳಿನೊಂದಿಗೆ ಬೆರೆತ ದುಃಖವನ್ನು ಕಳೆಯಲೆತ್ನಿಸಿದೆನಲ್ಲಾ. ತಾರಿಣಿಯ ಬಾಳಕತ್ತಲೆಗೆ ಒಂದಿಷ್ಟಾದರೂ ಬೆಳಕು ತೋರಲು ಯತ್ನಿಸಿದೆನಲ್ಲಾ, ಎಂದುಕೊಂಡು ಸಮಾಧಾನ ತಾಳಿದೆ.

ನಮ್ಮ ಸಾಮಾನುಗಳನ್ನು ಗಾಡಿಯಲ್ಲಿ ತುಂಬಿ—ನಾವೂ ಹೊರಡಲು ಗಾಡಿ ಏರಿ ಕುಳಿತಾಗ, ಆಗ ಕಂಡ ದೃಶ್ಯ ಮರೆಯಲಾಗದ ದೃಶ್ಯ. ಆ ದಂಪತಿಗಳು ಗೇಟಿಗೆ ಒರಗಿ ನಿಂತಿದ್ದಾರೆ. ಅವರ ಬಳಿಯಲ್ಲೇ

ತಾರಿಣಿ, ಅವಳ ತಮ್ಮ ತಂಗಿಯರು, ನಮ್ಮನ್ನೇ ನೋಡುತ್ತಾ ನಿಂತಿದ್ದಾರೆ! ಅದೇಕೊ ಏನೊ ತಾರಿಣಿಯ ಕಣ್ಣು ಹನಿಗೂಡಿದೆ! ಹಾಗೇ ಸದಾಶಿವರಾಯರ ಮತ್ತು ತಾರಿಣಿಯ ತಾಯಿಯ ಕಣ್ಣುಗಳಲ್ಲಿ ಕೂಡ—ನೀರು.

"ನಾವು ಹೋಗಿ ಬರುತ್ತೇವೆ! ತಾರಿಣಿ, ಸದಾಶಿವರಾಯರೆ—" ಎಂದೆ ಗಾಡಿ ಹೊರಟಾಗ.

"ಹೂಂ ಹೋಗಿಬನ್ನಿ. ನಿಮಗೆ ಒಳ್ಳೆಯದಾಗಲಿ. ನಿಮಗೆ ನಮ್ಮ ಎಲ್ಲಾ ಕಥೆಯನ್ನೂ ಹೇಳಿ ಮನಸ್ಸಿಗೆ ಬೇಸರ ಹುಟ್ಟಿಸಿದ್ದರೆ ದಯವಿಟ್ಟು ಕ್ಷಮಿಸಿ. ದಯವಿಟ್ಟು ಊರು ತಲುಪಿದ ಕೂಡಲೇ ಕಾಗದ ಹಾಕುವುದನ್ನು ಮರೆಯಬೇಡಿ."

ಹಾಗೆಯೇ ಆಗಲೆಂದು ತಲೆಯಲ್ಲಾಡಿಸಿದೆ. ವಿಶಾಲಿ ಗಾಡಿಯಿಂದಲೇ ಕೂಗಿ ಹೇಳಿದಳು—ತಾನು ಹೋಗಿ ಬರುತ್ತೇನೆಂದು.

ತಾರಿಣಿ ಕಣ್ಣೀರನ್ನು ಒರೆಸಿಕೊಳ್ಳುತ್ತಾ ಹೇಳಿದಳು "ಹೋಗಿ ಬಾ ವಿಶಾಲಿ. ನಿನ್ನ ಬಡ ಗೆಳತಿಯನ್ನು ಮಾತ್ರ ಮರೆಯಬೇಡಮ್ಮ" ಮುಂದೆ ಮಾತೇ ಹೊರಡಲಿಲ್ಲ. ಕೊರಳು ಗದ್ಗದವಾಯಿತು. ಆದರೂ ಅವಳೆಲ್ಲಾ ದೃಷ್ಟಿ ನಮ್ಮ ಕಡೆಗೇ ಇತ್ತು.

ನಮ್ಮ ಗಾಡಿ ರಸ್ತೆ ಬಿಟ್ಟು ಹೊರಟಿತು. ನಮ್ಮ ಗಾಡಿ ಕಣ್ಮರೆಯಾಗುವವರೆಗೂ ಅವರು ಚಲಿಸದೆ ನಾವು ಹೋಗುವುದನ್ನು ನೋಡುತ್ತಾ ನಿಂತಿದ್ದರು. ಮುಂದೆ ಗಾಡಿ ಪಕ್ಕಕ್ಕೆ ತಿರುಗಿದಾಗ, ಅವರಿಂದ ಕಣ್ಮರೆಯಾದಾಗ—ಹನಿಗಣ್ಣಿನಲ್ಲಿ ವಿಶಾಲಿ ಹೇಳಿದಳು.

"ಅಣ್ಣಾ ಈ ಜನ ಅದೆಷ್ಟು ಗುಣಾಢ್ಯ ಜನ ಅಣ್ಣಾ"

"ಹೌದು ವಿಶಾಲಿ. ನೋಡು ನಮ್ಮನ್ನು ಬೀಳ್ಕೊಡುವಾಗ ಅದೆಷ್ಟು ಕಷ್ಟದಿಂದ ಬೀಳ್ಕೊಟ್ಟರು. ಅವರಲ್ಲಿದ್ದ ಈ ಒಂದು ದಿನ ಅದೆಷ್ಟು ಗೌರವದಿಂದ ಕಂಡರು ನಮ್ಮನ್ನು"

"ನೋಡಣ್ಣಾ, ನನಗೆ—ಕೇವಲ ನಾಲ್ಕು ದಿನದ ಪರಿಚಯವಿರುವ ನನಗೆ—ಕುಂಕುಮ ಹಚ್ಚಿ, ಕುಪ್ಪಸದ ಖಣದೊಂದಿಗೆ ಬೆಳ್ಳಿಯ ಬಟ್ಟಲು ಕೊಡುವುದೆಂದರೆ....ನಾನೆಷ್ಟು ಒಲ್ಲೆ—ಎಂದು ಹಟ ತೊಟ್ಟರೂ ಅವರ ಗುಣಕ್ಕೆ ಮಾರುಹೋಗಿ ತೆಗೆದುಕೊಳ್ಳಲೇಬೇಕಾಯಿತು ಆ ಬೆಳ್ಳಿ ಬಟ್ಟಲನ್ನು—. ಇಂತಹ ಜನಕ್ಕೆ ದೇವರು ಅದೆಂತಹ ದುಃಖಕೊಟ್ಟಿದ್ದ....

"ಇನ್ನು ಮೇಲಾದರೂ ತಾರಿಣಿಯ ಮದುವೆಯೊಂದಿಗೆ ಕಳೆದೀತಲ್ಲಾ ಅವರ ದುಃಖ. ಅಂತಹ ಜನದೊಡನೆ ಸಂಬಂಧ ಬೆಳೆಸಲು ಅಮ್ಮ ಹಿಗ್ಗಿನಲಿದಾಳು !

"ಅದಿರಲಿ ನೀನು ಸದಾಶಿವರಾಯರ ಮುಂದೆ ಏನಾದರೂ ಬುರುಡೆ ಹಾರಿಸಿದ್ದೀಯೇನು ?"

"ಯಾಕೆ ? ಗಾಬರಿಯಿಂದ ಕೇಳಿದೆ."

"ಯಾಕೂ ಇಲ್ಲ. ಸದಾಶಿವರಾಯರು ನೀನು ವಿವಾಹಿತನೆಂಬ ಅಭಿಪ್ರಾಯವನ್ನು ಹೇಗೋ ತಲೆಗೆ ಹಚ್ಚಿಕೊಂಡಿದ್ದಾರೆ. ಈ ವಿಷಯ ತಾರಿಣಿಯ ತಲೆಗೂ ಹಾಕಿದರು. ಅವರು ಹಾಗೆ ಅಭಿಪ್ರಾಯ ಪಡಲು ಏನಾದರೂ ನಾಟಕವಾಡಿದೆಯಾ ?"

"ಏನು ತಾರಿಣಿ, ಕೂಡ ಹಾಗೆ ತಿಳಿದುಕೊಂಡಿರುವಳೆ ?" ನಾನು ಗಾಬರಿಯಿಂದ ಕೇಳಿದೆ.

"ಆಮೇಲೆ ಹೇಳುತ್ತೇನೆ. ಈಗ ನೀನು ಮೊದಲು ಹೇಳು ಸದಾಶಿವ. ರಾಯರಿಗೆ ಏನೆಂದು ಬಿಟ್ಟಿದ್ದಿ ಬುರುಡೆ ?"

"ಏನೂ ಬರುಡೆ ಹಾರಿಸಲಿಲ್ಲವಮ್ಮಾ. ಮಾತಿಗೆ ಮಾತು ಬಂದು ನೀನು 'ನಮ್ಮ ಅಣ್ಣನ ಮದುವೆ ನೆನಪು' ಎಂಬ ಕಥೆಯನ್ನು ಸ್ವಾರಸ್ಯ ವಾಗಿ ಬರೆದಿದ್ದೀ ಎಂದು—ನಿನ್ನ ವಿಷಯ ಬಂದಾಗ—ಹೇಳಿದೆ. ಅದನ್ನು ಕೇಳಿ ಪಾಪ ಅವರು ಈ ಅಭಿಪ್ರಾಯವನ್ನು ತಲೆಗೆ ನಾಟಿಸಿಕೊಂಡಿದ್ದಾ ರೆಂದು ಕಾಣುತ್ತೆ."

"ಅಯ್ಯೋ ಇಷ್ಟೇ ತಾನೇ! ಪಾಪ ಬೆಳ್ಳನೆಯದೆಲ್ಲವನ್ನೂ ಹಾಲೆಂದು ತಿಳಿಯುವ ಕಪಟವರಿಯದ ಜನ ಅವರು. ನನ್ನ ಕಥೆಯನ್ನು ಕೇಳಿ ಅದನ್ನು ನಿಜವೆಂದೇ ನಂಬಿ ಈ ಅಭಿಪ್ರಾಯವನ್ನು ತಲೆಗೆ ತಂದುಕೊಂಡಿರಬೇಕು ಪಾಪ. ಇಷ್ಟಲ್ಲದೆ ಬೇರೇನೂ ಹೇಳಲಿಲ್ಲ ತಾನೆ?"

ಇನ್ನೊಂದು ಸಂಗತಿಯನ್ನು ಹೇಳಿದೆ. ನನಗೊಬ್ಬ ಸಂಬಂಧಿಗೆಳೆಯನಿರುವನೆಂದೂ, ಅವನು ಎಲ್ಲಾ ವಿಷಯದಲ್ಲಿ ನನ್ನನ್ನೇ ಹೋಲುವನೆಂದೂ, ಅವನಿಗೆ ನಿಮ್ಮ ಕರುಣಕಥೆ ಹೇಳಿದರೆ ತಾರಿಣಿಯನ್ನು ಕೈಹಿಡಿಯಲು ಖಂಡಿತಾ ಒಪ್ಪುವನೆಂದೂ ಹೇಳಿದೆ. ನಾನು ಊರಿಗೆ ಹೋಗಿ ಅವನನ್ನು ಈ ಬಗ್ಗೆ ವಿಚಾರಿಸುವುದಾಗಿಯೂ ಹೇಳಿದೆ. ಅವನಿಗೆ ತೋರಿಸಲು ತಾರಿಣಿಯ ಚಿತ್ರ ಒಂದನ್ನೂ ಕೂಡ ತಂದಿರುವೆನು. ಇವಕ್ಕಿಂತಲೂ ಹೆಚ್ಚೇನೂ ಹೇಳಲಿಲ್ಲ.

"ಹಾಗಾದರೆ ಅವರ ಮುಂದೆ ಒಳ್ಳೆಯ ನಾಟಕವಾಡಿರುವೆ. ಫೋಟೋ ಕೂಡ ತಂದುಬಿಟ್ಟಿದ್ದೀಯಾ?"

"ಇಲ್ಲ—ಅಮ್ಮ ಹುಡುಗಿ ಹೇಗಿರುವಳೆಂದು ಕೇಳಿದರೆ ಆಗ ತಾರಿಣಿಯ ಚಿತ್ರ ತೋರಿಸಿದರೆ ಅಮ್ಮನನ್ನು ಒಪ್ಪಿಸುವುದು ಸುಲಭವಾದೀತೆಂದು ತಂದೆ. ಅದಿರಲಿ, ನಾನು ವಿವಾಹಿತನೆಂದು ಸದಾಶಿವರಾಯರು ಅಭಿಪ್ರಾಯಪಟ್ಟಾಗ ತಾರಿಣಿ ಅದನ್ನು ನಂಬಿದಳೇನು?"

"ಪಾಪ ಆ ಸುದ್ದಿ ಕೇಳಿ ಅವಳು ಹೌಹಾರಿ ಬಿದ್ದಳು. ಅವಳಿಗೆ ಏನು ಮಾಡಲೂ ತೋರಲಿಲ್ಲ. ಕಣ್ಣಿನಲ್ಲಿ ನೀರು ತಂದಳು. ಅವಳ ಪರಿಸ್ಥಿತಿಯನ್ನು ಕಂಡು ನನಗೆ ನೋಡಿಕೊಂಡು ಸುಮ್ಮನಿರಲಾಗಲಿಲ್ಲ. ಎಲ್ಲಾ ವಿಚಾರಿಸಿ ತಿಳಿದು, ತಾರಿಣಿಯ ಮನದ ಸಂಶಯ ಕಳೆದೆ. ಆಕೆಯ ವಿಷಯವಾಗಿ ನಿನಗಿರುವ ಅಭಿಪ್ರಾಯವನ್ನು ಕೂಡ ಹೇಳಿದೆ."

ನನ್ನ ಅಭಿಪ್ರಾಯವನ್ನು ವಿಶಾಲಿಯು ತಾರಿಣಿಗೆ ತಿಳಿಸಿದಮೇಲೆ ಅದು ತಾರಿಣಿಯಲ್ಲಿ ಉಂಟು ಮಾಡಿದ ಪ್ರತಿಕ್ರಿಯೆಯನ್ನು ತಿಳಿಯಲು ಕುತೂಹಲವಾಯಿತು.

"ನಿನ್ನ ಮಾತು ಕೇಳಿದ ಮೇಲೆ ಅವಳೇನು ಅಂದುಕೊಂಡಳು."

"ಒಂದು ಕ್ಷಣ ಅವಳಿಗೆ ಮಾತೇ ಹೊರಡಲಿಲ್ಲ—ಆದ ಸಂತೋಷ ದಿಂದ. ಈ ಸುದ್ದಿಯನ್ನು ಕೂಡಲೇ ನಂಬದಾದಳು. ಪುನಃಪುನಃ ನನ್ನನ್ನು ಕೇಳಿ ತಿಳಿದಳು. ಅನಂತರ ನೀನೇಕೆ ಹಾಗೆ ಅವಳ ತಂದೆಗೆ ಸುಳ್ಳು ಹೇಳಿದೆ ಎಂದು ಆಕ್ಷೇಪಿಸಿದಳು—ನೀನು ಹೂಡಿದ ನಾಟಕ ನನಗೆ ತಿಳಿದಿರಲಿಲ್ಲವಾದರೂ ಅದನ್ನು ಊಹಿಸಿ—ಅವಳನ್ನು ಸಮಾಧಾನ ಪಡಿಸಲು ಏನು ಬೇಕೊ ಎಲ್ಲಾ ಹೇಳಿದೆ.

"ಅಲ್ಲದೆ ಯಾವ ಒಂದು ವಿಷಯವನ್ನೂ ನಿರ್ಧಾರವಾಗಿ ಕಾಗದದ ಮೂಲಕ ತಿಳಿಸುವವರೆಗೂ ಈ ಸುದ್ದಿಯನ್ನು ಯಾರೊಬ್ಬರಿಗೂ ಹೇಳದೆ ಗೋಪ್ಯವಾಗಿಟ್ಟಿರಬೇಕೆಂದೂ ಕಟ್ಟುಮಾಡಿ ಬಂದಿರುವೆನು."

"ಒಳ್ಳೆಯ ಕೆಲಸ ಮಾಡಿದೆ."

ಜಟಕ ಈ ವೇಳೆಗೆ ಸೆಂಟ್ರಲ್ ಸ್ಟೇಷನ್‌ಗೆ ಬಂದಿತು. ಸಾಮಾನುಗಳನ್ನು ಇಳಿಸಿಕೊಂಡು ಬೆಂಗಳೂರಿಗೆ—ಹೊರಡಲು ಸಿದ್ಧವಾಗಿದ್ದ ರೈಲುಗಾಡಿಗೆ ಹಾಕಿ, ಅನುಕೂಲವಾದ ಸ್ಥಳ ಮಾಡಿಕೊಂಡು ಕುಳಿತೆವು. ರೈಲು ನಿಯತ ಕಾಲದಲ್ಲಿ ಸ್ಟೇಷನ್ ಬಿಟ್ಟು, ಹೊರಟಾಗ, ಈ ನಾಲ್ಕು ದಿನ ಸ್ವರ್ಗ ಕಾಣಿಸಿದ್ದ ಮದರಾಸಿಗೆ ಕಡೆಯ ವಂದನೆಯನ್ನು ಸಲ್ಲಿಸಿದೆ. ರೈಲುಗಾಡಿ ಬೆಂಗಳೂರಿನ ಹಾದಿ ಹಿಡಿದು ಉತ್ಸಾಹದಲ್ಲಿ ಸಿಳ್ಳು ಹಾಕಿಕೊಂಡು ಹೊರಟಿತು. ನಾನು ರೈಲಿನೊಂದಿಗೆ ಬೆಂಗಳೂರು ಬಗ್ಗೆ ಚಿಂತಿಸುತ್ತಾ ಕುಳಿತೆ.

೧೧

ಬೆಂಗಳೂರಿಗೆ ಬಂದಮೇಲೆ ಮದರಾಸಿನ ಎಲ್ಲಾ ವಿಷಯವನ್ನೂ ಅಮ್ಮ ಕುತೂಹಲದಿಂದ ಕೇಳಿದಳು. ವಿಶಾಲಿಯ ಬಾಯಿಂದ ನನ್ನ ಎಲ್ಲಾ ಪ್ರಣಯದ ಕಥೆ ಕೇಳಿ ಸಂತೋಷಪಟ್ಟಳು. ಮುಂದೆ ಸೊಸೆ

ಯಾಗಿ ಬರಲಿರುವ ಮದರಾಸಿನ ಹುಡುಗಿಯು ಎಂತಹವಳೆಂದು ಹತ್ತು ಬಾರಿ ಕೇಳಿ ತಿಳಿದಳು. ಬಂದೆಲ್ಲಾ ಹುಡುಗಿಯರಲ್ಲಿ ಒಂದಲ್ಲಾ ಒಂದು ಕುಂದು ತೋರಿಸುತ್ತಾ ಇದ್ದ ನನಗೆ ಅಮ್ಮ ನಾನೊಪ್ಪುವ ಕನ್ನೆಯನ್ನು ದೇವರು ಸೃಷ್ಟಿಸಿಯೇ ಇಲ್ಲವೆಂದೂ, ನನಗೆ ಈ ಜನ್ಮದಲ್ಲಿ ಮದುವೆಯೇ ಇಲ್ಲವೆಂದೂ ನಿರ್ಧರಿಸಿಬಿಟ್ಟಿದ್ದಳು. ಈಗ ನಾನು ಮದುವೆಯಾಗಲು ಒಪ್ಪಿದುದೂ ಅಲ್ಲದೆ, ಆ ಶುಭಕಾರ್ಯ ಬೇಗನೆ ನಡೆಸಲು ಒಂದು ಕಾಲ ಮೇಲೆಯೇ ನಿಂತಿರುವುದನ್ನೂ ಕಂಡಮೇಲಂತೂ ಅಮ್ಮನಿಗಾದ ಸಂತೋಷಕ್ಕೆ ಪಾರವಿಲ್ಲದಂತಾಯಿತು!

ನನ್ನನ್ನು ಸಮ್ಮೇಳನದ ನೆಪದಿಂದಲಾದರೂ ಮದರಾಸಿಗೆ ಕರೆದೊಯ್ದು ಮದುವೆಯಾಗುವಂತೆ ಮಾಡಿದ ವಿಶಾಲಿಯನ್ನು ಅಮ್ಮ ಬಾಯಿ ತುಂಬಾ ಹೊಗಳಿದಳು. ವಿಶಾಲಿಯಿಂದ ಅವರೆಲ್ಲಾ ಗುಣಾವಳಿಯನ್ನೂ ಕೇಳಿ ತಿಳಿದರು. ವಿಶಾಲಿಗೆ ಅವರು ಹೋಗುವಾಗ ಇತ್ತ ಕುಪ್ಪಸ, ಬೆಳ್ಳಿಯ ಬಟ್ಟಲನ್ನು ಕಂಡಮೇಲಂತೂ ಅಂತಹ ಜನರೊಡನೆ ನೆಂಟಸ್ತನ ಬೆಳೆಸಲು ತಮ್ಮ ಪೂರ್ಣ ಒಪ್ಪಿಗೆ ಇತ್ತರು. ಇಂತಹ ನೆಂಟಸ್ತನ ನಮಗೆ ತೋರಿದುದಕ್ಕಾಗಿ ದೇವರಿಗೆ ಕಾಯಿ ಒಡೆದು ತುಪ್ಪದ ದೀಪ ಹಚ್ಚಿದರು. ಇಷ್ಟೆಲ್ಲಾ ಆದರೂ ತಾರಿಣಿಯ ಕಥೆಯನ್ನು ನಾನಾಗಲೀ, ವಿಶಾಲಿಯಾಗಲೀ ಎತ್ತಲೇ ಇಲ್ಲ. ಅದನ್ನು ಸಮಯವರಿತು ಹೇಳಬೇಕೆಂದು ನಮ್ಮಲ್ಲೇ ಮಾತನಾಡಿಕೊಂಡಿದ್ದೆವು.

ಇಲ್ಲಿಗೆ ಬಂದು ಎಂಟು ದಿನಗಳವರೆಗೆ ವಿಶಾಲಿಗೆ ಪುರಸತ್ತೇ ಇಲ್ಲ. ಎಷ್ಟು ಬಾರಿ ಹೇಳಿಯಾಳು? ಸಮ್ಮೇಳನದ ವಿಷಯಗಳನ್ನು! ಮದರಾಸಿನ ಆ ಹೊಸ ಗೆಳತಿಯ ವಿಷಯವನ್ನು! ಎಷ್ಟು ಹೇಳಿದರೂ ತೃಪ್ತಿಯಾಗದು ಅವಳಿಗೆ—ಆ ಎಲ್ಲಾ ವಿಷಯ ಎಷ್ಟು ಹೇಳಿದರೂ ಆಗಿ ಮುಗಿಯದು! ತನ್ನೆಲ್ಲಾ ಅನುಭವಗಳನ್ನು ಹೇಳುವುದರಲ್ಲೇ ವಿಶಾಲಿಗಿದ್ದ ಎಲ್ಲಾ ಕಾಲ ಕಳೆದುಹೋಗಿದ್ದರೆ, ನನ್ನೆಲ್ಲಾ ಕಾಲವೆಲ್ಲಾ ವಿಶಾಲಿಗೆ ವರಾನ್ವೇಷಣ ಕಾರ್ಯದಲ್ಲಿ ಮುಗಿದುಹೋಗಿತ್ತು. ಅಂತೂ

ಇಂತೂ ಅಮ್ಮ ಸೂಚಿಸಿದ ಆ ವ್ಯಕ್ತಿ—ಕಾಲೇಜಿನ ಅಧ್ಯಾಪಕ ವಿಶಾಲಿಯ ಕೈ ಹಿಡಿಯಲು ಅಪ್ಪಣೆ ಕೊಟ್ಟಿದ್ದ. ಅವನಿಗೆ ಒಂಟಿಯಾಗಿ ಇಷ್ಟು ಕಾಲ ಕಳೆದೂ ಕಳೆದೂ ಬೇಸರವಾಗಿತ್ತು. ಈಗ ಜತೆಗಾತಿಗಾಗಿ ಹಂಬಲಿಸುತ್ತಿದ್ದ. ನಾನು ನಮ್ಮ ವಿಶಾಲಿಯ ಪ್ರಸ್ತಾಪ ಅವನ ಕಿವಿಯಲ್ಲಿ ಹಾಕಿದಾಗ ಸಂತೋಷದಿಂದ ಒಪ್ಪಿಗೆ ಕೊಟ್ಟ—ತಾನು ಹಿಂದೆ ಉಂಡ ಉಪ್ಪನ್ನು ನೆನೆದು—ಅಲ್ಲದೆ, ಆ ಶುಭಕಾರ್ಯವನ್ನು ಅದೆಷ್ಟು ಜಾಗ್ರತೆ ಮಾಡಿ ಮುಗಿಸಲು ಅವನೇ ಒತ್ತಾಯ ಕೂಡ ಮಾಡಿದ್ದ.

ಅಮ್ಮ, ವಿಶಾಲಿಯ ಒಪ್ಪಿಗೆಯ ಮೇಲೆ ಒಂದು ದಿನ ಲಗ್ನ ಪತ್ರಿಕೆಯ ಶಾಸ್ತ್ರವನ್ನೂ ಮಾಡಿ ಮುಗಿಸಿದೆ. ನೆಂಟರಿಷ್ಟರಿಗೆ ಮದುವೆಯ ಓಲೆಯನ್ನು ರವಾನಿಸಿದೆ. ವಿಶಾಲಿಯ ಮದರಾಸಿನ ಗೆಳತಿ—ತಾರಿಣಿಗೂ—ಅವರ ತಂದೆಯ ಹೆಸರಿಗೆ ಒಂದು ಲಗ್ನ ಪತ್ರಿಕೆಯನ್ನೂ, ಬೇರೊಂದು ಆಹ್ವಾನ ಪತ್ರವನ್ನೂ ಬರೆದಿದ್ದೆ. ನಾವು ವರನಿಗೆ ಕೊಡುವುದು ಬಿಡುವುದು ಯಾವುದಕ್ಕೂ ಕಡಿಮೆ ಮಾಡಲಿಲ್ಲ. ನಿಶ್ಚಿತವಾದ ಆ ದಿನ ಮದುವೆಯನ್ನು ವಿಜೃಂಭಣೆಯಿಂದ ಮಾಡಿ ಮುಗಿಸಿದೆ. ಹೆಗಲ ಮೇಲೆ ಕುಳಿತಿದ್ದ ಆ ಭಾರದ ಹೊರೆಯನ್ನು ಕೆಳಗಿಳಿಸಿ ಒಂದು ಕ್ಷಣ ನಿದ್ರೆ ಮಾಡಿದೆ.

ಮದುವೆಗೆ ಮದರಾಸಿನಿಂದ ಅವರಾರೂ ಬರಲಿಲ್ಲ. ಆದರೂ ಲಗ್ನದ ಹೊತ್ತಿಗೆ, ಸರಿಯಾಗಿ ಅವರು ಕಳುಹಿಸಿದ ಉಡುಗರೆಯೂ, ವಿಶಾಲಿಗೆ ಶುಭಾಶಯ ಕೋರಿ ಬರೆದಿದ್ದ ಪತ್ರವೂ ಬಂದು ಸೇರಿತು. ಇದರ ಜತೆಗೆ ಸದಾಶಿವರಾಯರು ನನ್ನ ವಿಳಾಸಕ್ಕೆ ಒಂದು ಕವರನ್ನು ಹಾಕಿದ್ದರು. ಅವರಾರೂ ಲಗ್ನಕ್ಕೆ ಬಾರದುದಕ್ಕೆ ವಿಶಾಲಿಗೆ ನೋವಾಯಿತು. ಆದರೆ ಬರಲಾಗದೇ ಇದ್ದುದರ ಕಾರಣ ತಿಳಿದಮೇಲೆ ಸಮಾಧಾನ ತಾಳಿದಳು.

ಮದುವೆಯ ಗೊಂದಲವೆಲ್ಲಾ ಕಳೆದಮೇಲೆ—ಒಂದು ದಿನ ಪುರಸತ್ತು ಮಾಡಿಕೊಂಡು ವಿಶಾಲಿಯು ಕೇಳಿದಳು. "ಏನಣ್ಣಾ ಆ ಪತ್ರದ ಸಮಾಚಾರ."

"ನೋಡು ವಿಶಾಲಿ. ನಾವು ಅಲ್ಲಿಂದ ಬಂದಮೇಲೆ ಅವರ ಭಾವಮೈದುನ ಮೂರು ಸಲ ಬಂದುಹೋದನಂತೆ. ಯಾವುದೊಂದು ನಿರ್ಧಾರವನ್ನೂ ತಿಳಿಸಲು ಒತ್ತಾಯಪಡಿಸಿದನಂತೆ. ಅವರು ನಮ್ಮನ್ನೇ ನೆಚ್ಚಿದ್ದರೂ, ಯಾವುದೊಂದೂ ನಿಶ್ಚಯವಾಗಿ ತಿಳಿಯದುದರಿಂದ ಅವರ ಭಾವಮೈದುನನಿಗೆ ಯಾವ ನಿರ್ಧಾರವನ್ನೂ ಹೇಳುವಂತಿಲ್ಲ. ಹೀಗಾಗಿ ಒಂದು ಸಂದಿಗ್ಧ ಪರಿಸ್ಥಿತಿ ಅವರಿಗೆ ಒದಗಿದೆ. ನಾನು ನನ್ನ ಗೆಳೆಯ ನನ್ನು ವಿಚಾರಿಸಿ ಯಾವ ಒಂದು ವಿಷಯವನ್ನು ಖಚಿತವಾಗಿ ತಿಳಿಸ ಬೇಕೆಂದೂ, ಅದನ್ನು ನೋಡಿಕೊಂಡು—ಅವರು ಮುಂದಿನ ಕೆಲಸವನ್ನು ಮಾಡಿಕೊಳ್ಳುವರೆಂದೂ ಈ ಪತ್ರದಲ್ಲಿ ಬರೆದಿದ್ದಾರೆ. ಕಡೆಯಲ್ಲಿ ನಿನ್ನ ಮದುವೆಗೆ ಅವರಾರೂ ಬಾರದುದಕ್ಕೆ ನೀವು ಏನೂ ತಿಳಿಯಕೂಡದೆಂದೂ, ಅವರಿಗೆ ಅನೇಕ ತೊಂದರೆಗಳು ಆ ಸಮಯದಲ್ಲಿ ಒದಗಿದುದರಿಂದ ಬರಲಾಗಲಿಲ್ಲವೆಂದೂ, ವಿಷಾದದಿಂದ ಹೇಳಿದ್ದಾರೆ. ಅಲ್ಲದೆ ನಿನ್ನ ಮದುವೆಯು ನಿರ್ವಿಘ್ನವಾಗಿ ನಡೆಯಲು ಭಗವಂತನನ್ನು ಕೋರಿದ್ದಾರೆ."

"ನೀನು ಅವರಿಗೆ ಏನು ಉತ್ತರ ಬರೆದೆ."

"ಇನ್ನೂ ಏನೂ ಬರೆಯಲಿಲ್ಲ. ಇನ್ನೂ ಅಮ್ಮನಿಗೆ ತಾರಿಣಿಯ ಕಥೆಯನ್ನು ಹೇಳಲಿಲ್ಲವಲ್ಲಾ...."

"ಇನ್ನು ಅವಳಿಗೆ ಸಾವಕಾಶ ಮಾಡಲಾಗದು, ಹೇಳಿಬಿಡೋಣ. ಯಾವುದನ್ನೂ ಮುಚ್ಚಿಕೊಳ್ಳದೆ—ಬಹುಶಃ ಅಮ್ಮ ಆ ವಿಷಯವನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳಲಾರಳು!"

ಅಂದು ಅಮ್ಮನಿಗೆ—ಇದುವರೆಗೆ ಗೋಪ್ಯವಾಗಿ ಇರಿಸಿದ್ದ ತಾರಿಣಿಯ ಎಲ್ಲಾ ಸಂಗತಿಗಳನ್ನೂ ಹೇಳಲು ವಿಶಾಲಿಯನ್ನೇ ಬಿಟ್ಟೆ. ವಿಶಾಲಿ ತನ್ನ ಬುದ್ಧಿಶಕ್ತಿಯನ್ನೆಲ್ಲಾ ಖರ್ಚು ಮಾಡಿ, ಅವರ ದುಃಖ ಕಥೆಯನ್ನು ಅಮ್ಮನ ಅಂತಃಕರಣ ಕಲಕುವಂತೆ ಹೇಳಿದಳು. ಅವರೆಲ್ಲಾ ಬಾಳಿನ ಸಂತೋಷ ನಮ್ಮ ಮೇಲೆ ಬಿದ್ದಿರುವುದಾಗಿಯೂ, ನಮ್ಮದೊಂದು ಆಸೆಯ ಬೆಂಬಲದ ಮೇಲೆ ಆ ಹುಡುಗಿ ಇದುವರೆಗೂ ಜೀವಿಸಿರುವುದಾ

ಗಿಯೂ, ನಾವು ಈಗ ನಿರಾಕರಿಸಿದರೆ ಆ ಹುಡುಗಿಯು ನೆಲವತ್ತು ವರ್ಷದ ಸೋದರಮಾವನಿಗೆ ಆಹುತಿಯಾಗುವಳೆಂದೂ, ಅಮ್ಮನ ಕರುಣೆ ಉಕ್ಕುವಂತೆ ಹೇಳಿದಳು. ಮದುವೆಯಾಗಲಿರುವ ನಾನೇ ಹುಡುಗಿಯನ್ನು ಒಪ್ಪಿದಮೇಲೆ ಅಮ್ಮನು ಈ ವಿಷಯದಲ್ಲಿ ಮಗನ ಒಪ್ಪಿಗೆಯನ್ನು ಪುರಸ್ಕರಿಸಬೇಕೆಂದೂ, ಮಗನ ಅಭ್ಯುದಯ, ಸುಖ, ತನ್ನ ಸುಖವೆಂತಲೂ ಅವನ ಸಂತೋಷ ತನ್ನ ಸಂತೋಷವೆಂತಲೂ ತಿಳಿದು—ಮದುವೆಗೆ ಒಪ್ಪಿ ಈ ಶುಭಕಾರ್ಯ ನಿರ್ವಿಘ್ನವಾಗಿ ನಡೆಸಲು ನೆರವಾಗಬೇಕೆಂದೂ, ಸವಿಸ್ತಾರವಾಗಿ ಹೇಳಿ—ಅಮ್ಮನಿಂದ ತಥಾಸ್ತು ಎಂದು ಅನ್ನಿಸಿಬಿಟ್ಟಳು.

ಅಮ್ಮನ ಒಪ್ಪಿಗೆ ದೊರೆತಮೇಲೆ ಸದಾಶಿವರಾಯರಿಗೊಂದು ಪತ್ರ ಬರೆದೆ. ನನ್ನ ಸ್ನೇಹಿತನು ಮದುವೆಗೆ ಒಪ್ಪಿರುವುದಾಗಿಯೂ, ಆತನು ತಾಯಿಯೊಡನೆ ಹೆಣ್ಣು ನೋಡಲು, ಹಾಗೆ ಲಗ್ನ ಪತ್ರಿಕೆ ಶಾಸ್ತ್ರವನ್ನು ಮುಗಿಸಿಕೊಂಡು ಬರಲು ಇಂತಹ ತಾರೀಕು ಬರುವುದೆಂದೂ, ಅಂದು ಸ್ಟೇಷನ್ನಿನಲ್ಲಿ ಅವರಿಗಾಗಿ ಕಾಯಬೇಕೆಂದೂ, ಅವರೊಡನೆ ತಾನೂ ಬರುವ ಸಂಭವ ಉಂಟೆಂದೂ ತಿಳಿಸಿ ಬರೆದಿದ್ದೆ.

ಆ ದಿನ ಅಮ್ಮನೊಡನೆ ಮದರಾಸಿಗೆ ಹೋದೆ. ಸದಾಶಿವರಾಯರು ರೈಲಿನಲ್ಲಿ ಬರುವ ಭಾವಿ—ತಾರಿಣಿಯ ಗಂಡನಿಗಾಗಿ ಸ್ಟೇಷನ್ನಿನಲ್ಲಿ ಕಾದಿದ್ದರು. ರೈಲಿನಿಂದ ನಾವಿಬ್ಬರೇ ಇಳಿದುದನ್ನು ನೋಡಿ ದಿಗ್ಭ್ರಾಂತರಾಗಿ ಕೇಳಿದರು.

"ಅವರೆಲ್ಲಿ"

"ಯಾರು ?"

"ಆ ನಿಮ್ಮ ಗೆಳೆಯರು...."

ನಾನು ಮಾತನಾಡಲಿಲ್ಲ. ಆ ಮಾತನ್ನು ಕೇಳಿ ಗಹಗಹಿಸಿ ನಕ್ಕುಬಿಟ್ಟೆ.

ನನ್ನ ನಗುವಿನ ಕಾರಣ ಅವರಿಗೆ ತಿಳಿಯಲಿಲ್ಲ. ನನ್ನ ನಗು ಅವರನ್ನು ಮತ್ತಷ್ಟು ದಿಗ್ಭ್ರಾಂತರನ್ನಾಗಿ ಮಾಡಿತು.

ಮತ್ತೆ ಕೇಳಿದರು "ಅವರೆಲ್ಲಿ, ಆ ನಿಮ್ಮ ಗೆಳೆಯರು ಬರಲಿಲ್ಲವೆ ?"

ನಗುತ್ತಲೇ ಹೇಳಿದೆ "ಬಂದಿದ್ದಾರಲ್ಲಾ ಅವರು"

"ಎಲ್ಲಿ ?'' ಚಕಿತರಾಗಿ ಕೇಳಿದರು.

"ತಮ್ಮೆದುರಿನಲ್ಲಿಯೇ ನಿಂತು, ತಮ್ಮೊಡನೆಯೇ ಸಂಭಾಷಿಸುತ್ತಿದ್ದಾರಲ್ಲಾ" ಈ ಮಾತು ಕೇಳಿ ಸಂತೋಷಾಶ್ಚರ್ಯದಿಂದ

"ನೀವೇssss.......'' ಎಂದು ಉದ್ಗಾರ ತೆಗೆದರು. ಈ ವಿಷಯ ಈ ಮೊದಲೇ ಹೇಳದುದಕ್ಕಾಗಿ ನನ್ನನ್ನು ಆಕ್ಷೇಪಿಸಿದರು.

ಮುಂದೆ ಅಮ್ಮನನ್ನು ಮನೆಗೆ ಕರೆದುಕೊಂಡುಹೋದರು. ಮನೆಗೆ ಹೋದಮೇಲೆ ಆ ಜನಗಳ ಗುಣ ನಡತೆಗಳನ್ನು ಕಂಡು—ಅಂತಹವರೊಡನೆ ಸಂಬಂಧ ಬೆಳೆಸುವುದು ತನ್ನ ಭಾಗ್ಯವೆಂದುಕೊಂಡಳು. ತನ್ನ ಭಾವಿ ಸೊಸೆ ತಾರಿಣಿಯ ರೂಪ, ಲಾವಣ್ಯ, ಗುಣ ನಡತೆಯನ್ನು ಕಂಡು ಇಂತಹವಳನ್ನು ನಾನು ವರಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ ಎಂದುಕೊಂಡಳು. ಅಮ್ಮನೊಡನೆ ಸದಾಶಿವರಾಯರು ಬಹಳ ಗೌರವದಿಂದ ನಡೆದುಕೊಂಡರು. ಅವರೊಡನೆ ಕೊಡುವುದು, ಬಿಡುವುದನ್ನು ನಿಷ್ಕರ್ಷಿಸಿ ಇಂತಹ ದಿನ ಲಗ್ನವೆಂದು ಲಗ್ನ ಪತ್ರಿಕೆಯ ಶಾಸ್ತ್ರವನ್ನು ಕೂಡ ಮಾಡಿ ಮುಗಿಸಿದರು.

ಸದಾಶಿವರಾಯರು ಯಾವ ವರ ದೇವತೆಗಾಗಿ ಈ ವರೆವಿಗೆ ಕಾದು ಕುಳಿತಿದ್ದರೊ ಅವನು ಬಂದಾಗಿತ್ತು. ಅವನೊಂದಿಗೆ ಅವರೆಲ್ಲಾ ಮನದ ಕೊರಗೂ ನೀಗಿತ್ತು. ಈಗ ಉಳಿದುದೆಂದರೆ ಆ ವರ ದೇವತೆಯೊಂದಿಗೆ ತಮ್ಮ ಮಗಳ ಮದುವೆ ಮಾಡಿ ಮುಗಿಸುವುದು.

ಆ ಮದುವೆಯ ದಿನವೂ ಓಡಿಬಂತು. ಆ ಶುಭ ದಿನದಲ್ಲಿ, ಗೋಧೂಳಿ ಲಗ್ನದಲ್ಲಿ ನಾನೂ ತಾರಿಣಿಯೂ ಗಂಡ ಹೆಂಡಿರಾದೆವು,

ಅಗ್ನಿಸಾಕ್ಷಿಯಾಗಿ, ಶಾಸ್ತ್ರವಿಧಿಯಂತೆ. ಸದಾಶಿವರಾಯರನ್ನು ಒಮ್ಮೆ ನಮಸ್ಕರಿಸಲು ಬಗ್ಗಿದಾಗ "ಕಂದಾ! ದೇವತೆಯಾಗಿ ಬಂದು ತಾರಿಣಿಯನ್ನು ಉದ್ಧರಿಸಿದೆ. ಎಲ್ಲಿಯಾದರೂ ಸುಖವಾಗಿ ಬಾಳಪ್ಪಾ"

ಎಂಬ ಆಶೀರ್ವಚನ ಅವರ ಬಾಯಿಂದ ಹೊರಬಿತ್ತು. ಮುಂದೆ ಮಾತೇ ಹೊರಡದಾಯಿತು.

ನೀವು ಓದಲೇಬೇಕಾದ ಪುಸ್ತಕಗಳು

ಶರಚ್ಚಂದ್ರಚಟರ್ಜಿ: ಕಾದಂಬರಿಗಳು

೧.	ಅಧಿಕಾರ	೫	೦	೦
೨.	ಶೇಷಪ್ರಶ್ನೆ	೫	೦	೦
೩.	ದತ್ತ	೨	೮	೦
೪.	ಬ್ರಾಹ್ಮಣರ ಹುಡುಗಿ	೧	೮	೦
೫.	ಚಂದ್ರನಾಥ	೧	೪	೦
೬.	ಹೇಮಾಂಗಿನಿ	೧	೦	೦
೭.	ವೈಕುಂಠನ ಉಯಿಲು	೧	೦	೦
೮.	ಸುಮತಿ	೦	೧೨	೦
೯.	ಅನುಪಮೆಯ ಪ್ರೇಮ	೦	೧೨	೦
೧೦.	ಅನುರಾಧ	೦	೬	೦
೧೧.	ಭಾವಚಿತ್ರ	೦	೬	೦
೧೨.	ಪಾರಸ	೦	೪	೦
೧೩.	ಮಹೇಶ	೦	೪	೦

ಕಾದಂಬರಿಗಳು

೧.	ಹೆಣ್ಣಿನ ಕಣ್ಣು	(ರಾ. ವೆಂ. ಶ್ರೀನಿವಾಸ)	೧	೧೫	೦
೨.	ಬಿಸಿಲುಗುದುರೆ	(ರಾ. ವೆಂ. ಶ್ರೀನಿವಾಸ)	೩	೮	೦
೩.	ಪಾರಿಜಾತ	(ತ. ರಾ. ಸು.)	೧	೧೫	೦
೪.	ಬೇಡದ ಮಗು	(ತ. ರಾ. ಸು.)	೧	೧೫	೦
೫.	ರಂಗಮಂಟಪ	(ರಾಜಣ್ಣ)	೨	೧೨	೦
೬.	ಪದ್ಮಾವತಿ	(ಇಂದಿರಾಬಾಯಿ)	೨	೮	೦
೭.	ಅವಳ ತಂಗಿ	(ನರೇಂದ್ರಬಾಬು)	೨	೮	೦
೮.	ಒಡೆದ ಮುತ್ತು	(ದೇವುಡು)	೩	೮	೦
೯.	ಬದುಕಿನ ಬೈರಾಗಿ	(ವಿಜಯನಾರಸಿಂಹ)	೧	೧೫	೦
೧೦.	ಬಾಡಿದಬಳ್ಳಿ	(ಕಮಲಮ್ಮ)	೧	೧೫	೦
೧೧.	ಜೈತ್ರಯಾತ್ರೆ	(ಶ್ರೀನಿವಾಸರಾವ್ ಕೊರಟಿ)	೨	೮	೦
೧೨.	ನಗರದರಾಣಿ	(ವೀರಕೇಸರಿ)	೫	೦	೦

ಸಣ್ಣ ಕತೆಗಳು

೧.	ಸಂಪಗೆ	(ನರೇಂದ್ರಬಾಬು)	೧	೧೨	೦
೨.	ಬಯಕೆಯ ಬೇಲಿ	(ಎಸ್. ಅನಂತನಾರಾಯಣ)	೧	೮	೦
೩.	ಬೆಳುದಿಂಗಳ ರಾತ್ರಿಯಲ್ಲಿ	(,,)	೧	೮	೦
೪.	ಲತೆ	(ಇಂದಿರಾಬಾಯಿ)	೧	೧೫	೦

ಡಿ. ವಿ. ಕೆ. ಮೂರ್ತಿ—ಪುಸ್ತಕ ಪ್ರಕಾಶಕರು
ಜಗನ್ಮೋಹನ ಬಂಗಲೆ ಚೌಕ
ಮೈಸೂರು